ಹೊಸ ತಿರುವಿಗಾಗಿ ಕಾದಿರುವ ಉರಿಯುತ್ತಿರುವ ಉಗಾಂಡ

ಕಂಪಾಲ (ಉಗಾಂಡ), ಆ. 13– ಇತ್ತೀಚೆಗೆ ಉಗಾಂಡದಲ್ಲಿ ನಡೆದ ಕ್ಷಿಪ್ರ ಕ್ರಾಂತಿಯ ಹಿನ್ನೆಲೆಯಲ್ಲಿ ಅಲ್ಲಿನ ಬಂಡಾಯ ಎದ್ದ ಸೈನ್ಯದ ಗುಂಪೊಂದರ ನಾಯಕರು ಪ್ರಸ್ತುತ ಅಲ್ಲಿರುವ ಸೈನ್ಯಾಡಳಿತಗಾರರೊಡನೆ ಮಾತುಕತೆ ನಡೆಸುವ ನಿಟ್ಟಿನಲ್ಲಿ ಬಹಳ ಕಠಿಣವಾದ ಶರತ್ತುಗಳನ್ನಿಟ್ಟಿದ್ದಾರೆಂದು ತಿಳಿದಿದೆ.

ಸೈನ್ಯದ ಬಂಡಾಯ ಗುಂಪಿ (ಎನ್. ಆರ್. ಎ.)ನವರು ಈ ಶಾಂತಿ ಸಂಧಾನಕ್ಕೆ ಪೂರ್ವ ಭಾವಿಯಾಗಿ ಇಟ್ಟಿರುವ ಕೆಲವು ಶರತ್ತುಗಳನ್ನು ಇಂದಿನವರೇಗೂ ದೇಶದ ಸೈನ್ಯಾಡಳಿತಗಾರರು ಒಪ್ಪಿಲ್ಲವೆಂದೂ, ಈ ಶರತ್ತುಗಳನ್ನು ಅವರು ಒಪ್ಪದ ವಿನಃ ತಾವು ಈ ಮಾತುಕತೆಯಲ್ಲಿ ಭಾಗವಹಿಸುವುದಿಲ್ಲವೆಂದೂ ಎನ್. ಆರ್. ಎ ನ ವಕ್ತಾರರು ತಿಳಿಸಿದ್ದಾರೆ.

ಉಗಾಂಡದ ಪ್ರಧಾನ ಸೈನ್ಯಾಡಳಿತಗಾರರಾಗಿರುವ ಲೆಫ್ಟಿನೆಂಟ್ ಜನರಲ್ ಟಿಟೊಒಕೆಲೊ ಅವರು ಇಂದು ಎನ್. ಆರ್. ಎ ದ ಮುಖಂಡರನ್ನು ಭೇಟಿ ಮಾಡಿ ಮಾತುಕತೆ ನಡೆಸಲಿದ್ದಾರೆ. ಆದರೆ ಅವರು ಈ ಪೂರ್ವ ಶರತ್ತುಗಳಾವುದರ ಬಗ್ಗೆ ಏನನ್ನೂ ಹೇಳಲಿಲ್ಲವೆಂದೂ ತಿಳಿದಿದೆ.

ಜುಲೈ 27ರಂದು ನಡೆದ ಕ್ಷಿಪ್ರ ಕ್ರಾಂತಿಯ ನಂತರ ಒಬೊಟೆಯವರನ್ನು ಪದಚ್ಯುತರನ್ನಾಗಿಸಿದ ಮೇಲೆ ಆ ಸ್ಥಾನವನ್ನು ಅಲಂಕರಿಸಿರುವ ಟಿಟೊ ಒಕೆಲೊ ಅವರು ತಮ್ಮನ್ನು ಉಗಾಂಡದ ಸೈನ್ಯದ ಮುಖ್ಯಸ್ಥರೆಂದು ಮಾತ್ರ ತಿಳಿದುಕೊಳ್ಳಬೇಕೇ ಹೊರತು, ರಾಷ್ಟ್ರದ ಮುಖ್ಯಸ್ಥರೆಂದಲ್ಲ. ಆ ರೀತಿ ಸೈನ್ಯದ ಮುಖ್ಯಸ್ಥರು ಮಾತ್ರ ತಾವೆಂದು ಹೇಳಿಕೊಂಡು ಅವರು "ಅರುಷ"ಕ್ಕೆ ಮಾತುಕತೆಗೆ ಬಂದರೆ ಮಾತ್ರ ತಾವು ಅವರೊಡನೆ ಮಾತುಕತೆ ನಡೆಸಲು ಸಿದ್ಧರಿದ್ದೇವೆಂದು ಎನ್. ಆರ್. ಎ ನ ಮುಖಂಡರು ಸ್ಪಷ್ಟ ಪಡಿಸಿದ್ದಾರೆ.

ಮಾರ್ಕ್ಸವಾದಿ ಮುಖಂಡ ಯೊವೆರಿ ಮುಸೆವೆನಿ ಅವರ ನೇತೃತ್ವದಲ್ಲಿ ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚು ಗೆರಿಲ್ಲಾ ಸೈನ್ಯವಿದೆ. ಅವರು 27ರಂದು ನಡೆದ ಕ್ಷಿಪ್ರ ಕ್ರಾಂತಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಉಗಾಂಡದ ಒಬ್ಬ ಪ್ರಭಾವಿ ಮುಖಂಡರಾಗಿರುವ ಮುಸೆವೆನಿಯವರು ಟಿಟೊ ಅವರನ್ನೊಬ್ಬ ಸೈನ್ಯದ ಮುಖ್ಯಸ್ಥನೆಂದು ಕರೆದಿದ್ದಾರೆಯೇ ಹೊರತು ರಾಷ್ಟ್ರದ ಮುಖ್ಯಸ್ಥನೆಂದಲ್ಲ.

ಪಾಶ್ಚಿಮಾತ್ಯ ರಾಜ ತಾಂತ್ರಿಕರು ಹೇಳುವಂತೆ ಪ್ರಸ್ತುತ ಉಗಾಂಡದಲ್ಲಿರುವ ಸೈನ್ಯ



ಟಿಟೊ ಒಕೆಲೊ

ಸರ್ಕಾರಕ್ಕೂ, ಬಂಡಾಯ ಗುಂಪಾದ ಎನ್. ಆರ್. ಎ ಗೂ ನಿಕಟ ಸಂಪರ್ಕವಿದೆಯಾದರೂ ಅವುಗಳ ನಡುವಣ ವಿಚಾರಗಳಲ್ಲಿ ಗಣನೀಯವಾದ ವ್ಯತ್ಯಾಸಗಳಿವೆ ಎಂದೂ ತಿಳಿದಿದೆ.

ಉಗಾಂಡದಲ್ಲಿರುವ ಅತ್ಯಂತ ಬಲಿಷ್ಠ ಮತ್ತು ಅತ್ಯುತ್ತಮವಾಗಿ ತರಬೇತಿಯನ್ನೊಂದಿರುವ ಸೈನ್ಯ ದಳವಾಗಿರುವ ಎನ್. ಆರ್. ಎ ಯು ಪ್ರಸಕ್ತ ಅಥವ ಭವಿಷ್ಯದ ರಾಷ್ಟ್ರಾಡಳಿತದಲ್ಲಿ ಹೆಚ್ಚಿನ ಅಧಿಕಾರ ಗಳಿಸುವ ಆಸಕ್ತಿಯನ್ನಿಟ್ಟು ಕೊಂಡಿದೆ ಎಂದೂ ಅವರು ಹೇಳುತ್ತಾರೆ.

ಉಗಾಂಡದ ಮಾಜಿ ಅಧ್ಯಕ್ಷ ಒಬೊಟೆಯವರ ಸರ್ಕಾರದಲ್ಲಿ ಉಪಾಧ್ಯಕ್ಷರಾಗಿದ್ದ ಪೌಲ್ ಮುವಾಂಗ ಅವರನ್ನು ಒಕೆಲೊ ಅವರು ಪ್ರಸ್ತುತ ಸರ್ಕಾರದ ಕಾರ್ಯ ನಿರ್ವಾಹಕ ಪ್ರಧಾನ ಮಂತ್ರಿಯನ್ನಾಗಿ ನೇಮಿಸಿರುವುದರ ಬಗ್ಗೆ ದೇಶದ ಹಲವೆಡೆ ತೀವ್ರ ಅಸಮಧಾನ ಹೊಗೆಯಾಡುತ್ತಿದೆ.

ರಾಷ್ಟ್ರದ ಪ್ರಬಲ ಶಕ್ತಿಯಾಗಿರುವ ಎನ್. ಆರ್. ಎ ಅವರ ವಿಚಾರ ಧಾರೆಗೂ ಮುವಾಂಗ ಅವರ ವಿಚಾರಗಳಿಗೂ ಬಹಳಷ್ಟು ವ್ಯತ್ಯಾಸವಿದ್ದು, ಬುಡಕಟ್ಟುಗಳ ನಡುವಣ ಒಪ್ಪಂದ ಒಡಂಬಡಿಕೆಗಳಿಗೆ ಸಂಬಂಧಿಸಿದಂತೆ ಮತ್ತು ತಮ್ಮ ಪಕ್ಷಗಳಿಗೆ ಆಡಳಿತದಲ್ಲಿ ಸಿಗಬೇಕಾದ ಪ್ರಮುಖ ಸ್ಥಾನಮಾನಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳಿದ್ದು ಇಬ್ಬರಿಗೂ ಕೂಡಿ ಬರುತ್ತಿಲ್ಲ ಎನ್ನುವುದು ನಿರ್ವಿವಾದವಾಗಿದೆ.

ರಾಜಕೀಯ ಚಟುವಟಿಕೆಗಳು ಹೀಗೆ ತೀವ್ರಗೊಳ್ಳುತ್ತಿರುವಂತೆ ಎನ್. ಆರ್. ಎ ಯ ಗೆರಿಲ್ಲಾಗಳು ಉಗಾಂಡದ ಪ್ರಮುಖ ಪಟ್ಟಣಗಳಲ್ಲೊಂದಾದ ಮಸಾಕದ ಮೇಲೆ ನಿನ್ನೆ ದಾಳಿ ನಡೆಸಲು ಸಜ್ಜಾಗುತ್ತಿದ್ದಾರೆಂದೂ ತಿಳಿದಿದೆ.

ಒಂದೆಡೆ ಈ ರೀತಿ ರಾಜಕೀಯ ತುಮುಲಗಳು ನಡೆಯುತ್ತಿರುವಾಗ ಇನ್ನೊಂದೆಡೆ ದೇಶದ ಮೂಲೆ ಮೂಲೆಗಳಲ್ಲಿ ಅಶಿಸ್ತು ಪೂರಿತ ಸೈನಿಕರು ತಂಡ ತಂಡವಾಗಿ ಹಳ್ಳಿ ನಗರಗಳಿಗೆ ನುಗ್ಗಿ ನಿರಾಂತಕವಾಗಿ ಲೂಟಿ ನಡೆಸುತ್ತಿದ್ದಾರೆ. ಕಂಪಾಲದಿಂದ 80ಕಿ. ಮಿ. ದೂರದಲ್ಲಿರುವ ಮುಖ್ಯ ಕೈಗಾರಿಕಾ ಕೇಂದ್ರವಾದ ಜಿಂಜಾದಲ್ಲಿ ನಿನ್ನೆ ಇಡಿ ದಿನ ಹಗಲಿರಳೆನ್ನದೆ ಗುಂಡಿನ ಸದ್ದು ಕೇಳಿ ಬರುತ್ತಿದ್ದವೆನ್ನಲಾಗಿದೆ. ಹಲವಾರು ಸಾವು ನೋವುಗಳಾಗಿದ್ದುದರ ಬಗ್ಗೆ ವರದಿಯಾಗಿದೆ. ಜಿಂಜಾದಲ್ಲಿರುವ ಪ್ರಮುಖ ಮಾರುಕಟ್ಟೆ ಕೇಂದ್ರದ ಬಳಿ ಟ್ರಕ್ಕುಗಳಲ್ಲಿ ಬಂದಿಳಿದ ಸೈನಿಕರು ಮತ್ತು ಅವರ ಕುಟುಂಬ ವರ್ಗದವರೆಲ್ಲಾ ಅಲ್ಲಿ ಅಪಾರ ಲೂಟಿ ನಡೆಸಿ ಹೋದರೆಂದೂ ತಿಳಿದಿದೆ.

ಒಟ್ಟಾರೆ. ರಾಜಕೀಯ ವಿರಳಿತಗಳೊಂದು ಕಡೆ ಬಿರುಸಾಗಿನಡೆಯುತ್ತಿದ್ದರೆ ಇನ್ನೊಂದೆಡೆ ಮದವೇರಿದ ಸಲಗಗಳಂತೆ ಹುಚ್ಚಾಬಟ್ಟೆ ವರ್ತಿಸುತ್ತಿರುವ ಸೈನಿಕರುಗಳು ದೇಶಾದ್ಯಂತ ಕೊಳ್ಳೆ ಹೊಡೆಯುತ್ತಿದ್ದಾರೆ. ಇಂದು "ಅರುಷ"ದಲ್ಲಿ ಮಾತುಕತೆಗಾಗಿ ಸೇರಲಿರುವ ಎನ್. ಆರ್. ಎ.ನ ಮುಖಂಡ ಮುಸೆವೆನಿ ಮತ್ತು ಮುಖ್ಯ ಸೈನ್ಯಾಧಿಕಾರಿ ಹಾಗೂ ರಾಷ್ಟ್ರಾಧ್ಯಕ್ಷರೆಂದು ಘೋಷಿಸಿ ಕೊಂಡಿರುವ ಟಿಟೊ ಒಕೆಲೊ ಅವರು ಏನು ನಿರ್ಣಯ ಕೈಗೊಳ್ಳಲಿರುವರು ಎಂಬುದರ ಮೇಲೆ ಸದ್ಯದ ಅರಾಜಕತೆ ಅಶಾಂತಿ ಪರ್ವದ ಕೊನೆಗೊಳ್ಳುವಿಕೆಯ ಭವಿಷ್ಯ ಅಡಗಿದೆ.

ಸಂಪುಟ ವಿಸ್ತರಣೆಯೋ? ಪುನರ್ರಚನೆಯೋ?

ರಾಜ್ಯ ವಿಧಾನ ಮಂಡಲದ ಪ್ರಚಲಿತ ಅಧಿವೇಶನ ಮುಕ್ತಾಯ ಹಂತಕ್ಕೆ ಬರುತ್ತಿರುವ ಇಂದಿನ ದಿನಗಳಲ್ಲಿ ಅಧಿವೇಶನದ ಆಗು-ಹೋಗುಗಳಿಗಿಂತ ಮಿಗಿಲಾದ ರಾಜಕೀಯ ಆಸಕ್ತಿ, ಅಧಿವೇಶನದ ನಂತರ ನಡೆಯಬಹುದಾದ ಘಟನೆಗಳಲ್ಲಿ ಕೇಂದ್ರೀಕೃತವಾಗಿದೆ.

ಅಧಿವೇಶನ ಮುಗಿದ ಕೆಲವೇ ದಿನಗಳಲ್ಲಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ತಮ್ಮ ಸಚಿವ ಸಂಪುಟಕ್ಕೆ ಸಂಬಂಧಿಸಿದಂತೆ "ಮಹತ್ವ"ದ ನಿರ್ಣಯಗಳನ್ನು ಕೈಗೊಳ್ಳುವರೆಂಬುದು ಈ ಆಸಕ್ತಿಗೆ ಕಾರಣವಾದ ಅಂಶ. ಈ "ಮಹತ್ವ"ದ ನಿರ್ಣಯ ಏನಿರಬಹುದು? ಮತ್ತು ಹೇಗಾಗಬಹುದು? ಎಂಬುದು ಆಳುವ ಜನತಾ ಪಕ್ಷದ ಶಾಸಕರ ವಲಯಗಳಲ್ಲಿ ಕುತೂಹಲ ಕೆರಳಿಸಿರುವ ಪ್ರಶ್ನೆಗಳು.

ಬಜೆಟ್ ಅಧಿವೇಶನದ ನಂತರ ತಮ್ಮ ಸಂಪುಟದ ವಿಸ್ತರಣೆ ಮಾಡುವುದಾಗಿ ಹೆಗಡೆಯವರು ಜುಲೈ ಮೊದಲ ವಾರ ಹೇಳಿದ್ದರು. ಅಧಿವೇಶನ ಆರಂಭವಾದ ಕೆಲವು ದಿನಗಳಲ್ಲಿ, ಹೆಗಡೆಯವರು ಹೇಳಿರುವ ಸಂಪುಟ ವಿಸ್ತರಣೆ ಕೇವಲ ವಿಸ್ತರಣೆಯಾಗದೆ

ವಡ್ಡರ್ಸೆ ರಘುರಾಮ ಶೆಟ್ಟಿ

ಸಂಪುಟದ ಪುನರ್ರಚನೆಯೂ ಆಗಬಹುದೆಂಬ ವಿಚಾರಕ್ಕೆ ಲಾಬಿಯಲ್ಲಿ ಚಾಲನೆ ಸಿಕ್ಕಿತು.

ಸಂಪುಟದ ವಿಸ್ತರಣೆಯೆಂದಾದರೆ ಅದರಲ್ಲಿ ಎಲ್ಲಿಂದ–ಯಾರು ನೂತನ ಸಚಿವರಾಗಿ ಸೇರ್ಪಡೆಯಾಗಬೇಕೆಂಬುದರ ಮಂಥನ ಜನತಾ ಪಕ್ಷದ ವಲಯಗಳಲ್ಲಿ ಸಾಕಷ್ಟು ನಡೆದಿದೆ. ಇಂತಹ ಮಂಥನದ ಪರಿಣಾಮವಾಗಿ ಈಗ ಸಂಪುಟದಲ್ಲಿ ಪ್ರಾತಿನಿಧ್ಯ ಇಲ್ಲದಿರುವ ದಕ್ಷಿಣ ಕನ್ನಡ ಜಿಲ್ಲೆಯಿಂದ ಕೆ. ಅಮರನಾಥಶೆಟ್ಟಿ ಮತ್ತು ಕಲ್ಬುರ್ಗಿ ಜಿಲ್ಲೆಯಿಂದ ವಿಶ್ವನಾಥ ರೆಡ್ಡಿ ಮುದ್ನಾಳ್ ಅವರ ಸೇರ್ಪಡೆ ಖಚಿತವೆಂಬ ಅಂಶ ಪ್ರಕಟವಾಗಿತ್ತು. ಹಾಗೆಯೇ ಬೆಳಗಾವಿ ಜಿಲ್ಲೆಯ ಕಿತ್ತೂರ ಕ್ಷೇತ್ರದಿಂದ ಆಯ್ಕೆಯಾಗಿರುವ ಜನತಾದ "ನಿಷ್ಠ" ಶಾಸಕಿ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರಿಗೆ ಸಂಪುಟದಲ್ಲಿ ಸ್ಥಾನ ಸಿಗಬೇಕೆಂಬ ಲಾಬಿ ಅಭಿಪ್ರಾಯಕ್ಕೆ ಹೆಚ್ಚು ಒತ್ತು ಸಿಕ್ಕಿತ್ತು. ಅದೇ ರೀತಿ ಜಿಲ್ಲೆಯ ಎಲ್ಲ ಎಂಟು ಸ್ಥಾನಗಳನ್ನೂ ಜನತಾಕ್ಕೆ ಕೊಟ್ಟ ಹಾಸನದಿಂದ ಇನ್ನೊಬ್ಬರಿಗೆ ಸಚಿವ ಸ್ಥಾನ ಸಿಗಬೇಕೆಂದೂ ಇದಕ್ಕೆ ಇ. ನಂಜೇಗೌಡರ ಆಯ್ಕೆಯಾಗಬೇಕೆಂಬ ಒತ್ತಾಯವೂ ಬಂದಿತ್ತು. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಶಾಸಕ ಬಂಡಿಸಿದ್ದೇಗೌಡರ ಹೆಸರೂ ಈ ಸಂಬಂಧದಲ್ಲಿ ಪ್ರಸ್ತಾಪಕ್ಕೆ ಬಂದಿತ್ತು.

ಹೊಸ ಆಯಾಮ

ಎರಡು-ಮೂರು ತಿಂಗಳಿಂದ ಪಕ್ಷದ ವಲಯಗಳಲ್ಲಿ ನಡೆದ ಸಂಪುಟದ ವಿಸ್ತರಣೆಯ ಮಂಥನಕ್ಕೆ ಈಗ ಹೊಸ ಆಯಾಮ ಬಂದಿರುವುದು ಸಂಪುಟದ ಪುನರ್ರಚನೆಯ ಮಾತಿನಿಂದ.

ದಿನಗಳುರುಳಿದಂತೆ ಸಂಪುಟ ಪುನರ್ರಚನೆಯ ಮಾತು ಆಳುವ ಪಕ್ಷದ ಕೆಲವು ವಲಯಗಳಲ್ಲಿ ಆತಂಕವನ್ನು ಹುಟ್ಟಿಸಿದೆಯಾದರೆ ಇನ್ನೊಂದು ವಲಯದಲ್ಲಿ ಆತುರ

(ಒಳನೆ ಪುಟ ನೋಡಿ)

ವಿಸ್ತರಣೆಯೋ? ಪುನರ್ರಚನೆಯೋ?

(ಒಂದನೆ ಪುಟದಿಂದ)

ವನ್ನು ಕೆರಳಿಸಿದೆ. ಪುನರ್ರಚನೆಗೆ ವಿಶೇಷ ರಾಜಕೀಯ ವ್ಯಾಪ್ತಿ ಇದೆ. ಇದರರ್ಥ ಈಗಿರುವ ಸಚಿವರಲ್ಲಿ ಕೆಲವರನ್ನು ಕೈಬಿಡುವುದೆಂದಾಗಬಹುದು. ಅಥವಾ ಖಾತೆಗಳ ಹಂಚಿಕೆಯಲ್ಲಿ ಮಹತ್ವದ ಬದಲಾವಣೆಗಳೆಂದಾಗಬಹುದು. ಹೊಸಬರನ್ನು ಸೇರಿಸಿಕೊಳ್ಳುವ ವಿಚಾರ ಇದರಲ್ಲಿ ಇದ್ದೇ ಇದೆ.

ಪಕ್ಷಾಡಳಿತದ ಜನತಂತ್ರ ವ್ಯವಸ್ಥೆಯಲ್ಲಿ ಇವೆಲ್ಲಾ ಮುಖ್ಯಮಂತ್ರಿಯವರ "ವಿವೇಚನೆಯ" ತೀರ್ಮಾನಕ್ಕೆ ಬಿಟ್ಟ ವಿಚಾರಗಳು. ಇದು ಒಂದು ವೈಧಾನಿಕ ಅಂಶ. ಆದರೆ ವ್ಯಾವಹಾರಿಕವಾಗಿ ಮುಖ್ಯಮಂತ್ರಿಯಾದವರು ಕೈಗೊಳ್ಳುವ ಎಲ್ಲ ರಾಜಕೀಯ ತೀರ್ಮಾನಗಳೂ ಪಕ್ಷದ ಒಟ್ಟಭಿಪ್ರಾಯದ ಒಲವು ಮತ್ತು ಪಕ್ಷದ ಗಣ್ಯರೊಡನೆ ಸಮಾಲೋಚನೆಗೆ ಒಳಪಡುತ್ತವೆ.

ಜನತಂತ್ರದ ಈ ಸಮ್ಮತ ಸಂಪ್ರದಾಯ ರಾಮಕೃಷ್ಣ ಹೆಗಡೆಯವರು 1983ರಿಂದ 1985ರ ಮಾರ್ಚ್ ವರೆಗೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅರ್ಥವತ್ತಾಗಿ ಆಚರಣೆಯಲ್ಲಿತ್ತು. ಆಗ ಮಿತ್ರಪಕ್ಷಗಳ ಬೆಂಬಲವನ್ನು ಉಳಿಸಿಕೊಳ್ಳುವ ವಿಧಿ-ವಿಧಾನಗಳಿಂದ ಹಿಡಿದು ಸಂಪುಟ ಉರುಳಿಸಲು ಕಾಂಗ್ರೆ ಪಕ್ಷ ಹೂಡಿದ್ದ ಸಂಚನ್ನು ಎದುರಿಸುವ ರಾಜಕೀಯ ತಂತ್ರಗಳವರೆಗೆ ಎಲ್ಲ ವಿಚಾರಗಳಲ್ಲೂ ಸಚಿವ ಸಂಪುಟದಲ್ಲಿ ಸಮಾಲೋಚನೆಯ ಸಂಪ್ರದಾಯವಿತ್ತು. ಆಗ ಹೆಗಡೆ ಸಂಪುಟ ಏಕಾಭಿಪ್ರಾಯದ ಕೂಟವಾಗಿ ಕೆಲಸ ಮಾಡಿತ್ತು.

ಬದಲಾದ ಪರಿಸ್ಥಿತಿ

ಆದರೆ 1985ರ ಮಾರ್ಚ್ ಚುನಾವಣೆಯಲ್ಲಿ ಜನತಾ ಪಕ್ಷ ಪೂರ್ಣ ಬಹುಮತ ಗಳಿಸಿ ಹೆಗಡೆಯವರು ಮುಖ್ಯಮಂತ್ರಿಯಾಗಿ ಪುನರಾಯ್ಕೆಗೊಂಡ ಮೇಲೆ ಪರಿಸ್ಥಿತಿ ಬದಲಾಯಿತು. ಇದು ಜನತಾ ಪಕ್ಷದ ಗೆಲುವಲ್ಲ – ಹೆಗಡೆಯವರ ವೈಯಕ್ತಿಕ ಗೆಲುವೆಂಬ ಪ್ರತಿಷ್ಠೆಯ ಚಿತ್ರ ಬಿಡಿಸಲಾಯಿತು. ಇಂತಹ ಪ್ರತಿಷ್ಠೆಗೆ ರಾಜ್ಯ ಹಾಗೂ ರಾಷ್ಟ್ರದ ಪ್ರಮುಖ ಪತ್ರಿಕೆಗಳು ಪ್ರಚಾರದ ಗಾಳಿ ಊದಿದವು. 1971ರ ಲೋಕಸಭಾ ಚುನಾವಣೆಯಲ್ಲಿ ಅದ್ಭುತ ಜಯಗಳಿಸಿದ್ದ ಇಂದಿರಾಗಾಂಧಿಯವರಿಗೆ ರಾಷ್ಟ್ರ ಮಟ್ಟದಲ್ಲಿ ಸಿಕ್ಕಿದ್ದ ಪ್ರತಿಷ್ಠೆಯ ಪ್ರಚಾರ 1985ರ ವಿಧಾನ ಸಭಾ ಚುನಾವಣೆಯ ಗೆಲುವು ರಾಮಕೃಷ್ಣ ಹೆಗಡೆಯವರಿಗೂ ಗಳಿಸಿಕೊಟ್ಟಿತು. ಅಂದು "ಇಂಡಿಯಾ ಎಂದರೆ ಇಂದಿರಾ" ಎಂದು ಜಪಿಸಿದ್ದ ಹೊಗಳುಭಟರ ಪೀಳಿಗೆ 1985ರಲ್ಲಿ "ಜನತಾ ಎಂದರೆ ಹೆಗಡೆ" ಎಂಬ ಹೊಗಳಿಕೆಯ ಹುಯಿಲೆಬ್ಬಿಸಿತು.

ಇಂತಹ ಹೊಗಳಿಕೆಯ ಹೊಂಬೆಳಕಿನಲ್ಲಿ ರಾಜಕೀಯ ಮಹದಾಸೆಯ ಆಗಸಕ್ಕೇರಿದ ಹೆಗಡೆಯವರು ತಾವು ಎರಡನೆ ಬಾರಿ ಮುಖ್ಯಮಂತ್ರಿಯಾಗಿ ಪ್ರತಿಜ್ಞಾ ವಿಧಿ ಸ್ವೀಕರಿಸುವಾಗ ಹಿಂದೆ ಕ್ರಾಂತಿರಂಗಕ್ಕೆ ಸೇರಿದವರಾದ ಬಿ. ರಾಚಯ್ಯ ಮತ್ತು ಅಬ್ದುಲ್ ನಜೀರ್‌ಸಾಬರನ್ನು ಮಾತ್ರ ಸಂಪುಟಕ್ಕೆ ಸೇರಿಸಿಕೊಂಡು ಜನತಾ ಪಕ್ಷದ ಗಣ್ಯರನೇಕರಿಗೆ "ಹೊಸ ವ್ಯವಸ್ಥೆಯಲ್ಲಿ ನೀವುಗಳೆಲ್ಲ ಏನೂ ಅಲ್ಲ" – ಎಂಬ ನೋಟೀಸ್ ಕೊಟ್ಟರು.

ಈ ನೋಟೀಸಿಗೆ ಜನತಾ ಗಣ್ಯರು ನೇರ ಸವಾಲು ಹಾಕುವರೆಂದು ಹೆಗಡೆಯವರು ನಿರೀಕ್ಷೆ ಮಾಡಿರಲಿಕ್ಕಿಲ್ಲ. ಆದರೆ ಅವರ ಈ ಉಪಕ್ರಮಕ್ಕೆ ಜನತಾ ಗಣ್ಯರು ಉಗ್ರವಾದ ಸವಾಲನ್ನೇ ಹಾಕಿದ್ದರು. ಪರಿಣಾಮವಾಗಿ ಹೆಗಡೆಯವರಿಗೆ ಪೂರ್ಣ ಪ್ರಮಾಣದ ಸಂಪುಟ ರಚಿಸುವಾಗ ತಮ್ಮ ಮನಸ್ಸಿಯಂತೆ ಸಚಿವರ ಆಯ್ಕೆ ಮಾಡಲೂ ಆಗಲಿಲ್ಲ. ಸಚಿವರ ಖಾತೆಗಳ ಹಂಚಿಕೆಯಲ್ಲೂ ತಮ್ಮಿಚ್ಛೆಯಂತೆ ನಡಕೊಳ್ಳಲಾಗಲಿಲ್ಲ. ಇದೆಲ್ಲವನ್ನೂ ಜನತಾ ಪಕ್ಷದ ಗಣ್ಯರು, ಸಂಪುಟ ಹೇಗಿರಬೇಕು–ಯಾರು–ಏನಾಗಿರಬೇಕು–ಎಂಬುದನ್ನು ಗೆರೆಎಳೆದು ತಾಕೀತು ಮಾಡಿದರು.

"ಹೆಗಡೆ ಗೆಲುವು" ಎಂಬ ಪ್ರಚಾರದ ಹೊಂಬೆಳಕಿನಲ್ಲಿ ಮೈಮರೆತ ಹೆಗಡೆಯವರಿಗೆ ಅಂದಿನಿಂದ ಇಂದಿನವರೆಗೆ ಹೊಸ ಸರಕಾರದಲ್ಲಿ ತಮ್ಮತನವನ್ನು ಗುರುತಿಸಿಕೊಳ್ಳಲಾಗಲಿಲ್ಲ.

ಇಟ್ಟ ಅಡ್ಡ ಹೆಜ್ಜೆ

ಚಾಣಾಕ್ಷ ರಾಜಕಾರಣಿಯಾಗಿ ಎಲ್ಲರಿಂದಲೂ "ಸೈ" ಅನ್ನಿಸಿಕೊಂಡಿದ್ದ ಹೆಗಡೆಯವರು 1985ರ ಚುನಾವಣೆಯ ಬಳಿಕ ಇಟ್ಟ "ಅಡ್ಡ ಹೆಜ್ಜೆ"ಯನ್ನು ಇಂದಿಗೂ ಸರಿಪಡಿಸಿಕೊಳ್ಳಲಾಗದೆ ತಡಪಡಿಸುತ್ತಿರುವರೆಂಬುದು ಸೂಕ್ಷ್ಮ ರಾಜಕೀಯ ವೀಕ್ಷಕರ ಅಭಿಪ್ರಾಯ. ಮಾರ್ಚ್ 1985 ರಿಂದ ಇಂದಿನವರೆಗೆ ಹೆಗಡೆ ಸರಕಾರ ಕೈಗೊಂಡ ಯಾವ ಪ್ರಮುಖ ನಿರ್ಧಾರಕ್ಕೂ ಸಂಪುಟದ ಸಮಾಲೋಚನೆಯ ಲಾಭ ಸಿಕ್ಕಿಲ್ಲವೆಂದು ಹೇಳಲಾಗಿದೆ.

ಎರಡು ರೂ. ಬೆಲೆಯಲ್ಲಿ ಕೆ. ಜಿ. ಅಕ್ಕಿ ಪೂರೈಕೆಯ ಭರವಸೆಯ ವಿಚಾರದಲ್ಲಾಗಲೀ ಉಚಿತ ಧೋತಿ – ಸೀರೆ ವಿತರಣೆಯ ಅಮಿಷದಲ್ಲಾಗಲೀ, ಕ್ಯಾಪಿಟೇಶನ್ ಶುಲ್ಕ ರದ್ದತಿ ಶಾಸನವನ್ನು ಎಲ್ಲ ಶಾಲೆ–ಕಾಲೇಜುಗಳಿಗೆ ಅನ್ವಯಿಸುವ ಘೋಷಣೆಯಲ್ಲಾಗಲೀ, ಉಚಿತ ಪಠ್ಯ ಪುಸ್ತಕಗಳ ಹಂಚಿಕೆಯಂತಹ ನಿರ್ಧಾರದಲ್ಲಾಗಲೀ, ಹೊಸ ಮೆಡಿಕಲ್ ಕಾಲೇಜುಗಳ ಆರಂಭಕ್ಕೆ ಅನುಮತಿ ನೀಡಬೇಕೆನ್ನುವ ಹುನ್ನಾರಿನಲ್ಲಾಗಲೀ ಸಮಗ್ರ ಸಂಪುಟದ ಸಹಭಾಗಿತ್ವ ಇದ್ದಿರಲಿಲ್ಲವೆಂಬುದು ಜನತಾ ಪಕ್ಷದ ಎಲ್ಲ ಶಾಸಕರಿಗೂ ಈಗ ಗೊತ್ತಾಗಿರುವ ವಿಚಾರಗಳು. ಅವರ ಗೊಣಗಾಟಕ್ಕೆ ಕಾರಣವಾಗಿರುವ ಅಂಶಗಳು.

ಹೀಗೆ ತಮ್ಮ ಇಚ್ಛೆಗೆ ಅನುವರ್ತಿಯಾಗಿ ಇಲ್ಲದಿರುವ ಸಂಪುಟದ ಸ್ವರೂಪವನ್ನು ಪೂರ್ಣವಾಗಿ ಬದಲಾಯಿಸುವ ನಿರ್ಧಾರಕ್ಕೆ ಈಗ ಹೆಗಡೆಯವರು ಬಂದಿರುವರೆಂದು ಹೇಳಲಾಗಿದೆ.

ರಾಜ್ಯ ವಿಧಾನ ಮಂಡಲದ ಪ್ರಚಲಿತ ಅಧಿವೇಶನ ಮುಗಿದೊಡನೆ ಹೆಗಡೆಯವರು ತಮ್ಮ ಸಂಪುಟದ ಪುನರ್ರಚನೆ ಮಾಡುವರೆಂಬ ಮಾತಿಗೆ ಇದು ರಾಜಕೀಯ ಹಿನ್ನೆಲೆಯಾಗಿದೆ.

(ಮುಂದುವರಿಯುವುದು.)

ಹಾಸನ ಜಿಲ್ಲೆಯಲ್ಲಿ ಮಹಿಳೆಯರ ಹಾಗೂ ಮಕ್ಕಳ ಶ್ರೇಯೋಭಿವೃದ್ಧಿ

ಕೆ. ಆರ್. ತೋಪೆಗೌಡ

ಸಮಾಜದ ದುರ್ಬಲ ವರ್ಗಗಳು, ಮಹಿಳೆಯರು ಮತ್ತು ಮಕ್ಕಳ ಅವಶ್ಯಕತೆಗಳನ್ನು ಪೂರೈಸಿ, ಅವರನ್ನು ಆರೋಗ್ಯವಂತ ಹಾಗೂ ದೃಢಕಾಯರನ್ನಾಗಿಸಿ, ಅವರ ಸಾಮಾಜಿಕ ಹಾಗೂ ಆರ್ಥಿಕ ಅಂತಸ್ತನ್ನು ಹೆಚ್ಚಿಸುವುದೇ ಸಮಾಜ ಕಲ್ಯಾಣ ಇಲಾಖೆಯ ಮುಖ್ಯ ಗುರಿ.

ಈ ಮೊದಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಎಂದು ಕರೆಯಲ್ಪಟ್ಟಿದ್ದ ಸಮಾಜ ಕಲ್ಯಾಣ ಇಲಾಖೆ 1984ರಲ್ಲಿ ಜಾರಿಗೆ ತಂದಿರುವ ಯೋಜನೆಗಳು ಹಾಗೂ ನಿರ್ವಹಿಸುವ ಕಾರ್ಯಗಳು ಅನೇಕ ವಿಧ.

ಹಾಸನ ಜಿಲ್ಲೆಯಲ್ಲಿ ಮಹಿಳೆಯರ ಹಾಗೂ ಮಕ್ಕಳ ಕಲ್ಯಾಣಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯು ಅನೇಕ ಶ್ರೇಯೋಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಹಾಸನ, ಚನ್ನರಾಯಪಟ್ಟಣ ಹಾಗೂ ಹೊಳೆನರಸೀಪುರ ತಾಲೂಕುಗಳಲ್ಲಿ 6ವರ್ಷ ದೊಳಗಿನ ಮಕ್ಕಳು ಮತ್ತು ಗರ್ಭಿಣಿ ಹಾಗೂ ಬಾಣಂತಿಯರ ಸರ್ವತೋಮುಖ ಪ್ರಗತಿಗಾಗಿ ಪ್ರತಿ ತಾಲೂಕಿನಲ್ಲಿ 100 ಅಂಗನವಾಡಿ ಕೇಂದ್ರಗಳು ಕಾರ್ಯ ನಡೆಸುತ್ತಿವೆ. ಇವುಗಳಲ್ಲಿ 0–3 ವರ್ಷದ ಒಳಗಿನ 12,035 ಮಕ್ಕಳು, 3–6ವರ್ಷದೊಳಗಿನ 14,678 ಮಕ್ಕಳು, 1715 ಮಂದಿ ಗರ್ಭಿಣಿಯರು, ಮತ್ತು 1793 ಮಂದಿ ಬಾಣಂತಿಯರು ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ.

ಪ್ರತಿಯೊಂದು ಅಂಗನವಾಡಿಯಲ್ಲಿ ಮಕ್ಕಳಿಗೆ, ಗರ್ಭಿಣಿಯರಿಗೆ, ಬಾಣಂತಿಯರಿಗೆ ರೋಗ ನಿರೋಧಕ ಚುಚ್ಚುಮದ್ದುಗಳು, ಆರೋಗ್ಯ ತಪಾಸಣೆ, ಮಾಹಿತಿ ಸೇವೆ, ಆರೋಗ್ಯ ಹಾಗೂ ಪೌಷ್ಟಿಕಾಂಶದ ಶಿಕ್ಷಣ ಮಕ್ಕಳಿಗೆ ಪೂರ್ವ ಪ್ರಾಥಮಿಕ ಶಿಕ್ಷಣ, ಮಹಿಳೆಯರಿಗೆ ರೂಢಿಗತವಲ್ಲದ ಶಿಕ್ಷಣ ಮತ್ತು ಪೂರಕ ಆಹಾರ ಹೀಗೆ 7 ಸೇವೆಗಳಲ್ಲಿ ಆರೋಗ್ಯ ಮತ್ತು ಹಾಗೂ ಕುಟುಂಬ ಕಲ್ಯಾಣ ಇಲಾಖೆಯು ಬಲು ಆಸಕ್ತಿಯಿಂದ ಕೆಲಸ ಮಾಡುತ್ತಿವೆ. ಈಗ 13,000ಕ್ಕೂ ಮೇಲ್ಪಟ್ಟು ಮಕ್ಕಳಿಗೆ 1000ಕ್ಕೂ ಮೇಲ್ಪಟ್ಟು ಮಹಿಳೆಯರಿಗೆ ಆರೋಗ್ಯ ಸೇವೆಯನ್ನು ಒದಗಿಸಿದೆ. ಇಂತಹದೇ ಒಂದು ಯೋಜನೆ ಬೇಲೂರಿಗೆ ಈ ವರ್ಷ ಸರ್ಕಾರದಿಂದ ಮಂಜೂರಾಗಿದ್ದು ಶೀಘ್ರದಲ್ಲೇ ಪ್ರಾರಂಭವಾಗಲಿದೆ.

ಹಾಸನ, ಅರಸೀಕೆರೆ ಹಾಗೂ ಅರಕಲಗೂಡು (ಕೊಣನೂರು) ತಾಲೂಕುಗಳಲ್ಲಿ 1ರಿಂದ 6ವರ್ಷದೊಳಗಿನ ಪಟ್ಟಣ ಹಾಗೂ ಹಿಂದುಳಿದ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳಿಗೆ, ಗರ್ಭಿಣಿ ಬಾಣಂತಿಯರಿಗೆ ವಿಶೇಷ ಪೌಷ್ಟಿಕ ಆಹಾರ ಯೋಜನೆಯ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ. ಈ ಪ್ರದೇಶಗಳಲ್ಲಿರುವ ಮಕ್ಕಳಿಗೆ ಮತ್ತು ಮಹಿಳೆಯರಿಗೆ 0-55 ಮತ್ತು 0–82 ಗ್ರಾಂ ನಂತೆ ಮೈಸೂರಿನ ಪೌಷ್ಟಿಕಾಂಶ ಘಟಕದಲ್ಲಿ ತಯಾರಾದ "ಎನರ್ಜಿ ಫುಡ್"ನ್ನು ಕೊಡಲಾಗುತ್ತಿದ್ದು ಈಗಾಗಲೇ 7245 ಹಾಗೂ 350 ಗರ್ಭಿಣಿಯರು ಮತ್ತು 500 ಬಾಣಂತಿಯರು ಇದರ ಲಾಭವನ್ನು ಪಡೆಯುತ್ತಿದ್ದಾರೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅಂಗವಿಕಲರ ಕಲ್ಯಾಣ ಯೋಜನೆ ಅನ್ವಯ 1ನೇ ತರಗತಿಯಿಂದ 4ನೇ ತರಗತಿಯವರೆಗೆ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಶಾಲಾ ಅಂಗವಿಕಲ ಮಕ್ಕಳಿಗೆ ಪ್ರತಿ ತಿಂಗಳು 25ರೂ.ಗಳ ವಿದ್ಯಾರ್ಥಿ ವೇತನವನ್ನು, 5ರಿಂದ 8ನೇ ತರಗತಿಯ ವರೆಗೆ ಅಭ್ಯಾಸ ಮಾಡುವ ಮಕ್ಕಳಿಗೆ 25ರೂ. ಹಾಗೂ 15ರೂ ಪ್ರಯಾಣ ಭತ್ಯೆಯನ್ನು ನೀಡಲಾಗುತ್ತಿದೆ.

ಪದವಿ ವ್ಯಾಸಂಗ ಮಾಡುತ್ತಿರುವ ಅಂಗವಿಕಲ ವಿದ್ಯಾರ್ಥಿಗಳು 60 ರಿಂದ 120ರೂ.ವರೆಗೆ ವಿದ್ಯಾರ್ಥಿ ವೇತನವನ್ನು ಪಡೆಯುತ್ತಿದ್ದು, ಕಳೆದ ವರ್ಷ ಜಿಲ್ಲೆಯಲ್ಲಿ ರಾಜ್ಯ ಸರ್ಕಾರದಿಂದ 39 ವಿದ್ಯಾರ್ಥಿಗಳು 10,070 ರೂ. ಹಾಗೂ ಕೇಂದ್ರ ಸರ್ಕಾರದಿಂದ 11ವಿದ್ಯಾರ್ಥಿಗಳು 7,200 ರೂ.ಗಳನ್ನು ಪಡೆಯುತ್ತಿದ್ದಾರೆ.

ಈ ಯೋಜನೆ ಕೇವಲ ಚೆನ್ನರಾಯಪಟ್ಟಣ, ಹೊಳೆನರಸೀಪುರ, ಹಾಸನಕ್ಕೆ ಸೀಮಿತವಾಗಿದ್ದು ಕಳೆದ ಸಾಲಿನಲ್ಲಿ ಹಾಸನದ ಶಿಶುಕಲ್ಯಾಣ ಅಭಿವೃದ್ಧಿ ಯೋಜನೆ ಹಾಗೂ ಅನೇಕ ಬ್ಯಾಂಕುಗಳ ಸಹಾಯದಿಂದ 83 ಫಲಾನುಭವಿಗಳು 27,800 ರೂ.ಗಳ ಸಹಾಯಧನದ ಲಾಭವನ್ನು ಪಡೆದಿದ್ದು ಚೆನ್ನರಾಯಪಟ್ಟಣ ಶಿಶು ಕಲ್ಯಾಣ ಅಭಿವೃದ್ಧಿ ಯೋಜನೆಯಲ್ಲಿ 55ಫಲಾನುಭವಿಗಳು 28500 ರೂ.ಗಳ ಸಹಾಯಧನ ಲಾಭವನ್ನು ಪಡೆದು ಎಮ್ಮೆ, ಹಸು, ಕೋಳಿ, ಬಟ್ಟೆ ಅಂಗಡಿ, ಕಿರಾಣಿ ಅಂಗಡಿ, ಬಳೆ ವ್ಯಾಪ್ಯಾರ, ಮಡಿಕೆ ತಯಾರಿಸುವ ಅನೇಕ ಯೋಜನೆಗಳಲ್ಲಿ ಹಣವನ್ನು ವಿನಿಯೋಗಿಸಿ ತಮ್ಮ ಆದಾಯವನ್ನು ಹೆಚ್ಚಿಸಿಕೊಂಡಿದ್ದಾರೆ.

ಆಲೂರು ತಾಲೂಕಿನ ಮೂರು ಮಹಿಳಾ ಸಮಾಜದ ನಿರ್ವಹಣಾ ವೆಚ್ಚಕ್ಕಾಗಿ3,000 ರೂ.ಗಳ ಧನ ಸಹಾಯ ನೀಡಿದ್ದು, ಹಾಸನ, ಚನ್ನರಾಯ ಪಟ್ಟಣ, ಹೊಳೆನರಸೀಪುರ, ತಲಾ ತಾಲೂಕುಗಳಲ್ಲಿ 50ಕ್ಕೂ ಹೆಚ್ಚು ಮಹಿಳಾ ಸಮಾಜಗಳನ್ನು ರಚಿಸಿ 7,500 ರೂ.ಗಳ ಸಹಾಯವನ್ನು ಸರ್ಕಾರದಿಂದ ಮಹಿಳೆಯರಿಗೆ ನೀಡಲಾಗಿದೆ.

ಈ ಯೋಜನೆಗಳಲ್ಲಿ ಹಾಸನ ವಿಭಾಗಕ್ಕೆ "ಸೋಷಿಯಲ್ ಇನ್‌ಪುಟ್ ಇನ್ ಏರಿಯಾ ಡೆವಲಪ್‌ಮೆಂಟ್" ಯೋಜನೆಯೂ ಬಂದಿದ್ದು ಲಕ್ಷಾಂತರ ರೂ.ಗಳನ್ನು ರಾಜ್ಯ ಸರ್ಕಾರದವರು ಹಾಗೂ ಯುನಿಸೆಫ್‌ದವರು ಮಹಿಳೆಯರ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ನೀಡಲಿವೆ. ಈ ಯೋಜನೆ ಜಿಲ್ಲಾಧಿಕಾರಿಗಳ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಮೇಲ್ವಿಚಾರಣೆಯಲ್ಲಿ ಶೀಘ್ರದಲ್ಲೇ ಪ್ರಾರಂಭವಾಗಲಿದೆ. ಈ ಯೋಜನೆಗೆ ಅರಸೀಕೆರೆ, ಹಾಸನ, ಹೊಳೆನರಸೀಪುರ, ಚನ್ನರಾಯ ಪಟ್ಟಣ ತಾಲೂಕುಗಳು ಒಳಪಡಲಿವೆ.

ಹೆಗಡೆ ಆಡಳಿತ: "ಐದು ತಿಂಗಳ ಅದ್ವಾನ"

ವಡ್ಡರ್ಸೆ ರಘುರಾಮ ಶೆಟ್ಟಿ

(ನಿನ್ನೆಯ ಸಂಚಿಕೆಯಿಂದ)

ಮುಖ್ಯಮಂತ್ರಿ ಹೆಗಡೆಯವರು ಈಗ ಉದ್ದೇಶಿಸಿರುವರೆನ್ನಲಾದ ರೀತಿಯಲ್ಲಿ ಸಂಪುಟದ ಪುನರ್ರಚನೆ ಮಾಡಲು ಅವರಿಂದ ಸಾಧ್ಯವೇ?–ಎನ್ನುವುದು ಜನತಾ ಪಕ್ಷದ ಭಿನ್ನ ವಲಯಗಳಲ್ಲಿ ಈಗ ಚರ್ಚೆಗೆ ಬಂದಿರುವ ಪ್ರಶ್ನೆ.

ಹೆಗಡೆಯವರ ಕಟ್ಟಾ ಅನುಯಾಯಿಗಳಾದ ಕೆಲವರು ಸಚಿವರುಗಳು ಮತ್ತು ಶಾಸಕರ ಅಭಿಪ್ರಾಯದಲ್ಲಿ "ಹೆಗಡೆಯವರು ತಮ್ಮ ರಾಜಕೀಯ ಪ್ರತಿಷ್ಠೆಯ ರಕ್ಷಣೆಗಾಗಿ ಸಂಪುಟದ ಪೂರ್ಣ ಪುನರ್ರಚನೆ ಮಾಡಲೇಬೇಕು".

"ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಹೆಗಡೆಯವರು ಕೈಗೊಳ್ಳುವ ಎಲ್ಲ ಕ್ರಮಗಳಿಗೂ ಜನ ಬೆಂಬಲ ಸಿಗುವುದು". ಎಂಬುದು ಹೆಗಡೆ ಬೆಂಬಲಿಗರ ಲೆಕ್ಕಾಚಾರ.

ಭಿನ್ನಾಭಿಪ್ರಾಯ ಏನೇ ಇರಲಿ – ಅಸಮಾಧಾನ ಏನೇ ಇರಲಿ. ಸಂಪುಟದ ಪುನರ್ರಚನೆಯಲ್ಲಿ ಹೆಗಡೆಯವರು ಕೈಬಿಡಬಹುದಾದ ಸಚಿವರುಗಳು ಸಿಡಿದೇಳಲು ಸಾಧ್ಯವೇ ಇಲ್ಲವೆಂಬುದು ಇವರ ಅಭಿಪ್ರಾಯ.

1979ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಜನತಾ ಸರಕಾರದ ಪತನಕ್ಕೆ ಕಾರಣರೆನ್ನಲಾದ ರಾಜಕೀಯ ಅಗ್ರಗಣ್ಯರು, ಜನಸಾಮಾನ್ಯರ ಅಸಹನೆಯಲ್ಲಿ ಹೂತು ಹೋದ ಪ್ರಸಂಗವನ್ನು ಇವರು ಉದಹರಿಸುತ್ತಾರೆ. ಅಸಮಾಧಾನ ಏನೇ ಇದ್ದರೂ ಜನಾಭಿಪ್ರಾಯದ ಭಯದಿಂದಲಾದರೂ ಸಂಪುಟದಿಂದ ಕೈಬಿಟ್ಟ ಸಚಿವರುಗಳು ಬಾಯಿ ಮುಚ್ಚಿ, ಕೈಕಟ್ಟಿ ಕೂರುವರೆಂಬ ವಾದವನ್ನು ಹೆಗಡೆ ಬೆಂಬಲಿಗರು ಮುಂದೊಡ್ಡುತ್ತಿದ್ದಾರೆ.

ಏನೇ ಆಗಲಿ ಈ ದೇಶವನ್ನು ಅದ್ವಾ–ದಿದ್ದಿ ಆಳುತ್ತಿರುವ ಕಾಂಗ್ರೆಸ್ಗೆ ಒಂದು ಸಮರ್ಥ ಪ್ರತಿಪಕ್ಷವನ್ನು ಕಟ್ಟುವ ಅವಕಾಶವನ್ನು ಹಾಳು ಮಾಡಿದರೆನ್ನುವ ಅಪವಾದವನ್ನು ಹೊತ್ತು ತಿರುಗಲು ಅತೃಪ್ತರು ಮುಂದಾಗಲಾರರೆಂಬುದು ಒಂದು ತರ್ಕ.

ಸೊಪ್ಪು ಹಾಕಲು ಸಿದ್ಧರಿಲ್ಲ

ಆದರೆ ಹೆಗಡೆಯವರ "ಜಾಣ ರಾಜಕೀಯ ಆಟದಿಂದ" ರೋಸಿ ಹೋಗಿರುವ ಬಹುಮಂದಿ ಸಚಿವರುಗಳು ಮತ್ತು ಶಾಸಕರುಗಳು, ದೇಶದ ಪತ್ರಿಕೆಗಳು ಬಡಿದೆಬ್ಬಿಸಬಹುದಾದ ಜನಾಭಿಪ್ರಾಯಕ್ಕೆ ಅಂಜಿ "ಔಚಿತ್ಯದ ಎಲ್ಲೆ ಮೀರಿರುವ" ಹೆಗಡೆ ಪ್ರತಿಷ್ಠೆಗೆ ಸೊಪ್ಪು ಹಾಕಲು ಸಿದ್ಧರಾಗಿರುವಂತೆ ಕಾಣುತ್ತಿಲ್ಲ.

ಇವರ ಅಭಿಪ್ರಾಯದಲ್ಲಿ ಹೆಗಡೆಯವರು ತಮ್ಮ "ಸ್ವ–ಪ್ರತಿಷ್ಠೆಯ ಮೆರವಣಿಗೆಯಲ್ಲಿ ಪಕ್ಷವನ್ನು ಕಸವಾಗಿ ಕಾಣುತ್ತಿದ್ದಾರೆ" ಈ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರಕ್ಕಿಂತ ಭಿನ್ನವಾದ ಮತ್ತು ಜನ ಪರವಾದ ಸರಕಾರವನ್ನು ಕೊಡುವ ಮಹದವಕಾಶವನ್ನು "ಹೆಗಡೆಯವರು ಹಾಳು ಮಾಡುತ್ತಿದ್ದಾರೆ".

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಜನರ ವಿಶ್ವಾಸ ಕಳೆದು ಕೊಳ್ಳಲು ಮುಖ್ಯ ಕಾರಣವಾದ "ಬಹಿರಂಗ ಭ್ರಷ್ಟಾಚಾರವನ್ನು ಹೆಗಡೆಯವರೂ ಅನುಸರಿಸುತ್ತಿದ್ದಾರೆ. ಸ್ವಜನ ಪಕ್ಷಪಾತ ಹೆಗಡೆ ಆಡಳಿತದ ಮೂಲ ಮಂತ್ರವಾಗಿದೆ" ಎಂದು ಅವರ ಎದುರಾಳಿಗಳು ಹೇಳುತ್ತಿದ್ದಾರೆ.

ಸಾರ್ವಜನಿಕರಿಗೆ ಸಲ್ಲದ ಆಮಿಷಗಳನ್ನೊಡ್ಡಿ ಅವರನ್ನು ಅಡ್ಡದಾರಿಗೆಳೆಯುತ್ತಿರುವರೆಂಬ ಆರೋಪವೂ ಹೆಗಡೆಯವರ ಮೇಲಿದೆ. ತಾವು ಎರಡನೆ ಬಾರಿ ಮುಖ್ಯ ಮಂತ್ರಿಯಾಗಿ ಆಯ್ಕೆಗೊಂಡ ಹೆಗಡೆಯವರು "ಪಕ್ಷವನ್ನು ಕಡೆಗಣಿಸಿ ತಮಗಿಷ್ಟ ಬಂದಂತೆ ಮಹತ್ವದ ರಾಜಕೀಯ ನಿರ್ಣಯಗಳನ್ನು ಕೈಗೊಳ್ಳುತ್ತಿರುವರು" ಎಂಬುದು ಇವರ ದೂರು.

(ಐದನೇ ಪುಟಕ್ಕೆ)

ಹೆಗಡೆ ಆಡಳಿತ: 'ಐದು ತಿಂಗಳ ಅದ್ವಾನ'

(ಮೊದಲ ಪುಟದಿಂದ)

ಪಕ್ಷದಲ್ಲಾಗಲೀ– ಸಂಪುಟದಲ್ಲಾಗಲೀ ಸಮಾಲೋಚನೆ ನಡೆಸದೆ ಪಕ್ಷದ ಶಾಸಕರಿಗೆ ಸರಕಾರಿ ಅಧೀನ ಸಂಸ್ಥೆಗಳಲ್ಲಿ ಯಾವುದೇ ಹುದ್ದೆ ಕೊಡುವುದಿಲ್ಲವೆಂದು ಹೆಗಡೆಯವರು ನೀತಿ ನಿರೂಪಣೆ ಮಾಡಿದ್ದರಿಂದ ಅನೇಕ ಮಂದಿ ಶಾಸಕರು ಸಿಡಿಮಿಡಿ ಗೊಂಡಿದ್ದಾರೆ.

ಪಕ್ಷದ ಪರವಾಗಿ ಸಾರ್ವಜನಿಕ ಸಂಪರ್ಕ ಬೆಳೆಸುವಂತಹ ಮಹತ್ವದ ಕಾರ್ಯ ನಿರ್ವಹಣೆಗೆ ಹೆಗಡೆಯವರು ಬುದ್ಧಿಜೀವಿಗಳೆನ್ನುವ "ತಮ್ಮವರನ್ನು" ಸೇರಿಸಿ ಸಾರ್ವಜನಿಕ ಸಂಪರ್ಕ ಸಮಿತಿ ನೇಮಿಸಿದ್ದನ್ನೂ, ತಮ್ಮ ಬಂಧು ವರ್ಗಕ್ಕೆ ಸೇರಿದ ಅಜ್ಜೀಬಾಳ ಹೆಗಡೆಯವರನ್ನು ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿ ನೇಮಿಸಿದ್ದನ್ನೂ ಈ ಶಾಸಕರು ವಿರೋಧಿಸಿದ್ದಾರೆ.

ಅಧ್ಯಕ್ಷರಿಗೆ ದೂರು

ಕೆಲವರು ಸಚಿವರುಗಳು ಮತ್ತು ಶಾಸಕರುಗಳ ಈ ಅಸಮಾಧಾನ ಗೊಣಗುಟ್ಟುವುದರಲ್ಲಿಯೇ ಉಳಿಯಲಿಲ್ಲ. ಇವರೆಲ್ಲಾ ಮುಖ್ಯಮಂತ್ರಿ ಹೆಗಡೆ ವಿರುದ್ಧವಾದ ತಮ್ಮೆಲ್ಲಾ ದೂರುಗಳನ್ನೂ ಪಟ್ಟಿಮಾಡಿ ಮೇ ತಿಂಗಳಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಚಂದ್ರಶೇಖರ್ ಅವರಿಗೆ ಒಪ್ಪಿಸಿದ್ದರು.

ಹೊಸತಾಗಿ ಅಧಿಕಾರಕ್ಕೆ ಬಂದ ಎರಡೇ ತಿಂಗಳಲ್ಲಿ ತಮ್ಮ ಪಕ್ಷದ ಕರ್ನಾಟಕ ಘಟಕದಲ್ಲಿ ಆರಂಭವಾದ ಒಳಜಗಳದಿಂದ ದಿಗ್ಭ್ರಮೆಗೊಂಡ ಜನತಾ ಅಧ್ಯಕ್ಷ ಚಂದ್ರಶೇಖರ್ ಕರ್ನಾಟಕದಲ್ಲಿನ ರಾಜಕೀಯ ಪರಿಸ್ಥಿತಿಯ ಅಧ್ಯಯನಕ್ಕೆ ಜಾರ್ಜ್ ಫೆರ್ನಾಂಡಿಸರನ್ನು ನೇಮಿಸಿದರಂತೆ.

ಜಾರ್ಜ್‌ಫೆರ್ನಾಂಡಿಸರು ರಾಜ್ಯದಲ್ಲಿ ಪ್ರವಾಸ ಮಾಡಿ ರಾಜಕೀಯ ಪರಿಸ್ಥಿತಿಯ ಅಧ್ಯಯನ ಮಾಡುವರೆಂದೂ, ಅವರ ಪ್ರವಾಸದಲ್ಲಿ ಪಕ್ಷದ ಕಾರ್ಯಕರ್ತರನ್ನು ತೊಡಗಿಸಬೇಕೆಂದೂ, ಚಂದ್ರಶೇಖರ್ ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಿಗೆ ಸುತ್ತೋಲೆ ಕಳುಹಿಸಿದ್ದರು. ಇದನ್ನು ತಿಳಿದ ತಕ್ಷಣ ಹೆಗಡೆಯವರು ರಾಜ್ಯದಲ್ಲಿ ಜನತಾ ಪಕ್ಷದ ಆಡಳಿತದ ಬಗ್ಗೆ ಜನಾಭಿಪ್ರಾಯ ಸಂಗ್ರಹಕ್ಕೆ ಜಾರ್ಜ್ ಫೆರ್ನಾಂಡಿಸ್ ಪ್ರವಾಸ ಮಾಡಬೇಕಾದ ಅಗತ್ಯವಿಲ್ಲವೆಂದೂ ಆ ಕೆಲಸವನ್ನು "ಬುದ್ಧಿಜೀವಿಗಳ" ಸಾರ್ವಜನಿಕ ಸಂಪರ್ಕ ಸಮಿತಿ ನಿರ್ವಹಿಸುವುದೆಂದೂ ಜನತಾ ಅಧ್ಯಕ್ಷ ಚಂದ್ರಶೇಖರ್ ಅವರಿಗೆ ತಿಳಿಸಿದರೆನ್ನಲಾಗಿದೆ.

ದೇಶದ ಇತರೆಲ್ಲ ರಾಜ್ಯಗಳಲ್ಲಿ ನೆಲೆ ಕಳೆದುಕೊಂಡಿರುವ ಜನತಾ ಪಕ್ಷವನ್ನು ಕಳೆದ ಎರಡೂವರೆ ವರ್ಷಗಳಿಂದ "ಪೋಷಣೆ ಮಾಡುತ್ತಿರುವ" ಮುಖ್ಯ ಮಂತ್ರಿ ಹೆಗಡೆಯವರ ಮಾತಿಗೆ ಪ್ರತಿ ಹೇಳುವ ಸ್ಥಿತಿಯಲ್ಲಿ ಚಂದ್ರಶೇಖರ್ ಇರಲಿಲ್ಲ. ಹಾಗಾಗಿ ಮೇರೆಗಳಲ್ಲಿ ಜಾರ್ಜ್ ಫೆರ್ನಾಂಡಿಸ್ ಕೈಗೊಳ್ಳಬೇಕಾಗಿದ್ದ ಪ್ರವಾಸ ಕಾರ್ಯಕ್ರಮ ರದ್ದಾಯಿತು.

ಹೆಗಡೆಯವರು ಬಲದ ನೆಲೆಯಲ್ಲಿ ತಮ್ಮಿಚ್ಛೆಗೆ ಪಕ್ಷದ ಕೇಂದ್ರ ಮುಖಂಡರನ್ನು ಬಗ್ಗಿಸಿದರಾದರೂ, ಈ ಪ್ರಕರಣ ರಾಜ್ಯ ಪಕ್ಷದಲ್ಲಿ ಅವರ ವಿರುದ್ಧ ಅಸಮಾಧಾನದ ಹೊಗೆ ಎಬ್ಬಿಸಿರುವುದಂತೂ ನಿಜ.

ರಾಜ್ಯ ಜನತಾ ಪಕ್ಷದಲ್ಲಿ ಇಷ್ಟು ಬೇಗ ಎದ್ದಿರುವ ಈ ಆಂತರಿಕ ಕಲಹದಲ್ಲಿ ಮುಖ್ಯ ಮಂತ್ರಿ ಹೆಗಡೆಯವರ ವ್ಯಕ್ತಿ ಪ್ರತಿಷ್ಠೆ ಐದು ತಿಂಗಳ ಹಿಂದೆ ಇದ್ದಷ್ಟು ಶುಭ್ರವಾಗಿ ಈಗ ಉಳಿದಿಲ್ಲವೆನ್ನಬಹುದು.

ಶಾಸಕರ ಶಂಕೆ

ಪಕ್ಷದ ಶಾಸಕರನೇಕರು ಈಗ ಮುಚ್ಚುಮರೆ ಇಲ್ಲದೆ ಹೆಗಡೆಯವರ ಐದು ತಿಂಗಳ ಆಡಳಿತದ ವೈಫಲ್ಯಗಳ ಪಟ್ಟಿ ಮಾಡುತ್ತಿದ್ದಾರೆ. ಎರಡು ರೂ.ಗಳಿಗೆ ಕೆ. ಜಿ. ಅಕ್ಕಿ, ಉಚಿತ ಧೋತಿ-ಸೀರೆ ಹಂಚಿಕೆಯಂತಹ ಆಶ್ವಾಸನೆ ಉಚಿತ–ಪಠ್ಯ ಪುಸ್ತಕ ವಿತರಣೆಯಂತೆ ನಗೆಪಾಟಲಿಗೆ ಈಡಾಗುವವೆಂಬ ಭಯವನ್ನು ಇವರು ವ್ಯಕ್ತಪಡಿಸುತ್ತಿದ್ದಾರೆ.

ಒಂದುಸಿರಿನಲ್ಲಿ ತಾಂತ್ರಿಕ ಶಿಕ್ಷಣದ ಕ್ಯಾಪಿಟೇಶನ್ ಶುಲ್ಕ ರದ್ದು ಮಾಡುವುದಾಗಿ ಹೇಳುವ ಸರಕಾರ ತೆರೆಯ ಮರೆಯಲ್ಲಿ ವರ್ಷಕ್ಕೆ ಎರಡು-ಮೂರರಂತೆ ಖಾಸಗಿ ಮೆಡಿಕಲ್ ಕಾಲೇಜುಗಳ ಆರಂಭಕ್ಕೆ ಹುನ್ನಾರು ಹಾಕುತ್ತಿರುವುದು ಆಭಾಸವೆಂದು ಕೆಲವರಿಗೆ ಅನ್ನಿಸಿದೆ.

ಕೋಟಿಗಟ್ಟಲೆ ವ್ಯವಹಾರದ ಸಾರಾಯಿ ಬಾಟ್ಲಿಂಗ್‌ನ ದೊಡ್ಡ ಕಂಟ್ರಾಕ್ಟು ಮುಖ್ಯ ಮಂತ್ರಿಯ ಅಳಿಯನ ಮಿತ್ರರೊಬ್ಬರಿಗೆ ಸಿಕ್ಕಿರುವುದು ಜನತಾದ ವಿಶ್ವಾಸಾರ್ಹತೆಯ ಮೂಲಕ್ಕೇ ಏಟುಕೊಟ್ಟಿದೆಯೆಂದು ಅನೇಕರು ಹೇಳುತ್ತಿದ್ದಾರೆ. ಇದೆಲ್ಲದರ ಮೇರೆಗೆ ಹೆಗಡೆಯವರೀಗ ತೆಲುಗು–ಗಂಗಾಯೋಜನೆಯ ಇಕ್ಕಳದಲ್ಲಿ ಸಿಕ್ಕಿದ್ದಾರೆ. ಕೃಷ್ಣಾನದಿಯ ಮಿಗತೆ ನೀರನ್ನು ಬಳಸಿಕೊಳ್ಳಲು ಹೆಗಡೆಯವರು. ತಮ್ಮ ಸ್ನೇಹಿತ ಆಂಧ್ರದ ಮುಖ್ಯ ಮಂತ್ರಿಗೆ ಒಪ್ಪಿಗೆ ನೀಡಿದ್ದರೆನ್ನುವುದು ಈಗ ಗುಟ್ಟಾಗಿ ಉಳಿದಿಲ್ಲ. ಇದರಿಂದ ರಾಜ್ಯದ ನೀರಾವರಿ ಹಿತಕ್ಕೆ ಭಾರೀ ಆಘಾತವಾಗುವುದೆಂಬ ಗುಲ್ಲು ಜನತಾ ಶಾಸಕಾಂಗ ಪಕ್ಷದಲ್ಲಿ ಎದ್ದಿದೆ.

ಹಾಸ್ಯಪ್ರಿಯ ಜನತಾ ಶಾಸಕರೊಬ್ಬರು ಇತ್ತೀಚೆಗೆ ವಿಧಾನ ಸಭೆಯ ಲಾಬಿಯಲ್ಲಿ ಹೆಗಡೆಯವರ ಈಗಿನ ಸರಕಾರದ ಆಡಳಿತವನ್ನು "ಐದು ತಿಂಗಳ ಅದ್ವಾನ" ಎಂದು ಬಣ್ಣಿಸುತ್ತ ಇದ್ದವರನ್ನೆಲ್ಲ ನಗಿಸಿದ್ದರು.

ಹೀಗೆ ಪಕ್ಷದಲ್ಲಿ ಆಂತರಿಕವಾಗಿ ಅನುಕೂಲಕ್ಕಿಂತ ಹೆಚ್ಚು ಪ್ರತಿಕೂಲವಾಗಿ ತಿರುಗಿರುವ ವಾತಾವರಣದಲ್ಲಿ ಹೆಗಡೆಯವರು ಸಂಪುಟದ ಪುನರ್ರಚನೆ ಮಾಡುವರೇ ಅಥವಾ ವಿಸ್ತರಣೆ ಮಾಡುವರೇ? ಎಂಬುದನ್ನೀಗ ಎಲ್ಲರೂ ಕುತೂಹಲದಿಂದ ಎದುರು ನೋಡುತ್ತಿದ್ದಾರೆ.

(ಮುಗಿಯಿತು)

ಮೇಳ ನೀವೇ ನಿರ್ಧರಿಸಿ ವಿದ್ಯಾರ್ಥಿಗಳಿಗೆ ಕರೆ

(ಮುಂಗಾರು ವರದಿ)

ಮಂಗಳೂರು, ಅ. 12– ಸಾಲಮೇಳದ ಬಗ್ಗೆ ಬಹಳಷ್ಟು ಟೀಕೆಗಳು ಕೇಳಿಬರುತ್ತಿವೆ. ಜನತೆ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳು ತಾವಾಗಿಯೇ ಚಿಂತನೆ ನಡೆಸಿ ಇದು ಸರಿಯೊ ಅಥವಾ ತಪ್ಪೊ ಎಂದು ತೀರ್ಮಾನಿಸಲಿ ಎಂದು ಕೇಂದ್ರ ಹಣಕಾಸು ಉಪ ಸಚಿವ ಬಿ.ಜನಾರ್ದನ ಪೂಜಾರಿ ಹೇಳಿದ್ದಾರೆ.

ಸ್ಟೇಟ್‌ಬ್ಯಾಂಕ್ ಆಫ್ ಮೈಸೂರು ವತಿಯಿಂದ ಗುರುವಾರ ಇಲ್ಲಿನ ಡಾನ್ ಬಾಸ್ಕೊ ಹಾಲ್‌ನಲ್ಲಿ ನಡೆದ ಸಾಲಮೇಳ ಹಾಗೂ ಜಿಲ್ಲೆಯ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

ದೇಶದಲ್ಲಿ ಬಡವರೂ ಬದುಕಬೇಕಾಗಿದೆ. ಅವರಿಗೂ ಭವಿಷ್ಯದ ಬಗ್ಗೆ ಸುಂದರ ಕನಸುಗಳಿವೆ. ಈ ಉದ್ದೇಶದಲ್ಲಿ ಸಾಲಮೇಳ ಕಾರ್ಯಕ್ರಮ ಜ್ಯಾರಿಗೆ ಬಂದಿದೆ ಎಂದು ಪೂಜಾರಿ ತಿಳಿಸಿದರು.

ಒಬ್ಬರನ್ನು ನೆಲಸಮ ಮಾಡಿ ಇನ್ನೊಬ್ಬರು ಜೊಕ್ಕಸ ಬೆಳೆಸುವುದು ಮನುಷ್ಯ ಧರ್ಮವಲ್ಲ. ನಾವೂ ಬದುಕಬೇಕು. ಇನ್ನೊಬ್ಬರನ್ನೂ ಬದುಕಲು ಬಿಡಬೇಕು. ಇದೇ ನಿಜವಾದ ಮಾನವ ಧರ್ಮ ಎಂದು ಅವರು ದುರ್ಬಲರ ಕಣ್ಣೀರನ್ನು ಒರಸುವುದು ನಮ್ಮೆಲ್ಲರ ಕರ್ತವ್ಯ ಎಂದು ನುಡಿದರು.

ದೇಶದಲ್ಲಿ ಸುಮಾರು 31ಕೋಟಿ ಜನ ತಿಂಗಳಿಗೆ 60ರೂಪಾಯಿಗಳ ಸಂಪಾದನೆಯನ್ನೂ ಮಾಡದೆ ಬಳಲುತ್ತಿದ್ದಾರೆ. ಸ್ವಾತಂತ್ರ್ಯದ ನಿಜವಾದ ಫಲ ದಕ್ಕಬೇಕಾದರೆ ಇಂತವರ ಸಮಸ್ಯೆಗಳು ನಿರ್ಮೂಲನಗೊಳ್ಳಬೇಕಾಗಿದೆ. ದೇಶದ ಹಳ್ಳಿ ಹಳ್ಳಿಗಳಲ್ಲಿ ಮನುಷ್ಯ ಶಕ್ತಿ ಸಟೆದು ನಿಂತು ದೇಶ ಕಟ್ಟಬೇಕಾಗಿದೆ ಎಂದು ಸಚಿವರು ಕರೆ ನೀಡಿದರು.

ಬಡವರ ಮೇಲೆ ಮೇಲು ವರ್ಗದ ತಾತ್ಸಾರ ದೃಷ್ಟಿ ಇರುವ ಈ ದಿನಗಳಲ್ಲಿ ಅಧಿಕಾರ ಇದ್ದಷ್ಟು ಕಾಲ ಈ ಕೆಲಸ– ಈ ಕರ್ತವ್ಯ ಮಾಡುವೆ ಎಂದು ಪೂಜಾರಿ ತಿಳಿಸಿದರು.

ಕಲ್ಯಾಣ

ಸಮಾರಂಭದ ಅಧ್ಯಕ್ಷತೆ ವಹಿಸಿದ ಮಂಗಳೂರು ಮಹಾನಗರ ಸಭೆಯ ಮೇಯರ್ ಸದಾಶಿವ ಭಂಡಾರಿ ಅವರು ಮಾತನಾಡಿ ಸ್ವಾತಂತ್ರ್ಯಕ್ಕೆ ಅರ್ಥ ಬರಬೇಕಾದರೆ ಗ್ರಾಮೀಣ ಜನತೆಯ ಕಲ್ಯಾಣ ಆಗಬೇಕಾಗಿದೆಯೆಂದರು.

ಈ ಸಾಲಮೇಳದಲ್ಲಿ 264 ಮಂದಿಗೆ ಐದು ಲಕ್ಷಕ್ಕೂ ಮಿಕ್ಕಿದ ಬ್ಯಾಂಕ್ ನೆರವನ್ನು ನೀಡಲಾಯಿತು. ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕಾಲೇಜುಗಳ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಸಮಾರಂಭದಲ್ಲಿ ಪೊಲೀಸ್ ಅಧಿಕಾರಿ ರೇವಣ ಸಿದ್ದಯ್ಯ ಅವರಿಗೂ ಸನ್ಮಾನವಿತ್ತಾದರೂ ಕರ್ತವ್ಯ ನಿಮಿತ್ತ ಹೊರಗೆ ಹೋಗಿದ್ದ ಅವರು ಸಮಾರಂಭಕ್ಕೆ ಆಗಮಿಸಿರಲಿಲ್ಲ.

ಮೊದಲು ಬ್ಯಾಂಕಿನ ರೀಜನಲ್ ಮ್ಯಾನೇಜರ್ ಟಿ.ಕೆ. ಶ್ರೀನಿವಾಸನ್ ಸ್ವಾಗತಿಸಿದರು. ವೇದಿಕೆಯಲ್ಲಿ ಜಿಲ್ಲಾ ಕಾಂಗ್ರೆಸ್ (ಐ) ಉಪಾಧ್ಯಕ್ಷ ಎಸ್.ಕೆ. ಅಮೀನ್, ಉಪ ಮೇಯರ್ ಯೂನಿಸ್ ಬ್ರಿಟ್ಟೊ ಅವರೂ ಉಪಸ್ಥಿತರಿದ್ದರು.

ಅರಂತೋಡಿನಲ್ಲಿ ರಂಗ ಶಿಬಿರ

ಸುಳ್ಯ, ಅ. 12– ಇಲ್ಲಿಗೆ ಸಮೀಪದ ಅರಂತೋಡು ಯುವಕ ಮಂಡಲದ ಆಶ್ರಯದಲ್ಲಿ ಒಂದು ವಾರ ಕಾಲ ನಡೆಯಲಿರುವ ರಂಗತರಬೇತಿ ಶಿಬಿರವನ್ನು ಯಂ. ಯಂ. ಮಹಾಬಲ ಅವರು ಉದ್ಘಾಟಿಸಿದರು.

ಈ ಶಿಬಿರದಲ್ಲಿ ರಂಗಭೂಮಿ ಕಲಾವಿದರಾದ ಮೋಹನಚಂದ್ರ, ಎಂ. ಸಿ. ರಾಮು, ಉಮಾಶಂಕರ ಪೆರಿಯೊಡಿ ಮೋಹನ್ ಸೋನಾ, ಹಿಮಕರ ಹಾಗೂ ಜಗದೀಶ್ ಅಮ್ಮುಂಜೆ ಅವರು ಪಾಲ್ಗೊಳ್ಳಲಿದ್ದಾರೆ.

ಸಮಾರೋಪ ಸಮಾರಂಭದಲ್ಲಿ ಎನ್. ಯಂ. ಸಿ. ಕಾಲೇಜಿನ ಪ್ರಭಾಕರ ಶಿಶಿಲ ಮತ್ತು ಎಚ್. ಯಂ. ಕುಮಾರ ಸ್ವಾಮಿ ಅವರು ಭಾಗವಹಿಸಲಿದ್ದಾರೆಂದು ಮಂಡಲದ ಅಧ್ಯಕ್ಷ ಪಿ.ಬಿ. ದಿವಾಕರ ರೈ ಅವರು ತಿಳಿದ್ದಾರೆ.

ಯುವ ಕಾಂಗ್ರೆ ಅಧ್ಯಕ್ಷ ರಾಜಿನಾಮೆ

ಬ್ರಹ್ಮಾವರ, ಅ. 12– ಸ್ಥಳೀಯ ಬ್ಲಾಕ್ ಯುವ ಕಾಂಗ್ರೆ ಅಧ್ಯಕ್ಷ ಬಿ. ಎಸ್. ಕಿಶನ್ ಚಂದ್ರಶೆಟ್ಟಿ ಅವರು ತಮ್ಮ ಅಧ್ಯಕ್ಷಗಿರಿಗೆ ರಾಜಿನಾಮೆ ನೀಡಿದ್ದಾರೆ.

ವೈಯಕ್ತಿಕ ಕಾರಣಗಳಿಂದಾಗಿ ರಾಜಿನಾಮೆ ನೀಡಿರುವುದಾಗಿ ಹೇಳಿರುವ ಅವರು ಸಾಮಾನ್ಯ ಸದಸ್ಯನಾಗಿ ಪಕ್ಷಕ್ಕಾಗಿ ದುಡಿಯುವ ಭರವಸೆ ವ್ಯಕ್ತಪಡಿಸಿದ್ದಾರೆ.

ಉ. ಕ. ಯುವ ಜನತಾ ಸಮ್ಮೇಳನ

ಶಿರ್ಸಿ, ಅ. 12– ದಿವಂಗತ ಎಮ್. ಎಮ್. ಶೇಟ್ ಅವರ ಸ್ಮರಣಾರ್ಥ ನವೆಂಬರ್ ಐದು ಮತ್ತು ಆರರಂದು ಹೊನ್ನಾವರದಲ್ಲಿ ಉತ್ತರ ಕನ್ನಡ ಜಿಲ್ಲಾ ಯುವ ಜನತಾ ಸಮ್ಮೇಳನ ನಡೆಯಲಿದೆ ಎಂದು ತಿಳಿದು ಬಂದಿದೆ.

ಈ ಪ್ರಯುಕ್ತ ಈ ತಿಂಗಳ 18 ರಿಂದ 23ರ ವರೆಗೆ ಯುವ ಜನತಾ ಸಂಘಟನೆಗಾಗಿ ಪಕ್ಷದ ಪ್ರಮುಖರು ಜಿಲ್ಲಾ ಸಂಚಾರ ನಡೆಸಲಿರುವರು.

ಕಾರಂತರ ಹುಟ್ಟು ಹಬ್ಬ

ಹೆಗ್ಗೋಡು, ಅ. 12– ಇಲ್ಲಿಯ ನೀನಾಸಮ್ ಆಶ್ರಯದಲ್ಲಿ ಜರಗುತ್ತಿರುವ ಚಲನಚಿತ್ರ ಸಹೃದಯತೆ ಶಿಬಿರದ ಅಭ್ಯರ್ಥಿಗಳು ಡಾ। ಶಿವರಾಮ ಕಾರಂತರ82 ನೇ ಹುಟ್ಟುಹಬ್ಬವನ್ನು ಅಕ್ಟೋಬರ 10 ರಂದು ಇಲ್ಲಿ ಆಚರಿಸಿದರು.

ಡಾ। ಕಾರಂತರು ಚಲನಚಿತ್ರ ಪ್ರಪಂಚಕ್ಕೆ ಸಲ್ಲಿಸಿರುವ ಸೇವೆಯನ್ನು ಅದರಲ್ಲೂ ಮುಖ್ಯವಾಗಿ ರಾಷ್ಟ್ರೀಯ ಚಲನಚಿತ್ರ ಸಮಿತಿಯ ಅಧ್ಯಕ್ಷರಾಗಿ ಅವರ ಕಾರ್ಯವೈಖರಿಯನ್ನು ಶಿಬಿರದ ನಿರ್ದೇಶಕ ಪ್ರೊ। ಸತೀಶ್ ಬಹಾದೂರ್ ಅವರು ನೆನಪಿಸಿಕೊಂಡರು.

ಭೂಮಿ ಒತ್ತುವರಿ ತಡೆಗೆ ಕರೆ

ತೆಕ್ಕಾಡಿ, ಅ. 12– ಅರಣ್ಯ ಭೂಮಿಯ ಒತ್ತುವರಿಯನ್ನು ತಡೆಯಲು ಕೇರಳದ ಅರಣ್ಯ ಸಚಿವ ಕೆ. ಪಿ. ನೂರುದ್ದೀನ್ ಅವರು ಜನತೆಯ ಸಹಕಾರವನ್ನು ಕೋರಿದರು.

ವನ್ಯಜೀವಿ ಸಪ್ತಾಹದ ಮುಕ್ತಾಯ ಸಮಾರಂಭದಲ್ಲಿ ಮಾತಾಡಿದ ಅವರು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳುವವರ ವಿರುದ್ಧ ಉಗ್ರ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ಕಳೆದ ವಾರದಲ್ಲಿ ಪ್ರಾರಂಭಿಸಲಾದ ವಾಲು. ವನ.ರಾಮುರಳೂ ಸೇರಿದಂತೆ...

ಲಯನ್ಸ್ ವಿಶ್ವಸೇವಾ ದಿನಾಚರಣೆ

... ಅ. 12– ...

ಮಳೆ: ತುಂಬಿ ತುಳುಕಿದ ತರೀಕೆರೆ

ತರೀಕೆರೆ, ಅ. 12– ಪ್ರಕೃತಿಯ ಪ್ರಕೋಪಕ್ಕೆ ಸಿಕ್ಕು ತತ್ತರಿಸಿದ ತರೀಕೆರೆ ಇನ್ನೂ ಸುಧಾರಿಸಿಕೊಂಡಿಲ್ಲ. ಕೆಲವತ್ತೆ ಅನಾವೃಷ್ಟಿಯಿಂದ ಕಂಗಾಲಾಗಿದ್ದರೆ ಇಲ್ಲಿ ಅತಿವೃಷ್ಟಿಯಿಂದ ಜನರು ಉಸಿರು ಕಟ್ಟಿ ಹೋಗಿದ್ದಾರೆ. ನಿರಂತರ ಸುರಿಯುತ್ತಿರುವ ಮಳೆಯಿಂದ ಜನ–ಜೀವನವೇ ಅಸ್ತವ್ಯಸ್ತವಾಗಿದೆ.

ಈಚೆಗೆ ಸುರಿದ ಮಳೆಯಿಂದ ತರೀಕೆರೆಯ ಸುತ್ತ ಮುತ್ತಲ ಪ್ರದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ ಕೆಮ್ಮಣ್ಣುಗುಂಡಿಯ ಗಿರಿ ಸಾಲಿನ ಮಡಿಲಲ್ಲಿರುವ ಲಿಂಗನ ಹಳ್ಳಿ ಕೃಷ್ಣಾಪುರ ಕಲ್ಲತ್ರಿಪುರ, ಗುಳದ ಮನೆ ಕೆಂಚಾಪುರ ಪ್ರದೇಶಗಳಲ್ಲಿ ಮಳೆರಾಯನ ಅರ್ಭಟಕ್ಕೆ ಕಾಲುವೆಗಳು ಉಕ್ಕಿ ಹರಿದವು.

ಸುಣ್ಣದಹಳ್ಳಿಕೆರೆ, ಭಾಗವತಿ ಕಟ್ಟೆ ಮತ್ತು ನಾಗಣ್ಣ ಕಾಲುವೆಗಳಲ್ಲಿ ನೀರಿನ ಪ್ರವಾಹ ಉಕ್ಕಿ ಹರಿಯಲಾಗಿ ತರೀಕೆರೆಯ ಆರು ಕೆರೆಗಳು ತುಂಬಿ ತುಳುಕಿದವು.

ಕೆರೆ ಏರಿ ಮೇಲಿಂದ ಕೆನೆ ಹಾಲಿನಂತೆ ಉಕ್ಕಿ ಹರಿದ ನೀರಿನಿಂದಾಗಿ ಸಮೀಪದ ಅಡಿಕೆ ತೋಟ ನಾಲ್ಕರಿಂದ ಆರು ಅಡಿ ನೀರು ನಿಂತು ಎತ್ತ ಕಣ್ಣಾಯಿಸಿದರೂ ವರ್ಷಾಕಾಲದ ಹಿಗ್ಗು :

ಎಲೆ ತೋಟಕ್ಕೆ ಹಾನಿ

ತರೀಕರೆ ವೀಳೆಯದೆಲೆಗೆ ಸುಪ್ರಸಿದ್ಧ ಪಡೆದಿದೆ. ಮಾತ್ರವಲ್ಲ ಸುಮಾರು 15 ಸಾವಿರ ಜನರ ಜೀವನ ವೃತ್ತಿಯೂ ಇದೇ ಆಗಿದೆ. ಎಲ್ಲಿ ನೋಡಿದರೂ ಮಳೆರಾಯನ ರೌದ್ರಾವತಾರದ ಪರಿಣಾಮವಾಗಿ ತರೀಕೆರೆಯ ವೀಳೆಯದೆಲೆ ತೋಟಕ್ಕೆ ಅಪಾರಹಾನಿ, ವಿಪರೀತ ಮಳೆಯಿಂದಾಗಿ ವೀಳೆಯದೆಲೆ ಗಿಡದ ಬುಡ ಕೊಳೆತುಹೋಯಿತು, ಮಣ್ಣು ಕರಗಿ ಬೇರು ಸತ್ತಿತು.

ವೀಳೆಯದೆಲೆಯ ಬೆಳೆ ನಾಶವಾಗಿ ಸುಮಾರು 25 ಲಕ್ಷ ರೂಪಾಯಿ ತರೀಕೆರೆ ಜನರ ಪಾಲಿಗೆ ನಷ್ಟದ ಹೊರೆಯಾಯಿತು.

ನಾಶವಾದ ಬಳ್ಳಿಯನ್ನು ಪುನಃ ಸಾಕಲು ಕನಿಷ್ಟ ಮೂರು ವರ್ಷ ಬೇಕಾಗುತ್ತದೆ. ಇಷ್ಟು ಮಾತ್ರವಲ್ಲಾ, ಹೊಟ್ಟೆ ತುಂಬಿಸಲು ವೀಳೆಯದೆಲೆ, ಅಡಿಕೆ ತೋಟಗಳಲ್ಲಿ ದುಡಿಯುತ್ತಿದ್ದ ಸುಮಾರು 15 ಸಾವಿರ ಬಡಪಾಯಿ ಜನರು ವೃತ್ತಿ ಇಲ್ಲದೆ ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆ ಹಾಕಿಕೊಳ್ಳುವಂತಾಯಿತು.

ಹೀಗೆ ತರೀಕೆರೆಯ ಜನರ ಜೀವ ತಲ್ಲಣಿಸಿದ ಮಳೆರಾಯನ ಅಬ್ಬರಕ್ಕೆ ಇಲ್ಲಿನ ಜನತೆಗೆ ವಿಸ್ಮಯ. ಜೊತೆಗೆ ಕಳೆದ ಮೂವತ್ತು ವರ್ಷಗಳ ಇತಿಹಾಸದಲ್ಲಿ ತುಂಬಿ ಹರಿದಿದ್ದ ಜಂಬದ ಹಳ್ಳ ಅಣೆಕಟ್ಟು ಈ ಬಾರಿ ಉಕ್ಕಿ ಹರಿಯುತ್ತಿರುವುದು ಜನರಲ್ಲಿ ಆತಂಕ ತಂದೊಡ್ಡಿದೆ.

ಈ ಸಲದ ಅತಿವೃಷ್ಟಿ ಮಳೆಯಿಂದ ರಾಗಿ ಮತ್ತು ಭತ್ತದ ಬೆಳೆಗೆ ಅಪಾರ ಹಾನಿಯಾಗಿದೆ. ಅಕ್ಟೋಬರ್ ಎಂಟರಂದು ಬಿದ್ದ ಭಾರೀ ಮಳೆಗೆ ಇಲ್ಲಿನ ಮಾರುತಿ ಬಡಾವಣೆಗೆ ನೀರು ನುಗ್ಗಿ ನೂರಾರು ಗುಡಿಸಲುಗಳು ನೀರಿನಿಂದ ಆವೃತವಾಗಿವೆ. ಸುಮಾರು 15 ಮನೆಗಳ ಗೋಡೆಗಳು ಬಿದ್ದು ಜನರಲ್ಲಿ ಆತಂಕ ಮೂಡಿಸಿದೆ.

ಇದೇ ರೀತಿ ತೋಟದ ಗದ್ದೆಗಳಿಗೆ ನುಗ್ಗಿರುವ ನೀರಿನಿಂದಾಗಿ 50ಕ್ಕೂ ಹೆಚ್ಚು ಪಂಪುಸೆಟ್ಟುಗಳಿಗೆ ಹಾನಿಯಾಗಿದೆ.

ತುಂಬಿ ಹರಿಯುತ್ತಿರುವ ಕಟ್ಟೆ ಹೊಳೆಯ ಅಣೆಕಟ್ಟಿನ ರೌದ್ರ ರಮಣೀಯ ದೃಶ್ಯ ನೋಡಲು ಜನರು ಸಾಲು–ಸಾಲಾಗಿ ನಿಲ್ಲುತ್ತಿದ್ದಾರೆ.

ಜನರಲ್ಲಿ ಆತಂಕದ ಛಾಯೆ ಹೊಗೆಯಾಡುತ್ತಿದ್ದರೂ ಅಧಿಕಾರಿಗಳು ಮೌನವಾಗಿದ್ದಾರೆ. ಸರ್ಕಾರ ಇನ್ನಾದರೂ ತನ್ನ ಮುಚ್ಚಿದ ಕಣ್ಣನ್ನು ತೆರೆದು ಜನರ ಹಾಹಾಕಾರವನ್ನು ಕೇಳಿ ಸೂಕ್ತ ಪರಿಹಾರ ಒದಗಿಸುವರೇ ಎಂಬುದೀಗ ಅವರನ್ನು ಕಾಡುತ್ತಿರುವ ಯಕ್ಷಪ್ರಶ್ನೆ!

ಸನ್ಮಾನ

ಕುಳಾಯಿ, ಅ. 12–ಮಂಗಳೂರು ಫೋರ್ಟ್ ಟೌನ್ ರೋಟರಿ ಕ್ಲಬ್ ವ... ಸುರತ್ಕಲ್ ವಲಯದ ನಾ...

ಕುಂದಾಪುರ ಬಳಿ ಅಪಘಾತ:ಗಾಯ

(ಮುಂಗಾರು ವರದಿ)

ಕುಂದಾಪುರ, ಅ. 12– ಇಲ್ಲಿಗೆ ಸಮೀಪದ ಹೆಮ್ಮಾಡಿ ಸೇತುವೆ ಬಳಿ ನಿನ್ನೆ ಬೆಳಿಗ್ಗೆ ಖಾಸಗಿ ಬಸ್ಸೊಂದು ಉರುಳಿ ಬಿದ್ದ ಪರಿಣಾಮವಾಗಿ ಪ್ರಯಾಣಿಕರೊಬ್ಬರು ತೀವ್ರ ಗಾಯಗೊಂಡರು.

ಗಾಯಗೊಂಡ ಅವರನ್ನು ಮಣಿಪಾಲದ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಬಸ್ಸು ಮುಂಬೈನಿಂದ ಮಂಗಳೂರಿಗೆ ಬರುತ್ತಿತ್ತೆಂದು ಹೇಳಲಾಗಿದ್ದು ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಎಂ. ಎಲ್. ನಾಯಕ್ ಅವರು ತನಿಖೆ ನಡೆಸುತ್ತಿದ್ದಾರೆ.

ಕೃಷಿ ಅಭಿವೃದ್ಧಿಗೆ 3.92 ಕೋಟಿ

(ಮುಂಗಾರು ವರದಿ)

ಮಂಗಳೂರು, ಅ. 12–1984–85 ನೇ ಸಹಕಾರ ವರ್ಷದಲ್ಲಿ ಒಟ್ಟು ಮೂರು ಕೋಟಿ 92 ಲಕ್ಷ ರೂಪಾಯಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ರೈತರಿಗೆ ಕೃಷಿ ಹಾಗೂ ಜಮೀನು ಅಭಿವೃದ್ಧಿಗಾಗಿ ಒದಗಿಸಲು ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು ತೀರ್ಮಾನಿಸಿದೆ.

ಇದರಲ್ಲಿ ಶೇಕಡ 30 ರಷ್ಟನ್ನು ಪರಿಶಿಷ್ಟ ಜಾತಿ ಹಾಗೂ ಪಂಗಡಗಳವರಿಗೆ ನೀಡಲು ಉದ್ದೇಶಿಸಲಾಗಿದೆ.

ಈ ವಿಷಯವನ್ನು ಇಂದು ಬ್ಯಾಂಕಿನ ದ. ಕ. ಜಿಲ್ಲಾ ನಿರ್ದೇಶಕ ಎಸ್. ಡಿ. ಸಾಮ್ರಾಜ್ಯ ಅವರು ಸುದ್ದಿಗಾರರೊಂದಿಗೆ ತಿಳಿಸಿದರು.

ದ. ಕ. ಜಿಲ್ಲೆಯಲ್ಲಿ 1983–84ನೇ ಸಾಲಿನಲ್ಲಿ ಶೇ. 82-85 ರಷ್ಟು ಸಾಲ ಮರು ಪಾವತಿ ಆಗಿದೆಯೆಂದು ಸಾಮ್ರಾಜ್ಯ ತಿಳಿಸಿದರು.

1984–85 ನೇ ಸಾಲಿನಲ್ಲಿ ಒಂದು ಸಾವಿರ ಬಾವಿಗಳು, 825 ನೀರಾವರಿ ಪಂಪ್‌ಸೆಟ್‌ಗಳು ಹಾಗೂ ಎರಡು ಸಾವಿರ ಎಕರೆ ತೆಂಗು ಕೃಷಿಗೆ ಸಾಲ ಕೊಡುವ ಕಾರ್ಯಕ್ರಮವಿದೆ. ಗೋಡಂಬಿ, ರಬ್ಬರ್, ಕೋಕೊ ಮುಂತಾದ ಬೆಳೆಗಳಿಗೂ ನೆರವು ಕೊಡಲಾಗುವುದು.

ಗೋಡಂಬಿ ಬೆಳೆಗೆ ವಿಶ್ವಬ್ಯಾಂಕು ನೆರವು ದೊರೆಯುತ್ತಿದ್ದು 25 ಶೇಕಡ ಸಬ್ಸಿಡಿ ದೊರೆಯುವುದು.

ರಬ್ಬರ್ ಬೆಳೆಗೆ ಎಕರೆಗೆ ಎರಡು ಸಾವಿರ ತನಕ ಸಹಾಯ ಧನ ಒದಗಿಸಲಾಗುವುದು.

ಕಳೆದ ವರ್ಷ 925 ಬಾವಿಗಳಿಗೆ ಸಾಲ ಕೊಡುವ ಗುರಿಯಿದ್ದರೂ,200 ಬಾವಿಗಳಿಗೆ ಮಾತ್ರ ಸಾಲ ಕೊಡಲಾಯಿತು.

ರೈತರಿಂದ ಬೇಡಿಕೆ ಬಂದರೆ ನಿಗದಿತ ಮೊತ್ತವನ್ನು ಮಿಕ್ಕಿಯೂ ಸಾಲ ಮಂಜೂರು ಮಾಡಲು ದ. ಕ. ಜಿಲ್ಲಾ ಶಾಖೆಗೆ ಅನುಮತಿ ಕೊಡಲಾಗಿದೆ ಎಂದು ಸಾಮ್ರಾಜ್ಯ ತಿಳಿಸಿದರು.

ಭಿನ್ನಾಭಿಪ್ರಾಯ ಮರೆತು ದುಡಿಯಿರಿ

ಮಂಗಳೂರು, ಅ. 12 – ಕಾಂಗ್ರೆ ಕಾರ್ಯಕರ್ತರು ಭಿನ್ನಾಭಿಪಾಯಗಳನ್ನು ಮರೆತು, ಜನರ ಕಷ್ಟಗಳನ್ನು ನಿವಾರಿಸಲು ದುಡಿಯ ಬೇಕೆಂದು ಕೇಂದ್ರ ಕಾರ್ಮಿಕ ಮತ್ತು ನೌಕಾಯಾನ ಸಚಿವ ವೀರೇಂದ್ರಪಾಟೀಲ್ ಅವರು ಇತ್ತೀಚೆಗೆ ಇಲ್ಲಿ ಹೇಳಿದರು.

ಕಾಂಗ್ರೆ ಕಾರ್ಯಕ... ಸಭೆಯಲ್ಲಿ

ಮಂದರ್ತಿಯಲ್ಲಿ ಜಾನಪದ ಕಲಾಮೇಳ

ಮಂಗಳೂರು, ಅ. 12, :– ಭಾರತ ಸರಕಾರದ ನೆಹರೂ ಯುವಕ ಕೇಂದ್ರ ಮಂಗಳೂರು, ಯುವಕ ಸಂಘ ಹೆಗ್ಗುಂಜೆ ಮಂದರ್ತಿ ಕ್ಷೇತ್ರ ಪ್ರಚಾರ ಇಲಾಖೆ ಮಂಗಳೂರು ಇವರ ಸಹಕಾರದೊಂದಿಗೆ ಉಡುಪಿ ತಾಲೂಕಿನ ಮಂದರ್ತಿಯಲ್ಲಿ ಐದು ದಿನಗಳ ಜಾನಪದ ಕಲಾ ಮೇಳ ನಡೆಯಲಿದೆ. ನ. 10ರಿಂದ 14 ರವರೆಗೆ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಮಂದಾರ್ತಿಯಲ್ಲಿ ನಡೆಯುವ ಈ ಮೇಳದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜಾನಪದ ಕಲೆಗಳಾದ ಆಟಕಳೆಂಜ, ಕರಂಗೋಲು, ಚೆನ್ನು, ಯಕ್ಷಗಾನ, ಭೂತ ಕೋಲ,ಕರಡಿ ಮಜಲು, ಹಗ್ಗ ಕೋಲಾಟ,

ಹಲ್ಲೆ ಖಂಡನೆ

(ಮುಂಗಾರು ವರದಿ)

ಮಂಗಳೂರು, ಅ. 12.– ಪುತ್ತೂರಿನಲ್ಲಿ ಕಾಂಗ್ರೆ ಕಾರ್ಯಕರ್ತರ ಮೇಲೆ ನಡೆಯಿತೆನ್ನಲಾದ ಹಲ್ಲೆಯನ್ನು ಪ್ರದೇಶ ಯುವ ಕಾಂಗ್ರೆ ಪ್ರಧಾನ ಕಾರ್ಯದರ್ಶಿ ಬಿ. ಎ. ಉಮರಬ್ಬ ಅವರು ಖಂಡಿಸಿದ್ದಾರೆ.

ಇಂದು ಇಲ್ಲಿ ಸುದ್ದಿಗಾರರೊಡನೆ ಮಾತನಾಡುತ್ತಿದ್ದ ಅವರು, ಪ್ರತಿಭಟನಾ ಕ್ರಮವಾಗಿ ಸದ್ಯದಲ್ಲೇ ಜಿಲ್ಲಾದ್ಯಂತ ಕಾಂಗ್ರೆ ಕಾರ್ಯಕರ್ತರ ಮೌನ ಮೆರವಣಿಗೆ ಮತ್ತು ರ್‍ಯಾಲಿ ನಡೆಸಲಾಗುವುದೆಂದು ತಿಳಿಸಿದರು. ರ್‍ಯಾಲಿ ಸಿದ್ಧತೆಯ ಬಗ್ಗೆ ಚರ್ಚಿಸಲು ಬರುವ 15ರಂದು ಮಂಗಳೂರಿನಲ್ಲಿ ಜಿಲ್ಲಾ ಕಾಂಗ್ರೆ ಮತ್ತು ಯುವ ಕಾಂಗ್ರೆ ಪದಾಧಿಕಾರಿಗಳ ಸಭೆ ನಡೆಯಲಿದೆ.

ಹಲ್ಲೆ ಘಟನೆಯ ಮರುದಿನ ಬಸ್ ನಿಲ್ದಾಣದಲ್ಲಿ ಕಾರಿಗೆ ಬೆಂಕಿಯಿಟ್ಟ ಬಗ್ಗೆ ತಮಗೆ ತಿಳಿಯದೆಂದು ಉಮರಬ್ಬ ಹೇಳಿದರು.

ಸಾಲ ನೆರವು

ಮಂಗಳೂರು, ಅ. 12– ಕಳೆದ ಜೂನ್ ತಿಂಗಳ ಅಂತ್ಯದ ವರೆಗೆ ಗ್ರಾಮೀಣ ಅಭಿವೃದ್ಧಿ ಸಲುವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ 20 ಸಾವಿರದ 164 ಮಂದಿಗೆ 324.42 ಲಕ್ಷ ರೂಪಾಯಿ ಸಾಲ ನೆರವು ನೀಡಲಾಗಿದೆ ಎಂದು ಕಾರ್ಪೊರೇಶನ್ ಬ್ಯಾಂಕಿನ ಪತ್ರಿಕಾ ಪ್ರಕಟಣೆಯೊಂದು ತಿಳಿಸಿದೆ.

ಆಕಾಶವಾಣಿ

ಅಕ್ಟೋಬರ್ 13, ಶನಿವಾರ

ಬೆಂಗಳೂರು, ಭದ್ರಾವತಿ, ಮೈಸೂರು.

ಬೆಳಿಗ್ಗೆ 5.55 ವಂದೇಮಾತರಂ. 6.45 ರಂಗಗೀತೆ. 7.20 ಕೃಷಿಲೋಕ. 7.30 ರಸವಾರ್ತೆ. 8.21 ಎಸ್. ಆರ್. ಸಿದ್ದಲಿಂಗಪ್ಪ– ವಯೊಲಿನ್. 9.05 ಉರ್ದುಪಾಠ. 9.15 ವೈ.ಎಸ್. ... ರಾ– ಗಾಯನ. 12.30 ವನಿತ... ತುತ್ತಿಗೊಂದು ಮಾರ್ಗ– ಸಾ... 1.20 ವೃಂದಗಾನ. 1.30 ಬಾಲ...– ಸಂಗೊಳ್ಳಿರಾಯಣ್ಣ– ದೇವರಕೊ... ರೆಡ್ಡಿ ಅವರ ರೂಪಕ– ಅರ್ಪಣೆ–...

ಪ್ರೆಸ್ ಇರದ ಲೇಖನ – 6

ಮುಂಗಾರು

ನಮ್ಮ ಕೈಕಾಲು ಕತ್ತರಿಸಬೇಡಿ

ಬರುವ ದಶಕದಲ್ಲಿ ಇನ್ಸಾಟ್ ಅನ್ನೋ ಉಪಗ್ರಹ ನಮ್ಮದೇ ಪ್ರಯೋಗ ಶಾಲೆಗಳಲ್ಲಿ ತಯಾರಾಗುವುದಂತೆ. ಸಂತೋಷ ಪಡಬೇಕು....

ಇದು ಸಿನಿಕತನದ ಮೂದಲಿಕೆಯೇನಲ್ಲ.

ವಿಜ್ಞಾನ-ತಂತ್ರಜ್ಞಾನ ಅನ್ನುವ ಮಾತು ನಮ್ಮ ದೇಶದಲ್ಲಿ ಯಾವುದೋ ಚಂದ್ರಲೋಕದ್ದೋ, ಮಂಗಳ ಗ್ರಹದ್ದೋ ಘೋಷಣೆಯಾಗಿ ಸದ್ದು ಮಾಡುತ್ತೆ. ಮನುಷ್ಯನನ್ನೇ ನುಂಗುವಂತೆ ದೈತ್ಯಾಕಾರ ಬೆಳೆದು ನಿಂತಿರುವ ಯಂತ್ರೋಪಯಂತ್ರಗಳಿಗೂ, ಜನಸಾಮಾನ್ಯರ ರಾಗಿಹಿಟ್ಟು ಸೊಪ್ಪಿನಸಾರು, ಜೋಳದ ರೊಟ್ಟಿ-'ಕಾರದ ಹಿಂಡಿ'ಯ ಗೊಡವೆಗಳಿಗೂ ಯಾವ ಬಾದರಾಯಣ ಸಂಬಂಧವೂ ಇಲ್ಲದ ಸ್ಥಿತಿ ನಮ್ಮಲ್ಲಿದೆ.

ಇಂದಿರಾಗಾಂಧಿಯೋ ಮತ್ತಾವ ನಾಯಕರೋ ಒಂದೇ ಸಭೆಯಲ್ಲಿ ಒಂದೇ ಉಸಿರಿನಲ್ಲಿ ಆರ್ಯಭಟನ ಬಗ್ಗೆಯೂ ಮಾತಾಡಿ ಅಸ್ಪೃಶ್ಯತೆಯನ್ನೂ ಪ್ರಸ್ತಾಪಿಸಿದಾಗ ಮಾತ್ರ ನಮಗೆ ಅವೆರಡೂ ನಮ್ಮಲ್ಲಿ ಹೇಗೋ ಸಹಬಾಳ್ವೆ ಮಾಡುತ್ತಿವೆ ಎಂದು ಹೊಳೆಯುವುದು ಸಾಧ್ಯ. ಅವೆರಡಕ್ಕೂ ಎಲ್ಲೋ ಒಂದೆಳೆಯ ಕೊಂಡಿಯಿದೆಯೇನೊ ಅನ್ನುವ ಅನುಮಾನ ಹುಟ್ಟಲು ಸಾಧ್ಯ.

ಇದೀಗ ನಮ್ಮ ಒಡೆದ ಬದುಕಿನ ಗಾಥ ದುರಂತ! ವಿಜ್ಞಾನ ನಮ್ಮ ಬದುಕಿನ ವಿಮರ್ಶಾತ್ಮಕ 'ವೈಜ್ಞಾನಿಕ ದೃಷ್ಟಿ' ಆಗಿಲ್ಲ, ಮನೋಧರ್ಮವಾಗಿಲ್ಲ, ಹಾಗೆಯೇ ತಂತ್ರಜ್ಞಾನ ಮನುಷ್ಯನ ಕೈಕಾಲುಗಳನ್ನು ಮುರಿದಿಡದ, ಅಂಗಾಂಗಗಳ ನೈಸರ್ಗಿಕ ಸೊಗಸಿಗೇ ಒತ್ತುಕೊಟ್ಟು ಎತ್ತಿಹಿಡಿಯುವ ಪೂರಕ ಸಾಧನವಾಗಿಲ್ಲ.

ಇದು ಯಾಕೆ ಹೀಗೆ?

ಈ ಪ್ರಶ್ನೆಯೂ ನಮ್ಮ ನಾಯಕರನ್ನು ಕಾಡುವುದಿಲ್ಲ. ನಮ್ಮ ಶಿಕ್ಷಣವೇತ್ತರ, ಮಹಾನ್ ಪ್ರತಿಭಾವಂತ ವಿಜ್ಞಾನಿಗಳ ಅನ್ವೇಷಣೆಯ ವಿಷಯವೂ ಆಗಿಲ್ಲ.

ಯಾಕೆಂದರೆ ನಮಗೆ ಆಚಿನದೇ ಚಂದ. ಉಪಗ್ರಹ ಇಲ್ಲೇ ತಯಾರಾಗಬಹುದು. ಆದರೆ ಆ ಸಾಹಸದ ಹಿಂದೆ ಚಿಂತನೆಯಿಲ್ಲ, ಶೋಧನೆಯಿಲ್ಲ. ಕೇವಲ ಮಾಹಿತಿಯಿದೆ. ಪರರು ಧಾರೆಯೆರೆದ ಜ್ಞಾನದ ಭಿಕ್ಷೆಯಿದೆ. ಇದು ಉಪಗ್ರಹಕ್ಕಷ್ಟೇ ಅಲ್ಲ. ಇನ್ನಾವ ವೈಜ್ಞಾನಿಕ ಸಾಧನೆಗೂ ಅನ್ವಯವಾಗಬಹುದಾದ ...ತೆ.

...ಮ್ಮಲ್ಲಿ ಅನೇಕರಿಗೆ ವಿಜ್ಞಾನವೆಂದರೆ ಅದಕ್ಕದೇ ...ಪೂರ್ಣ ಶುದ್ಧವಾದ ಪ್ರತ್ಯೇಕ ಲೋಕ; ಅದಕ್ಕೆ ...ಸ್ತ್ರ ರಾಜಕೀಯ, ಆರ್ಥಿಕ, ಭೌಗೋಳಿಕ ವಿಲ್ಲೆ...ಗಳಿಗೆ ಯಾವುದೇ ಸಂಬಂಧವಿಲ್ಲ ಎಂಬ ಕಲ್ಪನೆ ಅದರಿಂದಲೇ ರಕ್ಷಾ...

ಮಾನವಶಕ್ತಿಯ ಮಹಾನ್ ಗುಡಾಣವೇ ಇದೆ ಅನ್ನುವುದು ಹೊಳೆಯದಷ್ಟೂ ಜೀವ ಇಂಗಿದ ಯಂತ್ರಗಳಾಗಿ ಹೋಗಿದ್ದೇವೆಯೇ ನಾವು?

ಗಾಂಧೀಜಿ ಪದೇ ಪದೇ ಯಂತ್ರ ನಾಗರಿಕತೆಯನ್ನು ಹಳಿಯುವ ಮಾತಾಡುತ್ತಿದ್ದರು. ವ್ಯವಸ್ಥೆಯ ಮೂಲಭೂತ ಬದಲಾವಣೆ ಎಂದರೆ ಕೇವಲ ದುಡಿಮೆಯ ಹಕ್ಕಿನ, ಹಂಚಿಕೊಳ್ಳುವ ಸೊಗಸಿನ ಪ್ರಶ್ನೆಯಷ್ಟೇ ಅಲ್ಲ, ದುಡಿಮೆಯ ಸ್ವರೂಪವೇ ಬದಲಾಗಬೇಕಾದ ಸಂಗತಿ ಎಂದು ಚೆನ್ನಾಗಿ ಅರಿತಿದ್ದರು. ಕೇವಲ ಮಾಲೀಕತ್ವದ ಹಸ್ತಾಂತರ, ಮನುಷ್ಯ ಸಂಬಂಧಗಳ ಹೆಣಿಗೆಯ ಚಂದವನ್ನು ಬದಲಾಯಿಸುವುದಿಲ್ಲವೆಂದು ತಿಳಿದಿದ್ದರು. ಯಂತ್ರದ ಮುಂದೆ ಮನುಷ್ಯ ಕುಬ್ಜನಾಗಬಾರದು ಎಂಬ ಕಳಕಳಿ ಅವರಿಗಿತ್ತು.

ಅಂದ ಮಾತ್ರಕ್ಕೆ ನಾವು ಯಂತ್ರವನ್ನೇ ಸಾರಾಸಗಟಾಗಿ ತಳ್ಳಿಹಾಕಿ, ಮನುಕುಲದ ಈವರೆಗಿನ ಸಾಧನೆಗಳ ಗೋರಿ ಕಟ್ಟಬೇಕೆಂದಲ್ಲ. ಗಾಂಧೀಜಿಯೇ ಹೇಳಿದ ಹಾಗೆ ಸೂಜಿಯೂ ಒಂದು ಯಂತ್ರವೇ.

ಇಲ್ಲಿನ ಸವಾಲೆಂದರೆ ನಮ್ಮ ನೆಲದ ವಸ್ತುಸ್ಥಿತಿಯನ್ನು ಗ್ರಹಿಸಿ, ಅದರಲ್ಲಿ ಸಹಜವಾಗಿ ಬೆರೆತುಹೋಗುವಂಥ ತಂತ್ರಜ್ಞಾನವನ್ನು ಬೆಳೆಸುವುದು ಹೇಗೆ ಅನ್ನುವುದು.

ಯಂತ್ರ ದೊಡ್ಡದಾದಷ್ಟೂ, ಜಟಿಲವಾದಷ್ಟೂ ಮನುಷ್ಯನೇ ಅದರ ಅಡಿಯಾಳಾಗಿಬಿಡುತ್ತಾನೆ. ಅದರ ಅಂಗವಾಗಿಬಿಡುತ್ತಾನೆ. ಯಂತ್ರ ಹೇಳಿದ ಮಾತು ಪಾಲಿಸಬೇಕಾದ ನಿಸ್ಸಹಾಯಕ ಸ್ಥಿತಿ ತಲುಪುತ್ತಾನೆ. ಅದೇ ರೀತಿ ಯಂತ್ರದ ನೆರವೇ ಇಲ್ಲದಿದ್ದರೂ-ತಬ್ಬಿಬ್ಬಾಗಿಬಿಡುತ್ತಾನೆ, ಚರಿತ್ರೆ ಒಮ್ಮೆಲೇ ಹಿಂದಕ್ಕೆ ತಿರುಗಿ "ಆದಿಮಾನವ"ನಾಗುತ್ತಾನೆ.

ಇವೆರಡರ ದ್ವಂದ್ವ "ರಾಜಕಾರಣಿ"ಯಾದ ಲೋಹಿಯಾರನ್ನು ಕಾಡಿತ್ತು, ಆದರೆ ನಮ್ಮ ವಿಜ್ಞಾನಿಗಳೆಂದುಕೊಳ್ಳುವ ವಿಜ್ಞಾನಿಗಳನ್ನು ಕಾಡಲಿಲ್ಲವೆಂದರೆ ನಮ್ಮನ್ನು ಬಿಗಿದುಕಟ್ಟಿರುವ ದಾಸ್ಯದ ಮುಷ್ಟಿ ಎಂಥದೆಂದು ಆಲೋಚಿಸಬೇಕು. ಯೋಚನೆಯ ಶಕ್ತಿಯನ್ನೇ ಅಡವಿಟ್ಟ ರಾಷ್ಟ್ರ ನಿರುದ್ಯೋಗ, ಅತೃಪ್ತಿ, ಹಾಹಾಕಾರಗಳಲ್ಲದೆ ಇನ್ನೇನು ಕಾಣಲು ಸಾಧ್ಯ?

ಪ್ರಾಯಶಃ ನಮಗಿರುವ ಸಾಧ್ಯತೆ ಒಂದೇ. ಮನುಷ್ಯನ ಶ್ರಮಕ್ಕೆ ಪೂರಕವಾಗುವ, ದುಡಿಮೆಯ ಹರ್ಷವನ್ನು ಇಮ್ಮಡಿಸುವ ಪುಟ್ಟ ಪುಟ್ಟ ಸರಳ ಯಂತ್ರಗಳ ಯುಗ ಬರಬೇಕು. ಕೇವಲ ಗಾತ್ರದಲ್ಲಷ್ಟೇ ಅಲ್ಲದೆ, ತನ್ನ ಸತ್ವ-ಸಾರಾಂಶದಲ್ಲೂ ಸಾಮಾನ್ಯ ತಿಳುವಳಿಕೆಗೆ

ಯಾವ ಪುರುಷಾರ್ಥಕ್ಕೆ ಈ ವಯೋಮಿತಿ ಏರಿಕೆ?

(ಒಂದನೇ ಪುಟದಿಂದ)

ಒಂದು ದೃಷ್ಟಿಯಲ್ಲಿ ವಿದ್ಯಾಭ್ಯಾಸ ಇವರನ್ನು ತಮ್ಮ ಕುಟುಂಬದ ಪರಂಪರಾಗತ ಕಸುಬಿಗೆ ಸಲ್ಲದವರನ್ನಾಗಿ ಮಾಡಿದೆ. ಆಧುನಿಕ ಜೀವನದ ಅವಕಾಶಗಳಿರುವ ಕೈಗಾರಿಕಾ ಕೇಂದ್ರಗಳಲ್ಲಿ ಉದ್ಯೋಗ ಇವರ ಕೈಗೆಟುಕದ ವಸ್ತುವಾಗಿದೆ. ಹೊಸ ಕೈಗಾರಿಕೆಗಳ ಸ್ಥಾಪನೆ ಅಥವಾ ಇರುವ ಕೈಗಾರಿಕೆಗಳ ವಿಸ್ತರಣೆಯಲ್ಲಿರುವ ಉದ್ಯೋಗ ಅವಕಾಶಗಳು ಬಹುವಾಗಿ ನಗರವಾಸಿಗಳ ಪಾಲಾಗುತ್ತಿವೆ.

ಹೊಸ ಬದುಕಿನ ಆಸೆಯ ಬುತ್ತಿ ಹೊತ್ತು ಬಂದಿರುದ ಈ ಹಿಂದುಳಿದ ವರ್ಗಗಳ ವಿದ್ಯಾವಂತ ಯುವಜನರಿಗೆ ಅವಕಾಶಗಳ ಬಾಗಿಲು ತೆರೆಯಬೇಕಾದ ಮೊದಲ ಹೊಣೆ ಸರಕಾರದ್ದು. ಅಂತಹ ಸರಕಾರವೇ ಈಗ ಇರುವ ಅಲ್ಪ-ಸ್ವಲ್ಪ ಅವಕಾಶಕ್ಕೂ ಬಾಗಿಲು ಬಡಿದುದೇಕೆ ಎಂಬ ಪ್ರಶ್ನೆ ಏಳುತ್ತದೆ. ಇದರಲ್ಲಿ ಸರಕಾರ ನಿರ್ವಹಿಸಲೇಬೇಕಾದ ಸಾಮಾಜಿಕ ಹೊಣೆ ಇದೆ.

ಕೇಂದ್ರದಲ್ಲಿ ನಿವೃತ್ತಿ ವಯೋಮಿತಿ 58 ಇದೆ, ಆಂಧ್ರಪ್ರದೇಶದಲ್ಲಾಗಿದೆ ಅಥವಾ ಮತ್ತೆಲ್ಲಿಯೋ ಇದೆಯೆಂಬ ವಾದವನ್ನು ಮುಂದೆ ಮಾಡಿ ಜಾರಿಕೊಳ್ಳುವುದು ಸುಲಭ.

ನಿವೃತ್ತಿ ವಯೋಮಿತಿ ಹೆಚ್ಚಿಸಬೇಕೆಂಬ ಬೇಡಿಕೆ ಇಂದಿನದಲ್ಲ. ತಮ್ಮ ಸುಖ ಜೀವನದ ಅವಧಿ ವಿಸ್ತರಣೆ ಸರಕಾರಿ ನೌಕರ ವರ್ಗಕ್ಕೆ ಬಹಳ ಮಹತ್ವದ ವಿಚಾರ. ಅದು ಸಹಜವೂ ಕೂಡಾ. ಅವರು ಕೇಳುತ್ತಾರೆಂದ ಮಾತ್ರಕ್ಕೆ ಅದನ್ನು ಇಷ್ಟೊಂದು ಸಲೀಸಾಗಿ ದಯಪಾಲಿಸಲಿಕ್ಕೆ ಅದೇನೂ ದೇವಿ ಪೂಜೆಯ ಪ್ರಸಾದವಲ್ಲ.

ನೌಕರ ವರ್ಗದ ಈ ಬೇಡಿಕೆ 1964ರಲ್ಲಿ ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿದ್ದಾಗ ವಿಧಾನ ಸಭೆಯಲ್ಲಿ ಚರ್ಚೆಗೆ ಬಂದಿತ್ತು. 1974ರಲ್ಲಿ ದೇವರಾಜಅರಸು ಮುಖ್ಯ ಮಂತ್ರಿಯಾಗಿದ್ದಾಲೂ ಈ ಚರ್ಚೆ ಮರುಕಳಿಸಿತ್ತು.

ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ನಿವೃತ್ತಿ ವಯೋಮಿತಿ ಹೆಚ್ಚಳ ಸಾಧ್ಯವೇ ಇಲ್ಲದ ಮಾತೆಂದು ಈ ಇಬ್ಬರು ಮುಖ್ಯ ಮಂತ್ರಿಗಳೂ ಅದನ್ನು ತಳ್ಳಿ ಹಾಕಿದ್ದರು. ಉದ್ಯೋಗಾವಕಾಶಗಳನ್ನು ಹೆಚ್ಚಿಸಬೇಕಾದ ಸರಕಾರಿ ಹೊಣೆಯನ್ನೂ ಅವರು ಅಂದು ಪ್ರಸ್ತಾಪಿಸಿದ್ದರು.

ಇಪ್ಪತ್ತು ವರ್ಷಗಳ ಹಿಂದೆ ನಿಜಲಿಂಗಪ್ಪನವರು ಈ ಮಾತನ್ನು ಹೇಳಿದಾಗ ರಾಜ್ಯದಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಕೇವಲ ಒಂದು ಲಕ್ಷದಷ್ಟಿತ್ತು. ದೇವರಾಜ ಅರಸು ನಿವೃತ್ತಿವಯೋಮಿತಿ ಹೆಚ್ಚಿಸಬೇಕೆಂಬ ಬೇಡಿಕೆಯನ್ನು ಚರ್ಚಿಸಲು ಕೂಡಾ ನಿರಾಕರಿಸಿದಾಗ ನಿರುದ್ಯೋಗಿಗಳ ಸೇನೆ ಐದು ಲಕ್ಷವನ್ನುದಾಟಿತ್ತು. ರಾಮಕೃಷ್ಣ ಹೆಗಡೆಯವರು ಈಗ ಮುಖ್ಯ ಮಂತ್ರಿಯಾದಾಗ ನಿರುದ್ಯೋಗಿಗಳ ಸಂಖ್ಯೆ 9 ಲಕ್ಷಕ್ಕೆ ಬಂದಿದೆ. ಇದು ಬೆಳೆಯುತ್ತಲೇ ಇರುವ ಸೇನೆಯೆಂಬುದು ಹೆಗಡೆಯವರಿಗೆ ಗೊತ್ತಿದೆ. ಆದರೂ ಹೆಗಡೆ ಹೀಗೇಕೆ ಮಾಡಿದರು? ಎಂಬುದೀಗ ನಮ್ಮ ಮುಂದೆ ಎದ್ದು ಬರುವ ಪ್ರಶ್ನೆ.

ಸರಕಾರದ ಭಿನ್ನ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು, ನಿಗಮಗಳು ಮತ್ತು ಸರಕಾರಿ ಕೈಗಾರಿಕೆಗಳಲ್ಲಿ ಪ್ರತಿವರ್ಷ ನಿವೃತ್ತರಾಗುವವರ ಒಟ್ಟು ಸಂಖ್ಯೆ 15ರಿಂದ 20 ಸಾವಿರ. ಇಷ್ಟು ಜನರಿಗೆ ಉದ್ಯೋಗ ಒದಗಿಸಿದ ಮಾತ್ರಕ್ಕೆ ನಿರುದ್ಯೋಗಿಗಳ ದೊಡ್ಡ ಸೇನೆ ಕರಗಿ ಹೋಗುವುದಿಲ್ಲವೆಂಬುದು ನಿಜ. ಆದರೆ ಕಿಂಚಿತ್ತಾದರೂ ಇರುವ ಅವಕಾಶದ ಬಾಗಿಲು ಮುಚ್ಚಿದ್ದೇಕೆ ಎಂದು ಕೇಳಲೇ ಬೇಕಾಗುತ್ತದೆ.

ನಮ್ಮೀ ದೇಶದಲ್ಲಿ ಬಹಳ ಬೆಲೆತೆತ್ತು ಕಟ್ಟುತ್ತಿರುವ ಜನತಂತ್ರ ವ್ಯವಸ್ಥೆ ದುರ್ಬಲವಾಗುತ್ತಿರುವುದರ ಚಿಹ್ನೆ ಇಲ್ಲಿದೆ. ಆಡಳಿತ ವ್ಯವಸ್ಥೆಯ ಮೂಲಗೇಣಿದಾರ ಎನ್ನಿಸಿಕೊಂಡಿರುವ ಅಧಿಕಾರಶಾಹಿ, ಜನಪ್ರತಿನಿಧಿಗಳಾದ ರಾಜಕೀಯ ಪ್ರಭುಗಳನ್ನು ಅಲುಗಾಡಿಸಲಾರಂಭಿಸಿದೆಯೆಂಬುದನ್ನು ಇದು ತೋರಿಸುತ್ತದೆ. ನಮ್ಮ ತಾಲೂಕು ಮಂಡಳಿಗಳಲ್ಲಿ, ಪುರಸಭೆಗಳಲ್ಲಿ ಜನಪ್ರತಿನಿಧಿಗಳು ಈಗಾಗಲೇ 'ನಾಮ ಮಾತ್ರ'ರಾಗಿದ್ದಾರೆ. ಅಧಿಕಾರಿಗಳು ಕಟ್ಟುವ ಕೆಂಪು ಪಟ್ಟಿಯನ್ನು ಬಿಚ್ಚಲು ಇವರಿಂದಾಗಿಲ್ಲ.

ಅಧಿಕಾರಿಗಳ ತಾಳಕ್ಕೆ ಹೆಜ್ಜೆ ಹಾಕಲೇಬೇಕಾದ ದುರ್ಗತಿ ಈಗೀಗ ಅನೇಕ ರಾಜ್ಯ ಸರಕಾರಗಳಿಗೂ ಬರುತ್ತಿದೆ.

1950ರ ದಶಕದಲ್ಲಿ ಅವಿಭಾಜಿತ ಪಂಜಾಬಿನ ಮುಖ್ಯಮಂತ್ರಿಯಾಗಿದ್ದ ಪ್ರತಾಪಸಿಂಗ್ ಕೈರಾನ್ ಅಧಿಕಾರಶಾಹಿಯನ್ನು ಅಲುಗಾಡಿಸಲು ಹೋಗಿ ಇಲ್ಲ-ಸಲ್ಲದ ಅಪವಾದಕ್ಕೀಡಾಗಿ ಅವಸಾನಗೊಂಡರು. 1963ರಲ್ಲಿ ಅಧಿಕಾರಿಗಳನ್ನು ಜನ ವಿರೋಧಿಗಳೆಂದು ಕರೆದ ಕೇರಳದ ಆಗಿನ ಮುಖ್ಯಮಂತ್ರಿ ಆರ್. ಶಂಕರ್ ಎಂಬುವರು ಅನತಿಕಾಲದಲ್ಲೇ ಅಧಿಕಾರ ಕಳಕೊಂಡರು.

ಅಧಿಕಾರ ಶಾಹಿಯ ಸೊಕ್ಕನ್ನು ಕರ್ನಾಟಕದಲ್ಲಿ ಅದುಮಿ ಹಿಡಿದು ಆಡಳಿತ ಯಂತ್ರವನ್ನು ಜನ ಸಾಮಾನ್ಯರ ಮನೆಯ ಬಾಗಿಲಿಗೆ ಸಾಗಿಸಿದ ದೇವರಾಜ ಅರಸು ಅಪವಾದಗಳ ಹೊರೆಯನ್ನೇ ಹೊತ್ತು ಕುಸಿಯಬೇಕಾಯಿತು. 1978 – '79ರಲ್ಲಿಬಿಹಾರದ ಮುಖ್ಯಮಂತ್ರಿಯಾಗಿದ್ದ ಕರ್ಪೂರಿ ಠಾಕೂರ್ ಅಧಿಕಾರ ಶಾಹಿಯನ್ನು ಮೆಟ್ಟಲು ಹೋಗಿ ಮುಗ್ಗರಿಸಿ ಬಿದ್ದರು.

ಇತ್ತೀಚೆಗೆ ಆಂಧ್ರ ಪ್ರದೇಶದಲ್ಲಿ ತೆಲುಗುದೇಶಂ ಪಕ್ಷದ ಭಾರಿ ಬಹುಮತದ ಬಲದಲ್ಲಿ ಅಧಿಕಾರ ನಡೆಸಿದ ಎನ್.ಟಿ. ರಾಮರಾವ್ ಅವರು ಗದ್ದುಗೆಯಿಂದ ಒಮ್ಮೆ ಬಿದ್ದುದಕ್ಕೆ ಅಧಿಕಾರ ಶಾಹಿಯ ಕೆಂಗಣ್ಣು ಕಾರಣವಾಗಿತ್ತು. ನೌಕರರ ನಿವೃತ್ತಿ ವಯೋಮಿತಿಯನ್ನು 58 ರಿಂದ 55 ಕ್ಕೆ ಇಳಿಸಿದುದಕ್ಕಾಗಿ ಅವರು ಬೆಲೆ ತೆರಬೇಕಾಯಿತು. ಅಧಿಕಾರಶಾಹಿಯ ಈ ಕಾರಸ್ಥಾನದಲ್ಲಿ ಗದ್ದುಗೆಗೇರಿದ ಭಾಸ್ಕರರಾವ್ ಮೊದಲು ಮಾಡಿದ ಕೆಲಸವೆಂದರೆ ನಿವೃತ್ತಿ ವಯೋಮಿತಿಯನ್ನು 58ಕ್ಕೆ ಏರಿಸಿದ್ದು. ರಾಮರಾವ್ ಮತ್ತೆ ಅಧಿಕಾರಕ್ಕೆ ಬಂದರಾದರೂ, ತಮ್ಮ ಮೊದಲಿನ ನಿರ್ಧಾರಕ್ಕೆ ಅಂಟಿಕೊಳ್ಳದಾಗಿದ್ದಾರೆ. ಅಧಿಕಾರ ಶಾಹಿಯ ತಾಳಕ್ಕೆ ಹೆಜ್ಜೆ ಹಾಕದಿದ್ದರೆ ಏನಾಗಬಹುದು ಎಂಬುದು ಅವರಿಗೀಗ ಗೊತ್ತಾಗಿರಬೇಕು.

'ಬುದ್ಧಿವಂತ' ಎನ್ನಿಸಿಕೊಂಡಿರುವ ರಾಮಕೃಷ್ಣ ಹೆಗಡೆಯವರಿಗೂ ಇದು ಮೊದಲೇ ಗೊತ್ತಿತ್ತು. 1982ರ ಡಿಸೆಂಬರ್‌ನಲ್ಲಿ ಜನತಾರಂಗ ಚುನಾವಣಾ ರಂಗಕ್ಕೆ ಇಳಿದಾಗಲೇ ಹೆಗಡೆಯವರು ವಯೋಮಿತಿ ಹೆಚ್ಚಳದ ಬೀಜ ಬಿತ್ತಿದ್ದರು.

ಜನತಾ ಪಕ್ಷ ಮತ್ತು ಕರ್ನಾಟಕದ ಕ್ರಾಂತಿರಂಗ ಸೇರಿ ಆದ ಜನತಾರಂಗ ಚುನಾವಣೆಗೆ ಸ್ಪರ್ಧಿಗಳನ್ನು ನಿಲ್ಲಿಸಿ ವಾರ ಸಂದರೂ ತನ್ನ ಚುನಾವಣಾ ಪ್ರಣಾಳಿಕೆಯನ್ನು ಹೊರಡಿಸಲಿರಲಿಲ್ಲ. ಈ ಬಗ್ಗೆ ಪತ್ರಿಕೆಗಳಲ್ಲಿ ಟೀಕೆ ಬಂತು. ಹರೆ-ಬರೆಯಲ್ಲಿ ಪ್ರಣಾಳಿಕೆಯ ಸಿದ್ಧತೆ ಕಾರ್ಯ ಆರಂಭವಾಯಿತು. ಭಾಷೆಯ ಬಲದಲ್ಲಿ ಮೆರೆದಾಡುತ್ತಿರುವ ಹಿರಿಯ ಪತ್ರಕರ್ತರೊಬ್ಬರ ಸೇವೆಯೂ ದೊರೆಯಿತು. ಸಂಸ್ಕೃತ ಭೂಯಿಷ್ಠವಾದ ವೈಭವೋಪೇತ ಶೈಲಿಯಲ್ಲಿ ಪ್ರಣಾಳಿಕೆ ಸಿದ್ಧವಾಯಿತು. ಈ ಕಾರ್ಯದಲ್ಲಿ ಹೆಗಡೆಯವರದು ಪರೋಕ್ಷ ಪಾತ್ರ.

ಸೊಗಸಾದ ಶೈಲಿಯಲ್ಲಿ ಸಿದ್ಧವಾದ ಚುನಾವಣಾ ಪ್ರಣಾಳಿಕೆಯನ್ನು ಎಸ್. ಆರ್. ಬೊಮ್ಮಾಯಿ ಮತ್ತು ಅಬ್ದುಲ್ ನಜೀರ್ ಸಾಬ್ ಜಂಟಿ ಪತ್ರಿಕಾ ಗೋಷ್ಠಿಯಲ್ಲಿ ಬಿಡುಗಡೆ ಮಾಡಿದರು. ಅದರಲ್ಲಿ ಕ್ಯಾಪಿಟೇಷನ್ ಫೀ ರದ್ದು ಮಾಡುವುದು, ನಿವೃತ್ತಿವಯೋಮಿತಿಯನ್ನು 58ಕ್ಕೆ ಏರಿಸುವುದು, ಇವೇ ಮೊದಲಾದ ಆಕರ್ಷಕ ಘೋಷಣೆಗಳಿದ್ದವು. ಆಗ ಇದನ್ನು ಯಾರೂ ಅಷ್ಟು ಗಂಭೀರವಾಗಿ ಪರಿಗಣಿಸಲಿಲ್ಲ. ಆ ಬಗ್ಗೆ ಪಕ್ಷದ ವೇದಿಕೆಯಲ್ಲಿ ಚರ್ಚೆಯೂ ನಡೆದಿರಲಿಲ್ಲ. ಅದು ಏನು? ಎಂತು? ಎಂಬುದೂ ಯಾರಿಗೂ ಗೊತ್ತಿರಲಿಲ್ಲ. ಹೆಗಡೆಯವರು ಮತ್ತು ಅವರ ಪತ್ರಕರ್ತ ಮಿತ್ರರಿಗೆ ಮಾತ್ರ ಗೊತ್ತಿತ್ತು.

ಚುನಾವಣೆ ಕಣಕ್ಕಿಳಿದ ಜನತಾರಂಗ ಮತ್ತೆ ಜನತಾ ಪಕ್ಷವಾಗಿ ಹೆಗಡೆಯವರ ನೇತೃತ್ವದಲ್ಲಿ ಸರಕಾರ ಸ್ಥಾಪನೆ ಮಾಡಿದ ಮೇಲೆ ಹೆಗಡೆಯವರು ತಮ್ಮ ಸಂಪುಟದ 2ನೆಯ ಸಭೆಯಲ್ಲೇ ನಿವೃತ್ತಿ ವಯೋಮಿತಿ ಹೆಚ್ಚಿಸುವ ಆಶ್ವಾಸನೆಯ ಪಾಲನೆಯ ವಿಚಾರ ಎತ್ತಿದರು. ಆಗ ಅದನ್ನು ಸ್ಪಷ್ಟವಾಗಿ ವಿರೋಧಿಸಿದವರು ಎಚ್. ಡಿ. ದೇವೇಗೌಡರು. ಹಾಗಾಗಿ ಆಶ್ವಾಸನೆಯ ಪಾಲನೆಯಲ್ಲಿ ವಿಳಂಬವಾಯಿತು.

ವಿಧಾನ ಸಭೆಯ ಏಪ್ರಿಲ್ ಅಧಿವೇಶನದಲ್ಲಿ ಈ ಪ್ರಶ್ನೆ ಬಂದಾಗ ಹೆಗಡೆ ಜಾರಿಕೆಯ ಉತ್ತರ ಕೊಟ್ಟಿದ್ದರು. ಈ ತೀರ್ಮಾನವನ್ನು ವಿಧಾನಸಭೆಗೆ ಬಿಡುವುದಾಗಿ ಹೇಳಿದ್ದರು. ಆಗಸ್ಟ್‌ನಲ್ಲಿ ದೇವೇಗೌಡರು ಪಕ್ಷ ಕಟ್ಟಲು ಹೊರಟು ಸಂಪುಟಕ್ಕೆ ರಾಜೀನಾಮೆ ಕೊಟ್ಟ ಮಾರನೇ ದಿನವೇ ಜನತಾ ಪಕ್ಷದ ಈ ಆಶ್ವಾಸನೆಯ ಪಾಲನೆಯಂತಹ ಪವಿತ್ರ ಕರ್ತವ್ಯವನ್ನು ಹೆಗಡೆ ನೆರವೇರಿಸಿದರು.

ವಯೋಮಿತಿ ಏರಿಕೆಯ ತಂತ್ರದ ಹಿಂದೆ ಇನ್ನೊಂದು ಹೀನಾಯವಾದ ಸಾಮಾಜಿಕ ದ್ರೋಹದ ಉದ್ದೇಶವಿದೆ. 1977–79ರಲ್ಲಿ ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ ರೂಪಿಸಿದ್ದ ಮೀಸಲಾತಿ ನೇಮಕ ನಿಯಮವನ್ನು ಹೇಗಾದರೂ ಮಾಡಿ ಹಾಳು ಮಾಡಬೇಕೆಂಬುದೇ ಈ ಉದ್ದೇಶ.

ಮೀಸಲಾತಿ ನಿಯಮದಂತೆ ಸರಕಾರದ ಹುದ್ದೆಗಳಲ್ಲಿ ಶೇಕಡಾ 65ರಷ್ಟು ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಹೋಗುವುದು. ಈ ನಿಯಮದಲ್ಲಿ ಇನ್ನೊಂದು ಹೊಸತನವಿತ್ತು. ಅದೆಂದರೆ ರೋಸ್ಟರ್ ಪದ್ಧತಿ.

ಇದಕ್ಕೆ ಮೊದಲು ಮೀಸಲಾತಿ ನಿಯಮದಲ್ಲಿ ನೌಕರಿಗೆ ಸೇರುವವರ ಹೆಸರೆಲ್ಲ ಪಟ್ಟಿಯ ಕೊನೆಯಲ್ಲಿ ಬರುತ್ತಿದ್ದವು. ಮೇಲಿನಂಲಿನಲ್ಲಿ "ಪ್ರತಿಭೆಯ ಗುತ್ತಿಗೆ" ಹಿಡಿದ ಮುಂದುವರಿದವರು ಇರುತ್ತಿದ್ದರು. ಇದರ ಪರಿಣಾಮವಾಗಿ ಮೀಸಲಾತಿಯಲ್ಲಿ ಬಂದ ನೌಕರರಿಗೆ ಬಡ್ತಿಯ ಅವಕಾಶವೇ ಇರುತ್ತಿರಲಿಲ್ಲ.

ಮೇಲ್ವರ್ಗದವರು ಪಟ್ಟಿಯಲ್ಲಿ ಯಾವಾಗಲೂ ಮೇಲೆಯೇ ಇರುವ ಈ ಪದ್ಧತಿಯನ್ನು ಅರಸು ಬದಲಿಸಿ ರೋಸ್ಟರ್ ಪದ್ಧತಿ ಜಾರಿಗೆ ತಂದರು.

ರೋಸ್ಟರ್ ಪದ್ಧತಿಯಂತೆ ಸರಕಾರದ ಯಾವುದಾದರೂ ಒಂದು ಇಲಾಖೆಗೆ 100 ಮಂದಿ ನೌಕರರ ನೇಮಕ ಮಾಡುವುದಾದರೆ ಅದರಲ್ಲಿ ಮೀಸಲಾತಿ ಪ್ರಮಾಣಕ್ಕನುಸರಿಸಿ ಪಟ್ಟಿ ಸಿದ್ಧವಾಗಬೇಕು. ಎಲ್ಲ ಪಟ್ಟಿಯಲ್ಲೂ ಮೊದಲ ಸ್ಥಾನ ಪರಿಶಿಷ್ಟ ವರ್ಗದ ಅಭ್ಯರ್ಥಿಗೆ, ಎರಡನೆಯದು ಪರಿಶಿಷ್ಟ ಬುಡಕಟ್ಟಿನವರಿಗೆ, ಮೂರನೆಯದು ಹಿಂದುಳಿದ ವರ್ಗದವರಿಗೆ, ನಾಲ್ಕನೆಯದು ಮೆರಿಟ್‌ನಲ್ಲಿ ಬಂದವರಿಗೆ ಸಿಗಬೇಕು. ಈ ರೋಸ್ಟರ್ ಸೂತ್ರದಲ್ಲಿ ನೌಕರರಿಗೆ ಸೇರುವ ದಲಿತರು ಮತ್ತು ಹಿಂದುಳಿದ ವರ್ಗಗಳವರಿಗೆ ಬಡ್ತಿಗೆ ಯೋಗ್ಯ ಅವಕಾಶವಿದೆ.

ಈ ಸೂತ್ರದಂತೆ ನೇಮಕಗಳಾದರೆ ಇನ್ನು 10–15 ವರ್ಷಗಳಲ್ಲಿ ಉನ್ನತ ಹುದ್ದೆಗಳಲ್ಲಿ ಬಹುಮಂದಿ ದಲಿತರು ಮತ್ತು ಹಿಂದುಳಿದವರು ಇರುತ್ತಿದ್ದರು.

ರೋಸ್ಟರ್ ಪದ್ಧತಿ ತಮ್ಮ ಪ್ರಭುತ್ವಕ್ಕೆ ಕೊಡಲಿ ಏಟೆಂಬುದನ್ನರಿತ ಮೇಲ್ವರ್ಗದ ಅಧಿಕಾರಶಾಹಿ ಅಂದಿನಿಂದಲೇ ರೋಸ್ಟರ್ ಪದ್ಧತಿಯನ್ನು ಸಂಕಟದ ಸುಳಿಗೆ ಹಾಕಿತು. 1980ರಲ್ಲಿ ಅರಸು ಹೋಗಿ ಗುಂಡೂರಾವ್ ಬಂದ ಮೇಲೆ ಇವರ ದಾರಿ ಸುಗಮವಾಯಿತು. ಒಂದಲ್ಲ ಒಂದು ನೆಪ ಒಡ್ಡಿ ತರವಾದ ಸರಕಾರಿ ನೌಕರಿಗಳಿಗೆ ನೇಮಕವನ್ನೇ ಮಾಡಲಿಲ್ಲ. ಈಗಲೂ ಸುಮಾರು 46 ಸಾವಿರ ಹುದ್ದೆಗಳು ತೆರವಾಗಿವೆ. ಮುಂದಿನ ಮೂರು ವರ್ಷಗಳಲ್ಲಿ ತೆರವಾಗಬೇಕಾಗಿದ್ದ ಸುಮಾರು 60 ಸಾವಿರ ಹುದ್ದೆಗಳಿಗೂ ಈಗ ಬೀಗ ಹಾಕಿ ಆಯಿತು.

ಸಾಮಾಜಿಕ ಪ್ರಜ್ಞೆ ಅಥವಾ ಕಳಕಳಿ ಇರುವವರೆಲ್ಲಾ ಯೋಚಿಸಬೇಕಾದ ವಿಚಾರ ಇಲ್ಲಿದೆ. ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಹುದ್ದೆಗಳಲ್ಲಿ ದಲಿತರು ಮತ್ತು ಸಾಮಾಜಿಕ ದುರ್ಬಲ ವರ್ಗಕ್ಕೆ ಸೇರಿದ ಸುಮಾರು 70 ಸಾವಿರ ಮಂದಿ ಸರಕಾರಿ ನೌಕರಿಗೆ ಸೇರಿ ಯೋಗ್ಯ ಬಡ್ತಿಯ ಅವಕಾಶ ಪಡೆಯುತ್ತಿದ್ದರು.

ಇದರ ಪರಿಣಾಮವಾಗಿ 70 ಸಾವಿರ ದುರ್ಬಲ ಕುಟುಂಬಗಳ ಬದುಕು ಕತ್ತಲಿಂದ ಬೆಳಕಿಗೆ ಬರುತ್ತಿತ್ತು. ಅವರೆಲ್ಲ ಅವಮಾನದ ಕೊಚ್ಚೆಯಿಂದೆದ್ದು ಮಾನವಂತ ಬದುಕಿನ ದಾರಿ ಹಿಡಿಯುತ್ತಿದ್ದರು. ವಿಚಾರವಂತ ಜನರೆಲ್ಲ ಬಯಸುವ ಸಾಮಾಜಿಕ ಪರಿವರ್ತನೆ ಇದಲ್ಲವೇ?

'ಮಾಫ್' ಮಾಡಿ

ಪ್ರಿಯರೇ,

"ಕೊಡಗಿ... ಡಿಗೆ ಉಸಿರು ತುಂ...

ಜನದನಿ

ಮಸೀದಿಯಲ್ಲಿ ರಾಜಕೀಯ



ಸುಪ್ರಿಯಾ ಮೋಟರ್ಸ್ ಇಂಡಸ್ಟ್ರೀಸ್‌ನ ನೂತನ ಶೋ ರೂಮ್ ಹಾಗೂ ವರ್ಕ್‌ಶಾಪನ್ನು ಮಹೀಂದ್ರ ಎಂಡ್ ಮಹೀಂದ್ರ ಸಂಸ್ಥೆಯ ಕಾರ್ಯ ನಿರ್ವಾಹಕ ಉಪಾಧ್ಯಕ್ಷ ಕೂಳೂರಿನಲ್ಲಿ ಉದ್ಘಾಟಿಸಿದಾಗ. ಅವಿನಾಶ್ ದತ್ತ, ಎಂ. ಜೆ. ಮಿಸ್ಸಾ ಎಂ. ಎಚ್. ಮಿಸ್ಸಾ, ಎನ್. ಮಿಸ್ಸಾ ಅವರನ್ನು ಚಿತ್ರದಲ್ಲಿ ಕಾಣಬಹುದು.

ಸುಪ್ರಿಯಾ ಶೋರೂಮ್ ಉದ್ಘಾಟನೆ

ಮಂಗಳೂರು, ಜ. 9–ನಗರದ ಸುಪ್ರಿಯಾ ಮೋಟಾರ್ ಇಂಡಸ್ಟ್ರೀಸ್‌ನ ನೂತನ ಶೋರೂಂ ಹಾಗೂ ವರ್ಕ್‌ಶಾಪ್ ಅನ್ನು ಇತ್ತೀಚೆಗೆ ಕೂಳೂರಿನಲ್ಲಿ ಮಹೀಂದ್ರ ಅಂಡ್ ಮಹೀಂದ್ರ ಸಂಸ್ಥೆಯ ನಿರ್ವಾಹಕ ಉಪಾಧ್ಯಕ್ಷರಾದ ಜಾರ್ಜ್ ಜೇಕಬ್ ಅವರು ಉದ್ಘಾಟಿಸಿದರು.

ಮಹೀಂದ್ರ ಅಂಡ್ ಮಹೀಂದ್ರ ಸಂಸ್ಥೆಯ ವಾಹನಗಳ ಅಧಿಕೃತ ವ್ಯಾಪಾರಿಗಳು ಆಗಿರುವ ಸುಪ್ರಿಯಾ ಮೋಟಾರ್ ಇಂಡಸ್ಟ್ರೀಸ್‌ನವರು ತಮ್ಮ ಸಂಸ್ಥೆಯ ವತಿಯಿಂದಲೇ ವರ್ಕ್‌ಶಾಪ್ ಅನ್ನೂ ತೆರೆದಿರುವುದು ವಿಶೇಷ.

ಈ ಸಂದರ್ಭದಲ್ಲಿ ಮಾತನಾಡಿದ ಜಾರ್ಜ್ ಜೇಕಬ್ ಅವರು "ಬೆಳೆಯುತ್ತಿರುವ ಮಂಗಳೂರು ಹಂತಹಂತವಾಗಿ ವಾಣಿಜ್ಯ ಕೇಂದ್ರವಾಗುತ್ತಿರುವುದನ್ನು ಗಮನಿಸಿ ಸುಪ್ರಿಯಾ ಮೋಟಾರ್ ಇಂಡಸ್ಟ್ರೀಸ್‌ನವರು ನೂತನ ಶೋರೂಂ ತೆರೆದಿರುವುದು ಉಪಯುಕ್ತ" ಎಂದು ಹೇಳಿದರಲ್ಲದೆ "ಹೊಸ ಶೋರೂಂ ಹಾಗೂ ವರ್ಕ್‌ಶಾಪ್ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುವಂತಾಗಲಿ" ಎಂದೂ ಹಾರೈಸಿದರು.

ಮಹೀಂದ್ರ ಅಂಡ್ ಮಹೀಂದ್ರ ಕಂಪೆನಿಯ ಬಗ್ಗೆ ಮಾತನಾಡಿದ ಜಾರ್ಜ್ ಜೇಕಬ್ ಅವರು "ಗುಣಮಟ್ಟವನ್ನು ಕಾಪಾಡಲು ...

... ಖರೀದಿಸುವವರಿಗೆ ಉತ್ತಮ ಸೇವೆ ಒದಗಿಸಲು ಮಹೀಂದ್ರ ಅಂಡ್ ಮಹೀಂದ್ರ ವಾಹನಗಳು ಶಕ್ತವಾಗಿವೆ ಎಂದು ಹೇಳಿದ ಜಾರ್ಜ್ ಜೇಕಬ್ ಅವರು ಹೊರದೇಶಗಳಲ್ಲೂ ಮಹೀಂದ್ರ ಕಂಪೆನಿಯ ವಾಹನಗಳಿಗೆ ಬೇಡಿಕೆ ಇದೆ ಎಂದರು.

"ನಗರ ಬೆಳೆಯುವುದರೊಂದಿಗೆ ಉದ್ಯಮವೂ ಬೆಳೆಯಬೇಕು. ಉದ್ಯಮದ ಜೊತೆಗೆ ಜಿಲ್ಲೆ ಬೆಳೆಯಬೇಕು. ಅದರೊಂದಿಗೆ ಸುತ್ತ ಮುತ್ತ ಇರುವ ಜನರೂ ಬೆಳೆಯಬೇಕು. ಇದು ನಮ್ಮ ಉದ್ದೇಶ" ಎಂದು ಜಾರ್ಜ್ ಜೇಕಬ್ ಹೇಳಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಡೆಪ್ಯುಟಿ ಜನರಲ್ ಮೆನೇಜರ್ (ಮಾರ್ಕೆಟಿಂಗ್) ಅವಿನಾಶ್ ದತ್, ಎಸ್. ಕೆ. ಸೇನ್ ಗುಪ್ತ ಅವರಿದ್ದರು.

ಸುಪ್ರಿಯಾ ಮೋಟಾರ್ ಇಂಡಸ್ಟ್ರೀಸ್‌ನ ಪಾಲುದಾರರಾದ ಎಂ. ಜೆ. ಮಿಸ್ಸಾ, ಎಂ. ಎಚ್. ಮಿಸ್ಸಾ, ಎನ್. ಮಿಸ್ಸಾ ಅವರು ಅತಿಥಿಗಳನ್ನು ಸ್ವಾಗತಿಸಿದರು.

ಮಹಿಳಾ ಸಮ್ಮೇಳನಕ್ಕೆ ದ. ಕ. ಜಿಲ್ಲಾ ನಿಯೋಗ

ಮಂಗಳೂರು, ಜ. 9– ಅಖಿಲ ಭಾರತ ಮಹಿಳಾ ಸಂಘಟನೆಯ ದ. ಕ. ಜಿಲ್ಲಾ ಘಟಕದ ಮಂಗಳೂರು ಶಾಖೆಯ ಕಲ್ಯಾಣಿ ಡಿ. ಶೆಟ್ಟಿ, ಮಾಲತಿ ರಾವ್ ಪೇಜಾವರ್, ಭಾನುಮತಿ ಎಸ್. ರಾವ್ ಮತ್ತು ಕಾಪು ಶಾಖೆಯ ಅಧ್ಯಕ್ಷೆ ಶೀಲಾ ವಿ. ಶೆಟ್ಟಿ ಅವರನ್ನೊಳಗೊಂಡ ನಿಯೋಗವೊಂದು ಜನವರಿ 10 ರಿಂದ 12ರವರೆಗೆ ಗ್ವಾಲಿಯರ್‌ನಲ್ಲಿ ನಡೆಯುವ ಅಖಿಲ ಭಾರತ ಮಹಿಳೆಯರ ಸಂಘಟನೆಯ 55ನೇ ವಾರ್ಷಿಕ ಅಧಿವೇಶನದಲ್ಲಿ ಭಾ... ತೆರಳಿ...

ಕಾರ್ಕಳ ತಾಲೂಕಿಗೆ ಪಡಿತರ ಬಿಡುಗಡೆ

ಕಾರ್ಕಳ, ಜ. 9– ಕಾರ್ಕಳ ತಾಲೂಕಿನ ಎಲ್ಲಾ ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಿಸಲು ಜನವರಿ ತಿಂಗಳ ಪಡಿತರ ಸಾಮಗ್ರಿಗಳನ್ನು ಬಿಡುಗಡೆ ಮಾಡಲಾಗಿದೆ.

ನಗರ ಪ್ರದೇಶಗಳಿಗೆ ಪ್ರತಿ ಕಾರ್ಡಿಗೆ 10 ಕೆ. ಜಿ. ಅಕ್ಕಿ, 1 ಕೆ.ಜಿ. ತಾಳೆ ಎಣ್ಣೆ, ಸೀಮೆ ಎಣ್ಣೆ 15 ಲೀಟರ್, ಗೋಧಿ 5ಕೆ. ಜಿ. ಗ್ರಾಮೀಣ ಪ್ರದೇಶಗಳ ಪ್ರತಿ ಹಸಿರು ಮತ್ತು ಕೇಸರಿ ಕಾರ್ಡಿಗೆ ಅನುಕ್ರಮವಾಗಿ 10 ಕೆ. ಜಿ. ಮತ್ತು 15 ಕೆ. ಜಿ. ಅಕ್ಕಿ, ಸೀಮೆ ಎಣ್ಣೆ 5 ಲೀಟರ್, ತಾಳೆ ಎಣ್ಣೆ ಅರ್ಧ ಲೀಟರ್, ಗೋಧಿ 10 ಕೆ. ಜಿ. ಯಂತೆ ವಿತರಿಸಲು ಬಿಡು...

ಏಕ ಗಂಟಿನಲ್ಲಿ ತೆರಿಗೆ ವಸೂಲಿ: ದಲಿತರ ಖಂಡನೆ

ಮಂಗಳೂರು, ಜ. 9– "ನಗರದಲ್ಲಿನ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಹೆಚ್ಚು ನೀರಿನ ತೆರಿಗೆ ವಿಧಿಸುವ ಹಾಗೂ ಕಳೆದ ಹತ್ತು ವರ್ಷಗಳಿಂದ ಬಾಕಿ ಇರುವ ತೆರಿಗೆಯನ್ನು ಒಮ್ಮೆಲೆ ವಸೂಲು ಮಾಡಲು ನಿರ್ಧರಿಸಿರುವ ಮಂಗಳೂರು ಮಹಾನಗರ ಪಾಲಿಕೆಯ ಧೋರಣೆಯಿಂದ ದಲಿತರಿಗೆ ಅನ್ಯಾಯವಾಗುತ್ತಿದೆ" ಎಂದು ದ.ಕ.ಜಿಲ್ಲಾ ದಲಿತ ಸಂಘಟನೆಯ ಪ್ರಮುಖ ಕಮಲಾಕ್ಷ ಅವರು ಟೀಕಿಸಿದ್ದಾರೆ.

ಇತ್ತೀಚೆಗೆ ನಗರದ ಸೂಟರ್ ಪೇಟೆ ಕಾಲನಿಯ ಸಮಾಜ ಮಂದಿರದಲ್ಲಿ ನಡೆದ ದಲಿತರ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.

"ಏಕ ಗಂಟಿನಲ್ಲಿ ನೀರಿನ ತೆರಿಗೆ ಪಾವತಿಸಬೇಕೆಂಬ ನಗರಪಾಲಿಕೆಯ ನಿರ್ಧಾರದಿಂದ ದಲಿತರಿಗೆ ಅನ್ಯಾಯವಾಗುತ್ತದೆ. ಪೂರ್ವಭಾವಿಯಾಗಿ ಯಾವುದೇ ಸೂಚನೆಯಿಲ್ಲದೆ ಇಂತಹ ದಿಢೀರ್ ನಿರ್ಧಾರ ಕೈಗೊಂಡು ನಗರ ಪಾಲಿಕೆ ಸರ್ವಾಧಿಕಾರಿ ಧೋರಣೆ ತಳೆದಿದೆ" ಎಂದೂ ಅವರು ಆರೋಪಿಸಿದರು.

ಒಮ್ಮೆಲೆ ತೆರಿಗೆ ವಸೂಲು ಮಾಡುವ ಉಗ್ರಕ್ರಮವನ್ನು ತಕ್ಷಣ ನಿಲ್ಲಿಸಬೇಕೆಂದು ಅವರು ನಗರ ಪಾಲಿಕೆಯವರನ್ನು ವಿನಂತಿಸಿದರಲ್ಲದೆ ದಲಿತರಿಗೆ ಕನಿಷ್ಠ ತೆರಿಗೆ ವಿಧಿಸಬೇಕು ಎಂದೂ ಒತ್ತಾಯಿಸಿದರು.

ನಗರದ ಕ್ರಿಮಿನಲ್ ವಕೀಲರೂ, ನಗರ ಪ್ಲಾನಿಂಗ್ ಅಥಾರಿಟಿಯ ಮಾಜಿ ಅಧ್ಯಕ್ಷರೂ ಆದ ಕೆ. ಪುರುಷೋತ್ತಮ ಪೂಜಾರಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಕಾರ್ಪೊರೇಟರುಗಳಾದ ರಾಮ ಎಂ. ಕೋಟ್ಯಾನ್, ಗಿಲ್ಬರ್ಟ್ ಪಿಂಟೋ, ಜುಡಿತ್ ಮಸ್ಕರೇಂಞಸ್ ಅವರು ಉಪಸ್ಥಿತರಿದ್ದು ತೆರಿಗೆ ವಸೂಲಾತಿ ಕ್ರಮವನ್ನು ಖಂಡಿಸಿದರು.

ಈ ಕಾಲನಿಯ ಪರಿಶಿಷ್ಟ ಜಾತಿಯ ಮುಖಂಡರೂ, ವಿಮಾನದಳದ ನಿವೃತ್ತ ನೌಕರರೂ ಆದ ಯು. ರಂಗ ಅವರು ಮಾತನಾಡಿ ನಗರಪಾಲಿಕೆಯ ತೆರಿಗೆ ವಸೂಲಾತಿ ಕ್ರಮವನ್ನು ಎಲ್ಲರೂ ಒಗ್ಗಟ್ಟಾಗಿ ಪ್ರತಿಭಟಿಸಬೇಕು ಎಂದು ಕರೆಯಿತ್ತರು.

ಎಸ್. ನವೀನ ಅವರು ಸ್ವಾಗತಿಸಿ ವಂದಿಸಿದರು. ಪ್ರಸ್ತುತ ಜಾರಿ ಮಾ... ನೋಟಿಸಿನಂತೆ ನೀರು ಸರಬರಾಜು ತ... ಯುವುದನ್ನು ನಿಲ್ಲಿಸಬೇಕೆಂದು ಸಭೆಯಲ್ಲಿ ನಿರ್ಣಯಿಸಲಾಯಿತೆಂದು ಕೆ. ಪುರುಷೋತ್ತಮ ಪೂಜಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆದೇಶ

ಮಂಗಳೂರು, ಜ. 9– ರಾಜ್ಯದ 3ನೇ ವೇತನ ಆಯೋಗವು ಮಾಡಿರುವ ಶಿಫಾರಸುಗಳ ಆಧಾರದ ಮೇಲೆ ರಾಜ್ಯ ಸರಕಾರದ ನಿರ್ಧಾರವನ್ನು ಅವಲೋಕಿಸಿ ಕರ್ನಾಟಕ ರಾಜ್ಯ ಸರಕಾರಿ ಸೇವಾ ನಿಯಮಾವಳಿಗಳ ಅನುಬಂಧದಲ್ಲಿ ಅಡಕವಾಗಿರುವಂತೆ ರಾಜ್ಯ ಸರಕಾರಿ ನೌಕರರಿಗೆ ಗಳಿಕೆ ರಜೆಯನ್ನು ಬಿಟ್ಟು ಕೊಡುವ ಮತ್ತು ಅದನ್ನು ನಗದೀಕರಿಸಿಕೊಳ್ಳುವ ಯೋಜನೆಯನ್ನು ಪ್ರಸಕ್ತ ವರ್ಷದ ಅಂದರೆ 1987-88ರ ಎರಡು ವರ್ಷಗಳ ಬ್ಲಾಕ್ ಅವಧಿಗೆ ಸಂಬಂಧಪಟ್ಟಂತೆ ಸರಕಾರ ಮುಂದಿನ ಆದೇಶವನ್ನು ಹೊರಡಿಸುವರೆಗೆ ಅಥವಾ 1987 ಮಾರ್ಚ್ 31ರವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ನಗದೀಕರಿಸಿ...

ಮಣ್ಣಗುಡ್ಡೆ ವಿಶ್ವ ಹಿಂದೂ ಪರಿಷತ್ ಕ್ಷೇತ್ರ ಸಮಿತಿ ಮಹಾಸಭೆ

ಮಂಗಳೂರು, ಜ. 9– ಮಣ್ಣಗುಡ್ಡೆ ವಿಶ್ವ ಹಿಂದೂ ಪರಿಷತ್ ಕ್ಷೇತ್ರ ಸಮಿತಿಯ ಮಹಾಸಭೆಯು ಉರ್ವ ಮಾ... ಯಮ್ಮ ದೇವಸ್ಥಾನದ ಪ್ರಾಂಗಣದಲ್ಲಿ ಇತ್ತೀಚೆಗೆ ಜರಗಿತು.

ಡಾ। ಅಂಬರೀಷ್ ಹಾಗೂ ಕಾಂಬ... ಸುಂದರರಾವ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಕಾರ್ಯದರ್ಶಿ ಬಿ. ಕಾಶಿನಾಥ್ ವರದಿ ಓದಿದರು. ನಗರ ಪ್ರಚಾರ... ಬಿ. ಪುರುಷೋತ್ತಮ ಅವರ ನೇತೃತ್ವದಲ್ಲಿ ನೂತನ ಸಾಲಿನ ಪದಾಧಿಕಾರಿಗಳ ಆಯ್ಕೆ ಜರಗಿತು.

ಗಣರಾಜ್ಯೋ... ವಿದ್ಯಾರ್ಥಿಗಳಿ... ಸ್ಪರ್ಧೆ

ಮಂಗಳೂರು, ಜ. 9–ಈ ವರ್ಷದ ಗಣ ರಾಜ್ಯೋತ್ಸವದಂಗವಾಗಿ ಭಾರತ ಸೇವಾದಳದ ಅಧ್ಯಕ್ಷ ಬಿ. ದಾಮೋದರ ಪ್ರಭುಗಳವರ ಸಲಹೆಯಂತೆ ಮಂಗಳೂರು ಮಹಾನಗರ ಪಾಲಿಕೆಯೊಳಗಿನ ಎಲ್ಲಾ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಜನವರಿ 19 ರಂದು ಬೆಳಿಗ್ಗೆ 10–30 ಗಂಟೆಗೆ ನಗರದ ...

10-1-87

ವೈಚಾರಿಕ ಕ್ರಾಂತಿ: ಎಚ್ಚರ ತಪ್ಪದಿರಿ

ಪ್ರಿಯ ಸಂಪಾದಕರೆ,

ಜನವರಿ 8, 1987ರ ಮುಂಗಾರು ಸಂಚಿಕೆಯಲ್ಲಿ 'ಅವಮಾನವು ಕಲಿಸಿದ ಪಾಠ' ಶೀರ್ಷಿಕೆಯ ತಮ್ಮ 'ಓದುಗರೊಡನೆ ಸಂಪಾದಕ' ಅಂಕಣದಲ್ಲಿ ಮೂಡಿ ಬಂದ ವಿಚಾರಗಳನ್ನು ಓದಿದಾಗ, ನನ್ನ ಮನಸ್ಸಿನಲ್ಲಿ ಮೂಡಿದ ವಿಚಾರಗಳನ್ನು ಇಲ್ಲಿ ನೀಡುತ್ತಿದ್ದೇನೆ.

ನಮ್ಮ ದೇಶದಷ್ಟು ವೈವಿಧ್ಯಮಯ ದೇಶ ಪ್ರಪಂಚದಲ್ಲಿ ಬೇರೊಂದಿಲ್ಲ. ಜನರ ನಡೆನುಡಿ, ಜಾತಿ-ಧರ್ಮ, ಆಚಾರ-ವಿಚಾರ, ಸಂಸ್ಕೃತಿ-ಸಜ್ಜನಿಕೆ, ಎಲ್ಲದರಲ್ಲೂ ಇಲ್ಲಿ ವೈವಿಧ್ಯತೆ ಇದೆ. ಬಹು ಪುರಾತನ ಇತಿಹಾಸ ಇರುವ ದೇಶ ನಮ್ಮದು. ಈ ದೇಶದಲ್ಲಿ ಹಲವಾರು ಮತ-ಧರ್ಮಗಳು ಬಾಳಿ ಬೆಳಗಿವೆ. ಕೆಲವೊಂದು ಕಾಲ ಘಟ್ಟಗಳಲ್ಲಿ ಮತಾಂಧತೆಯ ಜನನದಿಂದಾಗಿ ನಡೆದ ಧಾರ್ಮಿಕ ಹಿಂಸೆಯ ಉದಾಹರಣೆಗಳನ್ನು ಹೊರತು ಪಡಿಸಿದರೆ ಧಾರ್ಮಿಕ ಸೌಹಾರ್ದತೆ ನೆಲೆಸಿ ಬಂದಿರುವುದು ಈ ನಾಡಿನ ಹಿರಿಮೆಯನ್ನು ಎತ್ತಿ ತೋರಿಸುತ್ತದೆ.

ಸ್ವಾತಂತ್ರ್ಯದ ಬಳಿಕ, ಭಾರತದ ಗಣರಾಜ್ಯೋತ್ಸವದೊಡನೆ, ತನ್ನ ನಂಬಿಕೆಯ ಧರ್ಮವನ್ನು ಆಚರಿಸುವ ಹಕ್ಕನ್ನು ಪ್ರತಿಯೊಬ್ಬ ಭಾರತೀಯ ಪಡೆದಿದ್ದಾನೆ. ಇತರರ ಧಾರ್ಮಿಕ ಭಾವನೆಗಳನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ.

ಮಾನವ ತಾನು ನಂಬಿದ ದೇವ-ದೇವತೆಗಳನ್ನು ಪೂಜಿಸುವುದು, ಧಾರ್ಮಿಕ ಆಚರಣೆಗಳನ್ನು ನಡೆಸುವುದು-ಇವುಗಳಲ್ಲಿ ಅತ್ಯುಚ್ಚ ತೃಪ್ತಿಯನ್ನು ಮನಶ್ಶಾಂತಿಯನ್ನು ಕಂಡುಕೊಳ್ಳುತ್ತಾನೆ. ಈ ತರದ ಧಾರ್ಮಿಕ ಭಾವನೆಗಳಿಗೆ ಆಘಾತವನ್ನೂ ಸಾರಿಗಟ್ಟಿ ಸಹಿಸಲಾಗುವುದಿಲ್ಲ. ತನ್ನ ನಂಬಿಕೆಯ ತತ್ವಗಳಿಗೆ ವಿರೋಧ ಬಂದಾಗ ಧಾರ್ಮಿಕ ನಂಬುಗೆಯ ಮಾನವ ಸಹಜವಾಗಿ ನೊಂದುಕೊಳ್ಳುತ್ತಾನೆ. ಈ ನೋವು ಉದ್ವೇಗ ಕಾರಣವಾಗಿ ವ್ಯಕ್ತಿ ಕೆರಳುತ್ತಾನೆ. ಮನಸ್ಸಿನ ಸಮತೋಲನ ತಪ್ಪಿದ ಈ ಕೆರಳಿಕೆಯಿಂದಾಗಿ ಸಮಾಜದಲ್ಲಿ ಕ್ಷೋಭೆ ಎದ್ದು, ಅನಿಷ್ಟಗಳು ಸಂಭವಿಸುತ್ತವೆ. ಧಾರ್ಮಿಕ ಸೌಹಾರ್ದತೆಯ ಅಡಿ ತಪ್ಪುತ್ತದೆ. ಇತ್ತೀಚಿನ ವರ್ಷಗಳಲ್ಲಿ ಇದರ ಸಾಕಷ್ಟು ಅನುಭವ ಪಡೆದಿದ್ದೇವೆ.

ಯಾವುದೇ ಧರ್ಮವು ಕೆಲವೊಂದು ನಂಬಿಕೆಗಳ ತಳಹದಿಯ ಮೇಲೆ ನಿಂತಿದೆ. ಈ ನಂಬಿಕೆಯನ್ನೇ ಗೇಲಿ ಮಾಡುವ ಪ್ರಯತ್ನ ನಡೆದಲ್ಲಿ, ಅದನ್ನು ಸಹಿಸುವ ಶಕ್ತಿ ಬಹುತೇಕ ಜನರಲ್ಲಿ ಇಲ್ಲದಿರುವುದೇ ಮಾನಸಿಕ ಕ್ಷೋಭೆ ಉಂಟಾಗುವ ಮೂಲ ಕಾರಣ.

ಮುಂಗಾರು ಪತ್ರಿಕೆಯ ಆರಂಭದಿಂದಲೇ ನನ್ನ ಮಟ್ಟಿಗೆ ಈ ಪತ್ರಿಕೆಯ ಧ್ಯೇಯೋದ್ದೇಶ ಧೋರಣೆಗಳನ್ನು ಅರಿಯುವ ಸಂದರ್ಭಗಳು ಮುಂಗಾರು ಬಳಗದ ನನ್ನ ನಿಕಟವರ್ತಿಗಳ ಮೂಲಕ ಅನೇಕ ಬಾರಿ ದೊರೆತಿವೆ. ಇವುಗಳನ್ನು ಕೇಳಿ ಖುಷಿಪಟ್ಟಿದ್ದೇನೆ. ಸಮಾಜದಲ್ಲಿ ಶೋಷಿತರ ಪರವಾಗಿ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ತುಳಿಯಲ್ಪಟ್ಟವರ ಪರವಾಗಿ ಧ್ವನಿ ಎತ್ತಿ ನಿಲ್ಲಬಹುದಾದ ಪತ್ರಿಕೆಯನ್ನು ಸ್ಥಾಪಿಸಿದ ನಿಮ್ಮ ಬಗ್ಗೆಯೂ ಹೆಮ್ಮೆ ಪಟ್ಟಿದ್ದೇನೆ. ನನ್ನಂತೆಯೇ ಕ್ರಿಶ್ಚಿಯನ್ ಬಾಂಧವರಲ್ಲಿ ಅನೇಕರು ಪತ್ರಿಕೆಯ ಬಗ್ಗೆ ಉತ್ತಮ ಭಾವನೆಗಳನ್ನು ಇಟ್ಟುಕೊಂಡಿದ್ದಾರೆ ಎಂಬುದರಲ್ಲಿ ಅತಿಶಯೋಕ್ತಿ ಇಲ್ಲ. ನಿಮ್ಮ ಹಾಗೂ ನಿಮ್ಮ ಪತ್ರಿಕೆ ಬಗ್ಗೆ ಇರುವ ನನ್ನ ಭಾವನೆಗಳು ಹುಸಿಯಾಗಿಲ್ಲ. ಹಿಂದುಳಿದವರನ್ನು, ಶೋಷಿತರನ್ನು, ಧಾರ್ಮಿಕ ಅಲ್ಪ ಸಂಖ್ಯಾತರನ್ನು ಇತರ ಪತ್ರಿಕೆಗಳು ಉಪೇಕ್ಷಿಸುವಂತಹ ವಾತಾವರಣದಲ್ಲಿ ಈ ಜನರ ಸಾಮಾಜಿಕ, ಸಾಂಸ್ಕೃತಿಕ ನಿಲುವುಗಳಿಗೆ ಬೆಂಬತ್ತಿಸಿತ ಬಗ್ಗೆ, ಅವರಲ್ಲಿ ಇದ್ದಂತಹ ಪ್ರತಿಭೆಗಳನ್ನು ಪ್ರಕಾಶಿಸಲು ಅವಕಾಶ ನೀಡಿದ ಬಗ್ಗೆ ಎರಡು ಮಾತಿಲ್ಲ.

ಜನರ ಮೌಢ್ಯವನ್ನು ಹೋಗಲಾಡಿಸು

ಸಂಪಾದಕರೊಡನೆ ಓದುಗ

ವಂತಹ ಕಾರ್ಯವನ್ನು ಪತ್ರಿಕೆ ನಡೆಸಬೇಕೆಂಬುದು ನಿಜ. ಆದರೆ ಈ ಮೌಢ್ಯವನ್ನು ಜಾಡಿಸುವ ಆದರ್ಶದಲ್ಲಿ ಯಾರದೇ ಧಾರ್ಮಿಕ ನಂಬಿಕೆಗಳಿಗೆ ಹಾನಿಯಾಗಬಾರದು ಎಂಬುದೂ ಅಷ್ಟೇ ನಿಜ. ವೈಜ್ಞಾನಿಕ ಮನೋಧರ್ಮದ ಆವಿಷ್ಕಾರಕ್ಕೆ ಮುಕ್ತ ಮನಸ್ಸು ಸಹಾಯಕವೆಂಬ ತಿಳುವಳಿಕೆಯಿಂದ ನೀವು ಕೈಗೊಂಡಿರುವ ಕ್ರಮ ಹೊಗಳಬೇಕಾದದ್ದು. ಆದರೆ ಈ ಭರದಲ್ಲಿ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡುವುದು ಸಾಮಾಜಿಕ ಹಿತದೃಷ್ಟಿಯಿಂದ ಮತ್ತು ನಿಮ್ಮ ಪತ್ರಿಕೆಯ ಬೆಳವಣಿಗೆಯ ಹಿತದೃಷ್ಟಿಯಿಂದ ಖಂಡಿತ ಸಾಧುವಲ್ಲ.

ಮತ್ತೊಂದು ವಿಚಾರ

'ಮಕ್ಕಳ ತೋಟ'ದಲ್ಲಿ ಮೂಡಿಬರುವ (ಆದಿತ್ಯವಾರದ ಮುಂಗಾರುವಿನ) ಮಾದರಿ ಪಾಠದ ಮುಖಾಂತರ ಮಕ್ಕಳಿಗಾಗಿ ನೀವು ಇಂತಹ ವಿಚಾರಗಳನ್ನು ನೀಡುತ್ತೀರಿ. ಮಕ್ಕಳಲ್ಲಿ ಸತ್ಯಶೋಧನೆಯಾಗಬೇಕೆಂಬ ಬಯಕೆ ನಿಮ್ಮದು. ಆದರೆ ಪಾಪ ದ್ವಂದ್ವದಲ್ಲಿ ಸಿಕ್ಕಿಹಾಕಿಕೊಂಡ ಕಥೆ ಆ ಮಕ್ಕಳದ್ದಾಗುತ್ತದೆ. ಕುಟುಂಬದಿಂದ ಬಳುವಳಿಯಾಗಿ ಬರುವ ಧಾರ್ಮಿಕ ವಿಚಾರಗಳು ಒಂದೆಡೆ, ಅದನ್ನು ಅಲ್ಲಗಳೆಯುವಂತೆ ತಮ್ಮ ಪತ್ರಿಕೆಯಲ್ಲಿ ಮಾದರಿ ಪಾಠದ ಮುಖಾಂತರ ಕಪ್ಪು ಛಾಪೆಯಲ್ಲಿ ಬರುವಂತಹ ವಿಚಾರಗಳು ಇನ್ನೊಂದೆಡೆ. ಆ ಎಳೆಯ ಮನಸ್ಸುಗಳು ಯಾವುದನ್ನು ನಂಬಬೇಕು ಯಾವುದನ್ನು ಬಿಡಬೇಕು? ಮಕ್ಕಳಿಗೆ ನೀಡುವ ಬದಲಿಗೆ ಹಿರಿಯರಿಗೆ ನೀವು ಈ ವಿಚಾರಗಳನ್ನು ಯಾಕೆ ನೀಡಬಾರದು ?

ಡಿಸೆಂಬರ್ 28ರಂದು ಪ್ರಕಟಿಸಿದ 'ಪರಲೋಕದಲ್ಲಿರುವ ತಂದೆ ದೇವರು ಇಹಲೋಕದಲ್ಲಿ ಮಾಡಿ(ಸಿ)ದ್ದು' ಈ ಪಾಠದ ಬಗ್ಗೆ ಕ್ರಿಶ್ಚಿಯನ್ ಬಾಂಧವರಿಂದ ಪ್ರತಿರೋಧದ ಸೂಚನೆ ಕಂಡು ಜನವರಿ 6ರ ಸಂಚಿಕೆಯ ಮುಖಪುಟದಲ್ಲಿ ವಿಷಾದ ಪ್ರಕಟಿಸಿ, ಪ್ರಮಾದವಶಾತ್ ಆದ ತಪ್ಪನ್ನು ಮನ್ನಿಸುವಂತೆ ಕೋರಿದ್ದೀರಿ. ಈಗ, ಜನವರಿ 8ರ ಸಂಚಿಕೆಯಲ್ಲಿ ಓದುಗರೊಡನೆ ಸಂಪಾದಕ ಅಂಕಣದಲ್ಲಿ ಈ ಬಗ್ಗೆ ಮನಬಿಚ್ಚಿ ಮಾತನಾಡಿದ್ದೀರಿ. ಉದ್ದೇಶಪೂರ್ವಕವಾಗಿರದ ತಪ್ಪು ಘಟಿಸಿ, ಕ್ರಿಶ್ಚಿಯನ್ ಬಾಂಧವರಿಗಾದ ಮನಸ್ಸಿನ ನೋವಿನ ಕಾರಣಕ್ಕಾಗಿ ಸ್ಪಂದಿಸಿದ್ದೀರಿ. ಕ್ರಿಶ್ಚಿಯನ್ನರು ಎಂದಿಗೂ ಶಾಂತಿಪ್ರಿಯರು ಪ್ರೀತಿ, ಸಹಬಾಳ್ವೆ, ಹೊಂದಾಣಿಕೆಯಲ್ಲಿ ನಂಬುಗೆಯುಳ್ಳವರು. ಇವರಿಂದಲೇ ಸಾಹಿತ್ಯ ಹಾಗೂ ಸಿನೇಮಾಗಳಲ್ಲಿ ಕ್ರಿಶ್ಚಿಯನ್ ಬಾಂಧವರನ್ನು ನೋಯಿಸುವ ಪ್ರಯತ್ನಗಳು ಧಾರಾಳ ನಡೆದಿವೆ; ಧಾರಾಳ ನಡೆಯುತ್ತಾ ಇವೆ. ಕ್ರಿಶ್ಚಿಯನ್ನರಲ್ಲಿ ಪ್ರತಿಭಟಿಸುವ ಶಕ್ತಿ ಇದ್ದರೂ, ಕ್ಷಮಿಸುವ ಉದಾತ್ತ ಭಾವನೆಗಳೂ ಇವೆ ಎಂದು ಆ ಕೆಟ್ಟ ಪ್ರಯತ್ನಗಳನ್ನು ನಡೆಸುವವರಿಗೆ ಗೊತ್ತು.

ಹೀಗಿರುವಾಗ ನಿಮ್ಮಿಂದ ಪ್ರಮಾದವಶಾತ್ ನಡೆದ ತಪ್ಪನ್ನು ದೊಡ್ಡದು ಮಾಡಿ, ಪ್ರಚಾರ ನಡೆಸಿ, ರಂಪಾಟ ಎಬ್ಬಿಸುವ ಉದ್ದೇಶ ಕ್ರಿಶ್ಚಿಯನ್ನರಿಗೆ ಇಲ್ಲವೆಂಬುದು ಸ್ಪಷ್ಟ. ಆದರೂ ತಪ್ಪನ್ನು ತೋರಿಸಿಕೊಡುವುದು ಮಾನವನಿಗೆ ತಕ್ಕುದಾದ ಗುಣ. ಆದರಂತೆ ನಿಮ್ಮ ಪತ್ರಿಕೆಯಲ್ಲಿ ಬಂದ ಬರಹದ ಬಗ್ಗೆ ನೊಂದುಕೊಂಡ ಕ್ರಿಶ್ಚಿಯನ್ ಬಾಂಧವರಲ್ಲಿ ಕೆಲವರು ನಿಮ್ಮೊಡನೆ ಈ ಬಗ್ಗೆ ತಿಳಿಸಿದ್ದಾರೆ. ಉಳಿದವರು ಮೌನವಾಗಿ ಈ ಬಗ್ಗೆ ನೊಂದುಕೊಂಡಿದ್ದಾರೆ ಎಂಬುದೂ ನಿಜ.

ಈ ನೊಂದ ಬಾಂಧವರ ಬಗ್ಗೆ ಈಗಾಗಲೇ ನಿಮ್ಮ ತಪ್ಪೊಪ್ಪಿಗೆ ಎಂಬಂತಹ ಅಭಿಪ್ರಾಯ ನೀಡಿದ್ದೀರಿ. ತಪ್ಪಿನ ಬಗ್ಗೆ ವಿವರಣೆ ದೊರೆತಿದೆ. ಶಾಂತಿ ಪ್ರಿಯರಾದ ಕ್ರಿಶ್ಚಿಯನ್ ಬಾಂಧವರಿಗೂ ಸ್ವಲ್ಪ ಮಟ್ಟಿಗೆ ಮನಶ್ಶಾಂತಿ ದೊರೆತಿದೆ.

ಈ ಸಂದರ್ಭದ ನೆನಪಿಗೆಂಬಂತೆಯಾದರೂ ಮುಂದಕ್ಕೆ ಯಾವುದೇ ಧರ್ಮದ ನಂಬಿಕೆಯನ್ನು ಪ್ರಶ್ನಿಸುವಂತಹ ಅತಿರೇಕಕ್ಕೆ ಹೋಗಬೇಡಿ. ಅಂತಹ ಬರಹಗಳನ್ನು ದಯವಿಟ್ಟು ಪ್ರಕಟಿಸಬೇಡಿ.

ನೀವು ಆದರ್ಶಗಳ ಬೆನ್ನ ಹಿಂದೆ ಸವಾರಿ ಹೊರಟಿರಬಹುದು. ಆದರೆ ಇಂದಿನ ಸಮಾಜದಲ್ಲಿ ಆ ನಿಮ್ಮ ಆದರ್ಶಗಳನ್ನು ಪತ್ರಿಕೆ ಮೂಲಕ ಆಚರಣೆಗೆ ತರುವುದು ಅಷ್ಟೊಂದು ಸುಲಭವಾಗಲಾರದು ಎಂಬುದನ್ನು ಮನಗಾಣಿರಿ. ಮನುಷ್ಯನ ಮನಸ್ಸನ್ನು ನಿಶ್ಚಿತ ನಂಬಿಕೆಗಳ ಬಂಧನಕ್ಕೆ ಸಿಕ್ಕಿಸಬಾರದೆಂಬ ನಿಮ್ಮ ಆದರ್ಶ ಜಾರಿಗೆ ತರಲು ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಕಾಲ ಇನ್ನೂ ಪರಿಪಕ್ವವಾಗಿಲ್ಲ ಎಂಬುದನ್ನು ಗಮನಿಸಿ.

'ಮುಂಗಾರು' ಸಮಾಜದಲ್ಲಿ ತುಳಿಯಲ್ಪಟ್ಟವರ ಧ್ವನಿಯಾಗಿ ತನ್ನ ಹುಟ್ಟಿನಿಂದ ಕಾರ್ಯವೆಸಗಿದ ಬಗ್ಗೆ ಅಭಿಮಾನಪಟ್ಟಿದ್ದೇನೆ. ಇದು ಇನ್ನು ಮುಂದೆಯೂ ತುಳಿಯಲ್ಪಟ್ಟವರ ಆಶೋತ್ತರಗಳನ್ನು ನೆರವೇರಿಸುವಂತಾಗಲಿ. ಪ್ರಮಾದವಶಾತ್ ಆದದ್ದು ಆಗಿ ಹೋಗಿದೆ. ಕಾಲ ಮಿಂಚಿದೆ. ಮುಂದೆ ತನ್ನ ದಾರಿಯಲ್ಲಿ 'ಮುಂಗಾರು' ಎಡವಿ ಬೀಳದಿರಲಿ ಎಂದು ಆಶಿಸುತ್ತೇನೆ.

ಎಚ್. ಆರ್. ಆಳ್ವ ಸಾಂಗಾಳ

ಪ್ರೀತಿ, ಕ್ಷಮೆ, ಶಾಂತಿ ಮೂಲ ಮಂತ್ರವಾಗಲಿ

ಪ್ರಿಯರೆ,

ಧಾರ್ಮಿಕ ನಂಬಿಕೆಗಳ ವಿಷಯಗಳನ್ನು ಮೂಢನಂಬಿಕೆಗಳೆಂದೇ ತೀರ್ಮಾನಿಸುವ ಉದ್ದೇಶದಿಂದ ಡಿ. 28ರಂದು ಮತ್ತು ಜನವರಿ 4ರಂದು 'ವಾರದ ಮುಂಗಾರು'ವಿನಲ್ಲಿ ಪ್ರಕಟಗೊಂಡ 'ಪಾಠ'ಗಳನ್ನು ಬರೆದಂತೆ ಕಾಣುತ್ತದೆ.

ನಿಮ್ಮಂತಹ ವಿಚಾರವಂತರೇ ಸಂಪಾದಕರಾಗಿರುವ 'ಮುಂಗಾರು'ವಿನಲ್ಲಿ ಇಂತಹ ವಿಷಯ ಪ್ರಕಟಗೊಂಡಿದ್ದು ಆಶ್ಚರ್ಯವಾಯಿತಾದರೂ ನಂತರ ನಿಮ್ಮ ಉತ್ತರವನ್ನು ಓದಿದಾಗ "ಉತ್ತರಿಸಲು ಅಸಾಧ್ಯ" ಎಂಬಂತೆ ತೋರಿಸಲ್ಪಟ್ಟ ಪ್ರಶ್ನೆಗಳ ವಿಷಯಗಳ ಕುರಿತು ಇನ್ನೂ ಆಳವಾಗಿ ಆಲೋಚಿಸಿದರೆ ಉತ್ತರಗಳು ದೊರಕದಿರಲಾರವು ಎನಿಸಿತು.

ಎಲ್ಲಿ ನಂಬಿಕೆ ಇಲ್ಲವೋ ಅಲ್ಲಿ ಎಲ್ಲವೂ ಹಾಸ್ಯಾಸ್ಪದವಾಗಿ ತೋರುವುದಿಲ್ಲವೇ?

ನಾವು ಇತ್ತೀಚೆಗೆ ಕ್ರಿಸ್ತ ಜನನದ ಹಬ್ಬವನ್ನು ಆಚರಿಸಿದ್ದೇವೆ. 'ಅಂತರಾಷ್ಟ್ರೀಯ ಶಾಂತಿ ವರುಷದ' ಹೊಸ್ತಿಲನ್ನು ದಾಟಿರುತ್ತೇವೆ. ಈಗ ನಮ್ಮೆಲ್ಲರ ಲಕ್ಷ್ಯ ಈ ವರುಷದ ಸಂದೇಶಕ್ಕೆ ಸರಿಯಾಗಿ, ಆಶ್ರಯಹೀನರಿಗೆ, ಆಶ್ರಯ ನೀಡುವುದರ ಕಡೆಗೆ ಹರಿಯಬೇಕಾಗಿದೆ.

ಕ್ರಿಸ್ತರು ಪ್ರೀತಿ, ಕ್ಷಮೆ ಮತ್ತು ಶಾಂತಿಯ ಕುರಿತು ಉಪದೇಶವನ್ನಿತ್ತರು ಮಾತ್ರವಲ್ಲ. ಆ ಗುಣಗಳನ್ನು ಯಾವ ರೀತಿಯಲ್ಲಿ ಪಾಲಿಸಬೇಕೆಂದು ತಮ್ಮ ಜೀವನದಲ್ಲಿ ತೋರಿಸಿಕೊಟ್ಟರು. ಯೇಸುಕ್ರಿಸ್ತರ ಸಂದೇಶವನ್ನು ವ್ಯಕ್ತಿಗತ ಗೊಳಿಸಲು ಈ ಸಮಯವು ಬಹಳ ಯೋಗ್ಯವಾಗಿದೆ.

ಅದೇ ರೀತಿ ಮಾಡಿದ ತಪ್ಪುಗಳನ್ನು ಪುನಃ ಮಾಡದಂತೆ ನಿರ್ಧಾರ ಕೈಗೊಳ್ಳಲು ಹಾಗೂ ನಮ್ಮ ಶಕ್ತಿ-ಸಾಮರ್ಥ್ಯಗಳನ್ನು, ಧರ್ಮ ನಂಬಿಕೆಗಳನ್ನು ಗೇಲಿ ಮಾಡುವುದರ ಬದಲು ಅವುಗಳ ಪ್ರಕಾರ ನಡೆಯುವಂತೆ ಪ್ರೇರೇಪಣೆ ನೀಡುವುದು ಉಚಿತವಾಗಿದೆ. ಮುಂಗಾರು ಪತ್ರಿಕೆಗೆ ಸಂಬಂಧಪಟ್ಟವರ ಪ್ರತಿಭೆಯೂ ಇದಕ್ಕಾಗಿ ಮೀಸಲಾಗಲಿ ಎನ್ನುವುದು ನನ್ನ ಹಾರ್ದಿಕ ಪ್ರಾರ್ಥನೆ.

—ಸಿಸ್ಟರ್ ವೆರೋನಿಕಾ, ಎಂ.ಸಿ
ಮಂಗಳೂರು

ದೂರ ಸರಿದ ಧರ್ಮ ಮತ್ತು ವಿಜ್ಞಾನ

ಅವಶ್ಯಕತೆಗೇ ಮೂಲಕಾರಣವಾದರೂ ಮಾನವನ ಅವಶ್ಯಕತೆಯು ಹದ್ದು ಮೀರಿದಾಗ ಅನಂತವನ್ನು ಕೆದಕಿ ಅಲ್ಲಿದ್ದ ಎಲ್ಲವನ್ನೂ ಹಕ್ಕಿತನ್ನದಾಗಿಮಾಡಿಕೊಳ್ಳುವ ಹುಚ್ಚು ಸಾಹಸ ಪ್ರಾರಂಭವಾಯ್ತು-ಹಾಗೆ ಗಳಿಸಿದ ವಿಜ್ಞಾನದ ಗಳಿಕೆ ಮಾನವನ ಸುಖ ಸಾಧಿಸುವಲ್ಲಿ ಸೋತಿದೆ. ಅವನನ್ನು ಶಾಶ್ವತವಾಗಿ ಅಸ್ಥಿರ ಭೀತಿ ಆತಂಕಗಳಲ್ಲಿ ಉಳಿಯುವಂತೆ ಮಾಡಿದೆ. ಅದು ಮಾನವ ಕೋಟಿಯ ಹಿತ ಸಾಧಿಸುವ ಬದಲು ಕೆಲವೇ ಜನರ ಏಕಸ್ವಾಮ್ಯದ ಸುಲಿಗೆಯು ಸೊತ್ತಾಗಿ ಅದರಿಂದ ಜನಸಾಮಾನ್ಯರ ಶೋಷಣೆ ಕ್ರಮವಾಗಿ ನಡೆದು ಬಡವ ಬಲ್ಲಿದ ಹಳ್ಳಿ ನಗರಗಳ ಅಂತರ ಹೆಚ್ಚಿದೆ. ವಿಜ್ಞಾನ ಮಾನವನಿಗೆ ಹಿತಕಾರಿಯಾಗಿ ಅದರಿಂದಾದ ಸಂಶೋಧನೆಗಳು ಉದ್ದೇಶಿತ ಮೌಲ್ಯಗಳನ್ನು ಕಳೆದುಕೊಳ್ಳದಾರದು, ಅದರ ಫಲ ಎಲ್ಲರೂಪಡೆಯುವಂತಿರಬೇಕು. ಭಾರೀ ಪ್ರಮಾಣದಿಂದ ಅದರ ತಯಾರಿ ನಡೆದಾಗ ಅವುಗಳ ಗುಣಮಟ್ಟ ಒಳ್ಳೆಯದಾಗಿ ಬೆಲೆ ಇಳಿಯಬೇಕು. ಸಾಮಾನ್ಯನ ಕೈಗೆ ಎಟಕುವಂತಿರಬೇಕು. ನಾವು ಉಣ್ಣುವ ಅನ್ನ ಉಡುವ ಬಟ್ಟೆ ವಾಸಿಸುವ ಮನೆ ಕಲಿಯುವ ವಿದ್ಯೆ ನಮ್ಮ ಆರೋಗ್ಯ ಎಲ್ಲವೂ ಸುಧಾರಿಸಬೇಕು. ಆದರೆ ಈಗ ಏನಾಗಿದೆ? ವಸ್ತುಗಳ ಗುಣಮಟ್ಟ ಒಳ್ಳೆಯದಾಗಿಲ್ಲ. ಬೆಲೆ ಮಾತ್ರ ದುಬಾರಿಯಾಗಿದೆ. ಎಲ್ಲಾ ರಂಗದಲ್ಲಿ ವ್ಯಾಪಾರಿ ನೀತಿ ನುಸುಳಿ ವಿಜ್ಞಾನದ ಮಹಾ ಸಾಗರದಿಂದ ವಿಷವನ್ನು ಕಡೆದು ತೆಗೆದಿದ್ದೇವೆ. ಮಾನವ ಜನಾಂಗವನ್ನೇ ಸಮೂಲ ನಾಶಗೊಳಿಸಬಲ್ಲ ಮಾರಕಾಸ್ತ್ರಗಳನ್ನು ತಯಾರಿಸಿದ್ದೇವೆ. ಅವುಗಳ ಭಾರೀ ಸಂಗ್ರಹದಿಂದ ಯಾವ ಕ್ಷಣದಲ್ಲೂ ಅದು ಸ್ಫೋಟಗೊಂಡು ಸರ್ವನಾಶವಾಗಲು ಸಾಧ್ಯ.

ನಮ್ಮ ನಿತ್ಯ ಬಳಕೆಯ ವಿದ್ಯುತ್ ಪ್ಲಾಸ್ಟಿಕ್. ನಾವು ಕೇಳುವ ರೇಡಿಯೋ ಫೋನು ಓದುವ ಪತ್ರಿಕೆ ಬರೆಯುವ ಕಾಗದ, ಪೆನ್ನು, ಶಾಯಿ,ಸಕ್ಕರೆ,ಸಾಬೂನು ಮೊದಲಾದ ಸಾಮಾನ್ಯ ವಸ್ತುಗಳೂ ವಿಜ್ಞಾನದ ಕೊಡುಗೆಯೇ-ಆಧುನಿಕ ವಿಜ್ಞಾನದಿಂದ ಭಾರೀ ಪ್ರಮಾಣದ ಸಂಶೋಧನೆಗಳು ನಡೆದು ಹಲವಾರು ಸಮಸ್ಯೆಗಳು ಬಗೆಹರಿದಿರುತ್ತವೆಂಬುದು ನಿರ್ವಿವಾದವಾದರೂ ಅದು ಒಳ್ಳೆಯದನ್ನೇ ಮಾಡಿಲ್ಲ. ಅದರ ಫಲವಾಗಿ ಬೆಳೆದು ಬಂದ ಉದ್ಯಮ ಶೋಷಣೆಗೆ ಮೂಲವಾಗಿ ಬಡವನ ದುಡಿಮೆಯನ್ನು ದೋಚಲು ಇಂಬುಮಾಡಿ ಕೊಟ್ಟಿದೆ. ರಾಜಕಾರಣಿಯ ಜತೆ ಶಾಮೀಲಾಗಿ ವ್ಯಾಪಾರಿ ಇದರ ಫಲವನ್ನು ಉಂಡು ಕೊಬ್ಬಿದ್ದಾನೆ. ವಿಜ್ಞಾನದ ಸಂಶೋಧನೆಗಳು ಮಾನವನ ಆವಶ್ಯಕತೆ ಪೂರೈಸುವಂತೆ ಇಂದು ರೂಪಿಸಿಲ್ಲ. ಅದು ಜನಸಾಮಾನ್ಯನಿಗೆ ಮುಟ್ಟುವಲ್ಲಿ ಎಡವಿಬಿದ್ದಿದೆ. ಕೆಲವೇ ಜನರ ಶೋಷಣೆಯ ಮಾಧ್ಯಮವಾಗಿ ಹಣ ಕೂಡಿಸುವಂತೆ ರೂಪಿಸಲ್ಪಟ್ಟಿದೆ. ಭೀತಿ ಆತಂಕ ಹಬ್ಬಿಸಿದೆ. ರಾಷ್ಟ್ರ ರಾಷ್ಟ್ರಗಳಲ್ಲಿ ಸಂಶಯದ ವಾತಾವರಣ ನಿರ್ಮಾಣವಾಗಿ ಶಸ್ತ್ರಾಸ್ತ್ರಗಳನ್ನು ಪೈಪೋಟಿಯಿಂದ ಕೂಡಿ ಹಾಕುತ್ತಿವೆ. ಇದಕ್ಕಾಗಿ ದಿನವೊಂದರ ಕೋಟ್ಯಾಂತರ ಡಾಲರುಗಳು ವ್ಯಯವಾಗುತ್ತಿವೆ. ಹೀಗೆ ಸಂಗ್ರಹವಾದ ಮಾರಕಾಸ್ತ್ರಗಳು ಯಾವುದೇ ಕ್ಷಣದಲ್ಲಿ ಸ್ಫೋಟಗೊಂಡು ಅದರ ಕಿಡಿ ಜಗತ್ತನ್ನೇ ಸುಟ್ಟೀತು.

ಶಸ್ತ್ರಾಗಾರದಲ್ಲಿ ದಾಸ್ತಾನಿದ್ದ ಅಸ್ತ್ರಗಳು ಆಕಸ್ಮಾತ್ ಸ್ಫೋಟ ಗೊಂಡರೆ ಸಮಸ್ಯೆ ಹದ್ದುಮೀರಿ ಜಗತ್ತು ಖಂಡಿತವಾಗಿಯೂ ನಾಶವಾಗಿ ಬಿಡಬಹುದು. ಇದಕ್ಕೇನೂ ಭಾರೀ ಅವಾಂತರ ಸಂಭವಿಸಬೇಕಿಲ್ಲ. ಕ್ಷುಲ್ಲಕ ಕಾರಣಗಳೂ ಸಾಕು. ಅದರ ಉಸ್ತುವಾರಿಯಲ್ಲಿರುವವನ ಕ್ಷಣಿಕ ಉದ್ವೇಗ-ಅದರಲ್ಲಿ ಅಳವಡಿಸಿದ ಕಂಪ್ಯೂಟರಿನ ಸಣ್ಣ ತಪ್ಪು-ಯಾ-ಅದರೊಳಗೆ ಆಕಸ್ಮಾತ್ ಸೇರಿಕೊಳ್ಳಬಹುದಾದ ಹಲ್ಲಿ-ಯಾ ಜಿರಳೆ-ಯಾ-ನೊಣವೂ ಶತ್ರು ಸೈನ್ಯದ ಆಕ್ರಮಣವನ್ನು ಹುಸಿಯಾಗಿ ತೋರಿಸಿ ವಿರೋಧಿಗಳ ಮೇಲೆ ಧುಮುಕುವಂತೆ ಮಾಡಲು ಸಾಧ್ಯ-ಇದಕ್ಕೊಂದು ಉದಾಹರಣೆ:-ರಾಡಾರ್ ಮತ್ತು ಕಂಪ್ಯೂಟರಿನಿಂದ ಸುಸಜ್ಜಿತವಾದ ಅಮೆರಿಕಾ ದೇಶದ ಕ್ಷಿಪಣಿ ಮತ್ತು ವಿಮಾನದಳದ ಒಂದು ವಿಭಾಗದಲ್ಲಿ ಅಳವಡಿಸಿದ ಕಾವಲು ಯಂತ್ರದಲ್ಲಿ "ರಷ್ಯದವರು ದೇಶದ ಮೇಲೆ ಧಾಳಿ ಮಾಡಲು ಧಾವಿಸಿ ಬರುತ್ತಿದೆ" ಎಂದು ತಪ್ಪಾಗಿ ತೋರಿಸಿತು. ಆ ಕೂಡಲೇ ಅಮೆರಿಕಾ ದೇಶದ ಸಕಲ ವಿಮಾನ ಬಲ ಆಕಾಶಕ್ಕೆ ನೆಗೆಯಿತು. ಪುಣ್ಯವಶಾತ್ ಅದರ ತಪ್ಪು ತಿಳಿಯಲು ಹೆಚ್ಚು ಸಮಯ ಬೇಕಾಗದೆ ಅದು ತೆಪ್ಪಗೆ ಹಿಂದಿರುಗಿತು-ಸಮಾನ ಬಲದ ಇನ್ನೊಂದು ರಾಷ್ಟ್ರವೂ ಏಕಾಗ್ರತೆಯಿಂದ ಹೊಂಚು ಹಾಕಿ ಇದನ್ನು ಗಮನಿಸುತ್ತಿರುವುದು ಸ್ಪಷ್ಟ. ಹಾಗೇನಾದರೂ ಪ್ರಮಾದ ನಡೆದು ಹೋಗಿದ್ದರೆ ಯಾರ ಇಚ್ಛೆಗೂ ಮೀರಿದಘಟನೆನಡೆದುಹೋಗುವ ಸಂದರ್ಭವಿತ್ತು. ಈ ತುಣುಕು ಮಿಲಿಟರಿ ರಹಸ್ಯದ ಸುದ್ದಿ ಅದೆಂತೋ ಬಹಿರಂಗವಾದುದನ್ನು ಮುಂಬಯಿಯ "ಸಯನ್ಸ್ ಟುಡೇ" 1980 ರ ಆಗೋಸ್ತು ಸಂಚಿಕೆಯಲ್ಲಿ ಪ್ರಕಟಿಸಿದೆ.

ಇದಕ್ಕೆಲ್ಲಾ ಧರ್ಮದ ವರ್ಚಸ್ಸಿಲ್ಲದೆ ಸತತವಾಗಿ ಬೆಳೆಯುತ್ತಿರುವ ವಿಜ್ಞಾನ ಕಾರಣವಾದರೆ ಧರ್ಮವೂ ಆ ಮಟ್ಟಿಗೆ ಕುರುಡಾಗಿದೆ. ಧರ್ಮ ಮತ್ತು ವಿಜ್ಞಾನ ಒಂದನ್ನೊಂದು ಕೂಡಿ ಮಾನವ ಕಲ್ಯಾಣ ಸಾಧಿಸಬೇಕಾಗಿದ್ದರೂ ಅದು ಒಂದಕ್ಕೊಂದು ವಿರೋಧವಾಗಿ ದೂರ ದೂರ ಸರಿಯುತ್ತಿರುವುದು ನಮ್ಮೆಲ್ಲರ ದೌರ್ಭಾಗ್ಯ-ಧರ್ಮ ಒಂದೇ ಅದು ಮಾನವ ಧರ್ಮ ವಿಜ್ಞಾನದ ಕೊಡುಗೆ ಅದರಲ್ಲಿ ತುಂಬಬೇಕು. ಮಾನವ ವಿಜ್ಞಾನದ ದಾಸವಾಗಬಾರದು. ಅದು ಅದರ ರಚಯಿತನನ್ನು ಸಂಕಷ್ಟಕ್ಕೀಡು ಮಾಡಬಾರದು. ಧರ್ಮ ಬೋಧಿಸುವ

ಓ. ಯಸ್. ಗೋವಿಂದಯ್ಯ

ದಕ್ಕಲ್ಲ. ಆಚರಿಸುವುದಕ್ಕೆ ಅದು ಕಾನೂನು ಅಲ್ಲ-ಕಾನೂನು ಬೋಧಿಸಲ್ಪಟ್ಟು ಆಚರಿಸಲ್ಪಡುವಂತೆ ಒತ್ತಡ ಹೇರುತ್ತದೆ. ತಪ್ಪಿದಾಗ ಶಿಕ್ಷೆ ವಿಧಿಸುತ್ತದೆ. ಧರ್ಮದ ಅರ್ಥ ವ್ಯಾಪ್ತಿ ತಿಳಿಯದ,ತಿಳಿಯಲಾರದ ಮೂಢನಿಗೆ ಅದನ್ನು ಆಚರಿಸುವಂತೆ ಮಾಡುವಲ್ಲಿ ಒತ್ತಡಬೇಕು. ಸಮಾಜದ ಸ್ವಾಸ್ಥ್ಯ ರಕ್ಷಣೆಗೆ ಇದೆಲ್ಲಾ ಅನಿವಾರ್ಯ-ಆದರೆ ಅದೇ ಸರ್ವಸ್ವವಲ್ಲ. ಇಂದು ಧರ್ಮ ಮೂಢನಂಬಿಕೆಯಲ್ಲಿ ಅದರ ಅವಸಾನ ಕಂಡರೆ ವಿಧಿಸಿದ ಕಾನೂನಿನಿಂದ ತಪ್ಪಿಸಿ ಕೊಳ್ಳುವ ಹವಣಿಕೆ ರೂಢಿಯಾಗಿದೆ. ಅದೇ ಬದುಕುವದಾರಿಯಾಗಿದೆ. ಬುದ್ಧಿವಂತನ ಲಕ್ಷಣವಾಗಿದೆ. ಮಾನವನಲ್ಲಿ ಸರಿಯಾದ ಧರ್ಮದ ಪ್ರಜ್ಞೆಯಿದ್ದಲ್ಲಿ ಕಾನೂನಿನ ಬಿಗಿ ಹಿಡಿತವೇ ಬೇಕಿಲ್ಲ. ಧರ್ಮವನ್ನುಳಿಸಲು ಸತ್ಯಧರ್ಮ, ನ್ಯಾಯ, ತ್ಯಾಗ, ಅಹಿಂಸೆ ಬೇಕು. ಸಮಾಜ ಸ್ವಾಸ್ಥ್ಯಕ್ಕೆ ಅದನ್ನು ಪರಿಪಾಲಿಸಬೇಕು. ಕಾನೂನಿನ ಒತ್ತಡ ಅದನ್ನು ಸಾಧಿಸಲಾರದೆಂಬುದು ಅದನ್ನು ತಪ್ಪಿಸಿ ತಪ್ಪಿಸಿ ಬದುಕಲು ಪ್ರಯತ್ನ ನಡೆಯುವ ಖದೀಮತನದಿಂದ ನಾವು ತಿಳಿಯಬಹುದು. ಬದುಕಿನಲ್ಲಿ ಏರುಪೇರು ಸರ್ವೇ ಸಾಮಾನ್ಯವಾದರೂ ಅದು ವಿಜೃಂಭಿಸಿ ಅದರಿಂದ ಸಮಾಜ ಶಾಪಗ್ರಸ್ತವಾಗಬಾರದು-ಸಮಾಜ ಪದ್ಧತಿ ರೂಪಿಸಲ್ಪಟ್ಟಿದ್ದು ಸರ್ವರ ಹಿತಸಾಧನೆಗೆ-ಅದರ ಸದಸ್ಯರ ನೆಮ್ಮದಿಯ ಬದುಕಿಗೆ. ಆದರೆ ಇಂದು ಅದು ಬೆರಳೆಣಿಕೆಯ ಕೆಲವೇ ಜನರ ಹಿತ ಸಾಧಿಸುವಲ್ಲಿ ಮುಖ್ಯವಾಗಿರುತ್ತದೆ.

ನಮ್ಮಲ್ಲಿ ಯಾವುದೇ ವಿಚಾರ ಅದು ಹಚ್ಚಿಕೊಂಡ ಉದ್ದೇಶಕ್ಕಾಗಿ ಬಳಕೆಯಾಗುವುದಿಲ್ಲ. ಅದರ ಮೂಲೋದ್ದೇಶ ಅಲ್ಲೇ ಉಳಿದು ಅದು ಎಲ್ಲೆಲ್ಲಿಗೋ ಸಾಗುತ್ತಿದೆ. ಧಾರ್ಮಿಕ ಸಂಸ್ಥೆಗಳು ಶೋಷಣೆಯ ಮಾಧ್ಯಮಗಳಾದವು. ದೇವರು, ಪೂಜೆ, ಪುರಸ್ಕಾರ, ವಿವಾಹ ಪದ್ಧತಿಯೇ ಮೊದಲಾದ ಸಂಪ್ರದಾಯಗಳು ಆಡಂಬರದ ರೂಪ ಧರಿಸಿ ಅವುಗಳ ಉದ್ದೇಶಿತ ಮೌಲ್ಯ ಕಡೆಗಣಿಸಲ್ಪಟ್ಟಿತು. ವಸ್ತುನಿಷ್ಠ ಸಮಾಜ ಪದ್ಧತಿ ಸುಧಾರಣೆಯ ಹೆಸರಲ್ಲಿ ಕಂಟಕಪ್ರಾಯವಾಯ್ತು. ರಾಜಕೀಯವೆಂಬುದು ಪುಢಾರಿತನ, ಮೋಸ, ವಂಚನೆಯ ಡೊಂಬರಾಟವಾಯ್ತು. ಆಡಳಿತೆಯ ವಿಧಾನದಲ್ಲಿ ಅನಿವಾರ್ಯವಾಗಿ ರೂಪಿಸಲ್ಪಟ್ಟ ಹುದ್ದೆಗಳು ಗೌರವ ಕಳೆದುಕೊಂಡ ಮೊದಲ ಕಾಲದ ನಂತರ ಹುಟ್ಟಿದ ಜಾತಿಯೆಂಬುದಕ್ಕೆ ಕಸುಬೇ ಆಧಾರವಾಗಿತ್ತು. ಕಸುಬು ಒಂದು ಮೇಲಲ್ಲ ಒಂದು ಕೀಳಲ್ಲ. ನಂತರದ ದಿನಗಳಲ್ಲಿ ಕೀಳು ಮೇಲು ಎಂಬುದನ್ನುಂಟುಮಾಡಿ ಮಾನವೀಯತೆಯ ಮೌಲ್ಯವನ್ನು ಕಡೆಗಣಿಸುವ ಅವಿವೇಕತನ ಹಚ್ಚಿಕೊಂಡಿತು. ಜಾತಿ ಜಾತಿಯೊಳಗಿನ ದ್ವೇಷ ರಾಷ್ಟ್ರ ರಾಷ್ಟ್ರಗಳಲ್ಲಿ ಬೇರೂರಿ ಅಲ್ಲಿ ಅದು ತತ್ವಗಳೆನ್ನಿಸಿಕೊಂಡು ಸಾಮಾಜಿಕ ವ್ಯವಸ್ಥೆಗೆಂದು ರೂಪಿಸಲ್ಪಟ್ಟ ಜಾತಿ (ವರ್ಣ) ಪದ್ಧತಿ ಮಾನವ ಧರ್ಮವನ್ನು ನಾಶ ಮಾಡಿತು. ಒಂದನ್ನೊಂದು ಸಂಶಯದ ದೃಷ್ಟಿಯಿಂದ ನೋಡಿ ಪರಸ್ಪರರಲ್ಲಿ ನಂಬುಗೆ ಕಳೆದುಕೊಂಡುದಲ್ಲದೆ ಭೀತಿಯನ್ನು ಹುಟ್ಟಿಸಿಕೊಂಡು ರಕ್ಷಣೆಯ ಹೆಸರಲ್ಲಿ ಭಾರೀ ಪ್ರಮಾಣದ ಶಸ್ತ್ರಾಸ್ತ್ರಗಳ ತಯಾರಿ ನಡೆಯಿತು. ಹಾಗೆ ಹುಟ್ಟಿಸಿಕೊಂಡ ಸಮಸ್ಯೆಗಳು ಈಗ ಪರಿಹಾರವಿಲ್ಲ[illegible] ಮಾನವ ಜನಾಂಗವನ್ನೇ ಸಂಕಷ್ಟ[illegible] ಮಾಡಿದೆ. ಅಂತೆಯೇ ಆವಶ್ಯಕತೆ[illegible] ಸಂಶೋಧನೆಗಳು ಜನಹಿತಕಾರಿಯಾಗಿಲ್ಲ. ವಿಜ್ಞಾನ ಮತ್ತು ಧರ್ಮದ ಮೂಲೋದ್ದೇಶ ತಪ್ಪಿ ಹೋಗಿ ಅವುಗಳು ಮಾನವೀಯತೆಗೆ ಮಾರಕವಾಗಿವೆ. ಮಾನವನ ಧರ್ಮ ಸಂಸ್ಕೃತಿ ಮತ್ತು ಆದರ್ಶ ಕ್ಷಣಿಕ ಸುಖ ಆಡಂಬರದ ಹುಸಿ ಜೀವನ ಪುಢಾರಿತನ, ಮೋಸ ವಂಚನೆ, ಆಲಸ್ಯಗಳತ್ತ ಸಾಗಿದರೆ, ವಿಜ್ಞಾನ ಭೀತಿ ಆತಂಕಗಳನ್ನು ಹುಟ್ಟಿಸಿ ಸುಲಿಗೆಗೆ ಒಂದು ಸಾಧನವಾಗಿ ಮಾನವನನ್ನು ಕಟುಕನನ್ನಾಗಿ ಮಾಡಿದೆ. ವಿಜ್ಞಾನ ರಹಿತ ಧರ್ಮ, ಧರ್ಮ ರಹಿತ ವಿಜ್ಞಾನ ಒಂದು ಕುರುಡಾದರೆ ಒಂದು ಹೆಳವ-ಧರ್ಮ ಅಪಭ್ರಂಶದಿಂದಷ್ಟೇ ಉಳಿದುಕೊಂಡು ಅದರ ಪೆಡಂಭೂತ ಜಗತ್ತಿನ ಸರ್ವನಾಶಕ್ಕೆ ಕ್ಷಣಗಳನ್ನು ಎಣಿಸುತ್ತದೆ. ಈ ಸಂದರ್ಭ ವೈದ್ಯಕೀಯ ಶಾಸ್ತ್ರಕ್ಕೆ ಮೀಸಲಿಟ್ಟ ಚರಕ ಸಂಹಿತೆಯ ಒಂದು ಶ್ಲೋಕ ಆ ಕಾಲಕ್ಕೂ, ಈ ಕಾಲಕ್ಕೂ, ಯಾವ ಕಾಲಕ್ಕೂ ಅತ್ಯಂತ ಸಮಂಜಸವಾಗಿರುತ್ತದೆ.

ಅದು ಹೀಗಿದೆ:—

"ಶಸ್ತ್ರಂ ಶಾಸ್ತ್ರಾಣಿ ಸಲಿಲಂ"
ಗುಣ ದೋಷ ಪ್ರವೃತ್ತಯೇ॥
ಪಾತ್ರಾ ಪ್ರೇಕ್ಷಿಣ್ಯತ: ಪ್ರಾಜ್ಞಾ॥
ಚಿಕಿತ್ಸಾರ್ಥಂ ವಿಶೋಧ ಯೇತ್॥

ಶಸ್ತ್ರವನ್ನಾಗಲೀ ಶಾಸ್ತ್ರವನ್ನಾಗಲಿನಾವು ದೂರುವಂತಿಲ್ಲ.ಅದು ಅದನ್ನು ಹಿಡಿದವನ ಮನೋವೃತ್ತಿಗೆ ಅನುಗುಣವಾಗಿ ಅದರ ಕ್ರಿಯೆಯಿರುತ್ತದೆ. ಪಾತ್ರೆಯಲ್ಲಿ ತುಂಬಿಟ್ಟ ನೀರೂ ಆ ಪಾತ್ರೆಯ ಸ್ವಚ್ಛತೆ ಮತ್ತು ಹೊಲಸನ್ನು ಅವಲಂಬಿಸಿ ಶುದ್ಧ-ಯಾ-ಅಶುದ್ಧವೆಂದು ತಿಳಿಯಬೇಕು.

ಉ. ಕನಡದ ಪಮುಖ ಉದ್ಯಮ ಹಂಚಿನ ಕಾರ್ಖಾನೆ

ತೀಯ ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿ ಕೃಷ್ಣಲಾಲ್ ಶರ್ಮಾ ಆಗ್ರಹಿಸಿದ್ದಾರೆ.

ಮುಗ್ಧ ಜನರ ಕೊಲೆ ಹಾಗೂ ಭಯೋತ್ಪಾದಕ ಚಟುವಟಿಕೆಗಳನ್ನು ಹತ್ತಿಕ್ಕುವಲ್ಲಿ ವಿಫಲವಾಗಿರುವ ಈ ಜಿಲ್ಲೆಗಳ ಪೊಲೀಸ್ ಮತ್ತು ನಾಗರಿಕ ಅಧಿಕಾರಿಗಳನ್ನು ಸಂಪೂರ್ಣವಾಗಿ ಬದಲಾಯಿಸುವಂತೆಯೂ ಅವರು ಒತ್ತಾಯಿಸಿದ್ದಾರೆ.

ಚಂಡೀಗಢ ಬಿಜೆಪಿ ತಾತ್ಕಾಲಿಕ ಸಮಿತಿ ಸಭೆ ಹಾಗೂ ನಂತರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು 'ಪಂಜಾಬಿನ ಪರಿಸ್ಥಿತಿ ಈಗ ನಿರ್ಣಾಯಕ ಹಂತ ತಲು

...ಮಸ್ಯೆಗಳು

...ಯರ ಸಂಖ್ಯೆಯನ್ನು ಕಡಿಮೆಗೊಳಿಸಬಹು...ದೆಂದುಅಧ್ಯಯನ ತಿಳಿಸಿದೆ.

ಕಿರಿವಯಸ್ಸಿನಲ್ಲಿ ಗರ್ಭ ಧರಿಸಿದ ಮಹಿಳೆ ...ಉತ್ತಮ ಆರೋಗ್ಯ ರಕ್ಷಣೆ ವಿಧಾನ ಪಾಲಿ...ಸಿದರೆ, ಆಗ ಅವರ ಮರಣ ಸಂಖ್ಯೆ ...ಒಂದುಲಕ್ಷಕ್ಕೆ 500

ಆರೋಗ್ಯವನ್ನು ಉತ್ತಮವಾಗಿರಿಸಿಕೊ...ಳ್ಳದಿದ್ದರೆ ಆಗ ಮರಣದ ಸಂಖ್ಯೆ ಒಂದು ಲಕ್ಷಕ್ಕೆ 4,300 ಎಂದು.22,000 ನೈಜೀರಿಯ ಮಹಿಳೆಯರನ್ನು ಅಧ್ಯಯಿಸಿದ ವರದಿ

ಲಾದ ಭೂ ಸ್ವಾಧೀನಾಧಿಕಾರಿಗಳು ಹಾಗೂ ...ತಿಳಿಸಲಾಗಿದೆ.

ಈ ಭೂಮಿಯ ಸ್ವಾಧೀನ ಕೆಲಸ ನಿ... ಸದರಿ ಉದ್ದೇಶದಿಂದ ಕೆಲಸ ಮಾಡುವಲ್ಲಿ ... ಸೋಲೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡು... ಜಿಲ್ಲಾಧಿಕಾರಿಯವರಿಂದ (ಅಂದರೆ, ಭೂ... ಭೂ ಸ್ವಾಧೀನ ಕಾಯಿದೆಯ ಕಲಂ 24 ನಿಬ... ಅಂತಿಮವಾಗಿ ಸ್ವಾಧೀನಪಡಿಸಿಕೊಳ್ಳಲಾಗುವ...

ಸ್ವಾಧೀನ ಪಡಿಸಿಕೊಳ್ಳಲಿರುವ... ಇವರ ಕಚೇರಿಯಲ್ಲಿ ಪರಿಶೀಲನೆಗಾಗಿ ಇಡಲಾ...

ಜಿಲ್ಲೆ: ದಕ್ಷಿಣ ಕನ್ನಡ

ಕ್ರಮ ಸಂಖ್ಯೆ	ಖಾತೆದಾರರ ಅನುಭವದಾರರ ಹಿತಾಸಕ್ತಿ ಉಳ್ಳವರ ಹೆಸರು
1	2
1.	ಕೆ. ನಾರಾಯಣ ಕುಡ್ವ (ಮೃತ) ವಾರೀಸುದಾರರು:
	1 ಲಕ್ಷ್ಮೀಬಾಯಿ, ನಾರಾಯಣ ಕುಡ್ವರ ಹೆಂಡ್ತಿ
	2 ಶಿವರಾಮ ಕುಡ್ವ
	3 ಅಣ್ಣಪ್ಪ ಕುಡ್ವ
	4 ಪಾಂಡುರಂಗ ಕುಡ್ವ
	5 ಪುಂಡಲೀಕ ಕುಡ್ವ

ಮತ್ತು ತಮಿಳು ಭಯೋತ್ಪಾ... ನಡೆಯುತ್ತಿರುವ ಘರ್ಷಣೆಯ... ಗೊಳಿಸಬೇಕೆಂದು ಅವರು ಮ... ದ್ದಾರೆ.

ಜಗಮೋಹನ್ ಅರುಣ್‌ನೆಹ್ರೂ ಮುಫ್ತಿ ಮಾತು...

ಶ್ರೀನಗರ, ಮೇ 27-... ದ್ಯಮಗಳಿಗೆ ಸಂಬಂಧಿಸಿದ ... ವೃದ್ಧಿ ಸಮಸ್ಯೆಗಳನ್ನು ರಾಜ್ಯ... ಮೋಹನ್ ಜೊತೆ ಕೇಂದ್ರ ... ದ್ಯಮ ಸಚಿವ ಮುಫ್ತಿ ... ಸೈಯದ್ ಮತ್ತು ಆಂತರಿ... ಸಚಿವ ಅರುಣ್ ನೆಹ್ರೂ ಚ...

ರಾಜ್ಯದಲ್ಲಿ ಪ್ರವಾಸೋ... ಉತ್ತಮ ಪಡಿಸಲು ಅನೇ... ಗಳನ್ನು ಮುಫ್ತಿ ಮತ್ತು ... ನೆಹ್ರೂ ನೀಡಿದರೆಂದು ಅಧಿ... ತಿಳಿಸಿದೆ.

ಸಮಗ್ರ ಪ್ರವಾಸವನ್ನು ... ಸಲು ಭಾರತೀಯ ವಿಮಾ...

ಕಾದಿರುವ ಕೋಲಾಹಲ-1

ಹಿಂದುಳಿದವರ ಮುನ್ನಡೆಗೆ ತಡೆಗೋಡೆ

ಇನ್ನೇನು ಅಂತಿಮ ಘಟ್ಟದಲ್ಲಿರುವ ವೆಂಕಟಸ್ವಾಮಿ ಆಯೋಗದ ವರದಿ ಕರ್ನಾಟಕದ ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಕೋಲಾಹಲವನ್ನೆಬ್ಬಿಸುವ ಸೂಚನೆಗಳಿವೆ.

ರಾಜ್ಯದಲ್ಲಿ ಹಿಂದುಳಿದ ವರ್ಗಗಳನ್ನು ಗುರುತಿಸಿ ಅವರ ಉತ್ಕರ್ಷಕ್ಕೆ ಸಲಹೆ-ಸೂಚನೆಗಳನ್ನೀಯಲು ಮೂರು ವರ್ಷಗಳ ಹಿಂದೆ ರಚಿತವಾದ ಈ ಆಯೋಗದ ವರದಿ ವಿಧ್ಯುಕ್ತವಾಗಿ ಇನ್ನೂ ಸರಕಾರದ ಕೈ ಸೇರಿಲ್ಲ. ಆದರೂ ಈ ಆಯೋಗ ಸಿದ್ಧಪಡಿಸಿದೆಯೆನ್ನಲಾದ ವರದಿಯ ಕೆಲವು ಮುಖ್ಯಾಂಶಗಳು ಕಳೆದ ತಿಂಗಳು ಬೆಂಗಳೂರಿನ ದಿನಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದುವು.

ಪ್ರಕಟವಾದ ಕೆಲವು ಶಿಫಾರಸುಗಳು ನಿಜವೆಂದಾದರೆ, ಈ ವರದಿ ರಾಜ್ಯದಲ್ಲಿ ರಾಜಕೀಯ ವಾತಾವರಣವನ್ನು ಕದಡುವುದರಲ್ಲಿ ಸಂದೇಹವಿಲ್ಲ. ಹಾವನೂರು ವರದಿಯಲ್ಲಿ ಹಿಂದುಳಿದ ವರ್ಗಗಳ ಸಾಲಿಗೆ ಸೇರಿಸಲಾದ ಒಕ್ಕಲಿಗರು, ಉಪ್ಪಾರರು ಮತ್ತು ಕೆಲವು ಜಾತಿಗಳನ್ನು ವೆಂಕಟಸ್ವಾಮಿ ವರದಿ ಮುಂದುವರಿದ ಜಾತಿಗಳ ಪಟ್ಟಿಗೆ ಸೇರಿಸಿದೆಯೆಂಬುದು ಈಗಾಗಲೇ ಈ ವರ್ಗಗಳಲ್ಲಿ ಅಸಮಾಧಾನದ ಹೊಗೆಯನ್ನೆಬ್ಬಿಸಿದೆ. ಈವರ್ಗಗಳಸಭೆ ಸಮಾರಂಭಗಳಲ್ಲಿ ತಮ್ಮ ಹಿತಕ್ಕೆ ಆತಂಕವನ್ನೊಡ್ಡಬಲ್ಲ ವೆಂಕಟಸ್ವಾಮಿ ಆಯೋಗದ ವರದಿಯ ಬಗ್ಗೆ ಕಳವಳ ವ್ಯಕ್ತವಾಗತೊಡಗಿದೆ.

ವೆಂಕಟಸ್ವಾಮಿ ಆಯೋಗ ಅಂತಿಮವಾಗಿ ಸಲ್ಲಿಸುವ ವರದಿಯಲ್ಲಿ, ಇಂತಹ ಶಿಫಾರಸು ಇರುವುದು ನಿಜವೆಂದಾದರೆ ಈಗಿರುವ ಅಸಮಾಧಾನದ ಹೊಗೆ ದಳ್ಳುರಿಯಾಗುವುದರಲ್ಲಿ ಸಂದೇಹವಿಲ್ಲ.

ಇದರ ಮುನ್ಸೂಚನೆ ಲೋಕೋಪಯೋಗಿ ಸಚಿವ ಎಚ್. ಡಿ. ದೇವೇಗೌಡರು ಶನಿವಾರ ಬೆಂಗಳೂರಿನಲ್ಲಿ ಮಾಡಿದ ಭಾಷಣದಲ್ಲಿ ಧಾರಾಳವಾಗಿ ವ್ಯಕ್ತವಾಗಿದೆ. ಅವರು ಉಪ್ಪಾರ ಜನಾಂಗದ ಸಮಾವೇಶವೊಂದರಲ್ಲಿ ಮಾತನಾಡುತ್ತಿದ್ದರು. ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಬಹಳ ಹಿಂದುಳಿದಿರುವ ಈ ದುರ್ಬಲ ಜನಾಂಗವನ್ನು ಮುಂದುವರಿದ ವರ್ಗಕ್ಕೆ ಸೇರಿಸಬೇಕೆಂದು ವೆಂಕಟಸ್ವಾಮಿ ಆಯೋಗ ಶಿಫಾರಸು ಮಾಡಿದೆಯೆಂಬ ಸುದ್ದಿ ಉಪ್ಪಾರರ ಕಳವಳದ ಕೇಂದ್ರಬಿಂದುವಾಗಿತ್ತು. ಸಾಮಾಜಿಕ ಸ್ಥಿತಿ-ಗತಿಯಲ್ಲಿ

ವಡ್ಡರ್ಸೆ ರಘುರಾಮ ಶೆಟ್ಟಿ

ಹಾಗೂ ಮುನ್ನಡೆಯ ಬೇಕೆಂಬ ಬಯಕೆಯಲ್ಲಿ ಉಪ್ಪಾರರಿಗೆ ಹತ್ತಿರದ ಬಂಧುವಾದ ದೇವೇಗೌಡರು ಅವರ ಕಳವಳಕ್ಕೆ ಬಹಳ ಉದಾತ್ತವೆನ್ನಬಹುದಾದ ರೀತಿಯಲ್ಲಿ ಸ್ಪಂದಿಸಿದ್ದಾರೆ.

ವೆಂಕಟಸ್ವಾಮಿ ಆಯೋಗದ ವರದಿಯಾಗಲಿ ಅಥವಾ ಸರಕಾರದ ಇನ್ನಾವುದೇ ಕ್ರಮವಾಗಲೀ–ಹಾವನೂರು ಆಯೋಗದ ವರದಿಯ ಮೂಲ ತತ್ವಕ್ಕೆ ವಿರುದ್ಧವಾದರೆ ಅದನ್ನು ತಾವು ಸಹಿಸುವುದಿಲ್ಲವೆಂದು ದೇವೇಗೌಡರು ಸಾರಿದ್ದಾರೆ. ಈ ತತ್ವದ ರಕ್ಷಣೆಗಾಗಿ ತಮ್ಮ ರಾಜಕೀಯ ಸ್ಥಾನ-ಮಾನವನ್ನು ಅವರು ಪಣವಾಗಿ ಇಟ್ಟಿದ್ದಾರೆ.

ಶನಿವಾರ ದೇವೇಗೌಡರು ಮಾಡಿದ ಭಾಷಣದಲ್ಲಿ, ವೆಂಕಟಸ್ವಾಮಿ ವರದಿಯ ಮೂಲಕ ಹಾವನೂರು ವರದಿಯ ತಿರುಳು ಕೆಡಿಸುವ ತಂತ್ರಗಾರಿಕೆ ನಡೆದಿದೆಯೆಂಬ ಸುಳಿವೂ ಇದೆ. ಪಕ್ಷಭೇದವಿಲ್ಲದೆ ಹಾವನೂರು ವರದಿಯ ತಿರುಳು ಕೆಡಿಸುವ ತಂತ್ರಗಾರಿಕೆ ಕರ್ನಾಟಕ ಸರಕಾರದಲ್ಲಿ 1980 ರಿಂದ ನಡೆದುಕೊಂಡು ಬಂದಿದೆ. ಹಾವನೂರು ವರದಿಯ ಆಧಾರದ ಮೇಲೆ ಹಿಂದುಳಿದ ವರ್ಗಗಳ ಯುವಕರಿಗೆ ಸರಕಾರಿ ನೌಕರಿಗೆ ಸೇರಲು ರೋಸ್ಟರ್ ಸೂತ್ರದ ಮೀಸಲಾತಿ ಸೌಲಭ್ಯ ಸಿಗಬೇಕೆಂದು 1979ರಲ್ಲಿ ದೇವರಾಜ ಅರಸು ಸರಕಾರ ಮಾಡಿದ ನಿಯಮವನ್ನು ಒಂದಲ್ಲ ಒಂದು ನೆಪದಲ್ಲಿ ಬದಿಗೆ ಸರಿಸಲಾಗಿದೆ.

(ಏಳನೆ ಪುಟಕ್ಕೆ)

ಹಿಂದುಳಿದವರ ಮುನ್ನಡೆಗೆ ತಡೆಗೋಡೆ

(ಮೊದಲ ಪುಟದಿಂದ)

ರೋಸ್ಟರ್ ಸೂತ್ರದ ಮೀಸಲಾತಿ ನಿಯಮವನ್ನು ಆಚರಣೆಗೆ ತಂದರೆ ಸರಕಾರಿ ಆಡಳಿತದ ಯಂತ್ರದ ಮೇಲೆ ಮೇಲ್ವರ್ಗದ ಜನರಿಗೆ ಈಗಿರುವ ಹಿಡಿತ ತಪ್ಪಿಹೋಗಿ ಉನ್ನತ ಅಧಿಕಾರ ಸ್ಥಾನಗಳಲ್ಲಿ ಹಿಂದುಳಿದ ವರ್ಗಗಳವರು ಕವಿಯುವರೆಂಬುದೇ ಇದಕ್ಕೆ ಕಾರಣ.

1979 ರಲ್ಲಿ ಅರಸು ಸರಕಾರ ಸರಕಾರಿ ಹುದ್ದೆಗಳಿಗೆ ಆಯ್ಕೆ ಮಾಡುವಾಗ ಮೀಸಲಾತಿ ನಿಯಮದ ಪಾಲನೆ ರೋಸ್ಟರ್ ಸೂತ್ರದ ಲ್ಲಾಗಬೇಕೆಂದು ವಿಧಿಸಿದಾಗಲೇ ಮೇಲ್ವರ್ಗದ ಅಧಿಕಾರಿಗಣ ಇದರ ವಿರುದ್ಧ ಪಿತೂರಿ ಆರಂಭಿಸಿತ್ತು. 1979 ಸೆಪ್ಟೆಂಬರ್‌ನಲ್ಲಿ ಹೊರಟ ಈ ಸರಕಾರಿ ಆಜ್ಞೆಯ ವಿರುದ್ಧ ಮೇಲ್ವರ್ಗದ ಕೆಲವರು ಅಧಿಕಾರಿಗಳು ಹೈಕೋರ್ಟಿನಲ್ಲಿ ರಿಟ್ ಅರ್ಜಿ ಹಾಕಿ ತಡೆಯಾಜ್ಞೆ ತಂದರು. ಇದಾದ ಕೆಲವು ತಿಂಗಳಲ್ಲಿ ಅರಸು ಸರಕಾರ ಬಿದ್ದು ಹೋಗಿ ಗುಂಡೂರಾವ್ ಸರಕಾರ ಬಂತು.

ಹಾವನೂರು ವರದಿಯ ತಿರುಳು ಕೆಡಿಸಲು ಸಂಚು ನಡೆಸುತ್ತಿದ್ದ ಈ ಉನ್ನತ ಅಧಿಕಾರಿಗಣಕ್ಕೆ ಗುಂಡೂರಾವ್ ನೇತೃತ್ವ ಒಳ್ಳೆಯ ಅವಕಾಶವನ್ನೊದಗಿಸಿತು. ರೋಸ್ಟರ್ ಸೂತ್ರದಲ್ಲಿ ಸರಕಾರದ ಯಾವುದೇ ಹುದ್ದೆಗೆ ಮೀಸಲಾತಿ ಆಯ್ಕೆ ನಡೆಯದಂತೆ ನೋಡಿಕೊಂಡರು.

1981ರ ಹೊತ್ತಿಗೆ ಸರಕಾರದ ಭಿನ್ನ ಇಲಾಖೆಗಳಲ್ಲಿ 40,000ಕ್ಕೂ ಹೆಚ್ಚು ಹುದ್ದೆಗಳು ಖಾಲಿಯಾಗಿದ್ದವು. ಅಂತಹ ಪರಿಸ್ಥಿತಿಯಲ್ಲೂ ಹಾವನೂರು ವರದಿಯ ಹೆಸರು ಹೇಳಿ ವೋಟಿನ ಬುಟ್ಟಿ ತುಂಬಿಸಿಕೊಂಡು ಬಂದಿದ್ದ ಹಿಂದುಳಿದ ವರ್ಗಗಳ ನಾಯಕರು ಹಿಂದುಳಿದ ವರ್ಗಗಳ ಹುಡುಗರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಚಕಾರವೆತ್ತಲಿಲ್ಲ. ಆಗ ವಿರೋಧಿ ಜನತಾ ಪಕ್ಷದ ಶಾಸಕರಾಗಿದ್ದ ದೇವೇಗೌಡರು, ಹಾವನೂರು ವರದಿಯನ್ನು ಹಾಳು ಮಾಡಲು ಉನ್ನತಾಧಿಕಾರಿಗಳು ಹೂಡಿದ ಜಾಲವನ್ನು ಎಳೆ-ಎಳೆಯಾಗಿ ಬಿಡಿಸಿ ತೋರಿಸಿದ್ದರು. ಇದರ ದುಷ್ಪರಿಣಾಮಗಳ ಬಗ್ಗೆ ಗುಂಡೂರಾವ್ ಸರಕಾರಕ್ಕೆ ಎಚ್ಚರಿಕೆ ನೀಡಿದ್ದರು. ಆದರೂ ಪರಿಸ್ಥಿತಿಯಲ್ಲೇನೂ ಬದಲಾವಣೆಯಾಗಿಲ್ಲ.

1983ರಲ್ಲಿ ಜನತಾ ಸರಕಾರ ಅಧಿಕಾರಕ್ಕೆ ಬಂದಾಗ ಸುಮಾರು 60,000 ಸರಕಾರಿ ಹುದ್ದೆಗಳು ಖಾಲಿಯಾಗಿದ್ದವು. ಈ ರಾಜ್ಯದ ಇತಿಹಾಸದಲ್ಲಿ ಎಂದೂ ಇಷ್ಟೊಂದು ಹುದ್ದೆಗಳು ಖಾಲಿಯಾಗಿ ಉಳಿದದ್ದಿಲ್ಲ.

ಹಾವನೂರು ವರದಿಯ ಆಧಾರದಲ್ಲಿ ಹಿಂದುಳಿದ ವರ್ಗಗಳ ವಿದ್ಯಾವಂತ ಹುಡುಗರ ಆಯ್ಕೆ ಸರಕಾರಿ ಹುದ್ದೆಗಳಿಗೆ ಆಗಬೇಕೆಂಬ ದೇವೇಗೌಡರ ಆಸೆಗೆ ಅವರ ಪಕ್ಷ ಅಧಿಕಾರಕ್ಕೆ ಬಂದಾಗಲೇ ಒಂದು ಸವಾಲು ಎದುರಾಗಿತ್ತು. ಅವರ ಅಂಬೋಣಕ್ಕೆ ಅವಕಾಶವಿಲ್ಲದ ರೀತಿಯಲ್ಲಿ ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಸರಕಾರಿ ನೌಕರರ ನಿವೃತ್ತಿ ವಯೋಮಿತಿಯನ್ನು 58 ಕ್ಕೆ ಏರಿಸುವ ಭರವಸೆ ಕೊಡಲಾಗಿತ್ತು.

ಆಗ ಇದು ಆಚರಣೆಗೆ ಬರಲಾಗದ ಆಶ್ವಾಸನೆಯೆಂಬ ಅಸಡ್ಡೆಯನ್ನು ದೇವೇಗೌಡರು ತೋರಿಸಿದ್ದರು. 1983ರಲ್ಲಿ ದೇವೇಗೌಡರು ಸಚಿವರಾಗಿ ಅಧಿಕಾರ ಸ್ವೀಕರಿಸಿಕೊಂಡ ಕೆಲವು ದಿನಗಳ ನಂತರ ನಾನವರನ್ನು ಭೇಟಿಯಾಗಿದ್ದೆ. ಆಗ ಪ್ರಾಸಂಗಿಕವಾಗಿ ಹಿಂದುಳಿದ ವರ್ಗಗಳ ಹುಡುಗರಿಗೆ ಉದ್ಯೋಗಾವಕಾಶದ ಬಾಗಿಲನ್ನು ಜನತಾ ಸರಕಾರ ಮುಚ್ಚಲು ಹೊರಟಿರುವುದನ್ನು ಪ್ರಸ್ತಾಪಿಸಿದೆ. ಆಗವರು ಅದಕ್ಕೆ ಅಷ್ಟು ಮಹತ್ವಕೊಟ್ಟಿರಲಿಲ್ಲ.

ಜನತಾ ಪ್ರಣಾಳಿಕೆಯಲ್ಲಿ ನಿವೃತ್ತಿ ವಯೋಮಿತಿಯನ್ನು ಹೆಚ್ಚಿಸುವ ಆಶ್ವಾಸನೆಯನ್ನು ಸೇರಿಸಿದ ಕಾಣದ ಕೈಗಳ ಕೈವಾಡವನ್ನು ಗುರುತಿಸುವುದರಲ್ಲಿ ದೇವೇಗೌಡರು ಆಗ ವಿಫಲರಾಗಿದ್ದರು.

(ಮುಂದುವರಿಯುವುದು)

ಕಾದಿರುವ ಕೋಲಾಹಲ-2

ಒಕ್ಕಲಿಗರ 'ಸೊಕ್ಕು' ಮುರಿವ ತಂತ್ರ

ರಾಜ್ಯದಲ್ಲಿ ಹಿಂದುಳಿದ ವರ್ಗಗಳನ್ನು ಗುರುತಿಸಲು ವೆಂಕಟಸ್ವಾಮಿ ಆಯೋಗ ರಚಿಸುವುದರಲ್ಲಿ ಜನತಾ ಸರಕಾರ ತೋರಿಸಿದ ಆತುರದ ಹಿಂದಿದ್ದ ರಾಜಕೀಯ ಸಂಚನ್ನು ದೇವೇಗೌಡರು ಅರ್ಥ ಮಾಡಿಕೊಂಡಿರಲಿಲ್ಲ.

1973ರಲ್ಲಿ ರಚಿತವಾದ ಹಾವನೂರು ಆಯೋಗ ಈ ಕೆಲಸವನ್ನು ಮಾಡಿತ್ತು. ಭಿನ್ನ ಜಾತಿಗಳ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿ-ಗತಿಗಳನ್ನು ಹಾವನೂರು ಆಯೋಗ ಸ್ಥೂಲವಾಗಿ ಸಮೀಕ್ಷೆ ನಡೆಸಿ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರುವ ಅರ್ಹತೆಯುಳ್ಳ ಜಾತಿಗಳ ಶಾಸ್ತ್ರೀಯ ಪಟ್ಟಿ ಮಾಡಿತು. ಈ ಪಟ್ಟಿಯಲ್ಲಿ ಕೆಲವು ಸಣ್ಣ-ಪುಟ್ಟ ದೋಷಗಳನ್ನು ಗುರುತಿಸಲಾಗಿತ್ತಾದರೂ, ಪಟ್ಟಿ ತಯಾರಿಕೆಗೆ ಹಾವನೂರು ಆಯೋಗ ಅಂಗೀಕರಿಸಿದ್ದ ಸಾಮಾಜಿಕ ನ್ಯಾಯದ ಅಳತೆಗೋಲು ನ್ಯಾಯಾಂಗದ ಮನ್ನಣೆಯನ್ನೂ ಗಳಿಸಿತ್ತು.

ಎರಡು ವರ್ಷಗಳ ಕಾಲ ಆಳ ಅಧ್ಯಯನ ನಡೆಸಿ ಹಾವನೂರು ಆಯೋಗ ತಯಾರಿಸಿದ್ದ ವರದಿ ಈ ದೇಶದಲ್ಲಿ ಇದುವರೆಗೆ ಹಿಂದುಳಿದ ವರ್ಗಗಳ ಸ್ಥಿತಿ-ಗತಿಯ ಸಮೀಕ್ಷೆಗೆ ನೇಮಿಸಿದ್ದ ಇತರೆಲ್ಲ ಸಮಿತಿಗಳು ಮತ್ತು ಆಯೋಗಗಳ ವರದಿಗಿಂತ ಉತ್ಕೃಷ್ಟವಾದುದು. ಹಾಗೂ ತರ್ಕಬದ್ಧವಾದುದೆಂಬುದನ್ನು ದೇಶದ ಎಲ್ಲ ವಿಚಾರವಂತರೂ ಒಪ್ಪಿಕೊಂಡಿದ್ದರು.

1975ರಲ್ಲಿ ಹಾವನೂರು ಆಯೋಗದ ವರದಿ ಸರಕಾರಕ್ಕೆ ಅರ್ಪಿತವಾಗಿತ್ತಾದರೂ ಅದರ ಅಂಗೀಕಾರ ಸುಲಭವಾಗಿ ನಡೆಯಲಿಲ್ಲ. ಬ್ರಾಹ್ಮಣರು, ವೀರಶೈವರು, ಬಂಟರು, ಕೊಡವರು ಮತ್ತೆ ಕೆಲವು ಚಿಕ್ಕಪುಟ್ಟ ಜಾತಿಗಳನ್ನು ಬಿಟ್ಟು ಉಳಿದೆಲ್ಲಾ ಜಾತಿಗಳನ್ನು ಹಿಂದುಳಿದ ಪಟ್ಟಿಗೆ ಸೇರಿಸಿದ ಹಾವನೂರು ವರದಿಗೆ ವೀರಶೈವರಿಂದ ತೀವ್ರ ವಿರೋಧ ಬಂದಿತ್ತು.

ರಾಜಕೀಯವಾಗಿ ಪ್ರಭಾವಿಗಳಾಗಿದ್ದ ವೀರಶೈವರ ವಿರೋಧವನ್ನೆದುರಿಸಿ ಹಾವನೂರು ವರದಿಯನ್ನು ಜಾರಿಗೆ ತರುವುದು ಸರಕಾರಕ್ಕೆ ಬಹಳ ಕಷ್ಟವಾಯಿತು. ಈ ಎಲ್ಲ ವಿರೋಧಗಳನ್ನು ತರ್ಕಬದ್ಧವಾಗಿ ಎದುರಿಸಿ ನ್ಯಾಯಾಂಗದ ತಡೆಯಾಜ್ಞೆಗಳನ್ನು ನಿವಾರಿಸಿಕೊಂಡು ಹಾವ

ವಡ್ಡರ್ಸೆ ರಘುರಾಮ ಶೆಟ್ಟಿ

ನೂರು ವರದಿ ಜಾರಿಗೊಳಿಸಲು 1977 ರಲ್ಲಿ ಸಾಧ್ಯವಾಯಿತು. ಸಾಮಾಜಿಕ ದುರ್ಬಲರಿಗೆ ನ್ಯಾಯ ಒದಗಿಸಲು ದೇವರಾಜ ಅರಸು ಸರಕಾರ ಇಟ್ಟ ಐತಿಹಾಸಿಕ ಹೆಜ್ಜೆ ಇದು.

ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ಜಾತಿಗಳಿಗೆ ಉನ್ನತ ಶಿಕ್ಷಣ ಹಾಗೂ ಸರಕಾರಿ ನೌಕರಿಯಲ್ಲಿ ಶೇಕಡಾ 58ರಷ್ಟು ಸ್ಥಾನಗಳನ್ನು ಮೀಸಲಿಡಬೇಕೆಂಬುದು ಹಾವನೂರು ವರದಿ ಆಧರಿತವಾದ ಸರಕಾರಿ ಆಜ್ಞೆಯ ತಿರುಳು. ಆಗ ವಿರೋಧ ಪಕ್ಷದ ನಾಯಕರಾಗಿದ್ದ ದೇವೇಗೌಡರು ಅರಸು ಸರಕಾರದ ಈ ಕ್ರಮವನ್ನು ಮುಕ್ತ ಮನಸ್ಸಿನಿಂದ ಬೆಂಬಲಿಸಿದ್ದರು.

ಇಷ್ಟೆಲ್ಲ ಆದರೂ ಮೀಸಲಾತಿ ಆಜ್ಞೆಯನ್ನು ಅರ್ಥವತ್ತಾಗಿ ಆಚರಣೆಗೆ ತರಲು ಸರಕಾರಕ್ಕೆ ಸಾಧ್ಯವಾಗಲಿಲ್ಲ. 1978ರ ಜನವರಿಯಲ್ಲಿ ಅರಸು ಸರಕಾರ ವಜಾ ಆಗಿ ಚುನಾವಣೆ ನಡೆಯಿತು. ರಾಜಕೀಯವಾಗಿ ದೊಡ್ಡ ಸವಾಲಾಗಿದ್ದ ಆ ಚುನಾವಣೆಯನ್ನೆದುರಿಸಿ ಮತ್ತೆ ಅಧಿಕಾರಕ್ಕೆ ಬಂದ ದೇವರಾಜ ಅರಸು 1979ರಲ್ಲಿ ಸರಕಾರಿ ನೌಕರಿಗೆ ಆಯ್ಕೆ ಮಾಡುವಾಗ ರೋಸ್ಟರ್ ಸೂತ್ರ ಅನುಸರಿಸಬೇಕೆಂಬ ನಿಯಮ ಮಾಡಿದರು.

(ಕೊನೆಯಪುಟಕ್ಕೆ)

ಒಕ್ಕಲಿಗರ 'ಸೊಕ್ಕು' ಮುರಿವ ತಂತ್ರ

(ಮೊದಲ ಪುಟದಿಂದ)

ಈ ರೋಸ್ಟರ್ ಸೂತ್ರಕ್ಕೆ ಬಹಳ ಮಹತ್ವವಿದೆ. ಹಿಂದೆಲ್ಲ ಮೀಸಲಾತಿ ಅಭ್ಯರ್ಥಿಗಳ ಆಯ್ಕೆ ಮಾಡಿ ಅವರನ್ನು ಪಟ್ಟಿಯ ಕೊನೆಯಲ್ಲಿ ಸೇರಿಸುವ ಕ್ರಮವಿತ್ತು. ಈ ಕ್ರಮದಲ್ಲಿ ಸರಕಾರಿ ನೌಕರಿಗೆ ಸೇರಿದ ಯಾವನೇ ಮೀಸಲಾತಿ ಅಭ್ಯರ್ಥಿಗೂ ಭಡ್ತಿಯ ಅವಕಾಶ ಸಿಗುತ್ತಿರಲಿಲ್ಲ. ರೋಸ್ಟರ್ ಸೂತ್ರದಲ್ಲಿ ಆಯ್ಕೆಯಾದ ಮೀಸಲಾತಿ ಅಭ್ಯರ್ಥಿಗಳು ಪಟ್ಟಿಯ ಮೊದಲ ಸ್ಥಾನಗಳನ್ನು ಪಡೆಯುವಂತಾಯಿತು. ಮೀಸಲಾತಿ ಸೌಲಭ್ಯ ಪಡೆದು ಸರಕಾರಿ ನೌಕರಿಗೆ ಸೇರುವ ಹಿಂದುಳಿದ ವರ್ಗಗಳ ಜನರು ತಮ್ಮ ಮೇಲಧಿಕಾರಿಗಳಾಗುವ ಸೂತ್ರವನ್ನು ಮೇಲ್ವರ್ಗದ ಅಧಿಕಾರಿಗಳು ಸಹಿಸದಾದರು.

ಅಂದಿನಿಂದ ಅವರು ರೋಸ್ಟರ್ ಸೂತ್ರದಲ್ಲಿ ಮೀಸಲಾತಿ ಅಭ್ಯರ್ಥಿಗಳ ಆಯ್ಕೆ ಸರಕಾರಿ ನೌಕರಿಗೆ ನಡೆಯದಂತೆ ಮಾಡಲು ಹತ್ತು, ಹಲವು ತಂತ್ರಗಳನ್ನು ನಡೆಸಿ ಯಶಸ್ವಿಯಾದರು. ಪರಿಣಾಮವಾಗಿ ಹಾವನೂರು ವರದಿ ಜಾರಿಯಲ್ಲಿದೆ;

ಯಾದರೂ ಸರಕಾರಿ ನೌಕರಿಗೆ ನೇಮಕದಲ್ಲಿ ಅದು ಅರ್ಥವತ್ತಾಗಿ ಜಾರಿಗೆ ಬರದಂತಾಯಿತು. ಇಂದಿಗೂ ಪರಿಸ್ಥಿತಿ ಹಾಗೆಯೇ ಇದೆ. 1977ರಿಂದ ಹಾವನೂರು ವರದಿಯ ಸೌಲಭ್ಯ ಹಿಂದುಳಿದ ಜಾತಿಗಳಿಗೆ ಸಿಕ್ಕಿರುವುದು ತಾಂತ್ರಿಕ ಶಿಕ್ಷಣಕ್ಕೆ ವಿದ್ಯಾರ್ಥಿಗಳ ಆಯ್ಕೆ ನಡೆಯುವುದರಲ್ಲಿ ಮಾತ್ರ.

ಹೀಗೆ ಅರ್ಧಂಬರ್ಧವಾಗಿ ಜಾರಿಗೆ ಬಂದ ಮೀಸಲಾತಿ ನಿಯಮದ ಮರುಪರಿಶೀಲನೆಯ ವಿಚಾರವೇ ಅಪ್ರಸ್ತುತ. ಕೇವಲ ಒಂದು ದಶಕದ ಹಿಂದಿದ್ದ ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿ-ಗತಿಯಲ್ಲಿ ಮೂಲಭೂತ ಪರಿವರ್ತನೆ ಈಗ ಆಗಿರಲು ಸಾಧ್ಯವಿಲ್ಲ. ಯಾವುದೇ ಒಂದು ಸಾಮಾಜಿಕ ಸುಧಾರಣೆಯ ಕ್ರಮವಾದರೂ ಮೊದಲು ಅದರ ನಿಷ್ಠ ಅನುಷ್ಠಾನ ನಡೆಯಬೇಕು. ಆ ಮೇಲೆ ಒಂದು ತಲೆಮಾರಿನ (25 ವರ್ಷಗಳ) ನಂತರ ಅದರ ಮರುಪರಿಶೀಲನೆ ನಡೆಸುವುದರಲ್ಲಿ ಅರ್ಥವಿದೆ.

ಹಾವನೂರು ವರದಿ ಆಧಾರಿತ ಮೀಸಲಾತಿ ನಿಯಮ ಒಂದು ಸಾಮಾಜಿಕ ಪರಿವರ್ತನೆಯ ಕ್ರಮ. ಸರಕಾರಿ ನೌಕರಿಯಲ್ಲಿ ದುರ್ಬಲರಿಗೆ ಯೋಗ್ಯ ಪ್ರಾತಿನಿಧ್ಯ ದೊರಕಿಸುವ ಅದರ ಮೂಲ ಉದ್ದೇಶ ಈಡೇರದೆ ಉಳಿದಿದೆ. ಇಂತಹ ಪರಿಸ್ಥಿತಿಯಲ್ಲಿ ಈ ನಿಯಮದ ಮರು ಪರಿಶೀಲನೆಯ ಅಗತ್ಯವಾದರೂ ಏನಿದೆ? ಎಂಬ ಪ್ರಶ್ನೆ ಏಳುತ್ತದೆ.

1983 ಜನವರಿಯಲ್ಲಿ ಅಧಿಕಾರಕ್ಕೆ ಬಂದ ಜನತಾ ಸರಕಾರ ಮಾಡಿದ "ಸತ್ಕಾರ್ಯಗಳಲ್ಲಿ" ವೆಂಕಟಸ್ವಾಮಿ ಆಯೋಗ ರಚಿಸಿದ್ದೊಂದು. ಹೆಗಡೆ ಸರಕಾರ ಬಹಳ ಅವಸರದಲ್ಲಿ ಮಾಡಿದ ಈ ಸತ್ಕಾರ್ಯಕ್ಕೆ ಪ್ರಧಾನವಾಗಿ ಎರಡು ಉದ್ದೇಶಗಳಿದ್ದುವು. ಮೊದಲನೆಯದು ಹಾವನೂರು ವರದಿ ಆಧಾರಿತ ಮೀಸಲಾತಿ ನಿಯಮ ಅರ್ಥವತ್ತಾಗಿ ಆಚರಣೆಗೆ ಬರದಂತೆ ಮಾಡುವುದು. ಎರಡನೆಯದಾಗಿ ಒಕ್ಕಲಿಗರನ್ನು ಬ್ರಾಹ್ಮಣರು ಮತ್ತು ವೀರಶೈವರ ಸಾಲಿಗೆ ಸೇರಿಸಿ ಅವರ ರಾಜಕೀಯ ಸೊಕ್ಕನ್ನು ಮುರಿಯುವುದು.

ವೆಂಕಟಸ್ವಾಮಿ ಆಯೋಗದ ಸದಸ್ಯತ್ವವೂ ಇಂತಹ ಉದ್ದೇಶ ಈಡೇರಿಕೆಗೆ ಪೂರಕವಾಗಿಯೇ ಇದೆ. ಉನ್ನತ ಅಧಿಕಾರಿವರ್ಗದ ಇಂತಹ ತಂತ್ರಗಾರಿಕೆಗೆ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ರಾಜಕೀಯ ಆಶೀರ್ವಾದವೂ ಇತ್ತೆಂಬುದನ್ನು ದೇವೇಗೌಡರು ಅಗತಿಳಿದುಕೊಳ್ಳದಾದರು. ಅದರ ಸುಳಿವು ಸಿಕ್ಕಿದ್ದರೂ ರಾಜಕೀಯ ಕಾರಣಗಳಿಗಾಗಿ ಅದನ್ನವರು ಗೌಣವಾಗಿ ಕಂಡಿರಬಹುದು. ವೆಂಕಟಸ್ವಾಮಿ ಆಯೋಗ ಒಕ್ಕಲಿಗರನ್ನು ಮುಂದುವರಿದ ಜನಾಂಗವೆಂದು ಪರಿಗಣಿಸಿರುವುದಂತೂ ನಿಜ. ಇಂತಹ ಒಂದು ಶಿಫಾರಸನ್ನು ಎತ್ತಿಕೊಂಡು ರಾಮಕೃಷ್ಣ ಹೆಗಡೆಯವರು ಇತರ ಹಿಂದುಳಿದ ವರ್ಗಗಳನ್ನು ಒಕ್ಕಲಿಗರ ವಿರುದ್ಧ ಎತ್ತಿ ಕಟ್ಟುವುದೂ ಸಹಜ.

ತಮಗೆ ನ್ಯಾಯಬದ್ಧವಾಗಿ ಸಿಗಬೇಕಾದ ಮೀಸಲಾತಿ ಸೌಲಭ್ಯದಿಂದ ವಂಚಿತರಾದರೆ ಒಕ್ಕಲಿಗರೆಲ್ಲ ಉರಿದೇಳುವುದರಲ್ಲಿ ಸಂದೇಹವಿಲ್ಲ. ದೇವೇಗೌಡರ ಆದಿಯಾಗಿ ಶೂದ್ರ ಸಮೂಹದ ರಾಜಕಾರಣಿಗಳೆಲ್ಲರ ಹುಂಬತನದಿಂದಾಗಿ ಮೀಸಲಾತಿ ನಿಯಮ ಇಂದು ನಗೆ ಪಾಟಲಾಗಿದೆ.

ಒಕ್ಕಲಿಗರಿಗೆ ಅಥವಾ ಇನ್ನಿತರ ಹಿಂದುಳಿದ ಜಾತಿಗಳಿಗೆ ಆಗಬಹುದಾದ ಅನ್ಯಾಯವನ್ನು ಪ್ರತಿಭಟಿಸುವ ರಾಜಕೀಯ ಕೆಚ್ಚು ದೇವೇಗೌಡರಿಗೆ ಇರಬಹುದು. ಅದಕ್ಕಾಗಿ ಅಧಿಕಾರ ತ್ಯಜಿಸಲೂ ಅವರು ಸಿದ್ಧರಿರಬಹುದು.

ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇಕಡಾ 20 ರಷ್ಟಿರುವ ಒಕ್ಕಲಿಗರು ಶೈಕ್ಷಣಿಕವಾಗಿ ಹಿಂದುಳಿದವರಾದರೂ ರಾಜಕೀಯವಾಗಿ ಇಂದು ಬಲಿಷ್ಠರಾಗಿದ್ದಾರೆ. ಹತ್ತು ವರ್ಷಗಳ ಹಿಂದೆ ಛಿದ್ರವಾಗಿದ್ದ ಈ ಜಾತಿಯ ಜನ ಈಗ ಒಗ್ಗಟ್ಟಾಗಿದ್ದಾರೆ. ತಮ್ಮ ಹಕ್ಕಿಗಾಗಿ ಹೋರಾಡುವ ಕೆಚ್ಚು ಅವರಲ್ಲಿದೆ. ಇತ್ತೀಚಿನ ವರ್ಷಗಳಲ್ಲಿ ಸಮಗ್ರ ಒಕ್ಕಲಿಗ ಸಮಾಜದ ಮೇಲೆ ತಮ್ಮ ವರ್ಚಸ್ಸು ಬೀರಿರುವ ಆದಿಚುಂಚನ ಗಿರಿಯ ಮಠಾಧೀಶರು ಒಕ್ಕಲಿಗರ ಹೋರಾಟಕ್ಕೆ ಕರೆಕೊಡುವ ಸಂಭವವೂ ಇದೆ.

ಇಂತಹ ಒಂದು ಸಂದಿಗ್ಧ ಸನ್ನಿವೇಶದಲ್ಲಿ ಒಕ್ಕಲಿಗರ ರಾಜಕೀಯ ನಾಯಕನಾಗಿ ನಿಂತಿರುವ ದೇವೇಗೌಡರ ಮುಂದಿರುವ ಸವಾಲು ಬಹಳ ಮಹತ್ವದ್ದು. ಹೆಗಡೆಯವರ ತಂತ್ರಗಾರಿಕೆಯನ್ನು ಇವರು ಹೇಗೆ ಎದುರಿಸುವರೆಂಬುದು ಕುತೂಹಲಕ್ಕೆ ಕಾರಣವಾದ ಪ್ರಶ್ನೆ.

(ಮುಂದುವರಿಯುವುದು)

ಗೃಹ ರಕ್ಷಕದಳದ ಭಡ್ತಿ ನೀಡುವ ಸಮಾರಂಭ

ಹೊಳೆನರಸೀಪುರ, ಮೇ 27–ಸ್ಥಳೀಯ ಗೃಹ ರಕ್ಷಕದಳದ ಅಧಿಕಾರಿಗಳಿಗೆ ಭಡ್ತಿ ನೀಡುವ ಸಮಾರಂಭವೊಂದು ಇತ್ತೀಚೆಗೆ ನಡೆಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಲೋಕೋಪಯೋಗಿ ಸಚಿವ ಎಚ್. ಡಿ. ದೇವೇಗೌಡರು, ಗೃಹರಕ್ಷಕರಿಗೆ ಭಡ್ತಿ ಪತ್ರಗಳನ್ನು ವಿತರಿಸಿದರು. ಗೃಹರಕ್ಷಕದಳದ ಕಟ್ಟಡವನ್ನು ಶೀಘ್ರದಲ್ಲೇ ನಿರ್ಮಿಸಿಕೊಡುವ ಭರವಸೆಯನ್ನು ಅವರು ನೀಡಿದರು.

ಹಳ್ಳಿಮೈಸೂರು, ದೊಡ್ಡಕಾಡನೂರುಗಳಲ್ಲಿ ಗೃಹರಕ್ಷಕದಳದ ಎರಡು ಸಬ್‌ಯುನಿಟ್‌ಗಳನ್ನು ಹಾಗೂ ಮಹಿಳಾ ಘಟಕವನ್ನು ಸ್ಥಾಪಿಸಬೇಕೆಂದು ಸಚಿವರು ಕರೆ ನೀಡಿದರು.

ಹಿರಿಯ ಮಾಜಿ ಕಮಾಂಡೆಂಟ್ ಜಬ್ಬಾರ್ ಅವರನ್ನು ಇದೇ ಸಂದರ್ಭದಲ್ಲಿ ಗೌರವಿಸಲಾಯಿತು. ಹಾಸನ ಜಿಲ್ಲಾ ಗೃಹ ರಕ್ಷಕದಳದ ಕಮಾಂಡೆಂಟ್ ಎಚ್. ಎಂ. ಶಿವಣ್ಣ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಬಸವರಾಜ್ ಸ್ವಾಗತಿಸಿದರು. ಎಚ್. ಎನ್. ರಾಮಕೃಷ್ಣಯ್ಯ ವಂದಿಸಿದರು.

ಮುಂಗಾರು

ಸಂಪಾದಕ : ವಡ್ಡರ್ಸೆ ರಘುರಾಮ ಶೆಟ್ಟಿ

MUNGARU KRNL 46 ಸಂಪುಟ 2 ಸಂಚಿಕೆ 1 | ಮಂಗಳೂರು, ಬುಧವಾರ, ಸೆಪ್ಟೆಂಬರ್ 11, 1985 | ಬೆಲೆ 70 ಪೈಸೆ (ಮುಂಬೈ: 80 ಪೈಸೆ) ಪುಟ 8

ಹಬ್ಬದ 20% ವಿಶೇಷ ರಿಯಾಯಿತಿ
ಪ್ರಖ್ಯಾತಿ ಪಡೆದ ನಮ್ಮ ಕೈಮಗ್ಗದ ಸೀರೆಗಳ ಚಿಲ್ಲರೆ ಮಾರಾಟದಲ್ಲಿ
ಸರಕಾರದ ವಿಶೇಷ ರಿಯಾಯಿತಿಯನ್ನು ಪಡೆಯಲು ಇಂದೇ ಸಂದರ್ಶಿಸಿರಿ
(ಕೆಲವೇ ದಿನಗಳು ಮಾತ್ರ)
ಶಿವಳ್ಳಿ ಪ್ರಾಥಮಿಕ ನೇಕಾರರ ಸೇವಾ ಸಹಕಾರಿ ಸಂಘ ಲಿ.
ಕಾರ್ಪೊರೇಶನ್ ಬ್ಯಾಂಕ್ ರಸ್ತೆ :: ಉಡುಪಿ-576 101.

ಒಪ್ಪಂದ ಒಪ್ಪಿಕೊಳ್ಳಿ: ಕಾಂಗ್ರೆ ಪ್ರಣಾಳಿಕೆ

ಹೊಸದಿಲ್ಲಿ, ಸೆ. 10– ಸಂತ ಹರಚಂದ್‌ಸಿಂಗ್ ಲೊಂಗೋವಾಲ್ ಹಾಗೂ ಪ್ರಧಾನಿ ರಾಜೀವ ಗಾಂಧಿಯವರು ಸಹಿ ಮಾಡಿದ ಪಂಜಾಬ್ ಒಪ್ಪಂದಕ್ಕೆ ಬೆಂಬಲ ಕೋರುವ ಚುನಾವಣಾ ಪ್ರಣಾಳಿಕೆಯನ್ನು ಕಾಂಗ್ರೆ ಇಂದು ಬಿಡುಗಡೆಗೊಳಿಸಿತು.

ಚುನಾವಣೆಯನ್ನು ಬಹಿಷ್ಕರಿಸಬೇಕೆನ್ನುವ ಕರೆಯಿಂದ ವಿಚಲಿತರಾಗಕೂಡದೆಂದು ಪಕ್ಷ ಕಾರ್ಯಾಧ್ಯಕ್ಷ ಕಮಲಾಪತಿ ತ್ರಿಪಾಠಿ ಬಿಡುಗಡೆ ಮಾಡಿದ ಪ್ರಣಾಳಿಕೆ ಮನವಿ ಮಾಡಿದೆ. ಜನತೆಯ ಕಲ್ಯಾಣವಾಗಬೇಕೆನ್ನುವ ಹಂಬಲ ಇಲ್ಲದವರು ಹಾಗೂ ಹಿಂಸೆಯಲ್ಲಿ ತೊಡಗಿ ಚುನಾವಣೆಯಿಂದ ದೂರ ಇರುವವರಿಂದಾಗಿ ಹಾದಿ ತಪ್ಪಬಾರದೆಂದು ಕೋರಲಾಗಿದೆ.

'ಹೊರಗಿನ ಶಕ್ತಿಗಳು ಶಾಮೀಲಾದ ಕಾರಣ ಪಂಜಾಬಿನ ಪರಿಸ್ಥಿತಿ ಗೊಂದಲಮಯವಾಗಿದೆ. ದೇಶವನ್ನೊಡೆಯುವ ಶಕ್ತಿಗಳು ದೇಶವನ್ನು ದುರ್ಬಲಗೊಳಿಸುವ ಅವಕಾಶಕ್ಕಾಗಿ ಕಾಯುತ್ತಿವೆ ಎಂಬುದನ್ನು ನಾವು ಮರೆಯಬಾರದು. ಭಾರತವನ್ನು ದುರ್ಬಲಗೊಳಿಸಲು ಬಯಸಿದ ಆ ಶಕ್ತಿಗಳ ವಿರುದ್ಧ ದಿ। ಪ್ರಧಾನಿ ಇಂದಿರಾ ಗಾಂಧಿ ನಮಗೆ ಎಚ್ಚರಿಕೆ ನೀಡುತ್ತಿದ್ದರು' ಎಂದು ಪ್ರಣಾಳಿಕೆ ಹೇಳಿದೆ.

ಅಂತಹ ಶಕ್ತಿಗಳಿಗೆ ಪಂಜಾಬ್ ಒಪ್ಪಂದವು ಭಾರೀ ಹಿನ್ನಡೆ ಉಂಟುಮಾಡಿದ್ದು, ಅಂತಹ ಒಪ್ಪಂದಕ್ಕೆ ಪ್ರಚಂಡ ಬೆಂಬಲ ನೀಡಬೇಕು. ದೇಶದ ಏಕತೆ-ಭಾವೈಕ್ಯಗಳನ್ನು ದುರ್ಬಲಗೊಳಿಸಲು ಯತ್ನಿಸಿದ ಶಕ್ತಿಗಳಿಗೆ ಅದು ಯೋಗ್ಯ ಉತ್ತರವಾಗುತ್ತದೆಂದು ಪ್ರಣಾಳಿಕೆ ವಿವರಿಸಿದೆ.

ಒಪ್ಪಂದವನ್ನು ಎಲ್ಲ ರಾಜಕೀಯ ಪಕ್ಷಗಳು ಹಾಗೂ ಜನತೆ ಬೆಂಬಲಿಸಿದ್ದಾರೆ. ಸಂಬಂಧಪಟ್ಟ ಎಲ್ಲರಿಗೆ ತೃಪ್ತಿಯಾಗುವಂತೆ ಒಪ್ಪಂದದ ಎಲ್ಲ ಅಂಶಗಳು ಶೀಘ್ರವೇ ಜಾರಿಯಾಗುವಂತೆ ಶ್ರಮಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಪ್ರಣಾಳಿಕೆ ಹೇಳಿದೆ.

ಉತ್ಸಾಹದಿಂದ ಮತದಾನ ಮಾಡುವ ಮೂಲಕ ಜನತೆ ಚುನಾವಣೆಯ ಬಹಿಷ್ಕಾರಕ್ಕೆ ಕರೆ ನೀಡಿದ ಶಕ್ತಿಗಳ ಬಾಯಿ ಮುಚ್ಚಿಸಬಹುದೆಂದು ಹೇಳಿದ ಕಾಂಗ್ರೆ ಪ್ರಣಾಳಿಕೆ ಜಾತಿ, ಮತ, ಪಂಥ ಭೇದವಿಲ್ಲದೆ ಎಲ್ಲ ನಾಗರಿಕರ ಪ್ರಾಣ ಹಾಗೂ ಆಸ್ತಿಗಳಿಗೆ ರಕ್ಷಣೆಯ ಭರವಸೆ ನೀಡಿದೆ.

ಭರವಸೆಗಳು

ಜನತೆಯ ಸಂಕಷ್ಟ ನಿವಾರಣೆಗೆ ಪರಿಣಾಮಕಾರಿ ವಿಧಾನ ರೂಪಿಸುವುದು, ಸರಕಾರಿ ಸೇವೆಗಳನ್ನು ಅನಾರೋಗ್ಯಕರವಾಗಿ ರಾಜಕೀಯಗೊಳಿಸುವುದಕ್ಕೆ ತಡೆ, ಶುದ್ಧ ಸರಕಾರ, ಭ್ರಷ್ಟಾಚಾರಕ್ಕೆ ತಡೆ ಮುಂತಾದ ಅಂಶಗಳು ಕಾಂಗ್ರೆ ಪ್ರಣಾಳಿಕೆಯಲ್ಲಿವೆ.

ಕೃಷಿಕರಿಗೆ ಲಾಭದಾಯಕ ಬೆಲೆ, ನೀರಾವರಿ ಸೌಲಭ್ಯ ವಿಸ್ತರಣೆ, ಗ್ರಾಮೀಣ ಜನತೆಯ ಸಹಾಯಕ್ಕಾಗಿ ಕೃಷಿ ಆಧಾರಿತ ಕೈಗಾರಿಕೆ ಸ್ಥಾಪನೆ, ನೆರೆ ಹಾಗೂ ಭಯೋತ್ಪಾದಕ ಚಟುವಟಿಕೆಯಿಂದ ಪೀಡಿತರಾದ ರೈತರ ಸಾಲ ವಸೂಲಿ ಮನ್ನಾ-ಈ ಭರವಸೆಗಳನ್ನು ನೀಡಿದ ಪ್ರಣಾಳಿಕೆ ಮಾಜಿ ಸೈನಿಕರು ಹಾಗೂ ಹಾಲಿ ಸೈನಿಕರ ಕುಟುಂಬಗಳ ಕಲ್ಯಾಣ ಹಿತಾಸಕ್ತಿಗಳಿಗೆ ಶ್ರಮಿಸುವುದಾಗಿ ಹೇಳಿದೆ.

ಪಂಜಾಬಿನಲ್ಲಿ ಅಣುಶಕ್ತಿ ಸ್ಥಾವರ ಸ್ಥಾಪನೆ, ರಾವಿ-ಬೀಯಸ್‌ನಿಂದ ರೈತರಿಗೆ ಸಾಕಷ್ಟು ನೀರು ಪೂರೈಕೆ ಅಖಿಲ ಭಾರತ ಗುರುದ್ವಾರ ಮಸೂದೆಗೆ ಪೂರ್ಣ ಬೆಂಬಲ ಕಾನೂನು ವ್ಯವಸ್ಥೆ ಹಾಗೂ ಭದ್ರತೆ ಸೇರಿದಂತೆ ಸರಕಾರಿ ಸೇವೆಯಲ್ಲಿ ಸಾಕಷ್ಟು ಪ್ರಾತಿನಿಧ್ಯ, ಪಂಜಾಬಿ ಭಾಷೆಗೆ ಪ್ರೋತ್ಸಾಹ ಕಾಂಗ್ರೆ ಪ್ರಣಾಳಿಕೆ ನೀಡಿದ ಇತರ ಭರವಸೆಗಳು.

ಭಟಿಂಡಾ ಗೊಬ್ಬರ ಕಾರ್ಖಾನೆಗೆ ಸ್ವಂತ ವಿದ್ಯುತ್ ಸ್ಥಾವರ, ಜಲಂಧರ್‌ನಲ್ಲೊಂದು ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜು, ಪ್ರಾದೇಶಿಕ ಸಾಂಸ್ಕೃತಿಕ ಕೇಂದ್ರಗಳನ್ನು ಸದ್ಯವೇ ಸ್ಥಾಪಿಸುವುದಾಗಿ ಹೇಳಿದ ಪ್ರಣಾಳಿಕೆ ಕೃಷಿ ಕ್ಷೇತ್ರದಲ್ಲಿ ಪಂಜಾಬ್ ಅದ್ಭುತ ಸಾಧನೆ ಮಾಡಿದೆ ಎಂದು ಹೊಗಳಿದೆ.

ಕ್ರಾಂತಿ ನಾಯಕ ಸಿಂಗಾಪುರದಲ್ಲಿ?

ಸಿಂಗಾಪುರ, ಸೆ. 10– ಥ್ಯಾಲಂಡ್‌ನಲ್ಲಿ ಸೋಮವಾರ ಸೇನಾಕ್ರಾಂತಿ ನಡೆಸಲು ಯತ್ನಿಸಿ ಸೋತ ಕ। ಮಾನೂನ್ ರೂಪಕ ಚೋರನ್ ಇದೀಗ ಸಿಂಗಾಪುರದಲ್ಲಿದ್ದು ರಾಜಕೀಯ ಆಶ್ರಯ ಕೇಳಿದ್ದಾರೆಂಬ ವರದಿಗಳ ಬಗ್ಗೆ ಪ್ರತಿಕ್ರಿಯೆ ನೀಡಲು ಸಿಂಗಾಪುರ ಸರಕಾರ ಹಾಗೂ ಥ್ಯಾ ದೂತಾವಾಸಗಳು ನಿರಾಕರಿಸಿವೆ.

ಸಿಂಗಾಪುರ ಈತನಕ ಯಾರಿಗೂ ರಾಜಕೀಯ ಆಶ್ರಯ ಕೊಟ್ಟಿಲ್ಲ.

ರೂಪಕ ಚೋರನ್ 1981ರಲ್ಲಿ ಒಮ್ಮೆ ಕ್ರಾಂತಿಗಿಳಿಸಿ ಸೋತಿದ್ದರು.

ಸೋಮವಾರ ಮಂಗಳೂರು ಪುರಭವನದಲ್ಲಿ ಜರಗಿದ ಮುಂಗಾರು ಪತ್ರಿಕೆಯ ಮೊದಲ ಹುಟ್ಟು ಹಬ್ಬದ ಸಂದರ್ಭದಲ್ಲಿ ಮೇಯರ್ ಬಿ. ಅಬ್ದುಲ್ ಖಾದರ್ ಅವರು ಮಾತನಾಡುತ್ತಿದ್ದಾರೆ. ಚಿತ್ರದಲ್ಲಿ ಮುಂಗಾರು ಪತ್ರಿಕೆ ಸಂಪಾದಕ ವಡ್ಡರ್ಸೆ ರಘುರಾಮ ಶೆಟ್ಟಿ, ಕರ್ನಾಟಕದ ಲೋಕೋಪಯೋಗಿ ಸಚಿವ ದೇವೇಗೌಡ ಮತ್ತು ಲಂಕೇಶ್ ಪತ್ರಿಕೆ ಸಂಪಾದಕ ಪಿ. ಲಂಕೇಶ್ ಅವರೂ ಇದ್ದಾರೆ. (ವರದಿ 3ನೇ ಪುಟದಲ್ಲಿ)

ನೈಲಾನ್ ನೂಲು ಘಟಕ ರಹಸ್ಯ ವ್ಯವಹಾರ ಅಲ್ಲ

ವಿಧಾನಸಭೆಯಲ್ಲಿ ಹೆಗಡೆ ಸ್ಪಷ್ಟೀಕರಣ

(ಮುಂಗಾರು ವರದಿ)

ಬೆಂಗಳೂರು, ಸೆ. 10– ನೈಲಾನ್ ನೂಲು ಉತ್ಪದನಾ ಘಟಕ ಸ್ಥಾಪನೆಯ ಪರವಾನಿಗೆಯನ್ನು ನಿರ್ಲಾನ್ ಎಂಬ ಖಾಸಗಿ ಕಂಪನಿಗೆ ನೀಡಿದುದರಲ್ಲಿ ಸರ್ಕಾರ ರಹಸ್ಯ ವ್ಯವಹಾರ ನಡೆಸಿದೆ ಎಂಬ ವಿರೋಧ ಪಕ್ಷವಾದ ಕಾಂಗ್ರೆಸ್ (ಐ)ನ ಆರೋಪವನ್ನು ಮುಖ್ಯಮಂತ್ರಿ ರಾಮ ಕೃಷ್ಣ ಹೆಗಡೆ ಇಂದು ವಿಧಾನಸಭೆಯಲ್ಲಿ ಅಲ್ಲಗಳೆದರು.

ತಮ್ಮ ಇಲಾಖೆಗಳಿಗೆ ಸೇರಿದ ಬೇಡಿಕೆಗಳ ಮೇಲಿನ ಮೂರುದಿನಗಳ ಚರ್ಚೆಗೆ ಉತ್ತರಿಸುತ್ತಿದ್ದ ಅವರು, "ಈ ದಿಸೆಯಲ್ಲಿ ಯಾವುದೇ ರಹಸ್ಯವಿದೆ ಎಂಬ ಆರೋಪದ ಬಗ್ಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ತನಿಖೆ ಎದುರಿಸಲು ಸರ್ಕಾರ ಸಿದ್ಧವಿದೆ" ಎಂದು ತಿಳಿಸಿದರು.

"ಈ ಘಟಕದ ಸ್ಥಾಪನೆಗೆ ಪರವಾನಿಗೆ ನೀಡುವುದರಲ್ಲಿ ಯಾವುದೇ ರಾಜಕೀಯ ಕೈವಾಡವಾಗಲಿ ಪಕ್ಷಪಾತವಾಗಲಿ ಇಲ್ಲ" ಎಂದು ಸ್ಪಷ್ಟಪಡಿಸಿದ ಅವರು, ಪರಿಣತರು ನೀಡಿದ ಮಾರ್ಗದರ್ಶನದ ಮೇರೆಗೆ ಘಟಕದ ಸ್ಥಾಪನೆಗೆ ಪರವಾನಿಗೆ ನೀಡಲಾಯಿತು ಎಂದರು.

ಟೆಂಡರನ್ನು ಸಹ ಕರೆಯದೆ ಇದೇ ಕಂಪನಿಗೆ ಸರ್ಕಾರ ಪರವಾನಿಗೆ ನೀಡಿದೆ ಎಂಬ ಆರೋಪವನ್ನು ನಿರಾಕರಿಸಿದ ಅವರು, ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಅಭಿವೃದ್ಧಿ ನಿಗಮವು (ಕೆ. ಎಸ್. ಐ.ಐ.ಡಿ.ಸಿ.) ಪತ್ರಿಕೆಗಳ ಮೂಲಕ ಟೆಂಡರ್ ಕರೆದಿತ್ತು [illegible] ಅದರಂತೆ 20 ಅರ್ಜಿಗಳು ಬಂದಿದ್ದವು. ನೈಲಾನ್ ನೂಲು ಉತ್ಪಾದನೆಯಲ್ಲಿ ದೇಶದಲ್ಲೇ ಅತ್ಯುತ್ತಮ ಕಂಪನಿ ಇದೆಂದು ಕಂಡು ಬಂದದ್ದರಿಂದ ನಿರ್ಲಾನ್ ಕಂಪನಿಗೆ ಪರವಾನಿಗೆ ನೀಡಲಾಯಿತು ಎಂದು ತಿಳಿಸಿದರು.

ಜಂಟಿರಂಗದಲ್ಲಿ ನೈಲಾನ್ ನೂಲು ಉತ್ಪಾದನಾ ಘಟಕವೊಂದನ್ನು ಸ್ಥಾಪಿಸಬೇಕೆನ್ನುವ ನಿಗಮದ ಶಿಫಾರಸನ್ನು ಮರುವಿಮರ್ಶೆ ಮಾಡುವುದಗತ್ಯವೆಂದು 1982ರಲ್ಲಿ ಹಿಂದಿನ ಕಾಂಗ್ರೆ ಸರಕಾರ ತಿರಸ್ಕರಿಸಿ ಪಟ್ಟಿಯಲ್ಲಿ ಹತ್ತನೇ ಸ್ಥಾನದಲ್ಲಿದ್ದ ಇನ್ನೊಂದು ಸಂಸ್ಥೆಯನ್ನು ಆರಿಸಿತು.

ಆ ಸಂಸ್ಥೆಯ ಹೆಸರು ಕಳಿಸುವ ಮೊದಲೇ ಕಾಂಗ್ರೆ ಸರಕಾರ ಅಧಿಕಾರ ಕಳೆದುಕೊಂಡು ಮತ್ತೆ ಬಂದ ಜನತಾ ಸರಕಾರ ನಿಗಮದ ತಜ್ಞರ ಸಮಿತಿಯಿಂದ ಅಂಗೀಕೃತವಾದ ಸಂಸ್ಥೆಗೆ ಮಾತ್ರ ಅವಕಾಶ ನೀಡಬೇಕೆಂದು ಸೂಚಿಸಿತು. ಅದರಂತೆ ನಿಗಮ ಸೂಚಿಸಿದ ಸಂಸ್ಥೆಯೊಂದರ ಹೆಸರನ್ನು ಕೇಂದ್ರ ಸರಕಾರಕ್ಕೆ ಒಪ್ಪಿಸಿತು. 1985ರ ಜನವರಿಯಲ್ಲಷ್ಟೇ ಕೇಂದ್ರ ಅದಕ್ಕೆ ಒಪ್ಪಿಗೆ ನೀಡಿತು ಎಂದು ಹೆಗಡೆ ತಿಳಿಸಿದರು.

ತಜ್ಞರ ಸಮಿತಿ ಸೂಚಿಸಿದ ಸಂಸ್ಥೆಗೆ ಅನುಮತಿ ನೀಡಬೇಕೆಂದು ಪಟ್ಟು ಹಿಡಿ[illegible] ಅನುಮತಿ ನೀಡುವುದಿಲ್ಲವೆಂದು ಕೇಂದ್ರ ಸಚಿವರೊಬ್ಬರು ತಮ್ಮಲ್ಲಿ ಹೇಳಿದ್ದರು ಎಂದ ಹೆಗಡೆ ನಿಗಮ ಆರಿಸಿದ ಸಂಸ್ಥೆಗೆ ಕೇಂದ್ರ ಒಪ್ಪಿಗೆ ನೀಡಲಿಲ್ಲವೇಕೆಂದು ತಮಗೆ ಅರ್ಥವಾಗುವುದಿಲ್ಲ ಎಂದು ನುಡಿದರು.

1982ರ ಆರಂಭದಲ್ಲಿ ತಮ್ಮ ಸರಕಾರ ಕೈಗೊಂಡ ಕ್ರಮದಿಂದ ತಾವು ಪಕ್ಷಪಾತ ಧೋರಣೆ ತಳೆದಿಲ್ಲವೆಂದು ಸ್ಪಷ್ಟವಾಗುತ್ತದೆ ಎಂದು ಹೆಗಡೆ ಹೇಳಿದರು.

ಹೈಕೋರ್ಟು ಆದೇಶವನ್ನು ಅಲಕ್ಷಿಸಿ ಸಂಬಂಧಿಕರೊಬ್ಬರ ಮುಂಬಡ್ತಿಯಲ್ಲಿ ಸ್ವಜನ ಪಕ್ಷಪಾತ ತೋರಿಸಲಾಗಿದೆ ಎನ್ನುವ ಪ್ರತಿಪಕ್ಷ ನಾಯಕ ಎಸ್. ಬಂಗಾರಪ್ಪನವರ ಆಪಾದನೆಯನ್ನು ಪ್ರಸ್ತಾಪಿಸಿ, ಆ ಬಗ್ಗೆ ಸರಕಾರ ಇನ್ನೂ ನಿರ್ಧಾರ ಕೈಗೊಂಡಿಲ್ಲ ಎಂದು ತಿಳಿಸಿದರು. ಇಷ್ಟರಲ್ಲೇ ಅವರ ಮುಂಬಡ್ತಿ ಆಗಬೇಕಿದ್ದು, ಸ್ವಜನ ಪಕ್ಷಪಾತಕ್ಕೆ ಇಲ್ಲಿ ಅವಕಾಶವಿಲ್ಲ ಎಂದು ಹೆಗಡೆ ಸ್ಪಷ್ಟಪಡಿಸಿದರು.

ಲೋಕಾಯುಕ್ತರ ಸೂಚನೆಗೆ ಕೇಂದ್ರಕ್ಕೆ ಕೇಳಿಕೆ

(ಮುಂಗಾರು ವರದಿ)

ಬೆಂಗಳೂರು, ಸೆ. 10–ರಾಜ್ಯದ ಲೋಕಆಯುಕ್ತರಾಗಿ ನೇಮಕ ಮಾಡಲು ಇಬ್ಬರು ಹಿರಿಯ ವ್ಯಕ್ತಿಗಳನ್ನು ಸೂಚಿಸಬೇಕೆಂದು ಕರ್ನಾಟಕ ಸರಕಾರವು ಕೇಂದ್ರ ಕಾನೂನು ಸಚಿವರನ್ನು ಕೇಳಿದೆ.

ಇದನ್ನಿಂದು ವಿಧಾನ ಸಭೆಯಲ್ಲಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ತಿಳಿಸಿದರು. ಲೋಕಾಯುಕ್ತರಾಗಿ ನೇಮಿಸಲು ಸರಕಾರ ಎರಡೂ ಸದನಗಳ ವಿರೋಧ ಪಕ್ಷ ನಾಯಕರು ಹಾಗೂ ಸಭಾಧ್ಯಕ್ಷರುಗಳ ಸಮ್ಮತಿಯೊಡನೆ ಕೆಲವು ಗಣ್ಯ ವ್ಯಕ್ತಿಗಳನ್ನು ಆರಿಸಿತ್ತಾದರೂ ಆ ವ್ಯಕ್ತಿಗಳಾರೂ ಲೋಕಾಯುಕ್ತರಾಗಲು ಒಪ್ಪಲಿಲ್ಲವೆಂದು ಹೆಗಡೆ ತಿಳಿಸಿದರು. ಅವರು ತನ್ನ ಇಲಾಖೆಗಳಿಗೆ ಸಂಬಂಧಿಸಿದ ಚರ್ಚೆಗೆ ಉತ್ತರಿಸುತ್ತಿದ್ದರು.

ಆದ್ದರಿಂದ ಕೇಂದ್ರ ಸರಕಾರವನ್ನು ಈ ಬಗ್ಗೆ ಕೇಳಲಾಗಿದ್ದು ಅದು ಕಳುಹಿಸಿದ ಯಾದಿಯಿಂದ ಲೋಕಾಯುಕ್ತರನ್ನು ಆಯ್ಕೆ ಮಾಡಲು ವಿರೋಧ ಪಕ್ಷ ನಾಯಕರ, ಸದನದ ಸಭಾಪತಿಗಳ ಹಾಗೂ ಹೈಕೋರ್ಟು ಮುಖ್ಯ ನ್ಯಾಯಾಧೀಶರ ಸಭೆ ಕರೆಯಲಾಗುವುದು ಎಂದರು.

ಬಂಗಾರಪ್ಪನವರ ರಾಜೀನಾಮೆ ಪ್ರಶ್ನೆ

ವಿಧಾನಸಭೆಯಲ್ಲಿ ಸವಾಲಿಗೆ ಸವಾಲ್

(ಮುಂಗಾರು ವರದಿ)

ಬೆಂಗಳೂರು, ಸೆ. 10-ಜನತಾ ಸದಸ್ಯ ಸಿ. ಎಂ. ಉದಾಸಿ ಅವರು ಎಸೆದ ಸವಾಲನ್ನು ಅನುಸರಿಸಿ ವಿರೋಧ ಪಕ್ಷದ ನಾಯಕ ಎಸ್. ಬಂಗಾರಪ್ಪ ಸದಸ್ಯತ್ವಕ್ಕೆ ರಾಜೀನಾಮೆ ನೀಡಲು ಹಿಂಜರಿದರೆಂದು ಆರೋಪದ ಪ್ರಯುಕ್ತ ಕರ್ನಾಟಕ ವಿಧಾನ ಸಭೆಯಲ್ಲಿಂದು ಒಂದು ತಾಸಿಗೂ ಹೆಚ್ಚು ಹೊತ್ತು ಗೊಂದಲದ ವಾತಾವರಣ ಉಂಟಾಯಿತು.

ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ತನ್ನ ವಶದಲ್ಲಿರುವ ಖಾತೆಗೆ ಸಂಬಂಧಿಸಿದ ಅನುದಾನ ಬೇಡಿಕೆ ಮೇಲಿನ ಚರ್ಚೆಗೆ ಉತ್ತರಿಸುತ್ತಿದ್ದಾಗ ಈ ಘಟನೆ ಸಂಭವಿಸಿತು.

ಸೊರಬವನ್ನುಳಿದು ಇತರ ಯಾವುದಾದರೊಂದು ಕ್ಷೇತ್ರದಿಂದ ಬಂಗಾರಪ್ಪನವರು ಸ್ಪರ್ಧಿಸಬೇಕೆಂದು ಧಾರವಾಡ ಜಿಲ್ಲೆಯ ಹಾನಗಲ್ ಕ್ಷೇತ್ರದ ಸದಸ್ಯ ಉದಾಸಿ ಅವರು ಸವಾಲೆಸೆದಾಗ ಗೊಂದಲವುಂಟಾಯಿತು.

ಉದಾಸಿ ಅವರು ಮೊದಲು ರಾಜೀನಾಮೆ ಕೊಟ್ಟರೆ ನಂತರ ತಾನು ರಾಜೀನಾಮೆಗೆ ಒಪ್ಪುವೆನೆಂದು ಬಂಗಾರಪ್ಪ ಅವರು ತಕ್ಷಣ ಎದ್ದು ನಿಂತು ತಮಾಷೆಯಾಗಿ ಪ್ರತಿ ಸವಾಲೆಸೆದರು.

ಸವಾಲನ್ನು ಗಂಭೀರವಾಗಿ ಪರಿಗಣಿಸಿದ ಉದಾಸಿ ಅವರು ತಕ್ಷಣ ರಾಜೀನಾಮೆ ಪತ್ರವನ್ನು ಬರೆದು ಸ್ಪೀಕರ್ ಬಿ. ಜಿ. ಬಣಕಾರ್ ಅವರಿಗೆ ಒಪ್ಪಿಸಿದರು.

ತಕ್ಷಣ ಆಳುವ ಪಕ್ಷದ ಸದಸ್ಯರು ಬಂಗಾರಪ್ಪನವರು ರಾಜೀನಾಮೆ ನೀಡಬೇಕೆಂದು ತೀವ್ರವಾಗಿ ಒತ್ತಾಯಿಸ ತೊಡಗಿದ್ದರಿಂದ ಕಾಂಗ್ರೆಸ್ (ಐ) ಮತ್ತು ಜನತಾ ಸದಸ್ಯರ ಮಧ್ಯೆ ಮಾತಿನ ಚಕಮಕಿ ನಡೆಯಿತು.

ಸ್ಪರ್ಧೆಗೆ ಸಿದ್ಧ

ತಾನು ಸವಾಲನ್ನು ಸ್ವೀಕರಿಸುವೆ. ಆದರೆ ಸದಸ್ಯತನಕ್ಕೆ ರಾಜೀನಾಮೆ ನೀಡದೆ ಚುನಾವಣೆಯಲ್ಲಿ ಸ್ಪರ್ಧಿಸುವೆ ಎಂದರಲ್ಲದೆ ರಾಜೀನಾಮೆ ಕೊಡುತ್ತೇನೆಂದು ತಾನು ಹೇಳಿಲ್ಲವೆಂದು ವಾದಿಸಿದರು.

ಜನತಾ ಸದಸ್ಯರು ಪಟ್ಟು ಹಿಡಿದು ಒತ್ತಾಯಿಸಿದರಲ್ಲದೆ, ಬಂಗಾರಪ್ಪ ಅವರು ನುಡಿದ ಮಾತಿಗೆ ತಪ್ಪುತ್ತಿದ್ದಾರೆ ಎಂದರು. ಉದಾಸಿ ಅವರು ರಾಜೀನಾಮೆ ಪತ್ರ ಒಪ್ಪಿಸಿರುವುದರಿಂದ ಬಂಗಾರಪ್ಪನವರು ರಾಜೀನಾಮೆ ಕೊಡುವುದು ಸೂಕ್ತವೆಂದು ಮುಖ್ಯಮಂತ್ರಿ ಹೆಗಡೆ ಹೇಳಿದರು.

ಈ ಮಧ್ಯೆ ಬಣಕಾರ್ ಅವರು ಕಾರ್ಯಕಲಾಪಗಳ ದಾಖಲೆಯನ್ನು ಓದಿದರು. ಬಂಗಾರಪ್ಪ ಅವರು ರಾಜೀನಾಮೆಗೆ ಒಪ್ಪಬೇಕೆಂದು ಅದು ದೃಢಪಡಿಸಿತು.

ಕೆಲವು ಹೊತ್ತು ಗೊಂದಲ ನಡೆದ ನಂತರ ಬಣಕಾರ್ ಅವರು ತೀರ್ಪು ನೀಡುತ್ತಾ, ಸದಸ್ಯರಿಬ್ಬರು ರಾಜೀನಾಮೆ ನೀಡಿದರೂ, ಸವಾಲು ಬಿಸಿ ಚರ್ಚೆಯ ನಡುವೆ ಎಸೆದದ್ದಾದುದರಿಂದ ಎರಡು ಕಡೆಯ ನಾಯಕರೊಂದಿಗೆ ಸಮಾಲೋಚನೆ ನಡೆಸಿದ ನಂತರವೇ ನಿರ್ಧಾರ ಕೈಕೊಳ್ಳುವೆನೆಂದರು.

ವಿಷಯವನ್ನು ಅಲ್ಲಿಗೆ ಬಿಡಲು ಬಣಕಾರ್ ವಿನಂತಿಸಿದರೂ ಬಂಗಾರಪ್ಪ ತನ್ನ ವಾದವನ್ನು ಮುಂದುವರಿಸಿ ಸದನ ಅದನ್ನು ಕೇಳಬೇಕೆಂದು ಒತ್ತಾಯಿಸಿದಾಗ, ಅವರ ಯಾವ ಮಾತನ್ನೂ ದಾಖಲೆ ಮಾಡಿಕೊಳ್ಳಲಾಗುವುದಿಲ್ಲವೆಂದು ಬಣಕಾರ್ ಹೇಳಿದರು.

ಮೇಲ್ಮನೆ ವಜಾ ಇಲ್ಲ – ಹೆಗಡೆ

(ಮುಂಗಾರು ವರದಿ)

ಬೆಂಗಳೂರು, ಸೆ. 10– ಮೇಲ್ಮನೆಯನ್ನು ರದ್ದುಗೊಳಿಸುವ ಪ್ರಶ್ನೆಯನ್ನು [illegible] ಹೆಗಡೆ ಅವರು ಇಂದು ತಳ್ಳಿ ಹಾಕಿದರಲ್ಲದೆ ತನ್ನ ಸರಕಾರವು ಎರಡು ಸದನಗಳ ಶಾಸನ ಸಭಾ ವ್ಯವಸ್ಥೆಯಲ್ಲಿ ಪೂರ್ಣ ನಂಬಿಕೆ ಹೊಂದಿದೆಯೆಂದರು.

ತನ್ನ ಖಾತೆಗಳಿಗೆ ಸಂಬಂಧಿಸಿದ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಅವರು ಉತ್ತರಿಸುತ್ತಾ ಮೇಲ್ಮನೆಯು ತನ್ನ ಕೆಲಸವನ್ನು ಸುಸೂತ್ರವಾಗಿ ನಿರ್ವಹಿಸುತ್ತಿಲ್ಲವೆಂದು ಕೆಲವು ಸದಸ್ಯರು ಅಭಿಪ್ರಾಯಪಟ್ಟಿದ್ದಾರೆಯಾದರೂ ಅದನ್ನು ರದ್ದುಗೊಳಿಸುವುದೊಂದೇ ಅದಕ್ಕೆ ಪರಿಹಾರವಲ್ಲವೆಂದರು.

ಸ್ಥಳೀಯ ಸಂಸ್ಥೆಗಳನ್ನು ಪ್ರತಿನಿಧಿಸುವ ಹಲವಾರು ಸ್ಥಾನಗಳು ಖಾಲಿ ಇರುವುದೇ ಪರಿಷತ್ತಿನ ಸೂಕ್ತ ನಿರ್ವಹಣೆಯ ವೈಫಲ್ಯಕ್ಕೆ ಕಾರಣವೆಂದು ಹೆಗಡೆ ಹೇಳಿದರು.

ಪರಿಷತ್ತಿನಲ್ಲಿ ಅಲ್ಪಮತ ಹೊಂದಿರುವುದರಿಂದ ಜನತಾ ಪಕ್ಷ ಹಲವಾರು ತೊಂದರೆಗಳನ್ನು ಎದುರಿಸುತ್ತಿದೆಯಾದರೂ ಸರಕಾರ ಮೇಲ್ಮನೆಯನ್ನು ರದ್ದುಗೊಳಿಸದು ಎಂದರು.

ತುಂತುರು



"ಛೆ! ನಾವು ಹೀಗೆ ಕ್ಷಮೆ ಯಾಚಿಸಬೇಕಾಗುತ್ತಂತ ಮೊದಲೇ ಗೊತ್ತಿದ್ರೆ ಎರಡು ಬಾರಿಸಿಯೇ ಬಿಡಬಹುದಿತ್ತು!"

ಕೇರಳ: ಪಿಳ್ಳೆ ವಿವಾದ ರಾಜೀವ್ ತೀರ್ಮಾನಕ್ಕೆ

ತಿರುವನಂತಪುರ, ಸೆ. 10–ವಿದ್ಯುಚ್ಛಕ್ತಿ ಖಾತೆಯ ಮಾಜಿ ಸಚಿವ ಆರ್. ಬಾಲಕೃಷ್ಣ ಪಿಳ್ಳೆಯವರನ್ನು ಕೂಡಲೇ ಸಂಪುಟಕ್ಕೆ ಪುನರ್ನೇಮಿಸುವಂತೆ ಕೇರಳ ಕಾಂಗ್ರೆಸ್ ಪಕ್ಷ ಹಾಕುತ್ತಿರುವ ಒತ್ತಡದಿಂದ ಉಂಟಾಗಿರುವ ವಿವಾದವನ್ನು ಪ್ರಧಾನಿ ರಾಜೀವ ಗಾಂಧಿಯವರ ಮಧ್ಯಸ್ಥಿಕೆಗೆ ಒಪ್ಪಿಸಲಾಗಿದೆ.

ಇದರಿಂದಾಗಿ 40 ಮಾಸಗಳ ಕೇರಳದ ಸಂಯುಕ್ತ ಪ್ರಜಾತಂತ್ರ ರಂಗ ಸರಕಾರ ಸದ್ಯ ಅಪಾಯದಿಂದ ಪಾರಾಗಿದೆ.

ಈ ವಿವಾದವನ್ನು ಪ್ರಧಾನಿ ತೀರ್ಮಾನಿಸುವರೆ ಕಾಲಾವಧಿ ನಿರ್ಧರಿಸಲ್ಪಟ್ಟಿಲ್ಲವಾದರೂ ಅದಷ್ಟು ಬೇಗನೇ ಅದನ್ನು ತೀರ್ಮಾನಿಸಲಾಗುವುದು ಎಂದು ನಿನ್ನೆ ರಾತ್ರಿಯಿಡೀ ಮುಖ್ಯಮಂತ್ರಿ ಕೆ. ಕರುಣಾಕರನ್ ಮತ್ತು ಕೇರಳ ಕಾಂಗ್ರೆಸ್ ನಾಯಕರ ನಡುವೆ ರಾಜಿ ಯತ್ನದಲ್ಲಿ ತೊಡಗಿದ್ದ ಕಾಂಗ್ರೆಸ್-ಐ ಪ್ರಧಾನ ಕಾರ್ಯದರ್ಶಿ ಜಿ. ಕೆ. ಮೂಪನಾರ್ ಇಂದು ದೆಹಲಿಗೆ ತಿಳಿಸಿದರು.

ಕೇರಳ ಹೈಕೋರ್ಟಿನ ಪೂರ್ಣ ಪೀಠ ಕಳೆದ ಆಗಸ್ಟ್ 19ರಂದು ಬಾಲಕೃಷ್ಣ ಪಿಳ್ಳೆಯವರ ವಿರುದ್ಧದ ರಿಟ್ ಅರ್ಜಿ ತಿರಸ್ಕೃತವಾದ ಬಳಿಕ ಕಳೆದ ಮೂರು ವಾರಗಳ ಅವಧಿಯಲ್ಲಿ ಕೇರಳ ಕಾಂಗ್ರೆಸ್ ಪಕ್ಷ ಅವರ ಮರುನೇಮಕಕ್ಕಾಗಿ ಒತ್ತಾಯಿಸುತ್ತಾ ಬಂದಿದೆ.

ಬಾಲಕೃಷ್ಣ ಪಿಳ್ಳೆಯವರ ಪುನರ್ನೇಮಕ ಕಾನೂನಿಗೆ ಸಂಬಂಧಿಸಿದ ಸಮಸ್ಯೆಯೆಂದು ಮುಖ್ಯಮಂತ್ರಿ ಕರುಣಾಕರನ್ ವಾದಿಸುತ್ತಿರುವರಾದರೆ ಅದು ಕೇವಲ ರಾಜಕೀಯ ಪ್ರಶ್ನೆಯೆಂದು ಕೇರಳ ಕಾಂಗ್ರೆಸ್ ಪಕ್ಷದ ನಾಯಕರು ಹಟ ಸಾಧಿಸುತ್ತಿದ್ದಾರೆ.

ಬಿಕ್ಕಟ್ಟು ನಿವಾರಣೆ ಯತ್ನದಲ್ಲಿ ಕೇರಳ ಕಾಂಗ್ರೆಸ್ ನಾಯಕರು ನಿನ್ನೆ ರಾತ್ರಿಯಿಡೀ ಚರ್ಚೆಗಳಲ್ಲಿ ಭಾಗವಹಿಸಿರುವರಾದರೂ ಪ್ರಧಾನಿ ರಾಜೀವ ಗಾಂಧಿಯವರ ತೀರ್ಮಾನವನ್ನು ತಾವು ಒಪ್ಪುವುದಾಗಿ ಹೇಳಿಲ್ಲ. ತಾವು ವಿವಾದ ತೀರ್ಮಾನದ ಯತ್ನ ನಡೆಸುವುದಾಗಿ ಮಾತ್ರ ತಿಳಿಸಿದ್ದಾರೆ.

ಘರ್ಷಣೆಯಲ್ಲಿ 8 ತಮಿಳು ಗೆರಿಲ್ಲಾ ಸಾವು

ಕೊಲಂಬೊ, ಸೆ. 10– ಶ್ರೀಲಂಕಾದ ಪೂರ್ವ ಪ್ರಾಂತ್ಯದಲ್ಲಿ ಭದ್ರತಾ ಪಡೆಯವರೊಂದಿಗೆ ಸಂಭವಿಸಿದ ಘರ್ಷಣೆಯಲ್ಲಿ ಎಂಟು ಮಂದಿ ತಮಿಳು ಪ್ರತ್ಯೇಕತಾವಾದಿ ಗೆರಿಲ್ಲಾಗಳು ಮೃತಪಟ್ಟಿರುವುದಾಗಿ ಸರಕಾರಿ ವಕ್ತಾರರೊಬ್ಬರು ಹೇಳಿದ್ದಾರೆ.

ಟ್ರಿಂಕಾಮಲೆ ಮತ್ತು ಬಟ್ಟಿಕೋಲ ಜಿಲ್ಲೆಗಳಲ್ಲಿ ನಿನ್ನೆ ಆ ಘರ್ಷಣೆಗಳಾದವೆನ್ನಲಾಗಿದೆ. ತಮಿಳು ಸಂಯುಕ್ತ ವಿಮೋಚನಾ ರಂಗದ (ಟುಲ್ಫ್) ಮಾಜಿ ಸಂಸತ್ಸದಸ್ಯ ಆರ್. ಸಂಪತ್ತನ್ ಅವರ ಮನೆಗೆ ಗೆರಿಲ್ಲಾಗಳು ಬೆಂಕಿ ಇಟ್ಟಿರುವುದಾಗಿ ವಕ್ತಾರರು ತಿಳಿಸಿದ್ದಾರೆ. ಕಳೆದ ವಾರ ಉತ್ತರ ಜಾಫ್ನಾದಲ್ಲಿ ಟುಲ್ಫ್‌ನ ಇಬ್ಬರು ಮಾಜಿ ಸಂಸತ್ಸದಸ್ಯರು ಕೊಲೆಯಾದುದನ್ನಿಲ್ಲಿ ಸ್ಮರಿಸಬಹುದು.

ಬರ್ಮಿಂಗ್‌ಹಂ ಗಲಭೆ: 3 ಸಾವು

ಲಂಡನ್, ಸೆ. 10– ಬರ್ಮಿಂಗ್‌ಹಂನ ಹ್ಯಾಂಡ್ಸ್‌ವರ್ತ್ ಭಾಗದಲ್ಲಿ ನಿನ್ನೆ ರಾತ್ರಿಯಿಡೀ ಹಲವು ಗಂಟೆಗಳ ಕಾಲ ನಡೆದ ಗಲಭೆಗಳಲ್ಲಿ ಭಾರತೀಯರ ಮತ್ತಿತರ ಏಶ್ಯನರ 50 ಅಂಗಡಿಗಳು ಮತ್ತು ಮನೆಗಳು ಕೊಳ್ಳೆಹೊಡೆದು ಬೆಂಕಿ ಹಚ್ಚಿ ನಾಶ ಮಾಡಲಾಯಿತಲ್ಲದೆ ಏಶ್ಯನರೆಂದು ನಂಬಲಾದ ಮೂವರು ಸತ್ತಿದ್ದಾರೆ.

ಕೆಲವು ವರ್ಷಗಳಿಂದೀಚೆಗೆ ಬ್ರಿಟನ್‌ನಲ್ಲಿ ನಡೆದ ಅತ್ಯಂತ ನಿಕೃಷ್ಟವೆನಿಸಿದ ಈ ಗಲಭೆಗಳಲ್ಲಿ ದಾಳಿ ನಡೆದ ಅಂಗಡಿಗಳ ಪೈಕಿ ಶೇಕಡಾ 99 ರಷ್ಟು ಭಾರತೀಯ ಹಾಗೂ ಏಶ್ಯನರ ಒಡೆತನದಾಗಿದ್ದು ಗಲಭೆ ಬೆಳಗ್ಗಿನ ತನಕ ನಡೆಯಿತು.

ಆ ಪರಿಸರದ ಭಾಗಗಳನ್ನೆಲ್ಲಾ ಪರೀಕ್ಷಿಸಿದ ಪೊಲೀಸರಿಗೂ, ಅಗ್ನಿಶಾಮಕ ದಳದವರಿಗೂ ಸುಟ್ಟುಹೋದ ಅಂಚೆ ಕಚೇರಿಯೊಳಗೆ ಮೂರು ಶವಗಳು ಕಂಡುಬಂದವು. ಆ ಶವಗಳು ಏಶ್ಯನರದ್ದೆಂದು ನಂಬಲಾದರೂ ಅದನ್ನು ಪೊಲೀಸರು ಪುಷ್ಟೀಕರಿಸಿಲ್ಲ.

ಗಲಭೆಗಳಲ್ಲಿ 23 ಮಂದಿ ಪೊಲೀಸರೂ, ಅಗ್ನಿಶಾಮಕ ದಳದ ಓರ್ವರೂ, ಬಸ್ ಡ್ರೈವರನೊಬ್ಬರೂ, ಇತರ ಇಬ್ಬರೂ ಗಾಯಗೊಂಡಿರುವರು.

ಕಪ್ಪು ಯುವಜನರ ಗುಂಪುಗಳು ಮುಖ್ಯ ರಸ್ತೆಯ ಅಡ್ಡವಾಗಿ ತಡೆಗಳನ್ನು ನಿರ್ಮಿಸಿ ಏಶ್ಯನರ ಅಂಗಡಿ, ಮನೆಗಳನ್ನು ಕೊಳ್ಳೆಹೊಡೆಯಲಾರಂಭಿಸಿ ಕಟ್ಟಡ, ಮೋಟರ್ ಕಾರುಗಳಿಗೆ ಬೆಂಕಿ ಹಚ್ಚಿದರೆಂದೂ, ಸುಮಾರು 600 ಮಂದಿ ಪೊಲೀಸರು ಗಲಭೆಕೋರರೊಡನೆ ಹೋರಾಡಿದರೆಂದೂ ತಿಳಿದಿದೆ.

5 ಪಲ್ಟಿ ಹೊಡೆದ ಜೀಪ್ ದುರಂತ

ಚಿತ್ರ: ಸುಜಿ ಆರ್ಟ್ಸ್ ಸ್ಟುಡಿಯೊ

ಸುರತ್ಕಲ್, ಸೆ. 10– ಇಲ್ಲಿನ ಬಸ್ ನಿಲ್ದಾಣ ಸಮೀಪ ನಿನ್ನೆ ರಾತ್ರಿ ಸಂಭವಿಸಿದ ಭೀಕರ ಜೀಪ್ ಅಪಘಾತದಲ್ಲಿ ಜೀಪಿನ ಮಾಲೀಕ ಕೃಷ್ಣಪ್ಪ (45) ಅವರು ಮೃತಪಟ್ಟರು.

ಜೀಪಿನಲ್ಲಿ ಒಟ್ಟು ಎಂಟು ಮಂದಿ ಪ್ರಯಾಣಿಸುತ್ತಿದ್ದರೆನ್ನಲಾಗಿದ್ದು, ಉಳಿದವರೆಲ್ಲರೂ ಗಾಯಗೊಂಡಿದ್ದಾರೆ. ಇಬ್ಬರ ಸ್ಥಿತಿ ಚಿಂತಾಜನಕವಾಗಿದೆಯೆಂದು ಗೊತ್ತಾಗಿದೆ. ಗಾಯಗೊಂಡವರನ್ನು ಸರಕಾರಿ ವೆನ್‌ಲಾಕ್ ಆಸ್ಪತ್ರೆಗೆ ಸೇರಿಸಲಾಗಿದೆ.

ಜೀಪು ಸುಮಾರು ಅಧಿಕ ಕಿಲೋಮೀಟರ್ ವೇಗದಲ್ಲಿದ್ದು, ಐದು ಬಾರಿ ಪಲ್ಟಿ ಹೊಡೆಯಿತೆಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಅದು ರಸ್ತೆಗೆ ತಿಕ್ಕಿದ ಭರಕ್ಕೆ ಬೆಂಕಿಯೆದ್ದು, ಬೆಂಕಿಯ ಉಂಡೆಯೊಂದು ಉರುಳಿದ ಅನುಭವವಾಯಿತೆಂದೂ ಅಪಘಾತವನ್ನು ಕಂಡವರು ಹೇಳಿದ್ದಾರೆ.

ಈ ಅಪಘಾತದ ಹಿಂದೆ ಕುತೂಹಲಕರವಾದ ಒಂದು ಕತೆ ಇರುವುದೂ ಜನರ ಸಂಭಾಷಣೆಗಳಿಂದ ತಿಳಿದು ಬಂದಿದೆ. ಅಪಘಾತಗೊಂಡ ಜೀಪಿನ ಮಾಲೀಕ ಕೃಷ್ಣಪ್ಪ ಅವರ ವ್ಯವಹಾರದ ಪಾಲುದಾರರೊಬ್ಬರ ಸಹೋದರಿ ನಿನ್ನೆ ಬೆಳಗ್ಗೆ ಆಕೆಯ ಪ್ರೇಮಿಯೆನ್ನಲಾದ ಒಬ್ಬ ಮಲೆಯಾಳಿ ಕ್ರಿಶ್ಚಿಯನ್ ವಿದ್ಯಾರ್ಥಿಯ ಜೊತೆ ಪಲಾಯನಗೈದಿದ್ದು, ಅವರನ್ನು ಕೃಷ್ಣಪ್ಪ ಅವರು ತನ್ನ ಪಾಲುದಾರರ ಜೊತೆ ಹುಡುಕಾಟ ನಡೆಸಿದ್ದರು ಎನ್ನಲಾಗಿದೆ.

ರಾತ್ರಿ ಕಾರೊಂದರಲ್ಲಿ ಅವರು ಪರಾರಿಯಾಗುವ ಸುದ್ದಿ ತಿಳಿದಕ್ಷಣವೇ ಅಪಘಾತಕ್ಕೀಡಾದ ಜೀಪ್ ಆ ಕಾರಿನ ಬೆನ್ನುಹತ್ತಲು ಯತ್ನಿಸಿತು ಎಂದು ಹೇಳಲಾಗಿದ್ದು, ಜೀಪ್ ಓವರ್‌ಟೇಕ್ ಮಾಡಲು ಯತ್ನಿಸಿದ ಕಾರಿನಲ್ಲಿ ಪಲಾಯನ ಗೈಯ್ಯಲು ಯತ್ನಿಸಿದ ಪ್ರೇಮಿಗಳಿದ್ದಾರೆಂದು ಜನರಾಡಿಕೊಳ್ಳುತ್ತಿದ್ದಾರೆ.

ತೀವ್ರ ಬಿಕ್ಕಟ್ಟಿನಲ್ಲಿ ರೇಷ್ಮೆ ಕೈಮಗ್ಗ

ಬೆಂಗಳೂರು, ಸೆ. 10– ದೇಶದ ರೇಷ್ಮೆ ಕೈಮಗ್ಗ ಉದ್ಯಮವು ಅತ್ಯಂತ ಭೀಕರ ನೂಲು ಕ್ಷಾಮವನ್ನು ಅನುಭವಿಸುತ್ತಿದ್ದು ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ತಮಿಳ್ನಾಡು ಮತ್ತು ಕರ್ನಾಟಕಗಳ ಮೂರು ಲಕ್ಷಕ್ಕೂ ಮಿಕ್ಕಿ ಕುಟುಂಬಗಳು ನಿರುದ್ಯೋಗಿಗಳಾಗುವ ಭೀತಿ ಎದುರಾಗಿದೆಯೆಂದು ಅ. ಭಾ. ಕೈಮಗ್ಗ ಬಟ್ಟೆ ಮಾರುಕಟ್ಟೆ ಸಹಕಾರಿ ಸಂಘದ ಅಧ್ಯಕ್ಷ ರಹಮತುಲ್ಲಾ ಅನ್ಸಾರಿ ಅವರು ಹೇಳಿದ್ದಾರೆ.

ಕರ್ನಾಟಕ ರೇಷ್ಮೆ ವಿನಿಮಯ ಕೇಂದ್ರದ ಏಕಸಾಮ್ಯ ಹರಾಜು ಹಾಗೂ ರೇಷ್ಮೆ ನೂಲು ಆಮದನ್ನು ನಿಲ್ಲಿಸುವಂತೆ ನೂಲು ಸುತ್ತುವವರು ಸರಕಾರದ ಮೇಲೆ ಒತ್ತಡ ತಂದುದರಿಂದಾಗಿ ನೂಲಿನ ಬೆಲೆ ಕೆ.ಜಿ.ಗೆ 700 ರೂ.ಗಳಷ್ಟು ಏರಿದೆ; ಅದರಿಂದಾಗಿ ನೇಕಾರರು ಮಗ್ಗಗಳನ್ನು ಮುಚ್ಚಬೇಕಾಗಿದೆ ಎಂದವರು ಹೇಳಿದರು.

ರಾಜ್ಯ ರೇಷ್ಮೆ ಇಲಾಖೆ ಹಾಗೂ ರೇಷ್ಮೆ ವಿನಿಮಯ ಕೇಂದ್ರಗಳು ಕೃತಕ ಅಭಾವ ಸೃಷ್ಟಿಸಿ ರೇಷ್ಮೆ ಕೈಮಗ್ಗದವರ ಅತ್ಯಂತ ಶತ್ರುಗಳೆನಿಸಿವೆ ಎಂದ ಅನ್ಸಾರಿ ಪ್ರಧಾನಿಗೆ ಪತ್ರ ಬರೆದು ಮುಕ್ತ ಸಾಮಾನ್ಯ ಲೈಸನ್ಸ್‌ನ ಅಡಿಯಲ್ಲಿ ರೇಷ್ಮೆ ನೂಲು ಆಮದಿಗೆ ಅವಕಾಶ ಕಲ್ಪಿಸಲು ಒತ್ತಾಯಿಸಲಾಗಿದೆ ಎಂದರು.

ಕಳೆದು ಹೋಗಿದೆ : ಟೂರಿಸ್ಟ್ ಮೆಟಡೋರ್ ನಂ. CNG 4598ರ ವಾರ್ಷಿಕ 'ಬಿ' ಪರ್ಮಿಟ್ ಕಳೆದು ಹೋಗಿದೆ. ಸಿಕ್ಕಿದವರು ದಯವಿಟ್ಟು ತಿಳಿಸಿರಿ. ಕೆ. ಶ್ರೀನಿವಾಸ ಅಮೀನ್ ವೈನ್ಸ್, ಕುಲಶೇಖರ – ಮಂಗಳೂರು

ಕಂಪ್ಯೋಸಿಟರರು ಬೇಕಾಗಿದ್ದಾರೆ: ಮಂಗಳೂರಿನ ಖ್ಯಾತ ಸಂಸ್ಥೆಯೊಂದರ ಪ್ರೆಸ್ಸಿನಲ್ಲಿ ಕೆಲಸ ಮಾಡುವರೇ ಅನುಭವೀ ಕಂಪ್ಯೋಸಿಟರರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ವಸತಿ ಸೌಕರ್ಯ ನೀಡಲಾಗುವುದು. ಕೂಡಲೇ ಬರೆಯಿರಿ: ಬಾಕ್ಸ್ ಸಂಖ್ಯೆ 131, "ಮುಂಗಾರು" ಕನ್ನಡ ದಿನ ಪತ್ರಿಕೆ, ಜಿ. ಬಿ. ಬಿಲ್ಡಿಂಗ್ ಹಂಪನಕಟ್ಟೆ, ಮಂಗಳೂರು-575 001

ಹೊಸ ಸಮಾಜ ರಚನೆಗೆ ಮಹಿಳೆಯರಿಗೆ ಕರೆ

ಉಡುಪಿ, ಸೆ. 10– ಮಹಿಳೆಯರು ಗೊಡ್ಡು ಸಂಪ್ರದಾಯಗಳನ್ನು ಬಿಟ್ಟು ಹೊಸ ಸಮಾಜ ರಚನೆಗೆ ಮುಂದಾಗ ಬೇಕೆಂದು ಇನ್ನಂಜೆ ಮಹಿಳಾ ಮಂಡಲದ ಅಧ್ಯಕ್ಷೆ ಶ್ರೀಮತಿ ಸರೋಜಿನಿ ಸುಂದರ್ ಅವರು ಹೇಳಿದ್ದಾರೆ.

ಕೆನರಾ ಬ್ಯಾಂಕಿನ ಶಂಕರಪುರ ಶಾಖೆಯು ಇನ್ನಂಜೆಯಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ "ಗ್ರಾಮೀಣ ಮಹಿಳೆಯರಿಗಾಗಿ ಹಣ ನಿರ್ವಹಣಾ ಗೋಷ್ಠಿ" ಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮಹಿಳೆಯರು ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ತಮ್ಮ ಗಳಿಕೆಯನ್ನು ಹೆಚ್ಚಿಸುವಲ್ಲಿ ಬಿಡುವಿನ ವೇಳೆಯನ್ನು ಉತ್ತಮ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಅವರು ಕರೆಯಿತ್ತರಲ್ಲದೆ, ಯಾವ ರೀತಿಯಲ್ಲಿ ಆದಾಯವನ್ನು ಹೆಚ್ಚಿಸಬಹುದು ಹಾಗೂ ಹೇಗೆ ಅದನ್ನು ಸಮರ್ಪಕವಾಗಿ ಉಳಿಸಿ ಉಳಿತಾಯ ಯೋಜನೆಗಳಲ್ಲಿ ತೊಡಗಿಸಬಹುದು ಎಂಬುವುದನ್ನು ಗ್ರಾಮೀಣ ಮಹಿಳೆಯರಿಗೆ ತಿಳಿಸಲು ಕೆನರಾ ಬ್ಯಾಂಕ್ ಇರಿಸಿಕೊಂಡಿರುವ ಈ ವಿಚಾರಗೋಷ್ಠಿ ಶ್ಲಾಘನೀಯ ಎಂದರು.

ವಿಚಾರ ಗೋಷ್ಠಿಯ ಅಧ್ಯಕ್ಷತೆಯನ್ನು ಕೆನರಾ ಬ್ಯಾಂಕಿನ ವಿಭಾಗಾಧಿಕಾರಿ ಇ. ಎಫ್. ನೊರೋನ್ಹಾ ಅವರು ವಹಿಸಿದ್ದು ಅನಾವಶ್ಯಕವಾಗಿ ಖರ್ಚು ಮಾಡುವ ಬಗ್ಗೆ ಬೇಸರ ವ್ಯಕ್ತಪಡಿಸಿದರಲ್ಲದೆ, ಜನರಲ್ಲಿ ಈ ರೀತಿಯ ದುಂದು ವೆಚ್ಚ ಮುಂದುವರಿದರೆ ಮುಂದೆ ಬರಬಹುದಾದ ದುರಂತವನ್ನು ನಾವೇ ಎದುರಿಸಬೇಕಾದೀತು. ಆದ ಕಾರಣ ಎಲ್ಲದರಲ್ಲೂ ಮಿತವನ್ನು ಅನುಸರಿಸುವುದು ಅಗತ್ಯವೆಂದು ಹೇಳಿದರು.

GANESH TUTORIAL COLLEGE
Opp: St. Aloysius Primary School, Kodialbail
Mangalore-3
Effective Couching will be given in maths Science, English, Commerce, Accountancy & ICW maths.
Specialists in English speaking course.

With Well Wishes From:
Phone: 23998 P.P.
Sri Shantha Durga Traders,
109, Shakir Complex
Mission Street,
Mangalore-575 001.
Distributors & Marketing Agents of Novino Batteries, Ayurshakthi Nirala Bar Soap, Tushara Vanaspati & Bengal Lamps for Dakshina Kannada District.

As we Commemorate its First Anniversary we wish "MUNGARU" Every success in the Years to Come
Grams: REPORTER Phone: 27629
DAILY MANGALORE MARKET REPORTS
(Pioneer English Daily on Indian Areca & Grocery Trade)
(Published simultaneously from Mangalore, Bangalore, Hubli, Davangere, Shimoga & Sirsi)
Admn. Office: BUNDER, MANGALORE - 575 001.
Sanil/Advt.

ದ್ವಿತೀಯ ವರ್ಷಕ್ಕೆ ಪಾದಾರ್ಪಣೆಗೈಯುವ "ಮುಂಗಾರು"ವಿಗೆ ಹಾರ್ದಿಕ ಶುಭಾಶಯಗಳು.
ಕೆ. ಸೋಮಯ್ಯ ಸುವರ್ಣ
ಜನತಾ ಹೋಲ್‌ಸೇಲ್ ವೈನ್ ಸ್ಟೋರ್ಸ್,
ಕಾಪು (ದ. ಕ)

M. Murali Mohan Shetty
B. E. (Civil)
Engineering Consultant, Architect & Contractors, Ideal Engineers
Opp: Venkatramana Temple
PUTTUR, 574 201.
Phone: 525

ರಾಜೇಶ್ ಪವರ್ ಪ್ರೆಸ್
ದರ್ಬೆ, ಪುತ್ತೂರು-574202.
ದೂರವಾಣಿ: 474 ಮತ್ತು 687

ಐತಪ್ಪ ಸಫಲ್ಯ,
ಧರ್ಮದರ್ಶಿ
ಲಕ್ಷ್ಮೀ ದೇವಿ ಬೆಟ್ಟ,
ರೈಲ್ವೆ ಸ್ಟೇಶನಿನ ಬಳಿ
ಪುತ್ತೂರು

ಹಾರ್ದಿಕ ಶುಭಾಶಯಗಳು:—
ಕೆ. ಯಸ್. ಆರ್. ಟಿ. ಸಿ.
ಸ್ಟಾಫ್ ಎಂಡ್ ವರ್ಕರ್ಸ್ ಯೂನಿಯನ್
(ರಿ. 189/82 ಎ. ಐ. ಟಿ. ಯು. ಸಿ.)
ಮಂಗಳೂರು ವಿಭಾಗ.
ಅಧ್ಯಕ್ಷರು. ಪ್ರಧಾನ ಕಾರ್ಯದರ್ಶಿ.
ಬಿ. ವಿ. ಕಕ್ಕಿಲ್ಲಾಯ. M. D. ಶೆಟ್ಟಿ.
Ex. M. L. A. ಮತ್ತು ಗೆಳೆಯರು.

ಫಿಲ್ಮ್ ಡಿವಿಜನ್

1982 ನವಂಬರ್‌ನಲ್ಲಿ ಹೊಸದಿಲ್ಲಿಯಲ್ಲಿ ಜರಗಿದ ವಿವಿಧ ಆಟೋಟ ಸ್ಪರ್ಧೆಗಳ 'ಏಶ್ಯಾಡ್-82' ಎಂಬ ಹೆಸರಿನ ಪರಿಪೂರ್ಣವಾದ ವರ್ಣ ಸಾಕ್ಷ್ಯ ಚಿತ್ರವೊಂದನ್ನು ಭಾರತ ಸರಕಾರದ ಚಲಚ್ಚಿತ್ರ ವಿಭಾಗ ಸಿದ್ಧಪಡಿಸಿದೆ.

ವಿವಿಧ ಆಟಗಳಲ್ಲಿನ ಸಾಹಸೀ ಮನೋಭಾವ, ಶಿಸ್ತುಬದ್ಧವಾದ ಸ್ಪರ್ಧಾ ಭಾವನೆ, ಅಮೋಘವೆನಿಸಿದ ಉತ್ಸುಕತಾ ಸ್ಫೂರ್ತಿ ಮೊದಲಾದುವನ್ನು ಚಿತ್ರವು ಪ್ರೇಕ್ಷಣೀಯ ರೀತಿಯಲ್ಲಿ ಸೆರೆಹಿಡಿದಿದೆ. ಈ ಚಿತ್ರ ಈಗ ಭಾರತದ ಮಹಾರಾಷ್ಟ್ರ, ಗುಜರಾತ್, ಬಿಹಾರ್ ಮತ್ತು ಆಂಧ್ರಪ್ರದೇಶ ಹೊರತು ಇತರ ಎಲ್ಲಾ ರಾಜ್ಯಗಳಲ್ಲಿ ವಾಣಿಜ್ಯ ಹಾಗೂ ವಾಣಿಜ್ಯೇತರ ಬಳಕೆಗೆ ಲಭ್ಯವಾಗಿರುತ್ತದೆ. ಚಿತ್ರದ ಬೆಲೆ ಮತ್ತಿತರ ವಿವರಗಳು ಇಂತಿವೆ:

1.	ಚಿತ್ರದ ಉದ್ದ	35 ಎಮ್‌ಎಮ್ – 4495.21 ಮೀಟರ್‌ಗಳು
		16 ಎಮ್‌ಎಮ್ – 1798.40 ಮೀಟರ್‌ಗಳು
2.	ಮಾರಾಟ ಬೆಲೆ	35 ಎಮ್‌ಎಮ್ – ರೂ. 45,750–00
		16 ಎಮ್‌ಎಮ್ – ರೂ. 29,850–00
3.	ವೀಡಿಯೊ ಕ್ಯಾಸೆಟ್ ದರ	ಕ್ಯಾಸೆಟೊಂದಕ್ಕೆ ರೂ. 500/-

ಚಿತ್ರಕ್ಕೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು ಮೊಖ್ತಾ ಅಥವಾ ಪತ್ರ ವ್ಯವಹಾರ ಮೂಲಕ ಪಡೆಯಬಹುದಾದ ವಿಳಾಸ: ಚಿತ್ರ ಹಂಚಿಕೆಯ ಆಫೀಸರ್ – ಇನ್-ಚಾರ್ಜ್, ಫಿಲ್ಮ್ಸ್ ಡಿವಿಜನ್, ಭಾರತ ಸರಕಾರ, 24 – ಡಾ। ಜಿ. ದೇಶಮುಖ್ ಮಾರ್ಗ, ಮುಂಬಯಿ–400 026 (ಟೆಲಿಫೋನ್ ಸಂಖ್ಯೆ 361461).

ಡಿಎವಿಪಿ 85/223

ಆಕಾಶವಾಣಿ

ಮಂಗಳೂರು

12-9-85 (ಗುರುವಾರ)

ಬೆಳಗ್ಗೆ 6–35 ವಂದನ, ನಂತರ ವಿಚಾರ ದೀಪಿಕೆ, 7–15 ಸಂಗೀತ ಸುಧಾ, 7–45 ಕನ್ನಡ ಹಾಡುಗಳು, 8–21 ಚಿತ್ರಗೀತೆ. 8–30 ಎನ್. ರಮಣಿ–ಕೊಳಲು.

ಮಧ್ಯಾಹ್ನ 12-30 ಎಂ. ಜೆ. ರಾವ್-ಸರಸ್ವತಿ ವೀಣಾ, 1–00 ಕನ್ನಡ ಹಾಡುಗಳು, 1-20 ಚಿತ್ರಗೀತೆ, 2–10 ಹಿಂದಿ ಚಿತ್ರಗೀತೆಗಳು.

ಸಂಜೆ 5–30 ಝೇಂಕಾರ ಕಾರ್ಯಕ್ರಮ. 5-50 ವಾದ್ಯವೃಂದ, 6–15 ಶಿರ್ಕಾಳಿ ಗೋವಿಂದ ರಾಜನ್–ಹಾಡುಗಾರಿಕೆ, 6–50 ಕೃಷಿರಂಗ, 7–20 ಚಿತ್ರಗೀತೆ, 8–10 ಯುವವಾಣಿ, 9–16 ಇಂಗ್ಲಿಷ್ ಭಾಷಣ 9–30 ನಾಟಕ.

ಕೋರ್ಟು ನೋಟೀಸು

ಕಾಸರಗೋಡು ಎಡಿಶನಲ್ ಸಬ್‌ಕೋರ್ಟಿನಲ್ಲಿ

I.A. No. 155/1984 in O. S. No. 80/1981

ಟಿ. ಎಮ್. ಅಬ್ದುಲ್ ರಹಿಮಾನ್ ಕೂಡಾ ಅರ್ಜಿದಾರರು

ಮತ್ತು

ಆರ್. 9. ಕಾಸರಗೋಡು ತಾಲೂಕು ಪಾಡಿ ಗ್ರಾಮದ ಉಡುಪು-ಮೂಲೆಯಲ್ಲಿ ವಾಸ್ತವಿಸುವ ಶಂಭಟ್ಟರ ಹೆಂಡ್ತಿ, ರಾಮ ಭಟ್ಟರ ಮಗಳು ಗೌರಮ್ಮ

ಆರ್. 13. ಬೆಂಗಳೂರು ಶಿವಾಜಿ ನಗರದಲ್ಲಿ ಬಸ್‌ಸ್ಟೇಂಡ್ ಕರ್ನಲ್ ಹೋಟೆಲಿನಲ್ಲಿ ವಾಸ್ತವಿಸುವ ಮಾಧವ ಭಟ್ಟರ ಹೆಂಡ್ತಿ ವೆಂಕಟೇಶ್ವರಿ ಅಮ್ಮ

ಇವರ ಹಾಜರಾತಿ ಬಗ್ಗೆ ಕೇಸು 17-10-1985 ಇಟ್ಟಿರುವ ವಿಷಯವು ಈ ಮೂಲಕ ತಿಳಿಸುತ್ತೇನೆ.

ಕೋರ್ಟ್ ಹುಕ್ಕುಂ ಮೇರೆಗೆ

ಕಾಸರಗೋಡು ಪಿ.ವಿ.ಕೆ. ನಾಯರ್
6–9–1985 ಅರ್ಜಿದಾರರ ಎಡ್ವಕೇಟ್.

ದಕ್ಷಿಣ ಕನ್ನಡಕ್ಕೆ ಮೇರ್ಥಿ ಚಹಾ ಒಳ್ಳೆಯ ದಿನ ಆರಂಭಿಸುವ ಮೇರ್ಥಿ ಅತ್ಯುತ್ತಮ ಚಹಾ. ತೋಟದಿಂದ ಈಗ ತಾನೆ ತಯಾರಿಸಿ ಪೆಟ್ಟಿಗೆಯಲ್ಲಿ ಬರುವಂತಹ
ಕೋರ, ಸಪೂರ ಪರಿಮಳಯುಕ್ತ, ರುಚಿ ಬಣ್ಣ, ಮತ್ತು ರಸಗಳಂಥಹ ಉತ್ಕೃಷ್ಟ ಗುಣಗಳುಳ್ಳ ಚಹಾ ತಮಗೆಲ್ಲಿಯೂ ಸಿಗದು!
ಮೇರ್ಥಿ ಕುಡಿದವರಿಗೆ ಶ್ರೇಷ್ಠ ಚಹಾ ಕುಡಿದಂತಾಗುವುದು.
ರಖಂ ಮತ್ತು ಚಿಲ್ಲರೆ ಮಾರಾಟಕ್ಕೆ ಸಂಪರ್ಕಿಸಿರಿ.
ನಿರ್ಮಲ್ ಏಜೆನ್ಸೀಸ್ & ಎಂಟರ್‌ಪ್ರೈಸಸ್
C/o. ಪಿ. ನಜರೆತ್ & ಸನ್ಸ್, ಪ್ರಿಂಟರ್ಸ್ & ಸ್ಟೇಶನರ್ಸ್
ಮೈದಾನ್ ರೋಡ್, ಮಂಗಳೂರು-575001.
ಫೋನ್: 28592 (ಮನೆ)
ಸಮಯ: ರಾತ್ರಿ 8ರಿಂದ ಬೆಳಗ್ಗೆ 9ರ ತನಕ

ಗಂಧರ್ವ ಬಾರ್ ಆಂಡ್ ರೆಸ್ಟೋರೆಂಟ್
ಸಕಲೇಶಪುರ ಬಿ. ಎಂ. ರೋಡ್.
ಮುಂಗಾರು ದೀನ ದಲಿತರ ಏಳಿಗೆಗಾಗಿ
ಒಂದು ವರ್ಷ ಮಾಡಿದ ಹೋರಾಟಕ್ಕೆ
ನಮ್ಮ ಶುಭಾಶಯಗಳು
ಮಾಲಕರು:
ವಿಠಲ್
ಗಂಧರ್ವ ಬಾರ್
ಸಕಲೇಶಪುರ.

ಪಲ್ಲವಿ ಬಾರ್ ಆಂಡ್ ರೆಸ್ಟೋರೆಂಟ್
ಅಶೋಕರೋಡ್, ಸಕಲೇಶಪುರ.
ಜನಪರವಾದ ಪತ್ರಿಕೆಯಾಗಿ ಒಂದು ವರ್ಷ
ತುಂಬಿದ ಮುಂಗಾರುವಿಗೆ ಶುಭಾಶಯ
ಮಾಲಕರು:
ಶ್ರೀನಿವಾಸ ಸಕಲೇಶಪುರ.

FOR GENUINE PARTS
FOR ALL KINDS OF CARS, JEEPS, AMBASSADORS, STANDARD 20, MATADORS AND OTHER VEHICLES.
Contact:
M/S VISHWA AUTOMOBILES
NEAR BAZAR POST OFFICE
PUTTUR - 574 201 (D. K)

ಗಣೇಶ್ ರೇಡಿಯೋ ಕೋರ್ಪೊರೇಶನ್
ಏಳ್ಮುಡಿ, ಪುತ್ತೂರು. ದೂರವಾಣಿ: 234
ಫಿಲಿಪ್ಸ್ ರೇಡಿಯೋ, ಮಿನು ಮಿಕ್ಸ್, ಮಿಕ್ಸರ್-ಗ್ರೈಂಡರ್, ರ್‍ಯಾಲಿ ಫ್ಯಾನ್, ಅಹುಜ ಧ್ವನಿವರ್ಧಕಗಳು, ಮೆಕೊಮಿಕ್ಸ್ ಇತ್ಯಾದಿ ಗೃಹೋಪಯೋಗಿ ಸಾಮಾಗ್ರಿಗಳ ಅಧಿಕೃತ ಮಾರಾಟಗಾರರು.

Expert Automotive Engineering from the proven technicians.
DAWN AUTO WORKS
Opp. Kankanady Garodi, Kankanady,
Mangalore-575 002
Prop.: GOPAL K.
Tel.: 25754

ಕರ್ನಾಟಕ ಸರಕಾರ

ಕಾರ್ಯಪಾಲಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ.

ನಂ. 25: ಡಿ4: ಎನ್‌ಐಎಸ್: 5:85–86.

ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣಕ್ಕಾಗಿ ಟೆಂಡರು

ಈ ಕೆಳಕಂಡ ಕೆಲಸಗಳಿಗಾಗಿ ನೊಂದಾಯಿತ ಕಂಟ್ರಾಕ್ಟರುಗಳಿಂದ ಟೆಂಡರುಗಳನ್ನು ದಿ: 25-9-85 ರಂದು ಸಂಜೆ 4–00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಸಾಧ್ಯವಾದಲ್ಲಿ ಅಂದೇ ಟೆಂಡರನ್ನು ಒಡೆಯಲಾಗುವುದು. ಕೆಲಸದ ವಿವರಗಳು ಕೆಳಕಂಡಂತಿದೆ:–

1. ಮಡಿಕೇರಿ ತಾಲೂಕು ಬಾಗಮಂಡಲದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕಟ್ಟಡ ಹಾಗೂ ಸಿಬ್ಬಂದಿ ಕ್ವಾಟರ್ಸ್ ನಿರ್ಮಾಣ: ಅಂದಾಜು ಮೊತ್ತ ರೂ. 5,90,000; ಇಎಂಡಿ ರೂ. 11,800; ಫಾರಂ ಬೆಲೆ ರೂ. 75 + ತೆರಿಗೆಗಳು; ಕಾಲಮಿತಿ 15 ತಿಂಗಳುಗಳು; ಕಂಟ್ರಾಕ್ಟರ್ ದರ್ಜೆ–2 ಮತ್ತು ಮೇಲ್ಪಟ್ಟು.
2. ವಿರಾಜಪೇಟೆ ತಾಲೋಕು ಉಪ ಬಂದಿಖಾನೆ ಕಟ್ಟಡಕ್ಕೆ ಆಲಟ್ರೇಷನ್ಸ್ ಹಾಗೂ ಅಡಿಷನ್ಸ್: ಅಂದಾಜು ಮೊತ್ತ ರೂ. 84,426; ಇಎಂಡಿ ರೂ. 1111; ಫಾರಂ ಬೆಲೆ ರೂ. 10 + ತೆರಿಗೆಗಳು, ಕಾಲಮಿತಿ–8 ತಿಂಗಳುಗಳು; ಕಂಟ್ರಾಕ್ಟರ್‌ದರ್ಜೆ 3 ಮತ್ತು ಮೇಲ್ಪಟ್ಟು.

ಮೇಲ್ಕಂಡ ಎಲ್ಲಾ ಕೆಲಸಗಳಿಗೂ ಫಾರಂಗಳಿಗಾಗಿ ಮನವಿ ಸ್ವೀಕರಿಸುವ ಕಡೆಯ ದಿನಾಂಕ 23–9-85 ಸಂಜೆ 6-00 ಗಂಟೆಯವರೆಗೆ; ಫಾರಂಗಳನ್ನು ದಿ: 13-9-85 ರಿಂದ 23-9-85 ರವರೆಗೆ ನೀಡಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಪಡೆಯಬಹುದು.

ವಾ.ಪ್ರ.ಇ. 2173

ಮುಂಗಾರುವಿನ ಪ್ರಥಮ ಜನ್ಮದಿನೋತ್ಸವಕ್ಕೆ
ಅತ್ಯುಚ್ಚ ಪ್ರಗತಿಯ ಹಾರೈಕೆಗಳೊಂದಿಗೆ
ಜೆ. ಕೆ. ಜೈನ್, ಡಿ. ಕೆ. ಜೈನ್, ಆರ್. ಕೆ. ಜೈನ್,
ಶ್ರೀಮತಿ ಕವಿತ ಜೆ. ಕೆ, ಜೆ. ಕವನಾ ಜೈನ್, ಮತ್ತು
ಜೆ. ಕಾರವೇಲ ಜೈನ್, ಆಕರ್ಷಣ ಉಜಿರೆ, ದ. ಕ.

ಗಾಯಿತ್ರಿ ಹೋಟೆಲ್
ಸಕಲೇಶಪುರ ಬಸ್ ನಿಲ್ದಾಣದ ಹಿಂಭಾಗ.
ಒಂದು ವರ್ಷದ 'ಮುಂಗಾರು'ವಿನ
ಬೆಳವಣಿಗೆಗೆ ನಮ್ಮ ಶುಭಾಶಯಗಳು
ಮಾಲಕರು: ಕೃಷ್ಣರಾವ್
ಸಕಲೇಶಪುರ.

M/s. ಮುಳಿಯ ಕೃಷ್ಣಭಟ್ ಎಂಡ್ ಸನ್ಸ್
ಚಿನ್ನ, ಬೆಳ್ಳಿ, ಆಭರಣ ವ್ಯಾಪಾರಿಗಳು
ಪ್ರಧಾನ ರಸ್ತೆ, ಪುತ್ತೂರು. ದೂರವಾಣಿ: 74
"ನಿಮ್ಮ ಸುವರ್ಣ ಚಿಂತನೆಗೆ ನಮ್ಮ ವಿಶ್ವಾಸಾರ್ಹ ಸೇವೆ"

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರ ಕಛೇರಿ, ದ. ಕ. ಮಂಗಳೂರು.
ಕ್ರ. ಸಂ. 19481–ಇತರ–1–82–83./1235

ಅಂತಿಮ ತಿಳುವಳಿಕೆ ಪತ್ರ

ಶ್ರೀಮತಿ ಚಾರ್‌ಲೋಟ್ ಮಥಾಯಿಸ್,
ದ್ವಿತೀಯ ದರ್ಜೆ ಗುಮಾಸ್ತರು (ಗೈರುಹಾಜರಿ),
ಸರಕಾರಿ ಕಿರಿಯ ಕಾಲೇಜು ಬೆಳ್ಳಾರೆ (ಸುಳ್ಯ ತಾಲೂಕು),
ಅಂಚೆ ಕಾಡು, ಬಜ್ಪೆ ಮಂಗಳೂರು-575004.

ವಿಷಯ: ಶ್ರೀಮತಿ ಚಾರ್‌ಲೋಟ್ ಮಥಾಯಿಸ್ ದ್ವಿ. ದ. ಗು. ರವರ ಮೇಲಿನ ಆಪಾದನೆಯ ಬಗ್ಗೆ ಅಂತಿಮ ತಿಳುವಳಿಕೆ.

ಉಲ್ಲೇಖ: ಈ ಕಛೇರಿಯ ಜ್ಞಾಪನ ಪತ್ರ, ಸಂ.ಎ4–19481–ಇತರ-82–83 ದಿ:2–1–85 ಹಾಗೂ 27–5–85.

ಉಲ್ಲೇಖದಲ್ಲಿ ನಮೂದಿಸಲಾದ ಜ್ಞಾಪಕ ಪತ್ರ ದಿ:2–1–85ರಂತೆ ಶ್ರೀಮತಿ ಚಾರ್‌ಲೋಟ್ ಮಥಾಯಿಸ್ (ಗೈರುಹಾಜರಿ) ದ್ವಿತೀಯ ದರ್ಜೆ ಗುಮಾಸ್ತರು ಸರ್ಕಾರಿ ಕಿರಿಯ ಕಾಲೇಜು ಬೆಳ್ಳಾರೆ ಸುಳ್ಯ ತಾಲೂಕುರವರಿಗೆ ಸದ್ರಿಯವರು ದಿ: 1–4–80ರಿಂದ ರಜೆ ಕೋರಿಕೆ ಬರೆದು ರಜೆಯು ಮಂಜೂರಾಗದೆ ಹಾಗೂ ಇಲಾಖಾ ಪೂರ್ವಾನುಮತಿಯಿಲ್ಲದೆ ಕೇಂದ್ರ ಸ್ಥಳವನ್ನು ಬಿಟ್ಟು ಹೋಗಿರುತ್ತಾರೆಂದೂ ಈ ಬಗ್ಗೆ ಜ್ಞಾಪನ ತಲುಪಿದ ಹದಿನೈದು ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗತಕ್ಕದೆಂದೂ ತಿಳಿಸಿದ ಪತ್ರವು ದಿ:8–1–85ರಂದು ಆಪಾದಿತರಿಂದ ಅಧಿಕಾರ ಹೊಂದಿದವರಿಂದ ಸ್ವೀಕೃತಿಯಾಗಿದ್ದರೂ, ನಿಶ್ಚಿತ ಅವಧಿಯಲ್ಲಿ ಯಾವುದೇ ಪ್ರತಿಕ್ರಿಯೆ ಕಾಣದೇ ಇದ್ದುದರಿಂದ ಈ ಕಛೇರಿಯ ಜ್ಞಾಪನ ದಿ:27–5–85ರಂದು ಆಪಾದಿತರನ್ನು ಕರ್ನಾಟಕ ಸೇವಾ ನಿಯಮಾವಳಿ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು)ರ ನಿಯಮದಂತೆ ಪದಚ್ಯುತಿಗೊಳಿಸಲಾಗುವುದೆಂದು ತಿಳಿಸುವ ಜ್ಞಾಪನವನ್ನು ಮೇಲಿನ ವಿಳಾಸಕ್ಕೆ ಕೊಡಲಾಗಿ, ಸದ್ರಿ ಲಕೋಟೆಯು ದಿ:7–6–85ರ ಅಂಚೆ ಇಲಾಖೆಯ ಸಿಬ್ಬಂದಿಯವರಿಂದ "ಲೆಫ್ಟ್ ಇಂಡಿಯಾ" ಎಂಬ ಷರಾ ಬರೆದು ಮರುವಾಪಸಿಯಾಗಿರುತ್ತದೆ.

ಆದುದರಿಂದ ಶ್ರೀಮತಿ ಚಾರ್‌ಲೋಟ್ ಮಥಾಯಿಸ್‌ರವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ತಿಳುವಳಿಕೆ ಪತ್ರ ಪ್ರಕಟಣೆಯಾದ ಹದಿನೈದು ದಿನಗಳೊಳಗೆ ನೀವು ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಕ.ಸೇ.ನಿ. (ವ.ನಿ.ಅ.)ರ ನಿಯಮದಂತೆ ಉದ್ದೇಶಿತ ಕ್ರಮವನ್ನು ಮುಂದಿನ ಯಾವುದೇ ಸೂಚನೆಯಿಲ್ಲದೆ ತೆಗೆದುಕೊಳ್ಳಲಾಗುವುದು ಎಂದು ತಿಳಿಯುವುದು.

ಸಹಿ
ಶಿಸ್ತು ಪಾಲನಾಧಿಕಾರಿ ಹಾಗೂ
ಉಪನಿರ್ದೇಶಕರು ದ. ಕ.
ಸಾರ್ವಜನಿಕ ಶಿಕ್ಷಣ ಇಲಾಖೆ,
ದ. ಕ. ಮಂಗಳೂರು.

ವಾ.ಪ್ರ.ಇ: 2188

ದಿನದಿನವೂ ಸಮೃದ್ಧಿಯ ಶಿಖರವೇರುತ್ತಿರುವ
"ಮುಂಗಾರು"ವಿಗೆ ಹಾರ್ದಿಕ ಶುಭಾಶಯಗಳು-
ಮಧುಸೂಧನ ರಾವ್,
ಕಾಫಿಕಾಡು ಹೌಸು,
ಜೋಕಟ್ಟೆ–574173,
ಮಂಗಳೂರು (ದ. ಕ.).
ಸ್ಪಂದನ ಏಜೆನ್ಸಿ,
C/o ಹೋಟೆಲ್ ಕಾಮಧೇನು,
ರೂಪಾ ಬಿಲ್ಡಿಂಗ್,
ಮಂಗಳೂರು–575001 (ದ.ಕ.).
ಫೋನ್: 28620.
ಯಾವುದೇ ರೀತಿಯ ಕೊಳವೆ ಬಾವಿ (Bore-Well) ಗಳಿಗೆ ನಮ್ಮನ್ನು ಸಂಪರ್ಕಿಸಿರಿ. ನೀವು ಅಪೇಕ್ಷಿಸಿದಲ್ಲಿ ಭೂಗರ್ಭ ಶಾಸ್ತ್ರಜ್ಞರಿಂದ Geological ಮತ್ತು Geo-Physical Survey ಮಾಡಿಸಲಾಗುವುದು. Bore-Well ಗೆ ಬೇಕಾದ ಪಂಪ್‌ಸೆಟ್ಟನ್ನೂ ಅಳವಡಿಸಿಕೊಡಲಾಗುವುದು.

ಮುತ್ತಾಗಿ ಸುರಿಯುತಿದೆ 'ಮುಂಗಾರು' ಮಳೆ
ಸಂತಸದಿ ನಲಿಯುತಿದೆ ಫಲಭರಿತ ಇಳೆ
ಎಲ್ಲೆಲ್ಲು ಸಂತಸ, ನೆಮ್ಮದಿಯ ಕಳೆ
ದಲಿತ ರೈತರು ಬೆಳೆದ ಜನ ಶಕ್ತಿ ಬೆಳೆ–
'ಮುಂಗಾರು'ವಿನ ಮೊದಲ ಹುಟ್ಟು ಹಬ್ಬಕ್ಕೆ
ಹಾರ್ದಿಕ ಶುಭಾಶಯಗಳೊಂದಿಗೆ,
ಮಂಜುನಾಥ ನಾಯರಿ ಮತ್ತು ಬ್ರದರ್ಸ್,
ಚಿತ್ರಪಾಡಿ.
ಪರಮೇಶ್ವರ ನಾಯರಿ ಮತ್ತು ಬ್ರದರ್ಸ್,
ಕಾರ್ಕಳ.

ಶುಭಾಶಯಗಳೊಂದಿಗೆ
ಪ್ರಗತಿ ಪಥದಲ್ಲಿರುವ ಪುತ್ತೂರಿನ ವಿಶ್ವಾಸಾರ್ಹ ಹಣಕಾಸು ಸಂಸ್ಥೆ
ಪ್ರಗತಿ ಇನ್‌ವೆಸ್ಟ್‌ಮೆಂಟ್ಸ್ (ರಿ).
ಪ್ಯಾಸ್ ಕಟ್ಟಡ, ಪುತ್ತೂರು, ದ. ಕ

With best wishes from:
Dr. M. B. Shetty, L.C.P.S., D.G.O.
&
Dr. Ajithkumar Shetty, M.B.B.S., D.G.O.
Mahadevi Maternity & Nursing Home, Kaup.

The Best Compliments from:
The Kundapura Agricultural Produce Co-op. Marketing Society Ltd. No. 1857
Kundapura-576201 (D. K.)
Phone: 405 (Off.)
PRABHAKER BIJOOR
Chairman.

ಉತ್ತಮ ತರದ ಚಿಪ್ಪು ಸುಣ್ಣ, ತೋಟಗಾರಿಕೆಯ ಉತ್ತಮ ಹುಡಿ ಸುಣ್ಣ, ಕಟ್ಟಡ ನಿರ್ಮಾಣದ ಸುಣ್ಣ, ತೋಟಕ್ಕೆ ಸಿಂಪಡಿಸುವ ಸುಣ್ಣ, ವೈಟ್‌ವಾಶ್ ಸುಣ್ಣ, ಮತ್ತು ಇತರ ಎಲ್ಲಾ ಗೊಬ್ಬರದ ಸುಣ್ಣಗಳ ಏಕೈಕ ಅನುಭವಿ ತಯಾರಕರು.
ಫ್ಯಾಕ್ಟರಿ:
ಭಾರತ್ ಲೈಮ್ ಇಂಡಸ್ಟ್ರೀಸ್
ಮುರ ಪುತ್ತೂರು, ದ. ಕ.
ಪ್ರೊಪ್ರೈಟರ್: ಕೆ. ಪುತ್ತು
ಡಿಪೋ ಮೈನ್ ರೋಡ್, ಪುತ್ತೂರು
ದ.ಕ. 574201.

ಸೇವನೆಯೆಉಲ್ಲಾಸಕ್ಕೆ! ಮನಸ್ಸಿನತೃಪ್ತಿಗೆ!!
ಕುದುರೆ ಮಾರ್ಕಿನ
ಮಂಗಳೂರು
ಜೈಭಾರತ್ ಬೀಡಿಗಳು

ವಿದ್ಯಾರ್ಥಿ ಸಮಾಲೋಚನಾ ಕೇಂದ್ರಗಳು

ರಾಜ್ಯದ ಕಾಲೇಜೊಂದರಲ್ಲಿ ಓದು ...ತ್ತ ವಿದ್ಯಾರ್ಥಿನಿಯೊಬ್ಬಳು ಇನ್ನೊಬ್ಬ ...ದ್ಯಾರ್ಥಿನಿಯನ್ನು ಚೂರಿಯಿಂದ ಇರಿದ ...ನೆಯೊಂದು ಕೆಲದಿನಗಳ ಹಿಂದೆ ವರದಿ ...ಗಿತ್ತು. ವಿದ್ಯಾರ್ಥಿಗಳಲ್ಲಿ ಇಂತಹ ...ನೆ ತೀರ ಸಾಮಾನ್ಯವೆನ್ನುವಂತೆ ನಡೆ ...ತ್ತಲೇ ಇರುತ್ತದೆ. ಇದರ ಜೊತೆಗೆ ...ಧ್ಯಾಪಕರನ್ನು ಬೆದರಿಸುವುದು, ಪರಾಂ ...ಲ್ಲಿ ಬಾಟ್ಲು ಅಪ್ಪಳಿಸುತ್ತ ಆಟ ಆಟ ...ಡಾಯಿಸುವುದು, ಹುಡುಗಿಯರನ್ನು ...ಡಾಯಿಸುವುದು, ತರಗತಿಯ ಕೊಠಡಿ ...ಲ್ಲಿ ಗದ್ದಲವೆಬ್ಬಿಸಿ ಮೆರೆಯುವುದು, ...ಾದಕ ದ್ರವ್ಯಗಳ ದಾಸರಾಗಿ ಓದಿನಲ್ಲಿ ...ಸಕ್ತಿ ಕಳೆದುಕೊಳ್ಳುವುದು, ರಾಜಕೀಯ ...ಾಯಕರ ಧರ್ಮ ಪಂಸೆಗಳನ್ನು ಬಳಸಿ ...ಚುನಾವಣೆ ಗೆಲ್ಲುವುದು, ಕ್ಷುಲ್ಲಕ ಕಾರಣ ...ಗಳಿಗಾಗಿ ಮುಷ್ಕರ ಮೆರವಣಿಗೆ ನಡೆಸು ...ವುದು, ಮತ್ತು ಉದ್ದೇಶ ಪೂರ್ವಕವಾಗಿ ಶಿಸ್ತು ಭಂಗ ನಿಯಮಗಳನ್ನು ಮುರಿಯು

ಆರ್. ಪಿ. ಹೆಗಡೆ

ವುದರಲ್ಲಿ ಹೆಗ್ಗಳಿಕೆಯ ಪ್ರದರ್ಶನ- ಇತ್ಯಾದಿಗಳೆಲ್ಲ ಇಂದು ಕಾಲೇಜುಗಳಲ್ಲಿ ಸಾಮಾನ್ಯ. ದಿನದಿನಕ್ಕೂ ಹೆಚ್ಚುತ್ತಿರುವ ವಿದ್ಯಾರ್ಥಿ ಅಶಾಂತಿ, ಶಿಷ್ಟಾಚಾರ ಮೀರಿದ ಸ್ವೇಚ್ಛೆಯ ವರ್ತನೆ ಪೀಡೆ ಮತ್ತು ಹಿಂಸೆಯಲ್ಲಿಯೇ ಸಂತೋಷ ಕಾಣುವ ವಿಕೃತಮನೋಭಾವ ಇವುಗಳ ಜೊತೆಗೆ ಅಧ್ಯಯನದಲ್ಲಿ ನಿರಾಸಕ್ತಿ- ಇವುಗಳಿಗೆಲ್ಲ ಕಾರಣವೇನು? ಇವಕ್ಕೆ ಪರಿಹಾರವಿಲ್ಲವೇ? ಪರಿಹಾರ ಕಂಡುಕೊಳ್ಳಬೇಕಾದ ಅಗತ್ಯವಿಲ್ಲವೇ! ಇವು ಇಂದು ಶಿಕ್ಷಣ ತಜ್ಞರನ್ನು, ಸಮಾಜ ವಿಜ್ಞಾನಿಗಳನ್ನು, ರಾಷ್ಟ್ರೀಯ ಧುರೀಣರನ್ನು, ಚಿಂತನಶೀಲರನ್ನು ಕಾಡುವ ಪ್ರಶ್ನೆಗಳಾಗಿವೆ.

ಒಂದು ರಾಷ್ಟ್ರದ ಮುನ್ನಡೆ ಅಲ್ಲಿನ ಯುವಜನರ ಶಕ್ತಿ, ಆಸಕ್ತಿ, ಸಕ್ರಿಯ ಆಲೋಚನೆ, ನಿಜಾಂಶ ಪರಿಶ್ರಮ ಮತ್ತು ರಾಷ್ಟ್ರ ಪ್ರಜ್ಞೆಯನ್ನು ಅವಲಂಬಿಸಿದೆ. ದೈಹಿಕವಾಗಿ, ಬೌದ್ಧಿಕವಾಗಿ, ಬಲಿಷ್ಠವಾದ ಯುವಜನಾಂಗ ಮಾತ್ರವೇ ಬಲಿಷ್ಠ ದೇಶವನ್ನು ಕಟ್ಟಬಲ್ಲುದು. ಅಭಿವೃದ್ಧಿ-ಗೌರವವನ್ನು ಸಾಧಿಸಬಲ್ಲುದು. ಇಂದೂ ಕೂಡಾ ಕೆಲಮಟ್ಟಿಗೆ ಯುವ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಸಾಧನೆಯನ್ನು ಎತ್ತರಿಸಿಕೊಳ್ಳುವುದರ ಜೊತೆಗೆ ಸಮಗ್ರ ವ್ಯಕ್ತಿತ್ವದ ಬೆಳವಣಿಗೆಯನ್ನೂ ಸಾಧಿಸಿ ಅಭಿಮಾನಕ್ಕೆ ಪಾತ್ರರಾಗುತ್ತಿದ್ದಾರೆ. ಆದರೆ ಉಚ್ಚ ಶಿಕ್ಷಣ ಪಡೆಯುತ್ತಿರುವ ಇಂದಿನ ಯುವ ಪೀಳಿಗೆಯಲ್ಲಿ ಇಂಥ ಗುಣ ಲಕ್ಷಣಗಳನ್ನು ಹೊಂದಿದವರ ಪ್ರತಿಶತ ಪ್ರಮಾಣ ಎಷ್ಟಿದೆ? ದಾರಿ ತಪ್ಪುತ್ತಿರುವ, ಶಿಕ್ಷಣದ ಉದ್ದೇಶವನ್ನೇ ಮರೆತಿರುವ ಯುವ ಜನಾಂಗಕ್ಕೆ ಸೂಕ್ತ ಮಾರ್ಗದರ್ಶನವಿಲ್ಲದಿದ್ದರೆ ದುರಂತವನ್ನು ನಾವೇ ಆಹ್ವಾನಿಸಿದಂತಲ್ಲವೆ? ಅವರೊಡನೆ ಮುಕ್ತವಾಗಿ ಸಮಾಲೋಚಿಸಿ ಮನೋಗ್ರಾಹಿಯಾಗಿ ಅವನ್ನು ಕಂಡುಕೊಳ್ಳುವುದು ಬೇಡವೇ? ಇಂಥ ಮಾರ್ಗದರ್ಶನ ನೀಡಬೇಕಾದವರು ಯಾರು? ಎಲ್ಲರೂ ಇದು ತಮಗೆ ಸಂಬಂಧಿಸಿದ್ದಲ್ಲವೆಂದು ತಳ್ಳಿಹಾಕುತ್ತ ಹೋದರೆ ಪರಿಣಾಮ ಮತ್ತಷ್ಟು ಘೋರವಾದೀತಲ್ಲವೇ? ಶಿಕ್ಷಣಕ್ಕಾಗಿ ಪ್ರವೇಶ ಪಡೆದಿರುವ ಯುವಜನರೊಡನೆ ಸಂಪರ್ಕ ಬರುವ ಮತ್ತು ಅವರನ್ನು ವಿದ್ಯಾರ್ಥಿಗಳಾಗಿ ಸ್ವೀಕರಿಸಿ ಸುಶಿಕ್ಷಿತರನ್ನಾಗಿ ಮಾಡುವ ಜವಾಬ್ದಾರಿ ಹೊತ್ತ ಶಿಕ್ಷಣಾಲಯಗಳು ಈ ದಿಸೆಯಲ್ಲಿ ಏನು ಮಾಡಬಹುದು? ವಿದ್ಯಾರ್ಥಿ ಯುವಜನರ ಕ್ರಿಯೆ ಪ್ರತಿಕ್ರಿಯೆಗಳನ್ನು ಎಚ್ಚರದಿಂದ ಅಧ್ಯಯನ ಮಾಡಿ, ಅವುಗಳ ಹಿಂದೆ ಇರುವ ಅವರ ಸಮಸ್ಯೆ- ಮನೋಭಾವಗಳ ಮೂಲವನ್ನು ಅರಿತು ಅವರೊಡನೆ ಸಮಾಲೋಚಿಸಿ ಸಾಧ್ಯವಾದ ಸಲಹೆ, ಮಾರ್ಗದರ್ಶನ, ಸಹಕಾರವನ್ನು ನೀಡುವುದರಿಂದ ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವಿಲ್ಲವೇ- ಈ ಎಲ್ಲ ಪ್ರಶ್ನೆಗಳ ಫಲವಾಗಿಯೇ ಹುಟ್ಟಿಕೊಂಡದ್ದು ವಿದ್ಯಾರ್ಥಿ ಸಮಾಲೋಚನಾ ಕೇಂದ್ರ.

ಏನು ಕಾರಣ?

ಹಾಗೆ ನೋಡಿದರೆ ಆತಂಕಕಾರಿ ವರ್ತನೆಯುಳ್ಳ ವಿದ್ಯಾರ್ಥಿಗಳ ಸಂಖ್ಯೆ ಯಾವಾಗಲೂ ಕಡಿಮೆಯೇ. ಆದರೆ ಅವರ ವರ್ತನೆಯ ಪ್ರಭಾವ-ಪರಿಣಾಮಗಳು ಅಮಾಯಕ ವಿದ್ಯಾರ್ಥಿಗಳನ್ನೂ ಬಲಿ ತೆಗೆದುಕೊಳ್ಳುತ್ತದೆ. ಇವರ ದೋಷಯುಕ್ತ ನಡೆಗೆ ಕಾರಣಗಳೂ ಹಲವು. ಶಿಕ್ಷಣದ ಉದ್ದೇಶ ಹಾಗೂ ಮಹತ್ವದ ಬಗೆಗೆ ಗಂಭೀರವಾದ ಅರಿವು ಇಲ್ಲದಿರುವುದು. ಓದಿದರೂ ಉದ್ಯೋಗ ಸಿಗಲಾರದೆಂಬ ನಿರಾಶೆ, ಸಮಾಜ ಮತ್ತು ರಾಜಕೀಯದಲ್ಲಿ ಬೇರೂಬಿಟ್ಟ ಭ್ರಷ್ಟತೆ, ಗುಂಪುಗಾರಿಕೆ, ಜಾತೀಯತೆ, ಎಲ್ಲವನ್ನೂ ಊದಾಸೀನದಲ್ಲಿಯೇ ತಳ್ಳಿಹಾಕುವ ವಯೋಸಹಜ ಹುಡುಗಾಟಿಕೆ, ಅಧ್ಯಾಪಕರು ಆಡಳಿತ ವರ್ಗದಲ್ಲಿನ ಅದಕ್ಷತೆ-ಅಸಡ್ಡೆ, ಮನೆಯ ಪರಿಸರ, ಭವಿಷ್ಯ ಜೀವನದ ಬಗೆಗೆ ಗಂಭೀರ ನಿಲುವಿಲ್ಲದ ಲಘುಮನೋಭಾವ, ಮತ್ತು ಸೂಕ್ತ ಮಾರ್ಗದರ್ಶನ ಸಲಹೆಗಳ ಕೊರತೆ. ಹಾಗೆಂದು, ತಮ್ಮ ಶೈಕ್ಷಣಿಕ ಸಾಧನೆಯಲ್ಲಿ, ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಆಸಕ್ತಿಯಿದ್ದರೂ ಸಾಧಿಸಲಾಗದ ಕೆಲವರು ಈ ಸಮೂಹದಲ್ಲಿರಬಹುದು. ಆರ್ಥಿಕ ದಾರಿದ್ರ್ಯ, ಕೌಟುಂಬಿಕ ಸಮಸ್ಯೆ, ಚಿಪ್ಪಿನೊಳಗೇ ಮುದುಡಿಕೊಳ್ಳುವ ಸಂಕೋಚದ ಸ್ವಭಾವ, ಅಕಾರಣಭಯ, ಬೆಳೆಸಿಕೊಂಡು ಬಂದ ಕೀಳರಿಮೆ, ಮಂದಬುದ್ಧಿ, ಅಂಗವೈಕಲ್ಯ- ಮುಂತಾದ ಹಲವು ಕಾರಣಗಳೂ ಅವರ ಪ್ರಗತಿಯ ದಾರಿಗೆ ಸವಾಲಾಗಬಹುದು. ವಿವಿಧ ಬಗೆಯ ಒತ್ತಡ ಪ್ರಲೋಭನೆ, ಆಕರ್ಷಣೆಗಳೂ ಕೆಲವರನ್ನು ದಾರಿತಪ್ಪಿಸಬಹುದು. ಅಂದರೆ, ಇವೇ ಇಷ್ಟೇ ಎಂದು ಹೇಳಲಾಗದ ಅನಪೇಕ್ಷಿತ ಅನಿರೀಕ್ಷಿತ ಸಮಸ್ಯೆಗಳೂ ತಲೆದೋರಿ ಶಿಕ್ಷಣದ ಸಹಜಗತಿಗೆ ಅಡ್ಡಿಯುಂಟು ಮಾಡಬಹುದು. ಎಲ್ಲೆಡೆಗೂ ಸಾಮಾನ್ಯವಾಗಿ ತೋರಿಬರುವ ತೊಂದರೆಗಳ ಜೊತೆಗೆ ಅಥವಾ ಬದಲಿಗೆ ನಿರ್ದಿಷ್ಟ ಪರಿಸರಕ್ಕೆ ವಿಶಿಷ್ಟವಾದ ಹಲವು ಹಳತು ಹೊಸ ಸಮಸ್ಯೆಗಳು ಗೋಚರಿಸಬಹುದು. ಇದರಿಂದಾಗಿ ಸಮಾಲೋಚನೆ ಮಾರ್ಗದರ್ಶನಗಳಿಗೆ ಹೊಸ ಅಗತ್ಯಗಳೂ ತಲೆದೋರಬಹುದು. ಲೀಕೆಯ ಬಗೆಗಿನ ನಿಜವಾದ ಕಾಳಜಿಯಿರುವವರ ಪಾಲಿಗೆ ಇಂಥ ಸಮಾಲೋಚನಾ ಕೇಂದ್ರಗಳ ಅಗತ್ಯವಂತೂ ವಿವಾದಾತೀತ.

ವಿದ್ಯಾರ್ಥಿಗಳ ಮಾರ್ಗದರ್ಶನ-ಸಲಹೆಗಾಗಿ ಕೇಂದ್ರ ತೆರೆಯುವಾಗ ಮೊದಲ ಹೆಜ್ಜೆಯೆಂದರೆ ಅಧ್ಯಾಪಕರ ಪುಟ್ಟ ಸಮಿತಿಯನ್ನು ರಚಿಸುವುದು ಮತ್ತು ನಿರ್ದಿಷ್ಟ ಪಡಿಸಿದ ವೇಳೆಯಲ್ಲಿ ಹಾಗೂ ಅಗತ್ಯವಾದಾಗ ಸಭೆ ಸೇರಿ ಸಮಾಲೋಚನೆ ನಡೆಸುವುದು. ವಿದ್ಯಾರ್ಥಿಗಳು ತಾವಾಗಿಯೇ ತಮ್ಮ ಅಹವಾಲುಗಳನ್ನು ಸಮಿತಿಗೆ ನಿವೇದಿಸಿ ಪರಿಹಾರ ಯಾಚಿಸಬಹುದು. ಅಥವಾ ಸಂದರ್ಭ ಒದಗಿದಾಗ ಸಮಿತಿಯೇ ವಿದ್ಯಾರ್ಥಿಗಳನ್ನು, ಅಗತ್ಯವೆನಿಸಿದರೆ ಪಾಲಕರನ್ನು ಕರೆಸಿ ಸಮಾಲೋಚನೆ ನಡೆಸಬಹುದು.

ಏನೇನು ಮಾಡಬಹುದು?

ಸಮಾಲೋಚನಾ ಕೇಂದ್ರಗಳು ಮಾಡಬಹುದಾದ ಕೆಲಸಗಳನ್ನು ಸ್ಥೂಲವಾಗಿ ಗಮನಿಸಬಹುದು. ವಿದ್ಯಾರ್ಥಿಯು ವಿದ್ಯಾಲಯದಲ್ಲಿ ಪ್ರವೇಶ ಪಡೆಯುವಾಗಿನಿಂದಲೇ ಕೇಂದ್ರದ ಕೆಲಸ ಪ್ರಾರಂಭ. ತಮ್ಮ ಶಾಲೆಯಲ್ಲಿ ಅಧ್ಯಯನಕ್ಕಿರುವ ಅವಕಾಶ ಬೋಧನಾ ವಿಷಯಗಳು, ಭವಿಷ್ಯದ ನಿಶ್ಚಿತ ಕಲ್ಪನೆಯ ಆಧಾರದ ಮೇಲೆ ಆಯ್ಕೆ ಮಾಡಬಹುದಾದ ವಿಭಾಗ ಮತ್ತು ವಿಷಯಗಳು, ದೊರೆಯುವ ಸೌಲಭ್ಯ-ಮುಂತಾದವುಗಳ ಕುರಿತು ಮಾರ್ಗದರ್ಶನ ಸಲಹೆ ನೀಡುವುದರಿಂದ ಮೊದಲಾಗುತ್ತದೆ. ಕೇಂದ್ರದ ಜವಾಬ್ದಾರಿ, ತರಗತಿಯ ಕೊಠಡಿಯಲ್ಲಿ ವಿದ್ಯಾರ್ಥಿಗೆ ಎದುರಾಗುವ ಸಮಸ್ಯೆ, ಪಾಠದ ವಿಧಾನ, ಅಧ್ಯಾಪಕರ ಮನೋವೃತ್ತಿ, ಸಹಪಾಠಿಗಳ ಕಿರುಕುಳ, ಸೌಲಭ್ಯಗಳ ಕೊರತೆ, ಗ್ರಂಥಾಲಯದ ಅಗತ್ಯ ಸೌಲಭ್ಯ- ಅವಕಾಶಗಳ ಅಲಭ್ಯತೆ, ಪಠ್ಯೇತರ ಚಟುವಟಿಕೆಗಳ ಮಾಹಿತಿ, ಅಧ್ಯಯನ-ಪರೀಕ್ಷೆಯ ಸಂದರ್ಭದಲ್ಲಿನ ಸಮಸ್ಯೆಗಳು ಮುಂತಾದುವುಗಳಿಗೆಲ್ಲ ಇಲ್ಲಿ ಸಮಾಲೋಚನೆಗೆ ಮತ್ತು ಸಾಧ್ಯವಿರುವ ಪರಿಹಾರಕ್ಕೆ ಇಲ್ಲಿ ಅವಕಾಶವಿದೆ.

ವಿದ್ಯಾರ್ಥಿಗಳ ಗೈರುಹಾಜರಿ, ನಿಯಮ ಶಿಸ್ತುಗಳ ಭಂಗ, ಅವನ್ನು ಪಾಲಿಸಬೇಕಾದ ವಿಧಾನದ ಮಾಹಿತಿ, ನಡತೆಯಲ್ಲಿನ ಕಾರ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವುದು, ಮಾನವೀಯ ಸಂಬಂಧ ಸ್ಥಾಪನೆ, ವ್ಯಕ್ತಿತ್ವ ವಿಕಾಸಕ್ಕೆ ಕೈಗೊಳ್ಳಬೇಕಾದ ಉಪಕ್ರಮಗಳು.

ವಿದ್ಯಾರ್ಥಿಗಳ ಸಮಯ, ಶ್ರಮ, ಪ್ರತಿಭೆಗಳನ್ನು ದುಡಿಸಿಕೊಂಡು ಶೈಕ್ಷಣಿಕ ಗುಣಮಟ್ಟವನ್ನು ಎತ್ತರಿಸುವಲ್ಲಿ ಮತ್ತು ಉತ್ತಮ ವ್ಯಕ್ತಿತ್ವ ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಳ್ಳುವಂತೆ ಮಾಡಬೇಕಾದ ಅಗತ್ಯವಿದೆ. ಇಲ್ಲಿ ಸಮಾಲೋಚನಾ ಕೇಂದ್ರಗಳ ಜವಾಬ್ದಾರಿಯೂ ಹೆಚ್ಚುತ್ತದೆ.

ಅಧ್ಯಯನದತ್ತ ಗಮನ, ಭವಿಷ್ಯದಲ್ಲಿ ಉತ್ತಮ ಆಯ್ಕೆಗೆ ಇರುವ ಅವಕಾಶಗಳು- ಮುಂತಾದ ಅನೇಕ ವಿಷಯಗಳ ಬಗೆಗೆ ತಿಳುವಳಿಕೆ, ಪರಿಚಯ, ದಾರಿತೋರುವುದು ತಮ್ಮ ತಿದ್ದಿಕೊಳ್ಳಲು ಸಲಹೆ-ಸೂಚನೆ ನೀಡುವುದು ಇವೆಲ್ಲ ಕೇಂದ್ರದ ಕಾರ್ಯವ್ಯಾಪ್ತಿಯಲ್ಲಿ ಬರುತ್ತವೆ.

ಸಮಾಲೋಚನಾ ಕೇಂದ್ರದ ಸದಸ್ಯರಿಗೆ ವಿದ್ಯಾರ್ಥಿಗಳ ಮನೋವಿಶ್ಲೇಷಣಾ ಜ್ಞಾನ ಇರಬೇಕು. ಅಲೆಯಲ್ಲದ ಕಟ್ಟುಪಾಡು, ಪೂರ್ವಾಗ್ರಹವಿಲ್ಲದ ನ್ಯಾಯಪರ ದೃಷ್ಟಿಕೋನ ಮಾನವೀಯ ಮನವೊಲಿಸುವುದರಲ್ಲಿ ವಿಶ್ವಾಸ ಮತ್ತು ಪ್ರಯತ್ನ. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯೊಡನೆ ಮಾನವೀಯ ಗುಣವಿಕಾಸಕ್ಕೆ ಹೆಚ್ಚಿನ ಒತ್ತು-ಕಾಳಜಿ. ವಿಶಿಷ್ಟ ಪ್ರತಿಭೆಗಳನ್ನು ಗುರುತಿಸಿ ಮೆಚ್ಚುಗೆ, ಪ್ರೋತ್ಸಾಹ, ಮಾರ್ಗದರ್ಶನ ಸಹಾಯ ಒದಗಿಸುವುದು, ಶಾಂತಿ, ಶಿಸ್ತು, ನಿಯಮಪಾಲನೆಗಳ ಅರಿವು ಮೂಡಿಸುವುದು, ಸೌಮನಸ್ಯದ, ಸದ್ಭಾವನಾಯುಕ್ತ ಸಂಬಂಧದ ಅರಿವನ್ನು ಮನದಟ್ಟು ಮಾಡಿಕೊಡುವುದು, ಸಹಕಾರ, ಸೌಜನ್ಯ, ಸಂಯಮಗಳ ಅಗತ್ಯದ ಬಗೆಗೆ ಸೂಕ್ತ ಸಲಹೆ ನೀಡುವುದು, ಸಂಕುಚಿತ ಕ್ಷುಲ್ಲಕ ರಾಜಕೀಯದಿಂದ ಕಳೆದುಕೊಂಡು ವಿದ್ಯಾಲಯದ ಹಿತಾಸಕ್ತಿಯ ರಕ್ಷಣೆಗೆ ಪ್ರಯತ್ನಿಸುವಂತೆ, ದಿಟ್ಟತನ ಹದಮೀರಿ ವರ್ತಿಸದಂತೆ ಸೂಚನೆ ಕೊಡುವುದು- ಇತ್ಯಾದಿಗಳೆಲ್ಲ ಸಮಾಲೋಚನಾ ಕೇಂದ್ರ ಮಾಡಬೇಕಾದ ಕಾರ್ಯಗಳು. ಆದರೆ ಹೀಗೆ ಮಾಡುವಾಗ ವಹಿಸಬೇಕಾದ ಎಚ್ಚರವೂ ಕಡಿಮೆಯದಲ್ಲ. ಅನಪೇಕ್ಷಿತವಾಗಿ ಜಗಳ ಕಾಯುವ, ಪ್ರಸಂಗವನ್ನು ಮತ್ತಷ್ಟು ಜಟಿಲಗೊಳಿಸಿ, ಅರೋಗ್ಯಕರವಾಗಿ ಔಚಿತ್ಯಪೂರ್ಣವಾಗಿ ಹಾಗೂ ಅಷ್ಟೇ ನವುರು-ನಾಜೂಕಾಗಿ ಸಮಸ್ಯೆಗಳನ್ನು ಸಡಿಲಿಸಿ ಬಿಡುಗೊಳಿಸುವುದು ಹದಗೊಳಿಸುವುದು ಮುಖ್ಯವಾದ ಕೆಲಸ. ಆದ್ದರಿಂದ ಸಲಹೆ-ಮಾರ್ಗದರ್ಶನ ಎಷ್ಟು ಕಾಳಜಿ ಎಚ್ಚರದಿಂದ ಕೂಡಿರುವುದೋ, ಪರಿಣಾಮ ಅಷ್ಟು ಹಿತಕಾರಿಯಾಗುವುದೆಂದು ಬೇರೆ ಹೇಳಬೇಕಾಗಿಲ್ಲ.

ಇಲ್ಲಿ 'ಹಿತಕಾರಿ' ಎಂದರೆ, ವಾತಾವರಣದಲ್ಲಿ ಶಾಂತಿ-ಶಿಸ್ತು ಮೂಡಿಸುವುದು ಮಾತ್ರವಲ್ಲ ಎಂಬುದನ್ನು ಮನಗಾಣಬೇಕು. ವಿದ್ಯಾರ್ಥಿಗಳು, ಸಮಯ, ಶ್ರಮ, ಪ್ರತಿಭೆಗಳನ್ನು ದುಡಿಸಿಕೊಂಡು, ಶೈಕ್ಷಣಿಕ ಗುಣಮಟ್ಟವನ್ನು ಎತ್ತರಿಸುವಲ್ಲಿ ಮತ್ತು ಉತ್ತಮ ವ್ಯಕ್ತಿತ್ವ ನಿರ್ಮಾಣಕಾರ್ಯದಲ್ಲಿ ತೊಡಗಿಕೊಳ್ಳುವಂತೆ ಮಾಡುವುದೂ ಮುಖ್ಯವಾಗಿದೆ. ಆದ್ದರಿಂದ ಸಮಾಲೋಚನಾ ಕೇಂದ್ರಗಳ ಜವಾಬ್ದಾರಿಯೂ ಹೆಚ್ಚುತ್ತದೆ.

ಇವೆಲ್ಲ ಸರಿಯೇ. ಆದರೆ ವಿದ್ಯಾರ್ಥಿಗಳ ಸಮಸ್ಯೆ-ತೊಂದರೆಗಳ ಬೇರು ಮೂಲ ಕೆಗಳೆಲ್ಲ ವಿದ್ಯಾಲಯದ ಆವರಣದಲ್ಲಿಯೇ ಇರುತ್ತವೆಂದು ಹೇಳಲಾಗುವುದಿಲ್ಲ. ಹೊರಗಿನ ಒತ್ತಡ ಪ್ರಚೋದನೆ ಪ್ರಭಾವಗಳೂ ವಿದ್ಯಾರ್ಥಿಗಳ ವರ್ತನೆಗೆ ಹೆಚ್ಚಿನ ಕಾರಣಗಳಾಗಿವೆಯೆಂಬುದೂ ಅಷ್ಟೇ ನಿಜ. ಆದ್ದರಿಂದ ಇಂಥ ಸಮಾಲೋಚನಾ ಕೇಂದ್ರಗಳು ನಡೆಸುವ ಪರಿಹಾರ ಪ್ರಯತ್ನಕ್ಕೂ ಮಿತಿಯೊದಗುತ್ತದೆ. ಇಷ್ಟೇ ಅಲ್ಲ; ಕೆಲವು ಬಾರಿ ಹೊಸ ಸಮಸ್ಯೆಗಳೂ ಹುಟ್ಟಿಕೊಳ್ಳಬಹುದು. ಕೇಂದ್ರದ ಉದ್ದೇಶವೂ ಪ್ರಯತ್ನವೂ ವಿಫಲವಾಗಬಹುದು. ಆದರೆ ಶಿಕ್ಷಣ ಸಂಸ್ಥೆಗಳು ತಮ್ಮ ನೈತಿಕ ಜವಾಬ್ದಾರಿಕ್ಕೆಯಿಂದ ಮತ್ತು ಮಾನವೀಯ ದೃಷ್ಟಿಯಿಂದ ಇಂಥ ಸಲಹೆ-ಸಮಾಲೋಚನೆಯ ಕೇಂದ್ರವನ್ನು ತೆರೆದು, ಸಾಧ್ಯವಾದ ಉತ್ತಮ ಉಪಕ್ರಮಗಳನ್ನು ಕೈಗೊಂಡರೆ ಶೈಕ್ಷಣಿಕ ಗುಣಮಟ್ಟ ಗಣನೀಯ ಪ್ರಮಾಣದಲ್ಲಿ ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ. ಇದರ ಜೊತೆಗೆ ಒಳ್ಳೆಯ ಬದುಕಿಗೆ ಅಗತ್ಯವಾದ ಮೌಲಿಕ ಗುಣಗಳ ಪರಿಚಯವಾಗಿ ಮಾನವೀಯ ಸಂಬಂಧ ಸುಧಾರಿಸುವಂತಾದರೆ ಇಂದಿನ ಸಂದರ್ಭದಲ್ಲಿ ಅದಕ್ಕಿಂತ ದೊಡ್ಡ ಲಾಭ ಬೇರೊಂದಿಲ್ಲ.

ಜನದನಿ

ಪ್ರಯಾಣಿಕರ ಗೋಳು

ಪ್ರಿಯರೆ,

ಪುತ್ತೂರು ಡಿಪೋವಿಗೆ ಸೇರಿದ ಸರಕಾರೀ ಬಸ್ಸುಗಳು ಕೋಡಿಬಾಡಿಯಿಂದ ಪುತ್ತೂರು ನಗರದ ನಡುವಿನವರೆಗೆ ಅಪರೂಪಕ್ಕೊಮ್ಮೆ ಮಾತ್ರ ನಿಲ್ಲಿಸುವಂತಾಗಿದೆ ಎಂದು ಇತ್ತೀಚೆಗೆ ತಿಳಿದು ಬಂದಿದೆ. ದಾನಿಂದಕಾಡು, ಕೆಮ್ಮಾಯಿ ಮುಂತಾದ ಕಡೆಯ ಜನರು ಉಪ್ಪಿನಂಗಡಿಯ ಕಡೆಯಿಂದ ಬರುವ ಬಸ್ಸುಗಳಲ್ಲಿ ಪ್ರಯಾಣಿಸಲು ಕಷ್ಟವಾಗಿದೆ. ಬಸ್ಸು ನಿಲ್ಲಿಸಲು ಅಪೇಕ್ಷಿಸಿದಾಗ ಕಂಡಕ್ಟರ್ ಮಹಾಶಯ ಹಿಂದಿನಿಂದ ನಿಲ್ಲಿಸದಂತೆ ಚಾಲಕನಿಗೆ ಒತ್ತಡ ತರುವುದು ಇಲ್ಲಿಯ ಪ್ರಯಾಣಿಕರಿಗೆ ನುಂಗಲಾರದ ತುತ್ತಾಗಿದೆ. ನಗರಕ್ಕೆ ಕೆಲವೊಮ್ಮೆ ಹೋಗಲು ಕಾಲು ಹಾಸಿಗೊಮ್ಮೆ ಬಸ್ಸಿದ್ದರೂ ಅವು ನಿಲ್ಲಿಸದೆ ಒಂದು ಒಂದೂವರೆ ತಾಸಿನಷ್ಟು ಕಾದು ನಿಲ್ಲುವ ದುರ್ಧರ ಪ್ರಸಂಗ ಈ ಜನರದ್ದು. ಜನರ ಸುಖ! ಪ್ರಯಾಣಕ್ಕಾಗಿ ಸರಕಾರದ ಉದಾರೀ ವ್ಯವಸ್ಥೆಯು ನಿಜವಾದ ಬಣ್ಣ ಈ ರೀತಿಯದು.

ನಿಜವಾಗಿ ಇಂತಹ ಸನ್ನಿವೇಶಗಳಲ್ಲಿ ಸರಕಾರವನ್ನು ಮಾತ್ರ ದೂರಿ ಪ್ರಯೋಜನವಿಲ್ಲ. ಅದರ ಸಿಬ್ಬಂದಿಗಳೇ ಇದರಲ್ಲಿ ಹೊಣೆಗಾರರು. ಮುಖ್ಯವಾಗಿ ಕಂಡಕ್ಟರ್‌ರಿಂದ ಇಂತಹ ಅವಸ್ಥೆ ಪ್ರಯಾಣಿಕರಿಗಾಗುವಂತಾಗಿದೆ ಕೆಲವೊಮ್ಮೆ ದುಬಾರಿ ಬೆಲೆ ತೆತ್ತು ಇತರ ವಾಹನಗಳನ್ನು ಅವಲಂಬಿಸಬೇಕಾಗುತ್ತದೆ. ಪರಿಸರದ ಪ್ರಯಾಣಿಕರ ತ್ರಿಶಂಕು ಸ್ಥಿತಿಯನ್ನು ಎಷ್ಟು ಈ ಸಂಸ್ಥೆಯ ಅಧಿಕಾರಿಗಳು ಮನಗಂಡಿದ್ದಾರೆ. ಪ್ರಯಾಣಿಕರು ಕರೆಯುವ ಮುನ್ನ ಸಿಬ್ಬಂದಿಗಳು ಅಧಿಕಾರಿಗಳು ಅರಿತು ನಡೆದರೆ ಸೂಕ್ತವಾದೀತು. ಜನರನ್ನೂ ಕಡೆಗಣಿಸಿದ ಬಸ್ಸುಗಳು ಯಾತಕ್ಕಾಗಿ? ಅದರ ಅಗತ್ಯ ಯಾರಿಗಾಗಿ? ಆಲೋಚಿಸಬೇಕಾಗಿದೆ.

—ಕಂ. ವಾ. ಖಂಡಿಗೆ

ಕುಂಬಾಡಿ

ಮುಂಜಾಗ್ರತೆ ಅಗತ್ಯ

ಪ್ರಿಯರೆ,

ರಾಷ್ಟ್ರೀಯ ಹೆದ್ದಾರಿಯ ಬದಿಗಳಲ್ಲಿ ಕಾಡು ಬೆಳೆಸುವ ಉದ್ದೇಶದಿಂದ ಕಳೆದ ವರ್ಷ ಅರಣ್ಯ ಇಲಾಖೆಯು ವತಿಯಿಂದ ಗಿಡಗಳನ್ನು ನೆಟ್ಟಿರುವುದು ಸಂತೋಷದ ವಿಚಾರವಾಗಿರಬಹುದು.

ಆದರೆ ಅರಣ್ಯ ಇಲಾಖೆಯವರು ಗಿಡ ನೆಡುವಾಗ ಗಿಡದ ಬೇರು ಭೂಮಿಯನ್ನು ಗಟ್ಟಿಯಾಗಿ ಹಿಡಿಯುತ್ತದೆ ಎಂದು ಭಾವಿಸಿರಬಹುದು ಅದರೆ ಗಿಡದ ಕುಡಿ ಮಾತ್ರ ಮರವಾಗಿ ಬೆಳೆದಾಗ ಎತ್ತರಕ್ಕೆ ಬೆಳೆಯುತ್ತದೆ ಎಂಬುದನ್ನು ಭಾವಿಸಿಲ್ಲ ಎಂಬುವುದು ಸತ್ಯಸಂಗತಿ.

ಆದರೆ ಈಗ ಎತ್ತರಕ್ಕೆ ಬೆಳೆದ ಈ ಮರಗಳು ರಸ್ತೆಯುದ್ದಕ್ಕೂ ವಿದ್ಯುತ್ ತಂತಿಗಳಿಗೆ ಚಾಚಿವೆ. ಅಂದರೆ ಗಿಡ ನೆಡುವಾಗ ಮುಂದಾಲೋಚನೆಯಿಲ್ಲದೆ ಮಾಡಿದ ಕರ್ತವ್ಯದಿಂದಾಗಿ ತುಂಬಾ ಅವ್ಯವಸ್ಥೆಯಾಗಿದೆ. ಇದರಿಂದ ಹತ್ತಿರದ ಮನೆಗಳಲ್ಲಿ ಎಳೆದು ತಂದ ತಂತಿಗಳಿಗೆ ಅಪಾಯವೊಡ್ಡುವುದರಿಂದ ವಿದ್ಯುತ್ ಕಣ್ಣುಮುಚ್ಚಾಲೆ ಪ್ರಾರಂಭವಾಗಿದೆ. ಅಲ್ಲದೆ ಮಳೆಗಾಲದಲ್ಲಿ ಈ ವಿಶೇಷ ಜಾತಿ. ಮರಗಳು ವಿಪರೀತ ಗಾಳಿ ಬರುವ ಸಂದರ್ಭದಲ್ಲಿ ವಿದ್ಯುತ್ ತಂತಿಗಳಿಗೆ ರಾಜರೋಷವಾಗಿ ಬಡಿಯುತ್ತದೆ. ಆದರೆ ಕೆಲವು ಸಮಯದಲ್ಲಿ ಈ ಮರಗಳಲ್ಲಿ ವಿದ್ಯುತ್ ಪ್ರವಾಹ ಉಂಟಾಗಬಹುದು ಇದರಿಂದ ಅರಿಯದವರು ಅಪಾಯಕ್ಕೊಳಗಾಗುವುದು ಖಂಡಿತ ಮತ್ತು ರಸ್ತೆಯುದ್ದಕ್ಕೂ ಚಾಚಿರುವುದರಿಂದ ಸುತ್ತಮುತ್ತಲಿನ ಜನರು ಅಪಾಯಕ್ಕೊಳಗಾಗುವುದು ಖಂಡಿತ.

ಆದ್ದರಿಂದ ಕೆ.ಇ.ಬಿ. ಇಲಾಖೆಯವರು ಈ ವಿಷಯದಲ್ಲಿ ಅದಷ್ಟು ಮುಂಜಾಗ್ರತೆ ವಹಿಸುವುದು ಅಗತ್ಯ. ಹಾಗೆಯೇ ಮರದ ಕುಡಿ ಕಡಿದರು ಸಹ ಮರ ಬೆಳೆಯುತ್ತದೆ ಎಂಬುವುದನ್ನು ಅರಿತು ಕೂಡ ಇಲಾಖೆಯವರು ಈ ವಿಷಯದಲ್ಲಿ ಶಾಶ್ವತ ಪರಿಹಾರ ಕಂಡು ಹಿಡಿಯಬೇಕಾಗಿ ಈ ಮೂಲಕ ತಿಳಿಯಪಡಿಸುತ್ತೇನೆ.

ಎಚ್ ಎನ್ ಪೂಜಾರಿ

ಯಡ್ತರೆ (ಬೈಂದೂರು)

ಪರೀಕ್ಷೆಯನ್ನು ಮುಂದೂಡಿ

ಪ್ರಿಯರೆ,

ಮಂಗಳೂರು ವಿಶ್ವವಿದ್ಯಾನಿಲಯವು ನಡೆಸುವ ಅಂತಿಮ ಬಿ. ಕಾಂ ಮರು ಪರೀಕ್ಷೆಯನ್ನು ನಿಗದಿಪಡಿಸಿದ ದಿನಾಂಕ ಕಡಿಮೆ ಪಕ್ಷ ಹತ್ತು ದಿನಗಳಾದರೂ ಮುಂದೂಡಬೇಕೆಂದು ಈ ಮೂಲಕ ಈ ಕಾಯಿಂದ ಕೇಳಿಕೊಳ್ಳುತ್ತೇವೆ. ವಿಶ್ವವಿದ್ಯಾನಿಲಯದ ಅಂತಿಮ ಬಿ. ಕಾಂ. ವಿದ್ಯಾರ್ಥಿಗಳಿಗೆ ಅನ್ಯಾಯವೆಸಗಿದವರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ವಿನಂತಿ.

—ನೊಂದ ವಿದ್ಯಾರ್ಥಿಗಳು

(ಹತ್ತು ಸಹಿ ಇದೆ)

ಅಂತಿಮ ಬಿ. ಕಾಂ)

ಸರಕಾರಿ ಕಾಲೇಜು

ತೊಕ್ಕೊಟ್ಟು ವೃತ್ತದ ದುರವಸ್ಥೆ

ಪ್ರಿಯರೆ,

17ನೇ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುವ ಉಳ್ಳಾಲದ ತೊಕ್ಕೊಟ್ಟು ಎಂಬಲ್ಲಿಗೆ ಮೂರು ಮಾರ್ಗ ಕೂಡುವಲ್ಲಿಯ ಇಕ್ಕಟ್ಟಿನ ಸಮಸ್ಯೆಯನ್ನು ಈ ಮೊದಲು ಇದೇ ಕಲಮಿನಲ್ಲಿ ಹಲವರು ಹಲವಾರು ವಿಧದಲ್ಲಿ ಬರೆದಿದ್ದರು. ಆದರೆ ಸಂಬಂಧ ಪಟ್ಟವರು ಈ ಬಗ್ಗೆ ಯಾವ ಕ್ರಮವನ್ನೂ ಈ ತನಕ ಕೈಗೊಳ್ಳದಿರುವುದು ಈ ವಲಯದವರಿಗೆ ಜುಗುಪ್ಸೆ ತಂದಿದೆ.

ಇಲ್ಲಿನ ತೆರಿಗೆ ತಪಾಸಣಾ ಕೇಂದ್ರವು ಇದೇ ಕೂಡು ರಸ್ತೆಯಲ್ಲಿದ್ದು ಲಾರಿ ವ್ಯಾನುಗಳು ಮಾರ್ಗದ ಇಬ್ಬದಿಯಲ್ಲಿಯೂ ನಿಲ್ಲುವುದು ಎಂದಿನ ದೃಶ್ಯ.

ಮೂರಾರು ಸಿಟಿ ಮತ್ತು ಸರ್ವಿಸ್ಸು ಬಸ್ಸುಗಳು ಇಲ್ಲಿ ಸಾವಿರಾರು ಪ್ರಯಾಣಿಕರನ್ನಿಳಿಸಿ ಹತ್ತಿಸುತ್ತಿದೆಯಾದರೂ ಪ್ರಯಾಣಿಕರಿಗಾಗಿ ಕಟ್ಟಿಸಿದ ಚಿಕ್ಕದಾದ ತಂಗುದಾಣದೆದುರು ನಿಲ್ಲಲು ಅವುಗಳು ನಿರಾಕರಿಸುತ್ತಿದೆ.

ಕೆಲವು ವರ್ಷಗಳ ಹಿಂದೆ ಇದ್ದ ಆಹಾರ

ಟೀಕೋರ

ಚೆಕ್‌ಪೋಸ್ಟ್ ಈಗ ಅನಾಥವಾಗಿ ಉಳಿದಿದೆ. ಇದನ್ನು ಕಳಚಿದಲ್ಲಿ ಇಲ್ಲಿ ವಿಶಾಲವಾದ ವಾಹನ ಸಂಚಾರ ನಿಯಂತ್ರಣಾ ವೃತ್ತ ರಚಿಸಲು ಸ್ಥಳಾವಕಾಶವಾಗಬಹುದು.

ಸರಕಾರ ಈ ಬಗ್ಗೆ ಕಡೆಗಣಿಸುವ ಧೋರಣೆ ತಳೆದಲ್ಲಿ ರೋಟರಿಕ್ಲಬ್, ಲಯನ್ಸ್ ಕ್ಲಬ್ ಮೊದಲಾದ ಸಂಘಸಂಸ್ಥೆಗಳು, ದಾನಿಗಳು, ಮುಂದೆಬಂದು ಸಂಬಂಧಿಸಿದವರೊಂದಿಗೆ ವ್ಯವಹರಿಸಿ ಈ ಕೂಡು ರಸ್ತೆಗೊಂದು ವೃತ್ತ ಒದಗಿಸಿದರೆ ಇಲ್ಲಿನ ಬಹುದೊಡ್ಡ ಸಮಸ್ಯೆಯೊಂದು ಪರಿಹಾರವಾದೀತು.

ಅದೇ ರೀತಿ ತೊಕ್ಕೊಟ್ಟು ಜಂಕ್ಷನ್ ಒಳಮಾರ್ಗದಲ್ಲೊಂದು ಇದ್ದು ಅಲ್ಲಿ ಜನರು ರಸ್ತೆಯಲ್ಲೇ ಪಂಚಾಯಿತಿ ಮಾಡುವುದರಿಂದಾಗಿ ಘನವಾಹನ ಬಿಡಿ, ಸಣ್ಣ ಸ್ಕೂಟರು, ಸೈಕಲು, ಕೂಡಾ ಕೊಂಡು ಹೋಗಲು ಕಷ್ಟವಾಗುತ್ತದೆ. ಇದೇ ಕಾರಣದಿಂದ ಇಲ್ಲಿ ಸಣ್ಣಪುಟ್ಟ ಘರ್ಷಣೆ ಆಗಾಗ್ಗೆ ನಡೆಯುವುದೂ ಇದೆ.

ಉಳ್ಳಾಲದ ಆರಕ್ಷಕ ಠಾಣೆಯ ಸಿಬ್ಬಂದಿಗಳಲ್ಲಿ ಒಬ್ಬರಾದರೂ ಸಂಜೆ ಸಮಯದಲ್ಲಿ ಬಂದು ಜನರು ಮಾರ್ಗ ಮಧ್ಯೆ ನಿಂತು ಕಾಲ ಕಳೆಯದಂತೆ ನೋಡಿಕೊಂಡಲ್ಲಿ ಇಲ್ಲಿನ ಸಮಸ್ಯೆಯೂ ಪರಿಹಾರವಾದೀತು. ಆದುದರಿಂದ ಸಂಬಂಧಿಸಿದವರು ಇನ್ನಾದರೂ ಈ ಬಗ್ಗೆ ಕ್ರಮ ಕೈಗೊಳ್ಳುವರೆಂದು ಆಶಿಸಲೇ,

—ಎಂ. ಎ. ಕಾಸಿಮ್

ಉಳ್ಳಾಲ

ರಾತ್ರಿ ವೇಳೆ ಭಟ್ಕಳದಲ್ಲಿ ಬಸ್ ನಿಲ್ಲಲಿ

ಪ್ರಿಯರೆ,

ರಾತ್ರಿ ವೇಳೆಯಲ್ಲಿ ಭಟ್ಕಳವನ್ನು ಹಾದು ಹೋಗುವ ಕ.ರಾ.ರ.ಸಾ. ಸಂಸ್ಥೆಯ ಬಸ್ಸುಗಳು ಇಲ್ಲಿಯ ಬಸ್‌ಸ್ಟ್ಯಾಂಡ್ ಒಳಗಡೆ ಹೋಗದೇ ಹೊರಗೆ ರಾಷ್ಟ್ರೀಯ ಹೆದ್ದಾರಿಯಲ್ಲೇ ಸ್ವಲ್ಪ ನಿಂತು ಹೋಗುತ್ತಿವೆ. ಪ್ರಯಾಣಿಕರು ರಸ್ತೆಯಲ್ಲೇ ಕಾದು ನಿಲ್ಲಬೇಕು. ಬಸ್‌ಸ್ಟ್ಯಾಂಡ್ ಇದ್ದರೂ ಇಲ್ಲದಂತೆ!

ಈಗಂತೂ ಮಳೆಗಾಲ. ಪ್ರಯಾಣಿಕರ ಅದರಲ್ಲೂ ಮಕ್ಕಳ-ಮಹಿಳೆಯರ ಪಾಡು ದಾಟುವಂತೂ ವರ್ಣಿಸಲು ಅಸಾಧ್ಯ. ಬಸ್‌ಗಾಗಿ ಕಾಯುತ್ತಾ ಮಳೆಯಲ್ಲೇ ನಿಲ್ಲಬೇಕಾದ ಸ್ಥಿತಿ. ಇದು ಯಾರ ಗಮನಕ್ಕೂ ಬರದೇ ಇದ್ದದ್ದು ವಿಚಿತ್ರವೇ ಸರಿ!

ಸಾರ್ವಜನಿಕರಿಗಾಗಿ ಇರುವ ನಿರ್ಮಾಣಗಳು, ಸಾರ್ವಜನಿಕರ ಮನತಣಿಸದಿದ್ದರೆ, ಅವುಗಳ ಪ್ರಯೋಜನವೇನು?

ಇನ್ನಾದರೂ ಸಂಬಂಧ ಪಟ್ಟವರು ಸೂಕ್ತ ಕ್ರಮಕೈಗೊಂಡು, ಬಸ್‌ಗಳನ್ನು ಒಳಗೆ ನಿಲ್ಲುವಂತೆ ಮಾಡಲಿ.

—ಕೃಷ್ಣ ನಂದ ವಾಮಯ್ಯ

ಅಧ್ಯಕ್ಷರು

ನಾಗರಿಕ ಹೋರಾಟ ಸಮಿತಿ

ಭಟ್ಕಳ

ಭಾನುವಾರ ವಿದ್ಯುತ್ ಪೂರೈಕೆ ಇರಲಿ

ಪ್ರಿಯರೆ,

ವಾರದ ಪೂರ್ತಿ ದುಡಿದ ಜನರು ಆದಿತ್ಯವಾರ ಸಾಮಾನ್ಯವಾಗಿ ವಿಶ್ರಾಂತಿಗಾಗಿ ಮನೆಯಲ್ಲೇ ಇರುತ್ತಾರೆ. ಅಂದು ಬೆಳಿಗ್ಗೆಯಿಂದಲೇ ದೂರದರ್ಶನ, ರೇಡಿಯೋಗಳು ವಿಶೇಷ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತವೆ. ಟಿವಿ ರಾಮಾಯಣಕ್ಕೆ ಬೆಳಿಗ್ಗೆ ಒಂದು ಗಂಟೆಯ ವಿದ್ಯುತ್ ಪೂರೈಕೆ ಆಗುವುದಾದರೂ, ಮತ್ತೆ ವಿದ್ಯುತ್ ಇಡೀ ದಿನ ಇರುವುದಿಲ್ಲ. ಇದರಿಂದಾಗಿ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳ ಜನರಿಗೆ ಮನರಂಜನೆಯೇ ಇಲ್ಲದಂತಾಗಿದೆ. ಪೇಟೆ ಪಟ್ಟಣಗಳಲ್ಲಿ ಜನ ಕೇಳಿದಾಗ ಪ್ರತಿಭಟನೆ ಸಲ್ಲಿಸುತ್ತಿರುವ ಬೆದರಿಕೆಯಿಂದ ಅಲ್ಲಿ ವಿದ್ಯುತ್ ಕಣ್ಣುಮುಚ್ಚಾಲೆ ಇರುವುದಿಲ್ಲ; ಇದ್ದರೂ ಕಡಿಮೆ. ಹಳ್ಳಿಗಳಲ್ಲಿ ವಾರದ ಎಲ್ಲಾ ದಿನಗಳಲ್ಲಿಯೂ 6ರಿಂದ 8 ಗಂಟೆಗಳ ಅವಧಿಯ ಕಡಿತದೊಂದಿಗೆ ಆದಿತ್ಯವಾರ ಪೂರ್ತಿಯಾಗಿ ಹೆಚ್ಚುವರಿ ಕಡಿತ ಇರುತ್ತದೆ.

ಇದಕ್ಕೆ ಕಾರಣವನ್ನೂ ನೀಡಲಾಗುತ್ತದೆ. ಆದಿತ್ಯವಾರ ದುರಸ್ತಿಯನ್ನು ಮಾಡುವುದರಿಂದ ವಿದ್ಯುತ್ ತೆಗೆಯಲಾಗುವುದು. ಇದು ಕಮಿಷನ್ ಅಸ್ತಿತ್ವಕ್ಕೆ ಬಂದ ಬಳಿಕ ಇರುವ ಪರಿಪಾಠ ಆ ದಿನಗಳಲ್ಲಿ ವಾರದ ಇತರೆಲ್ಲಾ ದಿನಗಳಲ್ಲೂ ವಿದ್ಯುತ್ ಪೂರ್ಣ ಸರಬರಾಜಾಗುತ್ತಿತ್ತು. ಆದ್ದರಿಂದ ದುರಸ್ತಿಗೆ ಆದಿತ್ಯವಾರ ಕಡಿತ ಅನಿವಾರ್ಯವಾಗಿತ್ತು. ಆದರೆ, ಅಂದಿನ ಅದೇ ಕ್ರಮವನ್ನು ಜಾರಿ ತಪ್ಪದೆ, ಇಲಾಖೆಯವರು ಇಂದೂ ಮುಂದುವರಿಸುವುದು ಗ್ರಾಮಾಂತರ ಪ್ರದೇಶಗಳಲ್ಲಿ ಸಾಗಿ ಬಂದಿದೆ.

ಇನ್ನಾದರೂ, ಇಲಾಖೆಯವರು, ವಾರದ ಇತರ ದಿನಗಳಲ್ಲಿ ಕಡಿತದ ಹೊತ್ತಿನಲ್ಲೇ ದುರಸ್ತಿ ಕ್ರಮಗಳನ್ನು ಮುಗಿಸಿಕೊಂಡು, ಆದಿತ್ಯವಾರ ಪೂರ್ತಿ ವಿದ್ಯುತ್ ಸರಬರಾಜು ಇರುವಂತೆ ನೋಡಿಕೊಂಡಾರೇ?

—ಪಿ. ಎಸ್. ಶಾಸ್ತ್ರಿ

ಮಾಣಿಲ

ಚಿಂತನೆ

"ರಾಜಕೀಯದೊಳಗೆ ಧರ್ಮವನ್ನು ಬೆರೆಸುವುದರ ಪರಿಣಾಮಗಳು ಅಘೋರವಾದುದು"

— ಪೆಗ್ಲಿಪ್ ಕ್ಯಾಂಡ್



ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಬೆಳ್ತಂಗಡಿ ಶಾಖೆ ವತಿಯಿಂದ ಇತ್ತೀಚೆಗೆ ನಡೆದ ಸರಕಾರಿ ನೌಕರರ ಮತ್ತು ಸಾರ್ವಜನಿಕರ ದ್ವಿತೀಯ ಸಮನ್ವಯ ಸಭೆಯನ್ನುದ್ದೇಶಿಸಿ ರಾಜ್ಯ ಧಾರ್ಮಿಕ ದತ್ತಿ ಸಚಿವ ಕೆ. ಅಮರನಾಥ ಶೆಟ್ಟಿ ಅವರು ಮಾತನಾಡಿದಾಗ. ಚಿತ್ರದಲ್ಲಿ ಸರಕಾರಿ ನೌಕರರ ಸಂಘದ ಅಧ್ಯಕ್ಷ ವಿಠಲ ಶೆಟ್ಟಿ, ಜಿ. ಪ. ಸದಸ್ಯ ನಾರಾಯಣ, ಶಾಸಕ ವಸಂತ ಬಂಗೇರ, ಚಂದ್ರಹಾಸ ಜೈನ್, ಜಿ. ಪ. ಸದಸ್ಯೆ ಗುಲಾಬಿ ಹೆಗ್ಗಡ್ತಿ ಮೊದಲಾದವರನ್ನು ಕಾಣಬಹುದು. ಚಿತ್ರ: ಕಾಂಚಲಾ, ಬೆಳ್ತಂಗಡಿ.

ಭಿನ್ನಾಭಿಪ್ರಾಯ ತೊರೆದು ಜನಸೇವೆ ಮಾಡಲು ಜನತಾ ವರಿಷ್ಠರಿಗೆ ಕರೆ

ಬಂಟ್ವಾಳ, ಜು. 6– ಕರ್ನಾಟಕದ ಜನತೆ ಜನತಾ ಸರಕಾರ ಇನ್ನೂ ಬೇಕೆಂದು ಬಯಸಿದೆ. ಆದ್ದರಿಂದ ರಾಜ್ಯ ಜನತಾ ನಾಯಕರು ತಮ್ಮ ಅಭಿಮತಿಯನ್ನು ಬಿಟ್ಟು, ಎಲ್ಲಾ ಭಿನ್ನಾಭಿಪ್ರಾಯಗಳನ್ನು ತೊರೆದು ಜನತೆಯ ಆಶೋತ್ತರಗಳಿಗೆ ಸ್ಪಂದಿಸುವಂತಾಗಬೇಕು ಎಂದು ಜನತಾ ಪಕ್ಷದ ಪ್ರಮುಖರು ವಿನಂತಿಸಿದ್ದಾರೆ.

ಜಿಲ್ಲಾ ಪರಿಷತ್ ಸದಸ್ಯ, ದ. ಕ. ಜಿಲ್ಲಾ ಜನತಾ ವಾಣಿಜ್ಯ ಅಧ್ಯಕ್ಷ ಹಾಗೂ ರಾಜ್ಯ ಜನತಾ ಸಂಘಟನಾ ಕಾರ್ಯದರ್ಶಿ ಎಚ್. ರಾಮಯ್ಯನಾಯಕ್, ಅಖಿಲ ಭಾರತ ಯುವ ಜನತಾ ಖಜಾಂಚಿ ಜಯಪ್ರಕಾಶ್ ಹೆಗ್ಡೆ, ರಾಜ್ಯ ಯುವ ಜನತಾ ಕಾರ್ಯಕಾರಿ ಸಮಿತಿ ಸದಸ್ಯ ಬಡಾಜೆ ರವಿಶಂಕರ ಶೆಟ್ಟಿ, ದ. ಕ. ಜಿಲ್ಲಾ ಯುವ ಜನತಾ ಅಧ್ಯಕ್ಷ ಕೆ.ಎಸ್. ಗೋವರ್ಧನ್, ಪ್ರಧಾನ ಕಾರ್ಯದರ್ಶಿ ಲೋಕೇಶ ಹೆಗ್ಡೆ, ಬಂಟ್ವಾಳ ತಾಲೂಕು ಯುವ ಜನತಾ ಕಾರ್ಯಾಧ್ಯಕ್ಷ ದಿವಾಕರ ಎಂ. ಪಡಿಯಾರ್ ಮುಂತಾದವರು ಪತ್ರಿಕಾ ಹೇಳಿಕೆಯೊಂದರಲ್ಲಿ ಮೇಲಿನಂತೆ ಕೋರಿದ್ದಾರೆ.

ಕರ್ನಾಟಕದ ಜನತೆ ಕಾಂಗ್ರೆಸ್‌ನ ದುರಾಡಳಿತಕ್ಕೆ ಬೇಸರವಟ್ಟು ಐದು ವರುಷಗಳ ಹಿಂದೆ ಜನತಾ ಪಕ್ಷವನ್ನು ಅಧಿಕಾರಕ್ಕೇರಿಸಿತು. ಸರಕಾರದ ಚುಕ್ಕಾಣಿ ಹಿಡಿದಿದ್ದ ರಾಮಕೃಷ್ಣ ಹೆಗಡೆ ದೇವೇಗೌಡ ಸಹಿತ ಇತರ ಪ್ರಮುಖರು ಜನತೆಯ ಆಶೋತ್ತರಗಳನ್ನು ಬಹಳಷ್ಟು ಈಡೇರಿಸುವಲ್ಲಿ ಸಫಲರಾಗಿದ್ದಾರೆ ಹಾಗೂ ಬಹುತೇಕ ಜನತೆ ಸರಕಾರದ ಸಾಧನೆ ಬಗ್ಗೆ ಮೆಚ್ಚುಗೆಯನ್ನೂ ಸೂಚಿಸಿದ್ದಾರೆ. ಕಳೆದ ಮೂರು ಬಾರಿಯ ಚುನಾವಣೆಯಲ್ಲೂ ಕಾಂಗ್ರೆಸ್ ಹಾಗೂ ಇತರ ಮಿತ್ರ ಪಕ್ಷಗಳ ಅಪಪ್ರಚಾರವನ್ನು ಕಡೆಗಣಿಸಿ ಪಕ್ಷದ ಬಹುತೇಕ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದಾರೆ. ಆದರೆ ಇತ್ತೀಚೆಗೆ ರಾಜ್ಯ ನಾಯಕರ ಭಿನ್ನಾಭಿಪ್ರಾಯಗಳಿಂದ ಜನತೆ ಗಲಿಬಿಲಿಗೊಂಡಿದೆ.

ಅಲ್ಲದೆ ತಾವು ಇನ್ನೂ ಮುಂದುವರಿಯಬೇಕೆನ್ನುವ ಸರಕಾರದ ಬಗ್ಗೆ ಅಸಂತುಷ್ಟಗೊಂಡಿದೆ. ರಾಜ್ಯ ನಾಯಕರ ಅಲ್ಪತನದ ಬಗ್ಗೆ ಬೇಸರಗೊಂಡಿದ್ದರೂ ಜನತಾ ಪಕ್ಷ ಚುನಾವಣೆಯಲ್ಲಿ ನೀಡಿದ ಆಶ್ವಾಸನೆಗಳನ್ನು ಬಹುತೇಕ ಈಡೇರಿಸಿದ್ದರಿಂದ ಜನತೆ ಜನತಾ ಸರಕಾರ ಇನ್ನೂ ಬೇಕೆಂದು ಬಯಸಿದೆ ಎಂದು [illegible] ತಿಳಿಸಿದ್ದಾರೆ.

ವಿಕೇಂದ್ರೀಕರಣದ ಮೂಲಕ ಜನತೆಯ ಕೈಗೆ ಅಧಿಕಾರವನ್ನು ನೀಡಿ ಜನತೆಯೇ ಜನತಾದ ಪ್ರಭುಗಳು ಎಂದು ತಿಳಿದುಕೊಂಡಿರುವ ಜನತಾ ಪಕ್ಷವನ್ನು ಮುಂಬರುವ ಚುನಾವಣೆಯಲ್ಲಿ ಬೆಂಬಲಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ಕುದ್ಮುಲ್ ರಂಗರಾಯರ ಸ್ಮಾರಕ ಸಮಿತಿ

ಪರಿಶಿಷ್ಟ ಸದಸ್ಯರ ನೇಮಕಕ್ಕೆ ಒತ್ತಾಯ

ಮಂಗಳೂರು, ಜು. 6– ರಾಜ್ಯ ಸರಕಾರ ರಚಿಸಲು ಉದ್ದೇಶಿಸಿರುವ ಕುದ್ಮುಲ್ ರಂಗರಾಯರ ಸಮಿತಿಯಲ್ಲಿ ದ. ಕ. ಜಿಲ್ಲೆಯ ಪರಿಶಿಷ್ಟರ ಮತ್ತು ಪಂಗಡಗಳ ಸದಸ್ಯರನ್ನು ನೇಮಿಸಬೇಕೆಂದು ಮಾಜಿ ವಿಧಾನಸಭಾ ಸದಸ್ಯ ಹಾಗೂ ಪರಿಶಿಷ್ಟರ ಮುಖಂಡ ಮಂಜಪ್ಪ ಉಳ್ಳಾಲ್ ರಾಜ್ಯ ಸರ್ಕಾರವನ್ನು ಆಗ್ರಹಪಡಿಸಿದರು.

ಇತ್ತೀಚೆಗೆ ನಡೆದ ಕುದ್ಮುಲ್ ರಂಗರಾಯರ 130ನೆಯ ಜನ್ಮದಿನಾಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ರಂಗರಾಯರು ರಚಿಸಿದ ಟ್ರಸ್ಟಿನ ಆಸ್ತಿಯ ಮೌಲ್ಯವು ಸರಕಾರ ಒಪ್ಪಿಕೊಂಡಿರುವಂತೆ 3.5 ಕೋ[illegible] ಆಗಿಂದ ಸೂತ್ರನ ಈಗಿನ ಬೆಲೆ ಕ[illegible] 20 ಕೋಟಿ ರೂ.ಗೆ ಏರಿರುವಷ್ಟಿದೆ. [illegible] ಶಿಷ್ಟರ ಹೆಸರಿನಲ್ಲಿರುವ ಈ ಆಗಾಧ [illegible] ಯನ್ನು ಕೆಲವೇ ಮಂದಿ ದೋಚಿ[illegible] ದಂತೆ ಕಾಪಾಡಬೇಕೆಂದು ಕರೆ ನೀಡಿದ[illegible]

ಅವರು ಕುದ್ಮುಲ್ ರಂಗರಾಯ[illegible] ಭಾವಚಿತ್ರಕ್ಕೆ ಈ ಸಂದರ್ಭದಲ್ಲಿ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ದೇವಸ್ಥಾನಗಳಲ್ಲಿ ಹರಿಜನರಿ[illegible] ಪ್ರವೇಶ ನಿಷಿದ್ಧ ಮಾಡಬೇಕೆಂದು ಹೇ[illegible] ಗಳನ್ನು ನೀಡುತ್ತಿರುವ ಸ್ವಾಮೀಜಿಯನ್ನು 'ಕೋಮು ಗಲಭೆ ಪ್ರಚೋದನೆ' ಆಧಾರದ ಮೇಲೆ ಬಂಧಿಸಬೇಕು ಎಂದು ಒತ್ತಾಯಿಸಿದ ಅಂಬೇಡ್ಕರ್ ಸೇವಾ ಕೇಂದ್ರದ ಅಧ್ಯಕ್ಷ ಕೆ ಪುಂಡಲೀಕ ಅವರು ಹೀಗೆ ಮಾಡದಿದ್ದಲ್ಲಿ ಪರಿಶಿಷ್ಟ ನೇತಾ[illegible] ಬಿ. ಬಸವಲಿಂಗಪ್ಪನವರ ಹೇಳಿಕೆಯಂ[illegible] ಪರಿಶಿಷ್ಟರೆಲ್ಲ ಬೌದ್ಧ ಧರ್ಮ ಸೇರಬೇ[illegible] ಗದೀತು ಎಂದು ಹೇಳಿದರು.

ಕೇಂದ್ರ ಕಾರ್ಯದರ್ಶಿ ಟಿ. ತ್ಯಾಗರಾಜನ್ ಸ್ವಾಗತಿಸಿದರು. ಖಜಾಂಚಿ [illegible] ಚಂದ್ರಹಾಸ ವಂದಿಸಿದರು.

ಆಡಳಿತಾಧಿಕಾರಿ ವಾಪಸಿಗೆ ಸರಕಾರಿ ನೌಕರರ ಆಗ್ರಹ

ಮಂಗಳೂರು, ಜು. 6– ಕರ್ನಾಟಕ ಸರಕಾರವು ಸರಕಾರಿ ನೌಕರರ ಸಂಘಕ್ಕೆ ನೇಮಿಸಿದ ಆಡಳಿತಾಧಿಕಾರಿಯವರನ್ನು ವಾಪಾಸು ಪಡೆದು ಸಂಘದ ಆಡಳಿತವನ್ನು ಚುನಾಯಿತ ಪ್ರತಿನಿಧಿಗಳಿಗೆ ವಹಿಸಿಕೊಡಬೇಕೆಂದು ಇತ್ತೀಚೆಗೆ ಜರಗಿದ ದ. ಕ. ಜಿಲ್ಲಾ ಸರಕಾರಿ ನೌಕರರ ಸಭೆ ಸರಕಾರವನ್ನು ಒತ್ತಾಯಿಸಿದೆ.

ಮುಷ್ಕರ ನಿರತ ಶಿಕ್ಷಕರ ಮೇಲೆ ಲಾಠಿ ಚಾರ್ಜು ಮಾಡಿದ ಪೊಲೀಸ್ ದೌರ್ಜನ್ಯವನ್ನು ಖಂಡಿಸಿದ ಸಭೆಯು ಸಹ ಶಿಕ್ಷಕ ಸಂಘದವರು ವಿವಿಧ ಬೇಡಿಕೆಗಳನ್ನು ಮುಂದಿಟ್ಟು ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿತು.

ಸಭೆಯ ಅಧ್ಯಕ್ಷತೆಯನ್ನು ಸಂಘದ ಉಪಾಧ್ಯಕ್ಷ ಎಲಿಯಾಸ್ ಪಿಂಟೋ ಅವರು ವಹಿಸಿದ್ದರು.

ಹೆಡ್ ಪೋಸ್ಟ್ ಮಾಸ್ಟರ್‌ಗೆ ವಿದಾಯ

ಸುಳ್ಯ, ಜು. 6– ಸುಳ್ಯದ ಹೆಡ್ ಪೋಸ್ಟ್ ಮಾಸ್ಟರ್ ಪಿ. ಶ್ರೀನಿವಾಸ ನಾಯಕರು ಸುಮಾರು 39 ವರ್ಷಗಳ ಸಾರ್ಥಕ ಸೇವೆಯನ್ನು ಪೂರ್ತಿಗೊಳಿಸಿ ಜೂನ್ 30ರಂದು ನಿವೃತ್ತರಾದರು. [illegible] ಪ್ರಯುಕ್ತ ಪ್ರಧಾನ ಅಂಚೆ ಕಚೇರಿಯಲ್ಲಿ ಮಂಡಲ ಪ್ರಧಾನ ಎಂ. ಬಾಲಕೃಷ್ಣ ಗೌಡರ ಅಧ್ಯಕ್ಷತೆಯಲ್ಲಿ ಹಾರ್ದಿಕ ವಿದಾಯ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಬಾಳಿಲ್ಲಾರು ಮಂಡಲ ಪ್ರಧಾನ ಉದ್ಯಮಿ ಉಪೇಂದ್ರ ಕಾಮತರು ಮುಖ್ಯ ಅತಿಥಿಯಾಗಿದ್ದರು.

ಸಮಾರಂಭದಲ್ಲಿ ಸ್ಮರಣಿಕೆಯನ್ನೂ ಇತ್ತು ನಿವೃತ್ತರನ್ನು ಸನ್ಮಾನಿಸಲಾಯಿತು. ಶ್ರೀನಿವಾಸ ನಾಯಕರ ಸಭ್ಯ ನಡವಳಿಕೆ, ಸಜ್ಜನಿಕೆ, ಪ್ರಾಮಾಣಿಕತನ, ಸಾತ್ವಿಕದೃಷ್ಟಿ, ನೌಕರರ ಹಿತೈಷಿ ಧೋರಣೆಗಳನ್ನು ಕೊಂಡಾಡಲಾಯಿತು.

'ವೃಕ್ಷ ಪಾಲನೆ ಪ್ರತಿಯೋರ್ವರ ಕರ್ತವ್ಯ'

[illegible] ಸಂಕೇರಿ, ಜು. 6– ಅರಣ್ಯೀಕರಣ ಒಂದು ರಚನಾತ್ಮಕ ಕಾರ್ಯಕ್ರಮವಾಗಿದ್ದು, ಅದು ಪ್ರತಿಯೊಂದು ಮನೆಯಿಂದಲೂ ಆರಂಭವಾಗಬೇಕೆಂದು ಕೇಂದ್ರ ಕಾನೂನು ಹಾಗೂ ನ್ಯಾಯ ಮತ್ತು ಜಲಸಂಪನ್ಮೂಲ ಸಚಿವ ಬಿ. ಶಂಕರಾನಂದ ಕರೆ ನೀಡಿದರು.

ಸಂಕೇಶ್ವರದ ಶ್ರೀ ದುರದುಂಡೇಶ್ವರ ವಿದ್ಯಾ ಸಂವರ್ಧಕ ಸಂಘದ ಆಶ್ರಯದಲ್ಲಿ ಕೇಂದ್ರ ನೆರವಿನ ಕ್ರೀಡಾ ಯೋಜನೆ ಅಂಗವಾಗಿ ಇತ್ತೀಚೆಗೆ ಏರ್ಪಡಿಸಲಾಗಿದ್ದ ವನಮಹೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಶಾಸಕ ಮಲಾರಿ ಗೌಡ ಪಾಟೀಲ್, ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ವಿದ್ಯಾಸಾಗರ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೋಮಣ್ಣ ದೊಡ್ಡಣ್ಣನವರ್ ಎಲ್.ಬಿ.ಕಾರ್ಕಿ ಅವರು ಈ ಸಂದರ್ಭದಲ್ಲಿ ಮಾತನಾಡಿದರು.

ದಿಗ್ಗೋಲ್ಡನ್ ನ್ಯೂಸ್ ಪಾಕ್ಷಿಕ ಬಿಡುಗಡೆ

ಮಂಗಳೂರು, ಜು. 6 – 'ದಿಗೋಲ್ಡನ್ ನ್ಯೂಸ್' ಎಂಬ ಕನ್ನಡ ಪಾಕ್ಷಿಕ ಪತ್ರಿಕೆ ಇತ್ತೀಚೆಗೆ ಇಲ್ಲಿ ಪ್ರಾರಂಭಗೊಂಡಿತು.

ಪತ್ರಿಕೆಯನ್ನು ನಗರದ ಕದ್ರಿ ಶ್ರೀ ಮಂಜುನಾಥೇಶ್ವರ ದೇವಳದಲ್ಲಿ ದೇವಳದ ಮೊಕ್ತೇಸರ ರಾಮಚಂದ್ರ ದೇವಾಡಿಗ ಅವರು ಶಾಸ್ತ್ರೋಕ್ತ ಪೂಜಾವಿಧಿಗಳೊಂದಿಗೆ ಭಕ್ತರ ಸಮ್ಮುಖದಲ್ಲಿ ಬಿಡುಗಡೆ ಮಾಡಿದರು.

ದೇವಳದ ಹಿರಿಯ ಅರ್ಚಕ ಶ್ರೀನಿವಾಸ ಅಡಿಗ ಆಶೀರ್ವಚನ ನೀಡಿದರು.

ದೇವಳದ ಮ್ಯಾನೇಜರ್ ಸಂಜೀವ ಪಾಡಿವಾಳರು, ಪತ್ರಿಕೆಯ ಸಂಪಾದಕಿ ಶಾಂತಿ ಎಸ್. ಭಟ್ ಅವರಿಗೆ ಮಂಜುನಾಥನ ವಿಗ್ರಹವನ್ನು ನೀಡಿ ಶುಭ ಹಾರೈಸಿದರು.

ಮಂಗಳೂರು ವಿ.ವಿ: ರಾಜಿನಾಮೆಗೆ ಆಗ್ರಹ

ಮಂಗಳೂರು, ಜು. 6–ಮಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಹಾಗೂ ಇತರ ಅಧಿಕಾರಿಗಳ ಮೇಲೆ ಆಪಾದನೆಗಳು ತನಿಖೆಗೆ ಒಳಪಡುವ ಮೊದಲೇ ಸಂಬಂಧಪಟ್ಟವರು ತಮ್ಮ ಹುದ್ದೆಗಳಿಗೆ ರಾಜೀನಾಮೆ ಕೊಡಬೇಕು ಎಂದು ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು ಶಿಕ್ಷಕರ ಸಂಘ ಆಗ್ರಹಪಡಿಸಿದೆ.

ಮಂಗಳೂರು ವಿ. ವಿ. ಕಾಲೇಜುಗಳ ಪ್ರತಿನಿಧಿಗಳ ವಿಶೇಷ ಮಹಾಸಭೆ ಇತ್ತೀಚೆಗೆ ನಡೆದು ಉಪಕುಲಪತಿ ಮತ್ತಿತರ ಅಧಿಕಾರಿಗಳ ಮೇಲೆ ಆಪಾದನೆಗಳು ವ್ಯಾಪಕ ಪ್ರಚಾರವಾಗಿದ್ದು ಯಾವುದೇ ಸ್ಪಷ್ಟೀಕರಣ ಬಾರದಿರುವುದನ್ನು ಚರ್ಚಿಸಿ ರಾಜ್ಯಪಾಲರು ತನಿಖೆ ನಡೆಸುವಂತೆ ಒತ್ತಾಯಿಸಿದೆ.

ಬಿ.ಕಾಂ. ಪರೀಕ್ಷೆಯ ಮೌಲ್ಯಮಾಪನ ಸಮಯದಲ್ಲಿಯೇ ಪ್ರಶ್ನೆ ಪತ್ರಿಕೆ ಬಹಿರಂಗವಾಗಿರುವುದನ್ನು ದೃಢಪಡಿಸಿ ಈ ಬಗ್ಗೆ ಶಿಫಾರಸು ಮಾಡಿದ ವಾಣಿಜ್ಯ ಶಿಕ್ಷಕರನ್ನು ಅಭಿನಂದಿಸಿರುವ ಶಿಕ್ಷಕ ಸಂಘ ಅನಗತ್ಯ ವಿಳಂಬ ಮಾಡಿ ಪ್ರಕರಣ ಮುಚ್ಚಿ ಹಾಕಲು ಪ್ರಯತ್ನಿಸಿದ ಉಪಕುಲಪತಿ ಹಾಗೂ ಪರೀಕ್ಷಾ ನಿಯಂತ್ರಣಾಧಿಕಾರಿ ಅವರು ರಾಜೀನಾಮೆ ಕೊಡಬೇಕೆಂದು ಒತ್ತಾಯಿಸಿದೆ.

ಕ್ಯಾರಿಓವರ್ ವಿಷಯದಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದ ವಿ.ವಿ. ಅಧಿಕಾರಿಗಳ ನೀತಿಯನ್ನು ಸಂಘ ಟೀಕಿಸಿದೆ.

ಶಿಕ್ಷಕರ ಮೇಲಿನ ಹಲ್ಲೆಗೆ ಖಂಡನೆ

ಮಂಗಳೂರು, ಜು. 6–ಇತ್ತೀಚೆಗೆ ಬೆಂಗಳೂರಿನಲ್ಲಿ ತಮ್ಮ ನ್ಯಾಯಯುತ ಬೇಡಿಕೆಗಳನ್ನು ಮುಂದಿಟ್ಟು ಹೋರಾಟ ನಡೆಸುತ್ತಿದ್ದ ಸಹ ಶಿಕ್ಷಕರ ಮೇಲೆ ಪೊಲೀಸರು ನಡೆಸಿದ ಹಲ್ಲೆಯನ್ನು ಡಿವೈಎಫ್ಐ ಕುಪ್ಪೆಪದವು ಪ್ರದೇಶ ವಲಯ ಸಮಿತಿ ತೀವ್ರವಾಗಿ ಖಂಡಿಸಿದೆ.

ಅಲ್ಲದೆ ಇತ್ತೀಚೆಗೆ ಮಂಗಳೂರು ವಿ.ವಿ. ಆವರಣದಲ್ಲಿ ವಿದ್ಯಾರ್ಥಿಗಳ ಮೇಲೆ ಪೊಲೀಸರು ನಡೆಸಿದ ದೌರ್ಜನ್ಯವನ್ನು ಡಿವೈಎಫ್ಐ ಖಂಡಿಸಿದೆ.

ರಾಜ್ಯದಲ್ಲಿ ಮುಷ್ಕರಗಳನ್ನು ಹತ್ತಿಕ್ಕಲು ಪೊಲೀಸ್ ಶಕ್ತಿಯನ್ನು ಸರಕಾರ ಬಳಸುತ್ತಿರುವುದರ ಬಗ್ಗೆ ಸಮಿತಿ ತನ್ನ ವಿಷಾದ ವ್ಯಕ್ತಪಡಿಸಿದೆ.

ಅಭಿನಂದನೆ

ಕಲ್ಲಡ್ಕ, ಜು. 6–ಕರ್ನಾಟಕ ವಿಧಾನ ಪರಿಷತ್ತಿಗೆ ದಕ್ಷಿಣ ಕನ್ನಡ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ಸ್ಪರ್ಧಿಸಿದ ಜನತಾಪಕ್ಷದ ಅಭ್ಯರ್ಥಿ ಅಪ್ಪಣ್ಣ ಹೆಗ್ಡೆ ಅವರಿಗೆ ಮತನೀಡಿ ಗೆಲ್ಲಿಸಿದ ಮತದಾರರನ್ನು ಬಂಟ್ವಾಳ ತಾಲೂಕು ಯುವಜನತಾ ಅಧ್ಯಕ್ಷ ರೊನಾಲ್ಡ್ ಡಿ'ಸೋಜ ಮತ್ತು ಗೋಳ್ತಮಜಲು ಮಂಡಲ ಜನತಾ ಪಕ್ಷಾಧ್ಯಕ್ಷ ರಾಮದಾಸ ರೈ ಹಾಗೂ ಉಪಾಧ್ಯಕ್ಷ ಎನ್.ಎಂ.ರಾಮಕೃಷ್ಣ ರಾವ್ ಅಭಿನಂದಿಸಿದ್ದಾರೆ.

ಉಚಿತ ಸಮವಸ್ತ್ರ ವಿತರಣೆ

ಮಂಗಳೂರು, ಜು. 6–ನಗರದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಇತ್ತೀಚೆಗೆ ಕೆನರಾ ಬ್ಯಾಂಕಿನ ವಿಭಾಗೀಯ ಕಚೇರಿಯ ವತಿಯಿಂದ ಬಡ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ವಿತರಣೆ ನಡೆಸಲಾಯಿತು.

ಸಮಾರಂಭದ ಮುಖ್ಯ ಅತಿಥಿಯಾಗಿ ಕೆನರಾ ಬ್ಯಾಂಕಿನ ಡಿವಿಜನಲ್ ಮ್ಯಾನೇಜರ್ ಕೆ.ವಿ.ಪ್ರಭು ಅವರು ಆಗಮಿಸಿ ಸಮವಸ್ತ್ರ ವಿತರಿಸಿದರು.

ಶಾಲಾ ಅಧ್ಯಾಪಕ ಎಸ್.ಆರ್. ಹಿರೇಮಠ ಸ್ವಾಗತಿಸಿ, ಎಚ್.ಕೆ. ಮಹಮ್ಮದ್ ವಂದಿಸಿದರು.

ಶಿಕ್ಷಕರ ಮುಷ್ಕರಕ್ಕೆ ರೈಲ್ವೆ ಕಾರ್ಮಿಕರ ಬೆಂಬಲ

ಮಂಗಳೂರು, ಜು. 6-ದಕ್ಷಿಣ ರೈಲ್ವೆ ಕಾರ್ಮಿಕರ ಸಂಘದ ಮಂಗಳೂರು ವಲಯ ಕಾರ್ಯಕಾರಿ ಸಮಿತಿಯು ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಮುಷ್ಕರಕ್ಕೆ ತನ್ನ ಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ.



ಬ್ರಹ್ಮಾವರ ರೋಟರಿ ಕ್ಲಬ್‌ಗೆ ಆಯ್ಕೆ

ಬ್ರಹ್ಮಾವರ, ಜು. 6 – ಬ್ರಹ್ಮಾವರ ರೋಟರಿ ಕ್ಲಬ್‌ನ 1988–89ನೇ ಸಾಲಿನ ಅಧ್ಯಕ್ಷರಾಗಿ ಉಡುಪಿ ಸರಕಾರಿ ಆಸ್ಪತ್ರೆಯ ಪ್ರಯೋಗಾಲಯ ತಂತ್ರಜ್ಞ ಪಿ. ವೈ. ಶಂಕರ ನಾರಾಯಣ ಗುರುಕ್ಕಲ್ ಅವರು ಆಯ್ಕೆಯಾಗಿದ್ದಾರೆ.

ಈ ಕೆಳಗಿನವರು ಇತರ ಪದಾಧಿಕಾರಿಗಳಾಗಿರುತ್ತಾರೆ ಜಿ. ಎಂ. ಸಲೀಂ (ನಿಕಟ ಪೂರ್ವ ಅಧ್ಯಕ್ಷ) ಜೋಸೆಫ್ ಪಿಂಟೊ (ಉಪಾಧ್ಯಕ್ಷ), ಕೆ. ರವೀಂದ್ರ (ಕಾರ್ಯದರ್ಶಿ), ಆರ್. ಶಂಕರಪ್ಪ (ಸಹ ಕಾರ್ಯದರ್ಶಿ) ಮತ್ತು ರೋಟರಿ ಗ್ರಾಮೀಣ ದಳದ ಸಭಾಪತಿ, ಟಿ. ವಿಠಲದಾಸ ಪೈ (ಖಜಾಂಚಿ), ಕೆ. ಅಶೋಕ ಭಟ್ (ಸಮುದಾಯ ಸೇವಾ ನಿರ್ದೇಶಕ ಮತ್ತು ರೋವರ್ ಸಂಪಾದಕ), ಎನ್. ಎನ್. ಕಾಮತ್ (ಸಂಘ ಸೇವಾ ನಿರ್ದೇಶಕ), ಬಿ. ಆರ್. ಹೆಗ್ಡೆ (ವೃತ್ತಿ ನಿರ್ದೇಶಕ), ಟಿ. ಭಾಸ್ಕರ ರೈ (ಅಂತಾರಾಷ್ಟ್ರೀಯ ಸೇವಾ ನಿರ್ದೇಶಕ), ಉದಯ ಭಾಸ್ಕರ ಶೆಟ್ಟಿ (ಸಾರ್ಜಂಟ್ ಎಟ್ ಆರ್ಮ್ಸ್), ನಿತ್ಯಾನಂದ ಪೈ ಕ್ಲಬ್ ಸಭಾಪತಿ ಮತ್ತು ಶ್ರೀನಿವಾಸ ಭಟ್ (ಸಾರ್ವಜನಿಕ ಸಂಪರ್ಕಾಧಿಕಾರಿ)

ಲಾರಿ ಮಗುಚಿ ಇಬ್ಬರ ಸಾವು

ಚಾಲೂರು, ಜು. 6–ಇಲ್ಲಿಗೆ ಸಮೀಪದ ದೊಡ್ಡ ಕಡತೂರು ಬಳಿ ಇತ್ತೀಚೆಗೆ ಲಾರಿಯೊಂದು ಮಗುಚಿ ಬಿದ್ದು ಇಬ್ಬರು ಸ್ಥಳದಲ್ಲೆ ಮೃತಪಟ್ಟು 9ಮಂದಿ ಗಾಯಗೊಂಡಿದ್ದಾರೆ.

ಗಾಯಾಳುಗಳಲ್ಲಿ ಇಬ್ಬರ ಸ್ಥಿತಿ ಚಿಂತಾಜನಕವಾಗಿದ್ದು ಬೆಂಗಳೂರಿಗೆ ಸಾಗಿಸಲಾಗಿದೆ.



● ರಾಯಚೂರು, ಜು. 6–ರಾಯಚೂರು ನಗರ ಯೋಜನಾ ಪ್ರಾಧಿಕಾರವನ್ನು ರಾಜ್ಯ ಸರ್ಕಾರವು ನಗರಾಭಿವೃದ್ಧಿ ಪ್ರಾಧಿಕಾರವೆಂದು ರಚಿಸಿದ್ದು, ಇದರ ಪ್ರಥಮ ಅಧ್ಯಕ್ಷರಾಗಿ ಜಿಲ್ಲಾಧಿಕಾರಿ ರಂಗನಾಥ ಕಲವಡಿ ಅವರು ಇತ್ತೀಚೆಗೆ ಅಧಿಕಾರ ವಹಿಸಿಕೊಂಡರು.

ಕಾಸರಗೋಡು ಪ್ರಶ್ನೆ:

ಚರ್ಚೆ ಏರ್ಪಡಿಸಲು ಕಯ್ಯಾರ ಆಗ್ರಹ

ಬದಿಯಡ್ಕ, ಜು. 6–ಕೇಂದ್ರ ಗೃಹ ಸಚಿವರು ಮಹಾರಾಷ್ಟ್ರ–ಕರ್ನಾಟಕ ಗಡಿ ಸಮಸ್ಯೆ ಬಗೆಹರಿಸಲು ಉಭಯ ರಾಜ್ಯಗಳ ಮುಖ್ಯಮಂತ್ರಿಗಳನ್ನು ಮಾತುಕತೆಗೆ ಕರೆದಂತೆ, ಕಾಸರಗೋಡು ಗಡಿವಿವಾದವನ್ನು ಇತ್ಯರ್ಥಗೊಳಿಸಲು ಕೇರಳ–ಕರ್ನಾಟಕ ರಾಜ್ಯಗಳ ಮುಖ್ಯ ಮಂತ್ರಿಗಳನ್ನೂ ಮಾತುಕತೆಗೆ ಆಹ್ವಾನಿಸಬೇಕೆಂದು ಕಾಸರಗೋಡಿನ ಕರ್ನಾಟಕ ಸಮಿತಿಯ ಪ್ರಧಾನ ಕಾರ್ಯದರ್ಶಿ ಹಾಗೂ ಖ್ಯಾತ ಕವಿ ಕಯ್ಯಾರ ಕಿಂಞಣ್ಣ ರೈ ಅವರು ತಂತಿ ಸಂದೇಶದ ಮೂಲಕ ವಿನಂತಿಸಿಕೊಂಡಿದ್ದಾರೆ.

ಕರ್ನಾಟಕದ ಮುಖ್ಯಮಂತ್ರಿಯವರು ಈ ಸಂಬಂಧವಾಗಿ ಕೇಂದ್ರ ಗೃಹಸಚಿವರ ಮೇಲೆ ಒತ್ತಾಯ ಹೇರಬೇಕೆಂದು ಅವರು ಕೇಳಿಕೊಂಡಿದ್ದಾರೆ.

ಕೇಂದ್ರ ಸರಕಾರ ನೇಮಿಸಿದ ಮಹಾಜನ ಆಯೋಗದ ವರದಿಯಲ್ಲಿ ಈ ಮೂರು ರಾಜ್ಯಗಳ ಗಡಿವಿವಾದದ ಇತ್ಯರ್ಥದ ಬಗ್ಗೆ ಪ್ರಸ್ತಾಪಿತವಾಗಿರುವಾಗ, ಇದೀಗ ಕರ್ನಾಟಕ ಮಹಾರಾಷ್ಟ್ರ ಗಡಿವಿವಾದದ ಬಗ್ಗೆ ಮಾತ್ರ ಚರ್ಚೆಗೆ ಆಹ್ವಾನಿಸಿ, ಕಾಸರಗೋಡು ಗಡಿವಿವಾದದ ಬಗ್ಗೆ ಮೌನ ವಹಿಸಿರುವುದಕ್ಕೆ ಕಯ್ಯಾರರು ವಿಷಾದ ವ್ಯಕ್ತಪಡಿಸಿದ್ದಾರೆ.

ಜುಲೈ 8: ರಾಷ್ಟ್ರೀಯ ವಿದ್ಯಾರ್ಥಿ ದಿನಾಚರಣೆ

ಮಂಗಳೂರು: ಜು. 6– ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ತನ್ನ 39ನೇ ಜನ್ಮದಿನಾಚರಣೆ ದಿನವಾದ ಜುಲೈ 8 ರಂದು ರಾಷ್ಟ್ರೀಯ ವಿದ್ಯಾರ್ಥಿ ದಿನವನ್ನಾಗಿ ಆಚರಿಸಲು ನಿರ್ಧರಿಸಿದೆ.

ನಗರದ ಮಂಗಳ ಕಾರ್ಯಾಲಯದಲ್ಲಿ ಜರಗಲಿರುವ ಈ ಸಮಾರಂಭವನ್ನುದ್ದೇಶಿಸಿ ವಿದ್ಯಾರ್ಥಿ ಪರಿಷತ್ ಜಿಲ್ಲಾ ಪ್ರಮುಖ ಕೆ. ಬಾಲಕೃಷ್ಣ ಭಟ್ ಅವರು ಮಾತನಾಡಲಿದ್ದಾರೆ.

ನಡೆಯೋಣ ನಡೆಯೋಣ ಸೇವೆಗಾಗಿ...

ಕುಂದಾಪುರ, ಮಾ. 2- ನಮ್ಮ ದೇಶದ ಜನಗಳಿಂದ ದೇವರುವರೇ ಕೆಲಸ ವಾಗಿದೆ. ತನ್ನ ಕಾಲ ಮೇಲೆ ತಾನು ನಿಲ್ಲಬೇಕು. ಪರಿಶ್ರಮದಿಂದ ಬದುಕಲು ... ಕಲಿಯುತ್ತಿಲ್ಲ. ಇದ್ದವರು ಇಲ್ಲದವರು ಇಬ್ಬರೂ ಸರಕಾರದಿಂದ ಇಲ್ಲದವರಿಗಾಗಿ ಇರುವ ಸೌಲಭ್ಯವನ್ನು ಪಡೆಯುತ್ತಿದ್ದಾರೆ ಎಂದು ಡಾ. ಶಿವರಾಮ ಕಾರಂತ ನುಡಿದರು.

ಕುಂದಾಪುರದ "ಸೇವಾ ಸಂಗಮ" ಫೆ. 28ರಂದು ಏರ್ಪಡಿಸಿದ ... ನಡಿಗೆ ಕಾರ್ಯಕ್ರಮದ ನಂತರ ಕೋಟ ... ಮೈದಾನದಲ್ಲಿ ನಡೆದ ಬೃಹತ್ ಸಾರ್ವಜನಿಕ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು ತನ್ನ ಕಾಲಮೇಲೆ ತಾನು ನಿಲ್ಲಬೇಕು. ತನ್ನ ಅನ್ನವನ್ನು ತಾನೇ ಸಂಪಾದಿಸಬೇಕೆಂಬ ಮನೋಭಾವ ಜನರಲ್ಲಿ ಇಂದು ಬರಬೇಕಾಗಿದೆ. ಇಷ್ಟರವರೆಗೆ ಸಾವಿರಾರು ಪ್ರಯೋಗ ಮಾಡಿದ್ದೇವೆ. ಅವರಿಗೆ ಹೇಗೆ ಬುಣೆ ಮಾಡಬೇಕು. ಬೇರೆಯವರಿಗೆ ಹೇಗೆ ಸಹಾಯ ಮಾಡಬೇಕು ಎಂಬುದನ್ನು ತಿಳಿಯಬೇಕಾಗಿದೆ ಎಂದು ಹೇಳಿದರು.

ಹ್ಯಾಂಬರ್ಗ್ ದೃಷ್ಟಾಂತ

ಬಾಂಬ್ ದಾಳಿಯಿಂದ ಸಂಪೂರ್ಣ ನಾಶವಾಗಿ ಹೋದ ಹ್ಯಾಂಬರ್ಗ್ ನಗರವನ್ನು ನಾನು 7 ವರ್ಷಗಳ ನಂತರ ಭೇಟಿ ಮಾಡಿದ್ದೆ. ಹಿಟ್ಲರ್‌ನ ದುರ್ಬುದ್ಧಿಯಿಂದ ಸಾವಿರಾರು ಮಂದಿ ಯುವಕರು ಜೀವ ಕಳೆದುಕೊಂಡು ಬರೇ 12 ವರ್ಷದೊಳಗಿನ ಹಾಗೂ 50 ವರ್ಷ ಮೀರಿದ ವಯಸ್ಕರು ಬದುಕುಳಿದಿದ್ದರೂ ಹ್ಯಾಂಬರ್ಗ್ ಬಾಂಬ್ ದಾಳಿಗೆ ಮುನ್ನ ಹೇಗಿತ್ತೋ ಅದಕ್ಕಿಂತ 30 ಪಟ್ಟು ಹೆಚ್ಚು ಅಭಿವೃದ್ಧಿ ಹೊಂದಿತ್ತು. ನಮ್ಮ ಕಲ್ಪನೆಗೂ ಮೀರಿದ ಸಾಧನೆ ಅದು. ಹಟ, ಛಲ, ನಮ್ಮ ಕಾಲ ಮೇಲೆ ನಾವೇ ನಿಲ್ಲಬೇಕೆಂಬ ಮನೋಭಾವದಿಂದ ಅವರು ಅಂತಹ ಅಭಿವೃದ್ಧಿ ಸಾಧಿಸಿದ್ದರು. ನಾವು ಮರೆತುಬಿಟ್ಟರೆ. ಸಣ್ಣದರಲ್ಲಿ ಅವರು ಮಾಡಿದರೆ ನಮಗೂ ಫಲ ಸಿಗುತ್ತದೆ ಎಂಬ ಅಲ್ಪ ಬುದ್ಧಿ ತೋರಿಸುತ್ತೇವೆ ಎಂದು ಕಾರಂತ ನುಡಿದರು.

ನಿಸ್ವಾರ್ಥ ಸೇವಾ ಮನೋಭಾವ

ಹಿಂದೆ ಮನುಷ್ಯರಿಗೆ ಮಾತ್ರವಲ್ಲ ಪ್ರಾಣಿ ಪಕ್ಷಿಗಳಿಗೂ ಸಾಧ್ಯವಾದಷ್ಟು ಸೇವೆ ಸಲ್ಲಿಸಬೇಕು ಎಂದು ಜನ ಅರಿತು ಸೇವೆ ಮಾಡುತ್ತಿದ್ದರು. ಪ್ರಾಣಿಗಳಿಗೂ ನೀರಡಿಕೆ ಹಸಿವೆ ಭಾವನೆ ಇರುತ್ತದೆ ಎಂದು ಅವರಿಗೆ ಅರಿವಿತ್ತು. ಇಂದು ನಾವು ನಮ್ಮ ಜಾನುವಾರುಗಳಿಗೆ ತಿಂದ ಸ್ಥಿತಿಯನ್ನೇ ಪ್ರಾಣಿಗಳಿಗೂ ಅನ್ವಯಿಸಿ ಬದುಕಿದರೆ ಸಾಕು ಎಂದು ತಿಳಿದಿದ್ದೇವೆ. ಇಂದು ಚಿಕ್ಕಮಕ್ಕಳಲ್ಲಿ ಸೇವಾ ಮನೋಭಾವನೆಯನ್ನು ನಾವು ಬೆಳೆಸುತ್ತಾ ಬರಬೇಕು. ಚಿಕ್ಕಮಕ್ಕಳಲ್ಲಿ ಬೆಳೆದು ಬಂದ ಸೇವಾ ಮನೋಭಾವನೆ ... ತಾವೇ ... ಭವಿಷ್ಯವನ್ನು ... ರೂಪಿಸುತ್ತದೆ ಎಂದು ಶಿವರಾಮ ಕಾರಂತರು ಹೇಳಿದರು.

ಕುಂದಾಪುರದಿಂದ ಕೋಟದ ತನಕ ನಡೆದ ಜನಸ್ತೋಮ. ಚಿತ್ರ: ಛಾಯಾ ಕುಂದಾಪುರ

ಊರಲ್ಲಿರುವ ಸೇವಾ ಸಂಸ್ಥೆಗಳೇ ಎಲ್ಲ ಕೆಲಸ ಮಾಡಬೇಕು ಎಂಬ ಮನೋಭಾವ ಜನರು ತೋರಬಾರದು ಎಂದು ಅವರು ಹೇಳಿದರು.

ನಮ್ಮ ಪ್ರಕೃತಿಯನ್ನು ತೆರೆದ ಹೃದಯದಿಂದ ನೋಡಿದಾಗ ಅದೇ ನಮಗೆ ಸೇವೆಗಾಗಿ ಬನ್ನಿ ಎಂದು ಹೇಳಿಕೊಡುತ್ತದೆ. ವಾಯು, ಜಲ, ಮರ ಅಲ್ಲದೇ ಜಡ ವಸ್ತುಗಳಗೂ ನಮ್ಮ ಸೇವೆಯನ್ನು ಫಲಾಪೇಕ್ಷೆ ಇಲ್ಲದೇ ಮಾಡುತ್ತವೆ. ನಾವು ಆ ಪ್ರಕೃತಿಯ ಅತ್ಯಾಚಾರ ಮಾಡುತ್ತಿದ್ದೇವೆಯೇ ವಿನಹ ಏನೂ ಕಲಿತಿಲ್ಲ. ಸೇವೆ ಜನರ ಹೃದಯಾಂತರಾಳದಿಂದ ಬರಬೇಕಿತ್ತು. ಆದರೆ, ಇಂದು ನಡಿಗೆ ಮೂಲಕ ಹೇಳಬೇಕಾಗಿದೆ. ಎಲ್ಲರಲ್ಲೂ ಸೇವಾ ಮನೋಭಾವ ಮೂಡುವಂತೆ ನಾವು ಪ್ರಯತ್ನ ಮಾಡೋಣ! ಎಂದು ಒಂದು ಸೇವಾ ಪ್ರತಿಷ್ಠಾನದ ಸಂಚಾಲಕ ಸೀತಾರಾಮ ಕೆದಿಲಾಯರು ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ಹೇಳಿದರು.

ಆರಂಭದಲ್ಲಿ "ಸೇವಾ ಸಂಗಮದ"ದ ಅಧ್ಯಕ್ಷ ಡಾ. ಎಸ್. ಎನ್. ಪಡಿಯಾರ ಸೇವಾ ಸಂಗಮದ ಚಟುವಟಿಕೆ, ಉದ್ದೇಶ ವಿವರಿಸಿ ಸ್ವಾಗತಿಸಿದರು. ದಿನಕರ ಶಾನುಭಾಗ ಕಾರ್ಯಕ್ರಮ ನಿರ್ವಹಿಸಿದರು. ಪಂಚಮಹಲ್ ವಾಸುದೇವ ಕಾಮತ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸೇವಾ ಸಂಗಮ ಟ್ರಸ್ಟಿನ ಡಾ. ರಾಮಮೋಹನ ಅತಿಥಿಗಳನ್ನು ಪರಿಚಯಿಸಿದರು.

ಸೇವಾ ಸಂಗಮದ ಪೋಷಕರಿಗೆ ಗೌರವ ಕಾಣಿಕೆಗಳನ್ನು ನೀಡಲಾಯಿತು.

ಸೇವಾ ಮೆರಥಾನ್ ನಡಿಗೆ

ವಂದೇ ಮಾತರಂ ಭಾರತ ಮಾತಾಕಿ ಜೈ ನಡೆಯೋಣ ನಡೆಯೋಣ ಸೇವೆಗಾಗಿ ನಡೆಯೋಣ ಬನ್ನಿ ಬನ್ನಿ ಸೇವೆ ಮಾಡೋಣ ಬನ್ನಿ' ಮುಂತಾದ ಘೋಷಣೆ ಕೂಗುತ್ತಾ, ಹೆಂಗಸರು, ಮಕ್ಕಳು ಯುವಕರು ಹಿರಿಯರೆನ್ನದೆ ಸಾವಿರಾರು ಮಂದಿ ಅಂದು ಕುಂದಾಪುರದ ಸೇವಾ ಸಂಗಮ ಏರ್ಪಡಿಸಿದ್ದ ಕುಂದಾಪುರದಿಂದ ಕೋಟದ ತನಕದ ಸೇವಾನಡಿಗೆ (ಸೇವಾಮೆರಥಾನ್) ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಸ್ವಾಮಿ ವಿಂಗಾನಂದಜಿ ಕುಂದಾಪುರದ ಹಳೆ ಸಂತೆ ಮಾರ್ಕೆಟಿನಲ್ಲಿ ಈ ಸೇವಾ ಮೆರಥಾನ್ ಉದ್ಘಾಟಿಸಿದರು.

ಯಾವುದೇ ಪಥಸಂಚಲನದ ಕಟ್ಟು ಪಾಡಿಲ್ಲದೇ ಉತ್ಸಾಹದಿಂದ ಆಯಾಸ ತಿಳಿಯದಂತೆ ನಡೆದ ಜನ ಸಮೂಹದ ಉತ್ಸವ ಕೋಟ ತಲುಪಿದ ಮೇಲೂ ಕುಂದಲಿಲ್ಲ. ರಸ್ತೆ ಉದ್ದಗಲಕ್ಕೂ ನೆರೆದ ಜನರೂ ಸೇವಾ ನಡಿಗೆಯಲ್ಲಿ ಸೇರಿಕೊಳ್ಳುತ್ತಾ ಉತ್ಸಾಹ ತುಂಬಿದರು.

ಜಿಲ್ಲೆಯ ಹಲವು ಮಹನೀಯರು ಆಗಮಿಸಿ ಈ ಸೇವಾ ಮೆರಥಾನ್ ಕಾರ್ಯಕ್ರಮ ಯಶಸ್ವಿಗೊಳಿಸಿದರು.

ಗ್ರಾಮಸ್ಥರು ನೀರು ಪಾನೀಯ ವ್ಯವಸ್ಥೆ ಮಾಡಿ ತಮ್ಮ ಸೇವಾ ಮನೋಭಾವ ತೋರಿಸಿದ್ದರು. ಮೆರಥಾನ್ ಧರಿಸಿದ ಆರು ಮಂದಿ ಯುವಕರು ಈ ನಡಿಗೆಯಲ್ಲಿ ಭಾಗವಹಿಸಿದ್ದರು.

ಜನರಲ್ಲಿ ಸೇವಾ ಮನೋಭಾವ ಬೆಳೆಯಬೇಕು ಎನ್ನುವ ಉದ್ದೇಶದಿಂದ ಸೇವಾ ಸಂಗಮ ಈ ಕಾರ್ಯಕ್ರಮ ಹಮ್ಮಿಕೊಂಡಿತ್ತು; ಕುಂದಾಪುರದಲ್ಲಿ ಪ್ರಪ್ರಥಮವಾಗಿ ಈ ಅಪೂರ್ವ ಕಾರ್ಯಕ್ರಮ ನಡೆಯುತ್ತಿರುವುದಾಗಿದೆ.

ಸಮಾರಂಭದ ಕೊನೆಯಲ್ಲಿ ಸೇವಾ ಸಂಗಮದ ಟ್ರಸ್ಟಿಗಳಲ್ಲಿ ಓರ್ವರಾದ ಪಾಂಡುರಂಗ ಪ್ರಭು ಎಲ್ಲರಿಗೂ ಕೃತಜ್ಞತೆ ಅರ್ಪಿಸಿದರು.

ಸೇವಾ ಮೆರಥಾನ್ ಕಾರ್ಯಕ್ರಮದಂಗವಾಗಿ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಡಾ. ಕೆ. ಶಿವರಾಮ ಕಾರಂತರು ಮಾತನಾಡುತ್ತಿದ್ದಾರೆ. ಡಾ. ಎಸ್. ಎನ್. ಪಡಿಯಾರ್, ಸೀತಾರಾಮ ಕೆದಿಲಾಯ, ಪಂಚಮಹಲ್ ವಾಸುದೇವ ಕಾಮತ್ ಅವರನ್ನೂ ಚಿತ್ರದಲ್ಲಿ ಕಾಣಬಹುದು. ಚಿತ್ರ: ಆರ್. ಕೆ. ಕುಂದಾಪುರ.

ಮುಂಬಯಿಯಲ್ಲಿ ಸಂಜೀವ ಶೆಟ್ಟಿ ಕೃತಿ ಸಂಕಿರಣ

ಮುಂಬಯಿ, ಮಾ. 2- ನಗರ[…] ನವೋದಯ ಸಾಹಿತ್ಯ ಮಂದಿರದ ಆ[…] ಯದಲ್ಲಿ ಸಂಜೀವ ಶೆಟ್ಟಿಯವರ ಕೃತಿಗ[…] ಕುರಿತು ವಿಚಾರ ಸಂಕಿರಣವೊಂದು ಇತ್ತೀ[…] ಚೆಗೆ ಗೋರೆಗಾಂವ್ ಕರ್ನಾಟಕ ಸಂಘದ[…] ಜರುಗಿತು.

ಸಾಹಿತಿ ಭಾಸ್ಕರ ಪಡುಬಿದ್ರಿಯವ[…] ಅಧ್ಯಕ್ಷತೆಯಲ್ಲಿ ನಡೆದ ಗೋಷ್ಠಿಯ[…] ಸಂಜೀವ ಶೆಟ್ಟಿಯವರ ಹಲವು ಹ[…] ಕೃತಿಗಳ ಬಗ್ಗೆ ಖ್ಯಾತ ಸಾಹಿತಿ ನಾಗ[…] ಹಳ್ಳಿ ಚಂದ್ರಶೇಖರ, ಮಾರುತಿ ಶಾ[…] ಭಾಗ, ದೇವಿ ಕುಲಕರ್ಣಿ, ಕೆ. ಎಚ್[…] ಕರ್ಕೇರ ಮೊದಲಾದವರು ಮಾತನಾ[…] "ಬದುಕಿನ ಸಂಕೀರ್ಣ ಸ್ವರೂಪದಲ್ಲಿ ಮನ[…] ವೀಯ ಸಂವೇದನೆಗಳನ್ನು ಶೋಧಿ[…] ದೊರೆತ ಅನುಭವ ದ್ರವ್ಯವನ್ನು ಕಲಾತ್ಮ[…] ವಾಗಿ ಕಟ್ಟಿಕೊಡುವುದು ಈ ಎಲ್ಲಾ ಕೃ[…] ಗಳ ವೈಶಿಷ್ಟ್ಯ" ಎಂದರು.

ಪ್ರಾಧ್ಯಾಪಕ ಶೆಟ್ಟಿ ಅವರು ಸ್ವಾಗತಿ[…] ಕೊನೆಯಲ್ಲಿ ವಂದಿಸಿದರು. ರವಿ ಅಂಚ[…] ಕಾರ್ಯಕ್ರಮ ನಿರ್ವಹಣೆ ಹಾಗೂ ವ[…] ಚೆಯ ಭಾಷಣ ಮಾಡಿದರು.

ಮೂಳೂರು ಕಡಲ್ಕೊರೆತ: ಸಂತ್ರಸ್ತರಿಗೆ ಪರಿಹಾರ

ಉಡುಪಿ, ಮಾ. 2- ಇತ್ತೀಚೆಗೆ[…] ಮೂಳೂರಿನಲ್ಲಿ ಕಡಲ್ಕೊರೆತಕ್ಕೀಡಾ[…] ಮನೆಮಾರು ಕಳಕೊಂಡವರ ಪೈಕಿ, 3 ಕುಟುಂಬಗಳಿಗೆ ತಲಾ 5 ಸೆಂಟ್ಸ್ ... ನಿವೇಶನಗಳನ್ನೂ, 4 ಕುಟುಂಬಗಳಿಗೆ ತಲಾ 300 ರೂ. ನಗದು ಹಣವಲ್ಲದೆ, 200 ರೂ. ಮೌಲ್ಯದ ಉಚಿತ ವ[…] ಮಾಟ್ಟುಗಳನ್ನು ಮಂಜೂರು ಮಾಡಲಾಗಿ[…] ದೆಯಲ್ಲದೆ, ಹೆಚ್ಚಿನ ನೆರವಿಗಾಗಿ ಉಪ[…] ವಿಭಾಗಾಧಿಕಾರಿಗಳಿಗೆ ಶಿಫಾರಸು ಮಾಡ[…] ಲಾಗಿದೆಯೆಂದು ತಹಸೀಲ್ದಾರ್ ರಾ.ಮಾ. ಭಟ್ ... ತಿಳಿಸಿದ್ದಾರೆ.

ಪರಿಸರ ವಿಜ್ಞಾನ ಮತ್ತು ... ವಿದ್ಯಾನಿಲಯದಲ್ಲಿ ಕುದುರೆಮುಖ ಅ[…] ಟಿಸಿ ಮಾತನಾಡಿದಾಗ. ಅಧ್ಯಕ್ಷತೆ ವಹಿ[…] ಕೆ. ಎಂ. ಶಫಿಯುಲ್ಲಾ ಅವರನ್ನೂ ಚಿ[…]

ಖಾಸಗಿ ರಸ್ತೆಗೆ ಹಣ ಬಳಸಿಲ್ಲ: ಕಳಂಜ ಮಂ. ಪ್ರಧಾನರ ಹೇಳಿಕೆ

ಕಳಂಜ, ಮಾ. 2- 'ಅವ್ಯವಹಾರ ಆರೋಪ' ಎಂಬ ಶಿರೋನಾಮೆಯಡಿ, 10.1.88ರಂದು ಮುಂಗಾರು ಪತ್ರಿಕೆಯಲ್ಲಿ ಪ್ರಕಟವಾದ ಕಳಂಜ ಮಂಡಲ ಪಂಚಾಯತ್ ಸದಸ್ಯ ಕೆ. ಚೆನ್ನಪ್ಪ ರೈ ಅವರ ಆರೋಪಕ್ಕೆ ಮಂಡಲ ಪ್ರಧಾನ ಕೋಟೆ ವಸಂತ ಕುಮಾರ್‌ರವರು ಈ ಕೆಳಗಿನಂತೆ ಸ್ಪಷ್ಟೀಕರಣ ನೀಡಿದ್ದಾರೆ.

ಅವರ ಆರೋಪದ ಕಳಂಜ ಕು. ಕೃಷ್ಣ ಶೆಟ್ಟಿ ಹೆಸರನ್ನು ಕರುವಂಥದ್ದಾಗಿದೆ, ಖಾಸಗಿ ರಸ್ತೆಗೆ ಹಣ ಬಳಸಲ್ಪಟ್ಟ ಸಂದರ್ಭ ಇರುವುದಿಲ್ಲವಾಗಿಯೂ ಪಂಚಾಯತ್ ರಸ್ತೆಯು ಅಭಿವೃದ್ಧಿ ಕಾರ್ಯ ಮಾತ್ರ ಆಗಿರುವುದಾಗಿಯೂ, ಈಗಾಗಲೇ ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಜಿ. ಪ. ಸದಸ್ಯರು ಹಾಗೂ ಲೋಕೋಪಯೋಗಿ ಸಮಿತಿ ಅಧ್ಯಕ್ಷರೂ ಪರಿಶೀಲನೆ ಮಾಡಿರುತ್ತಾರೆ ಎಂದು ತಿಳಿಸಿದ್ದಾರೆ.

ಸ್ಥಳಾವಕಾಶ ಸ್ಥಳ ಕಾದಿರಿಸುವಿಕೆಯಲ್ಲೂ ಅವ್ಯವಹಾರ ಯಾವುದೇನೂ ಆಗಿರಲಿಲ್ಲ. ಇದಕ್ಕೆ ಸಂಬಂಧಿಸಿ ಆಡಳಿತದ ಸಭೆಯಲ್ಲಿ ಸರ್ವಾನುಮತದ ನಿರ್ಣಯ ಅಂಗೀಕರಿಸಲ್ಪಟ್ಟಿದೆ. ಕೆ. ಚೆನ್ನಪ್ಪ ರೈಯವರ ಹೇಳಿಕೆಯನ್ನು ಸಭೆ ಖಂಡಿಸಿದೆ ಮತ್ತು, ಆರೋಪವನ್ನು ಹಿಂತೆಗೆದುಕೊಳ್ಳಲು ಅವರನ್ನು ಕೇಳಿಕೊಳ್ಳಲಾಗಿದೆ ಎಂದು ಕೋಟೆ ವಸಂತ ಕುಮಾರ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಜುಗಾರಿ ದಾಳಿ: ಐವರ ಬಂಧನ

ಮಂಜೇಶ್ವರ, ಮಾ. 2- ಹೊಸಂಗಡಿಯಲ್ಲಿ ಜುಗಾರಿ ಆಡುತ್ತಿದ್ದ ಓರ್ವ ಪಂಚಾಯತ್ ಸದಸ್ಯನ ಸಹಿತ 5 ಮಂದಿಯನ್ನು, ಮಂಜೇಶ್ವರ ಎಸ್. ಐ. ಟಿ. ಕೆ. ... ಅವರು ಇತ್ತೀಚೆಗೆ ಬಂಧಿಸಿ ಅವರಿಂದ ಸುಮಾರು 8 ಸಾವಿರರೂ.ಗಳನ್ನು ವಶಪಡಿಸಿಕೊಂಡಿದ್ದಾರೆ.

... ಬಳಿಕ ಜಾಮೀನು ... ಪೊಲೀಸರು ಬಿಡುಗಡೆಗೊಳಿಸಿದರು.

'ಗ್ರಾಮಸಭೆಯ ಬೇಡಿಕೆಗೆ ಸೂಕ್ತ ಮನ್ನಣೆ ಲಭ್ಯ'

ಕಳಂಜ, ಮಾ. 2-ಗ್ರಾಮಸಭೆಯ ಬೇಡಿಕೆಗಳಿಗೆ ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತಿನಿಂದ ಸೂಕ್ತ ಮನ್ನಣೆ ದೊರಕುವುದಾಗಿಯೂ ಅತ್ಯಾವಶ್ಯಕವಾಗಿ ಆಗಬೇಕಾದ ಅಭಿವೃದ್ಧಿ ಕಾರ್ಯಗಳ ಕುರಿತು ಗ್ರಾಮಸ್ಥರು ಬೇಡಿಕೆಗಳನ್ನು ಮುಂದಿಡಬೇಕೆಂದೂ ಜಿಲ್ಲಾ ಪರಿಷತ್ ಸದಸ್ಯ, ಜಿಲ್ಲಾ ಪರಿಷತ್ತಿನ ಸಮಾಜ ಕಲ್ಯಾಣ ಸಮಿತಿಯ ಅಧ್ಯಕ್ಷ ಜೀ. ದೇವಪ್ಪ ನಾಯ್ಕರು ಕರೆಯಿತ್ತರು.

ಅವರು ಇತ್ತೀಚೆಗೆ ಕಳಂಜ ಮಂಡಲ ಪಂಚಾಯತ್ ಕ್ಷೇತ್ರದ ಕೋಟೆಮುಂಡುಗಾರು ಸ. ಹಿ. ಪ್ರಾ. ಶಾಲಾ ವಠಾರದಲ್ಲಿ ಜರಗಿದ ಕಳಂಜ ಗ್ರಾಮ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು. ಮಂಡಲ ಪ್ರಧಾನರಾದ ಶ್ರೀ ಕೋಟೆ ವಸಂತ ಕುಮಾರ್‌ರವರು ಸಭಾಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಪರಿಷತ್ ಜಿಲ್ಲೆಯ ಎಲ್ಲಾ 169 ಮಂಡಲ ಪಂಚಾಯತ್‌ಗಳನ್ನೂ ಸಂಸಮಾನವಾದ ದೃಷ್ಟಿಯಿಂದ ನೋಡುತ್ತಿದ್ದು ಎಲ್ಲಾ ಕಡೆಗೂ ಅನುದಾನವನ್ನು ದಾಮಾಶಯ ಪ್ರಕಾರ ನೀಡುತ್ತಿರುವುದಾಗಿ ತಿಳಿಸಿದ ಅವರು ಸಮಾಜ ಕಲ್ಯಾಣ ಇಲಾಖೆಯಿಂದ ದೊರಕುವ ಸೌಲಭ್ಯಗಳ ಕುರಿತು ವಿವರಿಸಿದರು.

ಗ್ರಾಮಾಭಿವೃದ್ಧಿ ಕಾರ್ಯಗಳಲ್ಲಿ ಕಳಂಜ ಮಂಡಲ ಪಂಚಾಯತ್‌ನ ಸಾಧನೆಗಾಗಿ ದೇವಪ್ಪ ನಾಯ್ಕರವರು ಮೆಚ್ಚುಗೆ ವ್ಯಕ್ತಪಡಿಸಿದರು. ವಿಸ್ತರಣಾಧಿಕಾರಿ ಪುಷ್ಪಾಕರ್‌ರವರು ಪಶುಸಂಗೋಪನಾ ಸರಕಾರದಿಂದ ಹಾಗೂ ಜಿಲ್ಲಾ ಪರಿಷತ್ತಿನಿಂದ ದೊರಕುವ ವಿವಿಧ ಸೌಲಭ್ಯಗಳ ಕುರಿತು ವಿವರಿಸಿದರು.

ಐ. ಆರ್. ಡಿ. ಪಿ. ಅನ್ವಯದ, ಹುದ್ದೆ ... ಮನೆ, ಕಡಿಮೆ ವೆಚ್ಚದ ಮನೆಗಳಿಗೆ ಸಾಲ ಸೌಲಭ್ಯದ ಬಗ್ಗೆ ಅರ್ಜಿಗಳನ್ನು ಸ್ವೀಕರಿಸಿ ಪ್ರಯೋಜನಾರ್ಥಿಗಳನ್ನು ಆಯ್ಕೆ ಮಾಡಲಾಯಿತು. ಗ್ರಾಮಸ್ಥರ ಹಲವು ಬೇಡಿಕೆಗಳನ್ನು ದಾಖಲು ಮಾಡಿಕೊಳ್ಳಲಾಯಿತು. ಮಂಡಲ ಪ್ರಧಾನ ಕೋಟೆ ವಸಂತಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಎಂ. ಗೋಪಾಲಕೃಷ್ಣರಾವ್ ವರದಿ ಓದಿದರಲ್ಲದೆ ಕೊನೆಯಲ್ಲಿ ವಂದಿಸಿದರು.

ಕಳಂಜ ಮಾತ್ರವಲ್ಲದೆ ಬಾಳಿಲ, ಮತ್ತು ಮುಪ್ಪೇರಿಯ ಗ್ರಾಮಸಭೆಗಳೂ ಪ್ರತ್ಯೇಕ ಪ್ರತ್ಯೇಕವಾಗಿ ಜರಗಿದವು. ಮೂರು ಸಭೆಗಳ ಅಧ್ಯಕ್ಷತೆಯನ್ನು ಪ್ರಧಾನರು ವಹಿಸಿದ್ದರು. ಬಾಳಿಲ ಗ್ರಾಮಸಭೆ ವಿದ್ಯಾಬೋಧಿನೀ ಪ್ರೌಢ ಶಾಲಾ ವಠಾರದಲ್ಲೂ, ಮುಪ್ಪೇರಿಯಾ ಗ್ರಾಮಸಭೆ ಇಂದ್ರಾಜೆಯ ಸ. ಕಿ. ಪ್ರಾ. ಶಾಲಾ ವಠಾರದಲ್ಲೂ ಜರಗಿದವು. ಉಪ ಪ್ರಧಾನರಾದ ಪಿ. ಎಸ್. ಯಾಕೂಬ್ ಸಾಹೇಬ, ಮಂಡಲ ಪಂಚಾಯತ್‌ನ ಹೆಚ್ಚಿನ ಸದಸ್ಯರು ಉಪಸ್ಥಿತರಿದ್ದರು.

ಮುದರಂಗಡಿಯಲ್ಲಿ ಜೇನುಕೃಷಿ ತರಬೇತಿ

ಮುದರಂಗಡಿ, ಮಾ. 2- ಸ್ಥಳೀಯ ರೋಟರಿ ಗ್ರಾಮೀಣ ದಳವು ಪುತ್ತೂರಿನ ದ. ಕ. ಜಿಲ್ಲಾ ಜೇನು ವ್ಯವಸಾಯಗಾರರ ಸಹಕಾರಿ ಸಂಘ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ನೆರವಿನೊಂದಿಗೆ ಮಾರ್ಚ್ 6ರಿಂದ 13ರ ವರೆಗೆ ಮುದರಂಗಡಿಯಲ್ಲಿ ಬೇಸಿಗೆಯ ಜೇನು ಕೃಷಿ ತರಬೇತಿ ಶಿಬಿರವನ್ನು ಏರ್ಪಡಿಸಿದೆ.

ಆಸಕ್ತರು ತಮ್ಮ ಹೆಸರುಗಳನ್ನು ರಂಜನ್ ಕುಮಾರ್ ಶೆಟ್ಟಿ ಎಲ್ಲೂರು, ಸಮುದಾಯ ಸೇವಾ ನಿರ್ದೇಶಕ, ರೋಟರಿ ಗ್ರಾಮೀಣ ದಳ, ಇವರಲ್ಲಿ ನೋಂದಾಯಿಸಬಹುದೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬಸ್ ಡಿಕ್ಕಿ: ಸಾವು

ಮಂಗಳೂರು, ಮಾ. 2- ಮಂಗಳವಾರ ಬೆಳಗ್ಗೆ ನಗರ ಪಂಪ್‌ವೆಲ್ ಬಳಿ ಸಿಟಿ ಬಸ್ಸೊಂದು ಅಂಗಡಿಯ ಛಾವಣಿಗೆ ಡಿಕ್ಕಿ ಹೊಡೆದು ಅಲ್ಲಿ ಕುಳಿತುಕೊಂಡಿದ್ದ ಶಿವಣ್ಣ ಎಂಬವರನ್ನು ಬಲಿಂಗೊಳಿಸಿತು.

ತೀವ್ರ ಗಾಯಗೊಂಡ ಶಿವಣ್ಣ ಅವರನ್ನು ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿದರೂ ಪ್ರಯೋಜನವಾಗದೆ ಅವರು ಅಲ್ಲಿ ಮೃತಪಟ್ಟರೆಂದು ಪೊಲೀಸರು ತಿಳಿಸಿದ್ದಾರೆ. ಕಂಕನಾಡಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಪ್ರಶಸ್ತಿ ಪತ್ರ ವಿತರಣೆ

ಮಂಗಳೂರು, ಮಾ. 2-ನಗರದ ಕಾರ್ಮೆಲ್ ಶಾಲೆಯಲ್ಲಿ ವಾರ್ಷಿಕ ಪ್ರಶಸ್ತಿ ಪತ್ರಗಳ ವಿತರಣಾ ಸಮಾರಂಭ ಇತ್ತೀಚೆಗೆ ಜರಗಿತು.

ಬೆಸೆಂಟ್ ಜೂನಿಯರ್ ಕಾಲೇಜಿನ ಉಪನ್ಯಾಸಕರಾದ ಎಂ.ಪ್ರಭಾಕರ ಜೋಶಿ ಅವರು ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಶಾಲೆಯ ದಳಿತ ಮಂಡಳಿ ಅಧ್ಯಕ್ಷ ಜಿ.ಸುಬ್ರಹ್ಮಣ್ಯರು ಪ್ರಶಸ್ತಿ ಪತ್ರ ವಿತರಿಸಿದರು. ಆಡಳಿತ ಮಂಡಳಿ ಸದಸ್ಯ ಕೆ.ಅನ್ವರ ಹುಸೇನ್ ಅತಿಥಿಗಳನ್ನು ಪರಿಚಯಿಸಿದರು.

ಮಾ. 15ರ ಭಾರತ್ ಬಂದ್‌ಗೆ ಬಿಎಂಎಸ್. ಬೆಂಬಲವಿಲ್ಲ

ಮಂಗಳೂರು, ಮಾ. 2- ವಿವಿಧ ಸಂಘಟನೆಗಳು ಮಾ. 15 ರಂದು ನಡೆಸುವ ಭಾರತ್ ಬಂದ್‌ನ‌ಲ್ಲಿ ಭಾರತೀಯ ಮಜ್ದೂರ್ ಸಂಘ (ಬಿ. ಎಂ. ಎಸ್.) ಭಾಗವಹಿಸುವುದಿಲ್ಲ ಎಂದು ಸಂಘದ ಅಖಿಲ ಭಾರತ ಕಾರ್ಯದರ್ಶಿ ಆರ್. ವೇಣುಗೋಪಾಲ್ ತಿಳಿಸಿದ್ದಾರೆ.

ಅವರು ಇತ್ತೀಚೆಗೆ ನವಮಂಗಳೂರು ಬಂದರು ಮತ್ತು ಜನರಲ್ ಎಂಪ್ಲೋಯಿಸ್ ಅಸೋಸಿಯೇಷನ್ ತಮಗೆ ನೀಡಿದ ಸತ್ಕಾರದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ಮಾ. 15ರಂದು ನಡೆಯುವ 'ಭಾರತ್ ಬಂದ್' ರಾಜಕೀಯ ಪ್ರೇರಿತವಾದುದು, ಎಂದ ಅವರು ಬಿ. ಎಂ. ಎಸ್. ಯಾವುದೇ ರಾಜಕೀಯ ಪಕ್ಷದೊಂದಿಗೆ ಸಂಬಂಧ ಹೊಂದಿರದ ಸ್ವತಂತ್ರ ಕಾರ್ಮಿಕ ಸಂಘಟನೆಯಾಗಿರುವುದರಿಂದ ಭಾರತ್ ಬಂದ್‌ನಲ್ಲಿ ಬಿ. ಎಂ. ಎಸ್. ಹಾಗೂ ಅದಕ್ಕೆ ಸಂಯೋಜನೆಗೊಂಡಿರುವ ಕಾರ್ಮಿಕ ಸಂಘಗಳು ಭಾಗವಹಿಸುವುದಿಲ್ಲ ಎಂದಿದ್ದಾರೆ.

ರಾಜಕೀಯದ ಒಡಿತದಿಂದ ಮುಕ್ತಗೊಳ್ಳುವಂತೆ ಕಾರ್ಮಿಕ ಸಂಘಗಳಿಗೆ ವೇಣುಗೋಪಾಲ್ ಕರೆನೀಡಿದರು. ಸಂಘದ ಅಧ್ಯಕ್ಷರಾದ ವಿ. ಧನಂಜಯ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಕೇಶವ ಭಟ್ ಸ್ವಾಗತಿಸಿದರು.

ಬಾಡಿಗೆ ಮನೆ ವಿವಾದ: ಬಾಡಿಗೆದಾರ ಆಸ್ಪತ್ರೆಗೆ

ಉಡುಪಿ, ಮಾ. 2 – ಚಿಟ್ಪಾಡಿಯ ಮನೆ ಮಾಲೀಕರೊಬ್ಬರು ತಮ್ಮ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ ಎಸ್.ಸಿ.ಸಿ. ನೌಕರ ಅಬ್ದುಲ್ ಕಟ್ಟಿನ್ ಎಂಬವರನ್ನು ಮನೆ ಖಾಲಿ ಮಾಡಲು ಒತ್ತಾಯಿಸಿ ಅವರ ಮೇಲೆ ಹಲ್ಲೆ ನಡೆಸಿದ್ದು, ಗಾಯಾಳು ಆಸ್ಪತ್ರೆಗೆ ದಾಖಲಾಗಿರುವುದಾಗಿ ತಿಳಿದು ಬಂದಿದೆ.

ಟೌನ್ ಪೊಲೀಸರು ಮನೆ ಮಾಲೀಕರ ಮೇಲೆ ಕೇಸು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಬ್ಯಾಂಕ್ ನೌಕರರ ಮತಪ್ರದರ್ಶನ

ಮಂಗಳೂರು, ಮಾ. 2- ಕಳೆದ 42 ದಿನಗಳಿಂದ ಫೆಡರಲ್ ಬ್ಯಾಂಕ್ ಆಡಳಿತ ವರ್ಗ ನೌಕರರ ಬೇಡಿಕೆ ಈಡೇರಿಸದಿರುವುದನ್ನು ಪ್ರತಿಭಟಿಸಿ ನಿನ್ನೆ ಸಂಜೆ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ದ. ಕ. ಜಿಲ್ಲಾ ಶಾಖೆ ಸದಸ್ಯರು ಮತ ಪ್ರದರ್ಶನ ನಡೆಸಿದರು.

ಬ್ಯಾಂಕಿನ ಆಡಳಿತ ವರ್ಗ ನೌಕರರ ಬೇಡಿಕೆಗಳನ್ನು ಕೂಡಲೇ ಈಡೇರಿಸುವಂತೆ ಸದಸ್ಯರು ಒತ್ತಾಯಿಸಿ ಘೋಷಣೆ ಕೂಗಿದರು.

ಜಾನುವಾರು ...

ಕಾರ್ಕಳ, ಮಾ. 2-ಕಾರ್ಪೊರೇಶನ್ ಬ್ಯಾಂಕಿನ ಅಜೆಕಾರು ಶಾಖೆ ಹಾಗೂ ಉಡುಪಿಯ ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿಗಳ ಜಂಟಿ ಆಶ್ರಯದಲ್ಲಿ ಜಾನುವಾರು ಪ್ರದರ್ಶನವೊಂದು ಇತ್ತೀಚೆಗೆ ಕಾರ್ಕಳ ತಾಲೂಕಿನ ಹೆರ್ಮುಂಡೆಯಲ್ಲಿ ಜರಗಿತು.

ತಜ್ಞ ಪಶು ವೈದ್ಯರು ಉಚಿತವಾಗಿ ... ನಡೆಸಿದರು. ಮುಖ್ಯ ಅತಿಥಿಗಳಾಗಿ ಕಾರ್ಪೊರೇಶನ್ ಬ್ಯಾಂಕಿನ ಪ್ರಾದೇಶಿಕ ... ಆಗಿದ್ದ ಡಾ। ಆರ್. ಮಂಜುನಾಥ್, ಡಾ। ಚಂದ್ರಕಾಂತ ಭಟ್, ಡಾ। ಸತ್ಯನಾರಾಯಣ, ಡಾ। ಸುರೇಶ ಹಾಗೂ ಬಿ. ಎಸ್. ವಾರಂಬಳ್ಳಿ ಪಶುಗಳಿಗೆ ಸಂಬಂಧಿಸಿದ ವಿವಿಧ ವಿಚಾರಗಳ ಬಗ್ಗೆ ಮಾತನಾಡಿದರು.

ಹೆಬ್ರಿಯ ಕಾಮಧೇನು ಪಶುಆಹಾರ ಕೇಂದ್ರದವರು ಪ್ರದರ್ಶನಕ್ಕೆ ಬಂದ ಪ್ರತಿಯೊಂದು ಜಾನುವಾರಿಗೂ ಒಂದು ಕೆ.ಜಿ. ಪಶು ಆಹಾರವನ್ನು ಉಚಿತವಾಗಿ ಹಂಚಿದರು. ಕಾರ್ಪೊರೇಶನ್ ಬ್ಯಾಂಕಿನ ಅಜೆಕಾರು ಶಾಖೆಯ ಮೆನೇಜರ್ ಉಮೇಶ್ ಎಂ. ಭಟ್ ಸ್ವಾಗತಿಸಿದರು. ಬ್ಯಾಂಕಿನ ತಾಂತ್ರಿಕಾಧಿಕಾರಿ ಬಿ. ಎಸ್. ಮಹೇಶ್ವರಪ್ಪ ವಂದಿಸಿದರು.

... ಆಚಾರಿ ಸ್ವಾಗತಿಸಿ, ಡಾ। ಸದಾಶಿವದಾಸ್ ವಂದಿಸಿದರು.

... ಉಸ್ಮಾನ್ ಎಂ. ಬಿ. ಧನ್ಯವಾದ ಅರ್ಪಿಸಿದರು.

ಮಾರ್ಚ್ 6ಕ್ಕೆ ಮಂಜೇಶ್ವರದಲ್ಲಿ ವಾಹನ ಪ್ರಚಾರ ಜಾಥಾ

ಮಂಜೇಶ್ವರ, ಮಾ. 2- ರಾಜೀವ ಗಾಂಧಿಯವರ ರಾಜೀನಾಮೆಯನ್ನು ಒತ್ತಾಯಿಸಿ ಮಾರ್ಚ್ 15ರಂದು ನಡೆಸಲು ತೀರ್ಮಾನಿಸಿರುವ ಭಾರತ್ ಬಂದ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಮಂಜೇಶ್ವರ ಮಂಡಲ ಎಡ ಪ್ರಜಾಪ್ರಭುತ್ವ ಐಕ್ಯರಂಗವು ನಿರ್ಧರಿಸಿದೆ.

ಬಂದ್ ಆಚರಣೆಯ ಅಂಗವಾಗಿ ಮಾ. 6ರಂದು ವಾಹನ ಪ್ರಚಾರ ಜಾಥಾವನ್ನು, ಮಾ. 13ರಂದು ಮೈಕ್ ಪ್ರಚಾರವನ್ನು ಮಾ. 14ರಂದು ಸಂಜೆ ಎಲ್ಲಾ ಪಂಚಾಯತ್‌ಗಳಲ್ಲಿಯೂ ಪಂಜಿನ ಮೆರವಣಿಗೆ ನಡೆಸಲು ಐಕ್ಯರಂಗ ತೀರ್ಮಾನಿಸಿದೆ.





ಕಮ್ಯುನಿಸಂ ಎಂದರೇನು?

ಕಮ್ಯುನಿಸಂ, ವಿಶ್ವದ ವಿಮುದ್ಧ ಯುರೋಪಿನ ಇತ್ತೀಚಿನ ಅಸ್ತ್ರ. ಕಳೆದ ಮುನ್ನೂರು ವರ್ಷಗಳಲ್ಲಿ ಯುರೋಪು ಎಲ್ಲಾ ಖಂಡಗಳ ನಡುವೆ ರಾಜ ವೈಭವದಲ್ಲಿ ಮೆರೆದಿದೆ. ಬಂಡವಾಳಶಾಹಿ, ಕ್ರಿಶ್ಚಿಯನ್ ಧರ್ಮ, ಲಿಬರಲಿಸಂ ಮುಂತಾದ ಸಿದ್ಧಾಂತಗಳೆಲ್ಲಾ ಈ ರಾಜನ ಶ್ರೇಯಸ್ಸನ್ನು ತಮ್ಮ ತಮ್ಮ ಶಕ್ತ್ಯಾನುಸಾರ ವರ್ಧಿಸಿವೆ. [illegible]

[illegible]

ಇದರಿಂದ ಯಾವಾಗ ಇರಬೇಕಾದ ಆದರ್ಶವು ಇದೆ ಎಂಬ ವಾಸ್ತವವೇ ಆಗಿ ಬಿಡುತ್ತದೆಯೋ, ಆಗ ಭವಿಷ್ಯದ ಬಗ್ಗೆಯ ಎಲ್ಲಾ ಕುತೂಹಲ ಆಸೆ ಆಕಾಂಕ್ಷೆಗಳೂ ಕಳೆದು ಹೋಗುತ್ತವೆ. [illegible]

[illegible]

— ಕೆ. ಪಿ. ಪೂರ್ಣಚಂದ್ರ ತೇಜಸ್ವಿ
ಎಂ. ಡಿ. ನಂಜುಂಡ ಸ್ವಾಮಿ

ಅಸಮರ್ಪಕ ನೀರು ಸರಬರಾಜು

ಪ್ರಿಯರೆ,

ಬಜ್ಪೆ ನ್ಯೂರೋಡ್ ಕೊನೆಯಲ್ಲಿನ ಎತ್ತರ ಪ್ರದೇಶದಲ್ಲಿ ವಾಸಿಸುವವರು ಕಳೆದ 14 ವರ್ಷಗಳಿಂದ [illegible] ನೀರಿಗಾಗಿ ಪರದಾಡುವುದು ಪರಿಪಾಠವಾಗಿದೆ. [illegible]

—ನೊಂದವರು ಬಜ್ಪೆ ನ್ಯೂರೋಡ್

ಧೂಮಪಾನ ಬೋರ್ಡ್ ಯಾರಿಗಾಗಿ

ಪ್ರಿಯರೆ,

ನಾವು ಪ್ರಯಾಣ ಮಾಡುವ ಸರಕಾರಿ ಅಥವಾ ಖಾಸಗಿ ಬಸ್ಸುಗಳಲ್ಲೆಲ್ಲಾ 'ನೋ ಸ್ಮೋಕಿಂಗ್' ಅಥವಾ 'ಧೂಮಪಾನ ನಿಷೇಧಿಸಲಾಗಿದೆ' ಎನ್ನುವ ಬೋರ್ಡ್ [illegible]

[illegible] ಸರಿಯಾಗಿ ಈ ಕಾನೂನನ್ನು ಪಾಲಿಸಿ ಜಾರಿಗೊಳಿಸುವರೆಂದು ಆಶಿಸೋಣವೆ?

—ಕೆ. ಎಚ್. ಯುಸುಫ್ ಉಳ್ಳಾಲ

ರಸ್ತೆಯ ದುರವಸ್ಥೆ

ಪ್ರಿಯರೆ,

ಮಂಗಳೂರು ನಗರದ ಸಮೀಪದಲ್ಲಿರುವ ಮಾಂಡೇಶ್ವರ ರಸ್ತೆ [illegible]

[illegible] ಈ ಹೊಂಡಗಳಿಗೆ ಮುಕ್ತಿ ಕರುಣಿಸಬಹುದೇ?

—ಶಿವರಾಮ ಕಾಸರಗೋಡು ಕಾಸರಗೋಡು

ರೈತರ ಸಾಲಗಳ ಬಡ್ಡಿ ಮನ್ನಾ ಬಗೆಗೆ...

ಜನವಾಣಿ

ಪ್ರಿಯರೆ,

[illegible]

—ಅಶ್ವಿನಿ ಕೆಸರು

ಆಮೂಲಾಗ್ರ ಬದಲಾವಣೆ ಆಗಬೇಕಿದೆ

ಪ್ರತಿಕ್ರಿಯೆ

ಪ್ರಿಯರೆ,

[illegible]

—ಪಿ. ಯಂ. ರಶೀದ್

ಚಿಂತನೆ

"ತನ್ನ ಸುದಿನವೇ ಪರಮಾವಧಿ ಎಂದು ತಿಳಿದುಕೊಂಡ ಜನಾಂಗವು ಪ್ರಪಂಚದಲ್ಲೆಲ್ಲಾ ಅತಿ ಕ್ರೂರವಾದುದೂ, ಹೀನವಾದುದೂ ಆಗಿರುತ್ತದೆ"

— ಸ್ವಾಮಿ ವಿವೇಕಾನಂದ

ಯುಗಾದಿ

ಎಳೆಯರ ಅಭಿನಯ ತರಬೇತಿಯ ಆಸಕ್ತೆ

ದಿಲ್ಲಿ ನಾಟಕ ಶಾಲೆಯ ಸುತಾಪ ಸಿಕ್ದಾರ್

[illegible]

"ಇಂಗ್ಲಿಷ್ ಭಾಷೆಯಲ್ಲಿ ಮಾತಾಡುವ ಹಾಗೂ ಅದನ್ನು ಬಳಸಲು ಅರಿಯದವರು ಅಥವಾ [illegible] ವಿದ್ಯಾರ್ಥಿ-ವಿದ್ಯಾರ್ಥಿನಿ ನಡುವಿನ ಈ ಕಂದಕ ನಿವಾರಣೆಗೆ [illegible]" ಎಂದು ಪ್ರಶ್ನಿಸಿದಾಗ, "[illegible] ಇದಕ್ಕೆ [illegible]. ಇಂತಹ [illegible] ವಿದ್ಯಾರ್ಥಿಗಳು ತಮ್ಮನ್ನು ತಾವು [illegible] ಭಾವಿಸಬಾರದು. ಬೋಧನೆ, ಪರೀಕ್ಷೆ, ಪ್ರಯೋಗ ಇತ್ಯಾದಿ ತಾಂತ್ರಿಕ ವ್ಯವಸ್ಥೆ ಇಂಗ್ಲಿಷ್‌ನಲ್ಲೇ ಸಾಗುವುದು ಅನಿವಾರ್ಯ. ಇಲ್ಲಿಗೆ ಬರುವಂಥವರು ಇದನ್ನು ಅರಿತು, ಆ ಭಾಷೆಯ ಮೇಲೆ ಪ್ರಭುತ್ವ ಸಾಧಿಸಲು [illegible] ಬರಬೇಕಾಗುತ್ತ. ಆದರೆ, ಇವಾವುದೇ ಇಲ್ಲದೆ [illegible] ಸಂಖ್ಯೆ ಹೆಚ್ಚಾಗಿದ್ದರಿಂದ ರಾ. ನಾ. ಶಾಲೆಯೇ ಇದಕ್ಕೆ ಪರಿಹಾರ ಹುಡುಕಬೇಕು. ದಿಲ್ಲಿ ರಾಷ್ಟ್ರೀಯ ನಾಟಕ ಶಾಲೆ ರಾಷ್ಟ್ರದ ಎಲ್ಲಾ ರಾಜ್ಯ ಕೇಂದ್ರಗಳಲ್ಲಿ ತನ್ನ ಶಾಖೆಗಳನ್ನು ತೆರೆಯಬೇಕು.

ಶಾಲೆಗೆ ಸೇರುವ ಮುನ್ನ ಪೂರ್ವ ಭಾವಿ 'ಬೇಸಿಕ್ ಸ್ಟಡೀಸ್' ಅನ್ನು ಈ ಶಾಲೆಗಳು ಮಾಡಬೇಕು. ಒಂದು ವರ್ಷ ದೊಳಗೆ ತರಬೇತು ನೀಡಿ, ಆಯ್ಕೆಯಾದ ವರನ್ನು ದಿಲ್ಲಿ ಶಾಲೆಗೆ ಆಹ್ವಾನಿಸಬೇಕು. ಇದು ಒಂದು ರೀತಿಯ ಉತ್ತೇಜನ ಹಾಗೂ ಸೂಕ್ತ ಮಾರ್ಗವಾಗಬಲ್ಲದು. ಎನ್.ಎಸ್.ಡಿ. ಹಾಗೂ ರಾಜ್ಯಗಳ ನಾಟಕ ಅಕಾಡೆಮಿಗಳು ಇದನ್ನು ಸಂಯುಕ್ತವಾಗಿ ಆಲೋಚಿಸುವ ಅಗತ್ಯವಿದೆ" ಎಂದು ಸುತಾಪ ಅವರು ಸೂಚಿಸಿದರು.

"ಎನ್. ಎಸ್.ಡಿ. ಸೇರಲು ನಿಮಗೆ ಹೇಗೆ ಆಸಕ್ತಿ ಮೂಡಿತು. ಅಲ್ಲಿ ವ್ಯಾಸಂಗ ಹೇಗೆ ಸಾಗಿದೆ" ಎಂಬ ಪ್ರಶ್ನೆಗೆ 1984 ರಲ್ಲಿ ನಾನು ಎನ್. ಎಸ್.ಡಿ. ಸೇರಿದೆ ಇದಕ್ಕೆ ಮುನ್ನ ದಿಲ್ಲಿ ಎ. ಎ. ಮುಗ್ಲಿ ಇಂಗ್ಲಿಷ್‌ನಲ್ಲಿ ಅಭ್ಯಾಸ ಮಾಡುತ್ತಿದ್ದೆ ನಾಟಕದಲ್ಲಿ ಅಭಿರುಚಿ ಇತ್ತು. ಎನ್. ಎಸ್. ಡಿ. ಮುನ್ನ ದಿಲ್ಲಿಯ ಶ್ರೀರಾಮ ಸೆಂಟರ್ ಫಾರ್ ಆರ್ಟ್ಸ್ ಅಂಡ್‌ಕಲ್ಚರ್‌ಗೆ ಸೇರಿದ್ದೆ ಅಲ್ಲಿ ಥೇಟರ್ ಬಗ್ಗೆ ಸಾಮಾನ್ಯ ಕೋರ್ಸ್ ಇತ್ತು. ಇದು ನನಗೆ ಹಿಡಿಸಲಿಲ್ಲ. ಇಲ್ಲಿಂದ ಹೊರ ಬಂದ ಮೇಲೆಯೇ ನಾನು ಎನ್. ಎಸ್.ಡಿ.ಗೆ ಸೇರಿದೆ. ಇದಕ್ಕೆ ಮುನ್ನ ಕಮಲಾ ನೆಹ್ರೂ ಕಾಲೇಜಿನಲ್ಲಿ ಓದುತ್ತಿದ್ದಾಗ ಉತ್ಪಲ್ ದತ್ತರ ನಾಟಕಗಳಲ್ಲಿ ಅಭಿನಯಿಸುವ ಅವಕಾಶ ದೊರಕಿತು.

"ಧೂಮಕೇತು" ನಾಟಕ ತಂಡದ ಮೂಲಕ ಬೀದಿ ನಾಟಕಗಳ ಅಭಿನಯದಲ್ಲಿ ಪಾಲ್ಗೊಳ್ಳತೊಡಗಿದೆ. ಇದು ನನಗೆ ನಾಟಕ ಹಾಗೂ ರಂಗಭೂಮಿಯ ಅಧ್ಯಾಸಗಳಲ್ಲಿ ಹೆಚ್ಚಿನ ಆಸಕ್ತಿ ತಾಳುವಂತೆ ಮಾಡಿತು. ಎನ್. ಎಸ್. ಡಿ.ಯಲ್ಲಿ ನನ್ನ ಆಸಕ್ತಿಗೆ ಪ್ರೋತ್ಸಾಹ, ಉತ್ತೇಜನ ದೊರೆಯುತ್ತಿದೆ. ಶಿಕ್ಷಕರು ಪ್ರೌಢ ವಿದ್ವಾಂಸರು, ಥೇಟರ್‌ನ ಅನುಭವ ಉಳ್ಳವರಾಗಿದ್ದಾರೆ" ಎಂದು ತಿಳಿಸಿದ ಅವರು "ಕೆಲ ಸಹಪಾಠಿಗಳ ಮುಜುಗರ ಹಾಗೂ ನಿರುತ್ಸಾಹದ ವಾತಾವರಣ ನೋಡಿ ಅಯ್ಯೋ ಅನಿಸುತ್ತದೆ. ಇಂಥವರಿಗೆ ಪೂರ್ವಭಾವಿ ಶಿಕ್ಷಣ ದೊರೆತಿದ್ದರೆ ಎಷ್ಟು ಅನುಕೂಲ. ಈಗ ಆದರೂ National School of Drama should be kept only for the advanced studies of theatre not for the basic studies ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಈ ದಿಶೆಯಲ್ಲಿ ರಾ. ನಾ. ಶಾಲೆ ಯೋಚಿಸುವ ಅಗತ್ಯವಿದೆ" ಎಂದು ಕಳಕಳಿ ವ್ಯಕ್ತಪಡಿಸಿದರು.

ಇಪ್ಪತ್ತೆರಡರ ಹರೆಯದ ಮಂಗನಾಡಿನ ಹುಡುಗಿ ಸುತಾಪ ಸಿಕ್ದಾರ್ ದಿಲ್ಲಿ ರಾಷ್ಟ್ರೀಯ ನಾಟಕ ಶಾಲೆಯ ಅಂತಿಮ ವರ್ಷದ ವಿದ್ಯಾರ್ಥಿನಿ. ಮೂಲತಃ ಪಶ್ಚಿಮ ಬಂಗಾಳಕ್ಕೆ ಸೇರಿದ ಈಕೆ ತನ್ನ ತಂದೆ ತಾಯಿಯೊಂದಿಗೆ ದಿಲ್ಲಿಯಲ್ಲೇ ನೆಲೆಸಿದ್ದಾರೆ. ದಿಲ್ಲಿ ವಿಶ್ವ ವಿದ್ಯಾನಿಲಯದಲ್ಲಿ ಇಂಗ್ಲಿಷ್ ಸ್ನಾತಕೋತ್ತರ ಪ್ರಥಮ ವರ್ಷದ ವಿದ್ಯಾಭ್ಯಾಸ ಪೂರೈಸಿದ ಬಳಿಕ, 'ಇಂಡಿಯನ್ ಥೇಟರ್' ಬಗ್ಗೆ ಆಳವಾದ ಅಧ್ಯಯನಕ್ಕೆಂದು ರಾ. ನಾ. ಶಾಲೆಗೆ ಸೇರಿ, ಮಕ್ಕಳ ನಾಟಕಗಳಿಗೆ ನಿರ್ದೇಶನ ನೀಡುವುದರಲ್ಲಿ ಆಸಕ್ತಿ ವಹಿಸಿದ್ದಾರೆ.

ಸುತಾಪ ಸಿಕ್ದಾರ್

ಹರಪನಹಳ್ಳಿ ಬಳ್ಳಾರಿ ಜಿಲ್ಲೆಯಲ್ಲೇ ಹಿಂದುಳಿದ ಭಾಗ. ಇಲ್ಲಿನ ವಿಶೇಷವೆಂದರೆ ಹತ್ತಾರು ಶಿಕ್ಷಣ ಸಂಸ್ಥೆಗಳಿರುವುದು. ಇಲ್ಲೇ ಅವರು 15 ದಿನಗಳ ಕಾಲ ನೆಲೆಸಿ, ಇಲ್ಲಿನ ಮಕ್ಕಳ ಮೂಲಕ 'ನೀಲಿ ಕುದುರೆ' ನಾಟಕವನ್ನು ಕನ್ನಡ ರಂಗಭೂಮಿಗೆ ನೀಡಿದ್ದಾರೆ. ಹರಪನಹಳ್ಳಿಯ ಸಮುದಾಯದ ವತಿಯಿಂದ, ಪ್ರೊ! ಎಸ್. ಎಸ್. ಹಿರೇಮಠರ ಸಹ ನಿರ್ದೇಶನದೊಂದಿಗೆ 'ನೀಲಿ ಕುದುರೆ' ತಯಾರಿಗಾಗಿ ಕನ್ನಡದ ಎಳೆಯರನ್ನು ತರಬೇತುಗೊಳಿಸುತ್ತಿದ್ದಾಗ "ಮುಂಗಾರು" ಅವರನ್ನು ಸಂದರ್ಶಿಸಿತು.

ಮಕ್ಕಳ ನಾಟಕ ಅಭಿನಯ, ರಾಷ್ಟ್ರೀಯ ನಾಟಕ ಶಾಲೆಯ ಸ್ಥಿತಿ ಹಾಗೂ ರಂಗಭೂಮಿಯ ಕುರಿತು ತಮಗಿರುವ ಕಾಳಜಿಯ ಮಾತುಗಳನ್ನು ಇಲ್ಲಿ ಸುತಾಪ ವ್ಯಕ್ತಪಡಿಸಿದ್ದಾರೆ.

ಪ್ರಸ್ತುತ ಭಾರತದಲ್ಲಿನ ರಂಗಭೂಮಿ ಹಾಗೂ ನಡೆಯುತ್ತಿರುವ ಹೊಸ ಪ್ರಯೋಗಗಳ ಬಗ್ಗೆ ಗಮನಸೆಳೆದಾಗ "ಆಧುನಿಕ ನಾಟಕ ಪ್ರದರ್ಶನಗಳ ಬಗ್ಗೆ ಈಗ ಪ್ರಯೋಗಗಳು ನಡೆಯುತ್ತಿವೆ. ಎನ್. ಎಸ್. ಡಿ. ಪದವೀಧರರು ಆಯಾ ರಾಜ್ಯಗಳಿಗೆ ತೆರಳಿ ಇಂತಹ ಹೊಸ ಪ್ರಯೋಗಗಳ ಮೂಲಕ ರಂಗಭೂಮಿಗೆ ಹೊಸ ರೂಪು ಕೊಡುವಲ್ಲಿ ಮಗ್ನರಾಗಿದ್ದಾರೆ. ಸರ್ದಾರ್ ರತನ್ ಥಿಯಾಂ, ಭಾನುಭಾರತಿ, ಬನ್ಸಿಕೌಲ್‌ರಂಥವರು ಇಂತಹ ಹೊಸ ಪ್ರಯೋಗಗಳ ಮೂಲಕ ಭರವಸೆ ಹುಟ್ಟಿಸಿದ್ದಾರೆ. ಇವರು ಜಾನಪದ ,ಪರಂಪರೆಹಾಗೂ ವಸ್ತುಗಳನ್ನು ಆಯ್ದುಕೊಂಡು ರಂಗಭೂಮಿ ಮೇಲೆ ಪ್ರದರ್ಶಿಸುತ್ತಿದ್ದಾರೆ, ಯಶಸ್ವಿಯಾಗುತ್ತಿದ್ದಾರೆ. ಆದರೆ ವಾಸ್ತವ ಹಾಗೂ ನವೀನ ರಚನೆಗಳ ಪ್ರಯೋಗದ ಬಗ್ಗೆ ಹೆಚ್ಚು ಕಾಳಜಿ ವಹಿಸಿಲ್ಲ. ಕರ್ನಾಟಕದಲ್ಲಿ ಪ್ರಸನ್ನ ಇಂತಹ ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಸಂಗೀತ ನಾಟಕ ಅಕಾಡಮಿಗಳಿಂದ ಇಂತಹ ಪ್ರಯೋಗಗಳು. ಯಾಕಾಗಬಾರದು" ಎಂದು ಪ್ರಶ್ನಿಸಿದರು.

"ರಂಗಭೂಮಿ (ಥೇಟರ್) ಬಗ್ಗೆ ಸರಿಯಾದ ತಿಳುವಳಿಕೆ, ಬೋಧನೆ ಎಲ್ಲರಿಗೆ ಆಗಬೇಕಿದೆ. ವ್ಯಕ್ತಿ ಹಾಗೂ ವ್ಯಕ್ತಿತ್ವದ ಬೆಳವಣಿಗೆ ಮೇಲೆ ಥೇಟರ್ ಗುರುತರ ಪರಿಣಾಮ ಬೀರುತ್ತದೆ. ಇಲ್ಲಿ ವಾಸ್ತವ ನಾಟಗಳ ಪ್ರಯೋಗ ಆಗಬೇಕು. ಹೊಸ ರಚನೆಗಳು ನಡೆಯುತ್ತಿಲ್ಲ. ಗಿರೀಶ್ ಕಾರ್ನಾಡ್‌ರಂಥವರು ಕೂಡ ವಾಸ್ತವಿಕ ನಾಟಕಗಳನ್ನು ಬರೆಯುವುದನ್ನು ಬಿಟ್ಟು, ಸಾಂಪ್ರದಾಯಿಕ ಪುರಾಣ ಇತ್ಯಾದಿ ಪ್ರಾಕಾರಗಳಿಂದ ವಸ್ತುವಾಯ್ದು ನಾಟಕಗಳನ್ನು ರಚಿಸುತ್ತಿದ್ದಾರೆ" ಎಂದು ಹೊಸ ನಾಟಕ ರಚನೆಗಳು ಆಗದಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು ಭಾರತೀಯ ಆಧುನಿಕ ರಂಗಭೂಮಿಗೆ ಹೊಸ ಹಾಗೂ ವಾಸ್ತವಿಕ ನಾಟಕಗಳ ರಚನೆ ಹಾಗೂ ಪ್ರಯೋಗಬೇಕಾಗಿದೆ ಎಂದು ತಿಳಿಸಿದರು.

"ಮಕ್ಕಳಿಗಾಗಿ ಮಕ್ಕಳಿಂದ ನಾಟಕಗಳನ್ನು ಆಡಿಸುವ, ನಿರ್ದೇಶಿಸುವ [illegible] ಮೊದಲ ಪ್ರಯೋಗವೇ?" ಎಂದು ಗಮನ ಸೆಳೆದಾಗ, "ದಿಲ್ಲಿಯ ಚಿತ್ರರಂಜನ್ ಪಾರ್ಕ್‌ನಲ್ಲಿ ಮಕ್ಕಳ ನಾಟಕಕ್ಕೆ ನಿರ್ದೇಶನ ನೀಡಿದ್ದೆ ಅದು ಯಶಸ್ವಿಯಾಯಿತು. ಕನ್ನಡದ ರಂಗಭೂಮಿಗೆ 'ನೀಲಿಕುದುರೆ' ನಾಟಕ ಪ್ರದರ್ಶನ ನೀಡುತ್ತಿರುವುದು ಇದೇ ಮೊದಲ ಬಾರಿಯಾಗಿದೆ. ಮೂಲತಃ ಈ ನಾಟಕ ಬ್ರೆಜಿಲ್ ರಂಗಭೂಮಿಗೆ ಸೇರಿದ್ದು, ಕರ್ನಾಟಕದ ಖ್ಯಾತ ನಾಟಕರಾದ ಗಿರೀಶ್‌ಕಾರ್ನಾಡರು 'ನೀಲಿ ಕುದುರೆ'ಯಾಗಿ ಕನ್ನಡಕ್ಕೆ ತಂದಿದ್ದಾರೆ. ಹರಪನ ಹಳ್ಳಿಯ ಮಕ್ಕಳಿಗಾಗಿ, ಮಕ್ಕಳಿಂದಲೇ ಆಡಿಸುವ ಈ ನಾಟಕ ನಿರ್ದೇಶನದ ನನ್ನ ಹೊಣೆಗೆ ಪ್ರೊ! ಎಸ್. ಎಸ್. ಹಿರೇಮಠ ಅವರು ಸಹಕಾರ ಪ್ರೋತ್ಸಾಹ ನೀಡಿದ್ದಾರೆ. ನನಗೆ ಕನ್ನಡಬಾರದು. ಆದರೆ ಅಭಿನಯವನ್ನು ಕಲಿಸಬಲ್ಲೆ, ಮಕ್ಕಳ ಹಾವಭಾವದ ಮೂಲಕ ಅವರ ನಟನ ಸಾಮರ್ಥ್ಯ ನಿರ್ಧರಿಸಬಲ್ಲೆ" ಎಂದರು.

"ಮಕ್ಕಳಿಂದ ನಾಟಕಗಳನ್ನು ಆಡಿಸುವುದು ಕಷ್ಟಕರ ಎನಿಸಿದರೂ, ಇದು ಪ್ರಮುಖ ಹಾಗೂ ಸುಲಭ ಸಾಧ್ಯ ಕೂಡ ಮಕ್ಕಳಲ್ಲಿ ಕುತೂಹಲ, ಉತ್ಸಾಹ ನಟನಾ ಸಾಮರ್ಥ್ಯದ ಲವಲವಿಕೆ ಇರುತ್ತದೆ ಎಳೆಯ ಮನಸ್ಸುಗಳಲ್ಲಿರುವ ಈ ಅಭಿನಯ ಸಾಮರ್ಥ್ಯವನ್ನು ಬಳಸಿಕೊಳ್ಳಬೇಕು. ಇಲ್ಲದಿದ್ದರೆ ಈಗಿನ ಸಿನೇಮಾ ಪ್ರಪಂಚದ ಹೀರೋ, ಹೀರೋಯಿನ್‌ಗಳ ನಟನಾ ಪ್ರಭಾವ ಕೆಟ್ಟ ರೀತಿಯಲ್ಲಿ ಅವರನ್ನು ಆಕರ್ಷಿಸಬಲ್ಲದು. ಸಿನೆಮಾ ಹುಚ್ಚನ್ನು ಮಕ್ಕಳಿಗೆ ಹಚ್ಚದೇ ರಂಗಭೂಮಿಯ ಕಡೆ ಅವರನ್ನು ಆಕರ್ಷಿಸುವ ಜವಾಬ್ದಾರಿ ನಮ್ಮ ಮೇಲಿದೆ. ಕರ್ನಾಟಕದ ಅದರಲ್ಲೂ ಹರಪನ ಹಳ್ಳಿಯಂತಹ ಹಿಂದುಳಿದ ಪ್ರದೇಶಗಳ ಮಕ್ಕಳಲ್ಲಿ ಅದ್ಭುತಪ್ರತಿಭೆ ಅಡಗಿ[illegible] ಇದಕ್ಕೆ ಸರಿಯಾದ ಪ್ರೋತ್ಸಾಹ, ತರಬೇ[illegible] ದೊರೆಯಬೇಕು. ಎನ್. ಎಸ್. ಡಿ.ಯಿ[illegible] ಹೊರಬಂದಿರುವ ಕರ್ನಾಟಕ ಪದವಿ[illegible] ರರು ಮುಂಬಯಿ, ಬೆಂಗಳೂರು. ದ[illegible] ನಗರಗಳಿಗೆ ಸೀಮಿತವಾಗಿ ಅಂಟಿಕೊಳ್ಳ[illegible] ಅವರವರ ರಾಜ್ಯಗಳ ಗ್ರಾಮೀಣ ಪ್ರದೇ[illegible] ಗಳಲ್ಲಿ ಹೆಚ್ಚು ಹೆಚ್ಚು ಯೋಗ್ಯ ನಾಟಕ[illegible] ಳನ್ನು ಪ್ರದರ್ಶಿಸಬೇಕು. ಮಕ್ಕಳಲ್ಲಿ ಹು[illegible] ಗಿರುವ ನಟನಾ ಕೌಶಲ್ಯಕ್ಕೆ ಚೇತನ ನೀ[illegible] ಬೇಕು. 'ಟ್ಯಾಲೆಂಟ್' ಎಂಬುದನ್ನು ದು[illegible] ಸಿಕೊಳ್ಳುವುದು ಈಗಲ್ಲದೆ ಮತ್ತೇ ಯಾವಾಗ"? ಎಂದು ಸುತಾಪ ತಿಳಿಸಿದರು.

[illegible] ಸಹಪಾಠಿ ಜೊತೆಗಾತಿ ಎನ್. [illegible] ರೊಂದಿಗೆ ಹರಪನ ಹಳ್ಳಿ ತಾಲೂಕಿಗೆ ಆಗಮಿಸಿದ್ದ ಈ ವಂಗದೇಶದ ಹುಡುಗಿ, ನೀಲಿ ಕುದುರೆಯನ್ನು ಹರಪನಹಳ್ಳಿಯ ಜನತೆಗೆ ನೀಡಿ ಗಮನ[illegible].

—ಕೈನುಲ್ಲಾ ಬಳ್ಳಾರಿ

ಯುಗಾದಿ, ಹರುಷದ ನ

ಈ ಹೊಸ ವರುಷದ ಪ್ರತಿ ನಿಮಿಷವ್ರ

ನಿಮಗೆ ಸುಖ, ಸಂತೋಷ, ಸಮೃದ್ಧಿ

ತರಲೆಂದು 'ಮಂಗಳ' ಹಾರೈಸುತ್ತದೆ.



ಮತ್ತೊಮ್ಮೆ ಯುಗಾದಿ ಬಂದಿದೆ. ಜೊತೆ ಜೊತೆಗೆ ಮಂಗಳೂರು ಕೆಮಿಕಲ್ಸ್ ಅ್ಯಂಡ್ ಫರ್ಟಿಲೈಸರ್ಸ್ ಇನ್ನೊಂದು ಕೃಷಿ ಪ್ರಗತಿಯ ವರ್ಷಕ್ಕೆ ಕಾಲಿಟ್ಟಿದೆ.

ಎಂ.ಸಿ.ಎಫ್‌ನ ಕೆಮಿಕಲ್ ಕಾಂಪ್ಲೆಕ್ಸ್ (ರಾಸಾಯನಿಕ ಸಂಕೀರ್ಣ) ಕರ್ನಾಟಕದಲ್ಲೇ ಬೃಹತ್ ಪ್ರಮಾಣದ್ದಾಗಿದೆ. ಎಂಸಿಎಫ್‌ನ ರಾಸಾಯನಿಕ ಸಂಕೀರ್ಣವು ದಿನಕ್ಕೆ 1030 ಟನ್ ಯೂರಿಯಾವನ್ನು ಉತ್ಪಾದಿಸುವ ಸಾಮರ್ಥ್ಯವುಳ್ಳದ್ದಾಗಿದೆ. ಈ ಘಟಕವು ತನ್ನ ಸಂಪೂರ್ಣ ಸಾಮರ್ಥ್ಯಕ್ಕನುಗುಣವಾಗಿ 10 ವರ್ಷಗಳಲ್ಲಿ 2 ಮಿಲಿಯನ್ ಟನ್‌ಗಳಿಗಿಂತಲೂ ಮಿಗಿಲಾಗಿ ಯೂರಿಯಾ ಉತ್ಪಾದಿಸಿದೆ.

ಕೇವಲ ರಾಸಾಯನಿಕ ಗೊಬ್ಬರಗಳನ್ನು ಉತ್ಪಾದಿಸುವುದು ಎಂಸಿಎಫ್ ಗುರಿಯಲ್ಲ. ರೈತನ ಸಾಮಾಜಿಕ ಹಾಗೂ ಆರ್ಥಿಕ ಏಳಿಗೆಯ ಬಗ್ಗೆ ಎಂಸಿಎಫ್ ವಿಶೇಷ ಆಸಕ್ತಿಯನ್ನು ತಾಳಿದೆ. ಆದುದರಿಂದ ನಮ್ಮ ಸಂಸ್ಥೆ ಸತತವಾಗಿ ರೈತ ಜನಾಂಗಕ್ಕೆ ಆಧುನಿಕ, ವೈಜ್ಞಾನಿಕ ಹಾಗೂ ಲಾಭದಾಯಕ ಕೃಷಿ ಕೌಶಲ್ಯಗಳ ಬಗೆಗೆ ತಿಳುವಳಿಕೆಯನ್ನು ನೀಡುತ್ತಿದೆ. ಈ ರೀತಿ ದೇಶದ ರೈತನ ಪ್ರಗತಿ ಹಾಗೂ ಸಮೃದ್ಧಿಗೆ ಎಂಸಿಎಫ್ ವಿಶೇಷ ಪಾತ್ರವನ್ನು ವಹಿಸುತ್ತಿದೆ.

ಮಂಗಳ

ಮಂಗಳೂರು ಕೆಮಿಕಲ್ಸ್ ಅ್ಯಂಡ್ ಫರ್ಟಿಲೈಸರ್ಸ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ : ಪಿನ್‌ರಾಜ್ ಮ್ಯಾನ್‌ಷನ್, 10/2, ಕಸ್ತೂರ ಬಾ ರಸ್ತೆ, ಬೆಂಗಳೂರು-560 001

PPP-181-86

ಶೋಷಕವರ್ಗದ ಮೌಲ್ಯ ಅಂತರ್ಗೀಕರಣದ ಫಲ: ಜೀವನ್ಮೃತಿ

ಇದೇ ಮಾರ್ಚ್ 30ರಂದು ಶಿರಸಿಯ ಯಡಳ್ಳಿಯಲ್ಲಿ 'ಕದಂಬ ಸಾಂಸ್ಕೃತಿಕ ಅಧ್ಯಯನ ಸಂಸ್ಥೆ', ಸಾಹಿತ್ಯ ಅಕಾಡೆಮಿಯ ನೆರವಿನಿಂದ ಅಪೂರ್ವವೂ ಅರ್ಥಪೂರ್ಣವೂ ಆದ ಕಾರ್ಯಕ್ರಮವೊಂದನ್ನು ವ್ಯವಸ್ಥೆಗೊಳಿಸಿತ್ತು. ಬಂಡಾಯ-ದಲಿತ ಪ್ರಜ್ಞೆ-ಸಾಹಿತ್ಯ-ಸಂಘಟನೆಗಳ ಕುರಿತ ಈ ವಿಚಾರ ಮಂಥನ ಪ್ರಶ್ನೆಗಳನ್ನೂ ಲಿಖಿತರೂಪದಲ್ಲಿ ಕೇಳಲಾಗಿತ್ತು. ಗೌರೀಶ ಕೈಕಿಣಿಯಂಥ ಹಿರಿಯ ವೈಚಾರಿಕ ನಿರೂಪಣೆ(ಪ್ರಶ್ನೆಗಳು), ಲಿಂಗೇಶ ಶರ್ಮಾರಂಥ ಸಮರ್ಥ ಸಂಘಟಕರ ನಿರ್ದೇಶನದಲ್ಲಿ ಜರುಗಿದ ಈ ವಿಚಾರ ಮಂಥನದಲ್ಲಿ ಲೇಖಕರು, ಪಂಥ ಮತ್ತು ತಲೆಮಾರಿನ ಅಂತರವನ್ನೂ ಮರೆತು ಗಂಭೀರವಾಗಿ ಅಷ್ಟೇ ಮುಕ್ತವಾಗಿ ಸಂವಾದ ನಡೆಸಿದುದು ಒಂದು ಮಹತ್ವದ ಸಾಧನೆ. ಈ ವಿಚಾರ ಮಂಥನದಲ್ಲಿ ಮಾರ್ಗದರ್ಶಕರಾಗಿ ಭಾಗವಹಿಸಿದ್ದ ಲೇಖಕ ಆರ್ಕಿ, ಕೈಕಿಣಿಯವರು ಎತ್ತಿದ್ದ ಕೆಲವು ಪ್ರಮುಖ ಪ್ರಶ್ನೆಗಳನ್ನು ಮತ್ತು ಪ್ರಶ್ನಾಭಾಗಗಳನ್ನು ತೆಗೆದುಕೊಂಡು ಇಲ್ಲಿ ಹೀಗೆ ಉತ್ತರಿಸಿದ್ದಾರೆ.

ಪ್ರಶ್ನೆ: ಗೌರೀಶ ಕೈಕಿಣಿ

ಉತ್ತರ: ಆರ್ಕಿ

ದಲಿತರೆಲ್ಲ ಬಂಡಾಯಗಾರರೇ ಆದರೆ, ಬಂಡಾಯಗಾರರೆಲ್ಲರೂ ದಲಿತರಾಗಿರಬೇಕಿಲ್ಲ. ದಲಿತ ವರ್ಗನಿಷ್ಠ-ಸಮಾಜಕ್ಕೆ. ಒಂದು ಜಾತಿ ವಿಶೇಷಕ್ಕೆ ಬದ್ಧ. ಬಂಡಾಯ ವ್ಯಕ್ತಿನಿಷ್ಠ ಒಂದು ಪ್ರಸಂಗ, ಅವಸ್ಥೆ, ಪರಿಸ್ಥಿತಿಗೆ ಬದ್ಧವೆನ್ನಬಹುದೆ?

ಉ: 'ಬಂಡಾಯ' ವ್ಯಕ್ತಿನಿಷ್ಠವೆನ್ನಲು ಬರುವುದಿಲ್ಲ. ಹಾಗೆ ನೋಡಿದರೆ ಬಂಡಾಯವೇ ಏಕೆ, ಎಲ್ಲ ಕಾಲದ ಎಲ್ಲ ಪಂಥದ ಕೃತಿಗಳೂ ವರ್ಗನಿಷ್ಠವೇ: ಏಕೆಂದರೆ, ಎಲ್ಲ ಸಾಹಿತಿಗಳೂ ಬದ್ಧ ಸಾಹಿತಿಗಳೇ: ಒಂದೋ ಬಲಪಂಥೀಯ ಒಂದೋ ಎಡಪಂಥೀಯ ಬದ್ಧತೆಯುಳ್ಳವರೇ. ಬದ್ಧತೆ ಹಾಲಿ ಅಸಮಾನ ವ್ಯವಸ್ಥೆಯನ್ನು (ಅವಸ್ಥೆ ಅಲ್ಲ) ಬದಲಿಸುವ, ಬುಡಮೇಲು ಮಾಡುವ ಜನಪರ ಸಿದ್ಧಾಂತಕ್ಕೆ.

ಬಂಡಾಯಹೆಚ್ಚು ಕಮ್ಮಿ ನಿಷೇಧಾತ್ಮಕ... ದಲಿತ ಹೆಚ್ಚು ಇತ್ಯಾತ್ಮಕ...

ಉ: ಬಂಡಾಯ-ದಲಿತಗಳನ್ನು ಹೀಗೆ ವಿಭಜಿಸಿ ವ್ಯಾಖ್ಯಾನಿಸುವುದು ಅಷ್ಟೇನೂ ಸಮರ್ಪಕವಾಗಲಾರದು. ಬಂಡಾಯ ...

ಬೇಕಾದರೆ ಸಂಘಟನೆಯಲ್ಲಿ ತೊಡಗುವುದು ಅತ್ಯಗತ್ಯ. ಹೋರಾಟದ ದನಿ ಒಂಟಿದನಿಯಾಗಕೂಡದು; ಸಂಘಟನೆಯ, ಹೋರಾಟದ ಮೂಸೆಯಲ್ಲಿ ಹೊಸ ಮನುಷ್ಯ ಮೂಡುತ್ತಾನೆ.

ದಲಿತ ಬಂಡಾಯ ಸಾಹಿತ್ಯದ ಆಶಯಕ್ಕೂ, ಆಕೃತಿಗೂ ಯಾವ ಸಂಬಂಧ ಇರಬೇಕು?

ಉ: ಇದು ತುಂಬಾ ಗಂಭೀರವಾದ ಪ್ರಶ್ನೆ. ಈ ಸಂಬಂಧದ ಕುರಿತೇ ಒಂದು ಗೋಷ್ಠಿ ನಡೆಸಬಹುದು. ಇಲ್ಲಿ ಇಷ್ಟು ಮಾತ್ರ ಹೇಳಬಹುದು. ಆಶಯ ಆಕೃತಿಗಳ ನಡುವೆ ಸಾವಯವವಾದ ಹೊಂದಾಣಿಕೆ ಇರಬೇಕು. ಆಕೃತಿಯನ್ನು ಆಶಯವೇ ನಿರ್ಧರಿಸುವಹಾಗಿರಬೇಕು. ಇಲ್ಲದಿದ್ದರೆ ಕೃತಿ 'ಕೃತಕ'ವೆನಿಸುವ ಅಪಾಯವಿದೆ.

ವ್ಯವಸ್ಥೆಯ ಕುರಿತಾದ ಅಸಹನೆ ಜುಗುಪ್ಸೆಗಳು ಕಲಾತ್ಮಕ ವೇದನೆಯಾಗಿ ಮಾರ್ಪಡಬೇಕೇ? ವಾಚ್ಯದ ಕಾವಿನಲ್ಲಿಯೇ ರೋಷ ...

ದಿಸೆಯಲ್ಲಷ್ಟೇ ಗೋಚರವಾಗಬಹುದು. ಇದನ್ನು 'ಸಂಘರ್ಷ' ಎನ್ನುವುದಕ್ಕಿಂತ 'ಗೊಂದಲ' ಎನ್ನಬಹುದು, ಏಕೆಂದರೆ ವ್ಯಕ್ತಿಗೆ ತನ್ನ ಬಗ್ಗೆ ಇದ್ದಿರಬಹುದಾದ ವೈಯಕ್ತಿಕ ಭ್ರಮೆಗಳು, ಅಹಮಿಕೆ, ಕೀಳರಿಮೆ ಮುಂತಾದವು ಹೋರಾಟದ ಋಜು ಪಥದಲ್ಲಿ ಸಾಗಿದಾಗ ಭರ್ತ್ಸನೆ ಜಾರಿ. ಸಮಷ್ಟಿಯಲ್ಲಿ ವ್ಯಷ್ಟಿಯನ್ನು ಕಂಡುಕೊಳ್ಳುವ ಅರ್ಹತೆ ಪ್ರಾಪ್ತವಾಗುತ್ತದೆ. ತನ್ನ ಧ್ಯೇಯದ ಮಹತ್ವದ ಬಗೆಗೆ ಖಚಿತವೂ ನಿಷ್ಠಾಪೂರ್ಣವೂ ಆದ ಬದ್ಧತೆಯುಳ್ಳ ಕ್ರಾಂತಿಕಾರಿ, ವ್ಯವಸ್ಥೆ ಒಡ್ಡುವ ಯಾವ ಆಮಿಷಗಳಿಗೂ ಒಳಗಾಗದೆ 'ದಂಡಿನಲ್ಲಿ ಸೋದರಮಾವನೆ?' ಎಂಬಂತೆ ನಿಸ್ಸಂಧಾನಿಯಾಗಿರುತ್ತಾನೆ. ಗಾಂಧೀಮಾರ್ಗದ ಹೃದಯ ಪರಿವರ್ತನೆಯಂಥ ಸಿದ್ಧಾಂತಗಳು ಸಮಷ್ಟಿ ವಿಮುಖವಾದ ವ್ಯಕ್ತಿವಾದಕ್ಕೆ ಒತ್ತು ಹಾಕುತ್ತ ಕ್ರಾಂತಿಯ ಹಲ್ಲನ್ನೇ ಕೀಳುವ ಅಪಾಯವಿದೆ. ಕ್ರಾಂತಿಕಾರಿಯಲ್ಲಿ ಬಹಿರಂಗ ಅಂತರಂಗಗಳ ನಡುವೆ ಕಂದಕವಿದ್ದಿರಲು ಸಾಧ್ಯವಿಲ್ಲ. ದಲಿತ ಸಾಹಿತಿ ಖಚಿತ ಸಿದ್ಧಾಂತವುಳ್ಳವನೂ ಹೋರಾಟಗಾರನೂ ಆಗಿರಬೇಕು. ನಮ್ಮ ದಲಿತ ಸಾಹಿತಿಗಳಲ್ಲಿ ಇವೆರಡನ್ನೂ ಏಕತ್ರಗೊಳಿಸಿರುವವರು ಯಾರೂ ಇಲ್ಲ.

ಉ: ನಿರ್ಮಿಸಬಹುದು. ನಿರ್ಮಿಸುವುದು ತಪ್ಪಲ್ಲ ಆದರೆ, ನಮ್ಮ ಉದ್ದೇಶ ಯಾವೊಬ್ಬನೂ ತನ್ನ ಬದುಕಿನ ಅವಶ್ಯಕತೆಗಳ ಸ್ಥಿತಿಯಲ್ಲೇ ಉಳಿದು ತನ್ನ ವ್ಯಕ್ತಿತ್ವದ ಸಮಗ್ರ ವಿಕಾಸ ಸಾಧಿಸದೆ ಹೋಗುವಂಥ ಕ್ರೂರ ಸಮಾಜದ ನಿರ್ಮಾಣವಲ್ಲ ಎಂಬುದರಿಂದ, ಇಂಥ ರಿಕ್ತಸ್ಥಿತಿಯ ದಲಿತನ ಪ್ರಜ್ಞೆಯ ವಿಮೋಚನೆಗೆ ಮತ್ತು ಅವಕ್ಕೆ ಅತನೇ ಕಲೆಯ ಆಕೃತಿಯನ್ನು ಎರಕ ಹೊಯ್ಯಲು ಸಾಧ್ಯವಾಗುವ ಮುಕ್ತವಾತಾವರಣಕ್ಕೆ ಒತ್ತು. ಇಲ್ಲದಿದ್ದರೆ, ಈ ಜಾತಿ ವಿಭಜಿತ ಸಮಾಜದಲ್ಲಿ ನೀವು ಹೇಳುವ 'ಅಸಹ್ಯ' ಅಥವಾ ಗುಮಾನಿಗಳು ಕೇವಲ ಸಹಜ.

ದಲಿತೇತರ ಸಾಹಿತಿ ದಲಿತರ ಕುರಿತು ಬರೆಯುವುದು ಯಾರಿಗಾಗಿ? ತನ್ನ ವರ್ಗದವರ ದೃಷ್ಟಿದೋಷ ತಿದ್ದಲಿಕ್ಕೋ? ದಲಿತರನ್ನು ಬಡಿದೆಬ್ಬಿಸಲಿಕ್ಕೋ?

ಉ: ದಲಿತೇತರ ಸಾಹಿತಿ ದಲಿತರ ಕುರಿತು ಬರೆಯುವುದು ಬರೆಯಬೇಕಾಗಿರುವುದಕ್ಕಾಗಿ. ಅಂಥ ಸಾಹಿತಿಯಾಗಲೀ ಸಾಮಾಜಿಕ ಧುರೀಣನಾಗಲೀ ಕಾರ್ಯಕರ್ತನಾಗಲಿ ದಲಿತರೊಂದಿಗೆ ಸಮರಸನಾಗಲು ವರ್ಗರಹಿತನಾಗಬೇಕು. ಆಗ ಮಾತ್ರ ಅವನ ಕಾವ್ಯದ ಯಥಾರ್ಥತೆಯು ಮುಟ್ಟಿಗೆ ಅತ ದಲಿತೇತರನೆಂಬ ಮೂರುವುದು.

ಜನತಾ ಮನೆ:ಸ್ಪಷ್ಟೀಕರಣ

ಪ್ರಿಯ ಸಂಪಾದಕರೇ,

ದಿನಾಂಕ 2-4-86ರ ಮುಂಗಾರು ದೈನಿಕದ 'ಜನದನಿ' ವಿಭಾಗದಲ್ಲಿ ...

ಓದಿ ಕೋರಿ

ನೀರ ಬಸ್ ಬೇಕು

ಬ್ಯಾಂಕಿನವರ ದರ್ಬಾರು

ಪ್ರಿಯರೆ,

ಡಾಕ್ಟರರ ಜವಾಬ್ದಾರಿ:ಸ್ಪಷ್ಟೀಕರಣ

ಪ್ರಿಯರೆ,

ಜನದನಿ

ವಿವಾಹ ಸಲಹಾ ಸಮಿತಿ

ಪ್ರಿಯರೆ,

ಚಿಂತನೆ

ಜಿಲ್ಲಾ ಪರಿಷತ್ತಿನ ಕರ್ತವ್ಯಗಳು

ಸರಕಾರವು ಕಾಲಕಾಲಕ್ಕೆ ಆದೇಶದ [illegible] ನಿರ್ದಿಷ್ಟ ಪಡಿಸಬಹುದಾದಂತಹ [illegible] ಮತ್ತು ಹಣಕಾಸಿನ ಮತ್ತು ಪರಿತ್ಯಾಗಿ [illegible] ಜಿಲ್ಲಾ ಸರ ಪಟ್ಟಿಯ ಇಧಿ [illegible] ವ್ಯಾಪ್ತಿಯೊಳಗೆ ಬರುವ ಪ್ರದೇಶ [illegible] ಈ ಕೆಳಗಿನ ವಿಷಯಗಳ ಬಗ್ಗೆ ಸೂಕ್ತ ವ್ಯವಸ್ಥೆಗಳನ್ನು ಕಲ್ಪಿಸುವುದು ಪ್ರತಿಯೊಂದು ಜಿಲ್ಲಾ ಪರಿಷತ್ತಿನ ಕರ್ತವ್ಯವಾಗಿರ ತಕ್ಕದ್ದು.

1 ಅಭಿವೃದ್ಧಿ ಕಾರ್ಯಕ್ರಮಗಳು:

ತಾಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ನಿರ್ಮಿಸಲಾಗುವ ಅಭಿವೃದ್ಧಿ ಯೋಜನೆಗಳ ತಮ್ಮ ಮೇಲ್ವಿಚಾರಣೆ, ಸಮನ್ವಯ ಮತ್ತು ಹೊಂದಾಣಿಕೆ ಇವುಗಳನ್ನು ಕೈಗೊಳ್ಳುವುದು ಮತ್ತು ಜಿಲ್ಲೆಯ ಅಭಿವೃದ್ಧಿಗಾಗಿ ಯೋಜನೆಯನ್ನು ತಯಾರಿಸುವುದು. ಇದೇ ಎಲ್ಲದಕ್ಕೂ ಬುನಾದಿ.

2. ಕೃಷಿ

(ಎ) ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಕ್ರಮಗಳ ಪ್ರೋತ್ಸಾಹ, ಸುಧಾರಿತ ಕೃಷಿ ಉಪಕರಣಗಳ ಬಳಕೆಯನ್ನು ಹಾಗೂ ಸುಧಾರಿತ ಕೃಷಿ ಪದ್ಧತಿಯ ಬಳಕೆಯನ್ನು ಜನಪ್ರಿಯಗೊಳಿಸುವುದು.

(ಬಿ) ಕೃಷಿ ಬೀಜ ಕ್ಷೇತ್ರಗಳ ಮತ್ತು ವಾಣಿಜ್ಯ ಕೃಷಿ ಕ್ಷೇತ್ರಗಳ ಸ್ಥಾಪನೆ ಮತ್ತು ಸಂರಕ್ಷಣೆ.

(ಸಿ) ಕೃಷಿ ಶಾಲೆಗಳ ಸ್ಥಾಪನೆ, ನಿರ್ವಹಣೆ ಮತ್ತು ಆಡಳಿತ ವ್ಯವಸ್ಥೆ ಹಾಗೂ ಅವುಗಳಿಗೆ ಆರ್ಥಿಕ ಸಹಾಯ ನೀಡುವುದು. ಆದರೆ ಈ ಕೆಳಗಿನ ವಿಷಯಗಳನ್ನೊಳಗೊಂಡಿರತಕ್ಕದಲ್ಲ. ಎಂದರೆ

1. ಬಿತ್ತ ಕ್ರಮಗಳನ್ನು ಗೊತ್ತುಪಡಿಸುವುದು:

2. ಬೆಳೆ ವಿಸ್ತರಣೆಗಳನ್ನು ಗೊತ್ತುಪಡಿಸುವುದು.

3. ವಾರ್ಷಿಕ ಪಂಕ್ತಿಗಳನ್ನು ನಡೆಸುವುದು:

(ಡಿ) ದಾಸ್ತಾನು ಮಳಿಗೆಗಳನ್ನು ಸ್ಥಾಪಿಸುವುದು ಮತ್ತು ಕಾರ್ಯ ನಿರ್ವಹಿಸುವುದು:

(ಇ) ಮಂಡಲ ಪಂಚಾಯತಿಗಳ ಸಹಕಾರದೊಂದಿಗೆ, ಬೆಳೆಗಳ ಸಂರಕ್ಷಣೆಯ ಸಲುವಾಗಿ ಪ್ರಯತ್ನಗಳ ಸಮನ್ವಯ ಸಾಧನೆ.

3 ಪಶುಸಂಗೋಪನೆ

(ಎ) ಜಿಲ್ಲಾ ಮತ್ತು ತಾಲೂಕು ಪಶುವೈದ್ಯ ಆಸ್ಪತ್ರೆಗಳು, ಪ್ರಥಮ ಚಿಕಿತ್ಸಾ ಕೇಂದ್ರಗಳು ಮತ್ತು ಸಂಚಾರಿ ಪಶುವೈದ್ಯ ಚಿಕಿತ್ಸಾಲಯಗಳ ಸ್ಥಾಪನೆ ಮತ್ತು ನಿರ್ವಹಣೆ.

(ಬಿ) ಮಂಡಲ ಪಂಚಾಯತಿಗಳ ಸಹಕಾರದೊಂದಿಗೆ, ಪಶುಗಳು ಮತ್ತು ಇತರ ಜಾನುವಾರು ಮತ್ತು ಕೋಳಿ ತಳಿಗಳನ್ನು ಸುಧಾರಿಸುವ ಸಲುವಾಗಿ ಕ್ರಮಗಳು:

(ಸಿ) ಗೋಶಾಲೆಗಳ (ಡೇರಿ) ಅಭಿವೃದ್ಧಿ ಕಾರ್ಯಕ್ರಮಗಳು:

(ಡಿ) ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕಾಗಿ ರಚನಾತ್ಮಕ ಕಾರ್ಯಕ್ರಮಗಳು:

4. ಅನುಸೂಚಿತ ಜಾತಿ ಮತ್ತು ಅನುಸೂಚಿತ (ಗಿರಿಜನ) ಪಂಗಡ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ

(ಎ) ಅನುಸೂಚಿತ ಜಾತಿ ಮತ್ತು ಅನುಸೂಚಿತ ಗಿರಿಜನ ಪಂಗಡ ಮತ್ತು ಹಿಂದುಳಿದ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಇತರ ಹಿತಾಸಕ್ತಿಗಳ ಅಭ್ಯುದಯ ಸಾಧನೆ:

(ಬಿ) ಸಾಮಾಜಿಕ, ಅನ್ಯಾಯ ಮತ್ತು ಎಲ್ಲಾ ರೀತಿಯ ಶೋಷಣೆಗಳಿಂದ ಅಂತಹ ಜಾತಿ, ಪಂಗಡ ಮತ್ತು ವರ್ಗಗಳನ್ನು ರಕ್ಷಿಸುವುದು.

(ಸಿ) ಅಂತಹ ಜಾತಿ, ಪಂಗಡ ಮತ್ತು ವರ್ಗಗಳಿಗಾಗಿ ವಿದ್ಯಾರ್ಥಿ ನಿಲಯಗಳ ಸ್ಥಾಪನೆ ಮತ್ತು ಕಾರ್ಯನಿರ್ವಹಣೆ:

(ಡಿ) ಜಿಲ್ಲೆಯಲ್ಲಿನ ಅನುಸೂಚಿತ [illegible] ಮತ್ತು ಅನುಸೂಚಿತ ಗಿರಿಜನ ಪಂಗಡ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣದ ಸಲುವಾಗಿರುವ ಎಲ್ಲಾ ಯೋಜನೆಗಳನ್ನು ಕಾರ್ಯಗತಗೊಳಿಸುವ ಸಂಬಂಧದಲ್ಲಿ ಮೇಲ್ವಿಚಾರಣೆ, ಅದರಲ್ಲೂ ಪ್ರತ್ಯೇಕವಾಗಿ ಜಿಲ್ಲೆಯಲ್ಲಿರುವ ವಿದ್ಯಾರ್ಥಿನಿಲಯಗಳ ನಿರ್ವಹಣೆ ಮತ್ತು ವ್ಯಕ್ತಿಗಳಿಗೆ ಅನುದಾನಗಳ, ಸಾಲಗಳ ಮತ್ತು ಸಹಾಯಧನದಾನಗಳ ಹಂಚಿಕೆಯ ಸಂಬಂಧದಲ್ಲಿ ಮೇಲ್ವಿಚಾರಣೆ.

5. ಕಟ್ಟಡಗಳು ಮತ್ತು ಸಾರಿಗೆ ಸಂಪರ್ಕಗಳು

(ಎ) (ರಾಜ್ಯ ಹೆದ್ದಾರಿ ಮತ್ತು ಮಂಡಲ ಪಂಚಾಯತಿಗಳ ರಸ್ತೆಗಳನ್ನು ಹೊರತುಪಡಿಸಿ) ಜಿಲ್ಲಾ ರಸ್ತೆಗಳು ಮತ್ತು ಸೇತುವೆಗಳ ನಿರ್ಮಾಣ, ನಿರ್ವಹಣೆ ಮತ್ತು ದುರಸ್ತಿ:

(ಬಿ) ಜಿಲ್ಲಾ ಪರಿಷತ್ತಿನ ಅವಶ್ಯಕತೆಗನುಗುಣವಾಗಿ ಆಡಳಿತಾತ್ಮಕ ಮತ್ತು ಇತರ ಕಟ್ಟಡಗಳ ನಿರ್ಮಾಣ:

6. ಸಾರ್ವಜನಿಕ ಆರೋಗ್ಯ

(ಎ) ಆಸ್ಪತ್ರೆಗಳ ಮತ್ತು ಚಿಕಿತ್ಸಾ ಔಷಧಾಲಯಗಳ ಆಡಳಿತ ನಿರ್ವಹಣೆ ಜಿಲ್ಲಾ ಕೇಂದ್ರಗಳಲ್ಲಿರುವ ನಾಗರಿಕ (ಸಿವಿಲ್) ಆಸ್ಪತ್ರೆಗಳು ಮತ್ತು ನಗರ ಪಾಲಿಕೆ ಅಥವಾ ನಗರ ಸಭೆಗಳ ಮೇಲ್ವಿಚಾರಣೆಯ ಅಧೀನದಲ್ಲಿರುವ ಇತರ ಆಸ್ಪತ್ರೆಗಳು ಮತ್ತು ಚಿಕಿತ್ಸಾ ಔಷಧಾಲಯಗಳನ್ನು ಹೊರತು ಪಡಿಸಲಾಗಿದೆ.

(ಬಿ) ಜಾನುವಾರು ಜಾತ್ರೆಗಳು ಒಳಗೊಂಡಂತೆ ಜಾತ್ರೆಗಳ ಮತ್ತು ಉತ್ಸವಗಳ ವ್ಯವಸ್ಥೆ ಮತ್ತು ನಿಯಂತ್ರಣ.

(ಸಿ) ಗ್ರಾಮಾಂತರ ನಿವೇಶನಗಳ ಸುಧಾರಣೆ ಮತ್ತು ವಿಸ್ತರಣೆ (ಈ ಉದ್ದೇಶಗಳಿಗಾಗಿ ಇರುವ ಅನುದಾನಗಳು ಮತ್ತು ಸಾಲಗಳನ್ನು ಒಳಗೊಂಡು)

(ಡಿ) ಗ್ರಾಮಾಂತರ ನಿವೇಶನಗಳ ಮತ್ತು ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಯ ಸಮೀಕ್ಷೆ ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳ ವ್ಯವಸ್ಥೆ.

7. ನೀರಾವರಿ ಮತ್ತು ಅಂತರ್ಜಲ ಮೂಲಗಳ ಅಭಿವೃದ್ಧಿ:

(ಎ) ಜಿಲ್ಲೆಯೊಳಗೆ ನಿಸ್ಸರಿಸುವಂತಹ ಅಚ್ಚುಕಟ್ಟು ಪ್ರದೇಶದೊಳಗೆ ಬರುವ ಮತ್ತು ಸಣ್ಣ ನೀರಾವರಿ ಕಾಮಗಾರಿಗಳ ನಿರ್ಮಾಣ, ನವೀಕರಣ ಮತ್ತು ಕಾರ್ಯ ನಿರ್ವಹಣೆ.

(ಬಿ) ಜಿಲ್ಲಾ ಪರಿಷತ್ತಿನ ನಿಯಂತ್ರಣದಲ್ಲಿರುವ ನೀರಾವರಿ ಯೋಜನೆಗಳ ಮೇರೆಗೆ ನೀರನ್ನು ಪೂರ್ಣವಾಗಿ ಬಳಸಿಕೊಳ್ಳುವ ಸಕಾಲಿಕ ಮತ್ತು ಸೂಕ್ತವಾದ ನೀರಿನ ಹಂಚಿಕೆಗೆ ವಿಧಾನ [illegible] ಮಾಡುವುದು:

(ಸಿ) ಅಂತರ್ಜಲ ಮೂಲಗಳ ಅಭಿವೃದ್ಧಿ

8. ಕೈಗಾರಿಕೆ ಮತ್ತು ಗುಡಿಕೈಗಾರಿಕೆಗಳು:

(ಎ) ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳ ಅಭ್ಯುದಯ; (ಬಿ) ತರಬೇತಿ ಹಾಗೂ ಉತ್ಪಾದನಾ ಕೇಂದ್ರಗಳ ಸ್ಥಾಪನೆ; (ಸಿ) ಗುಡಿ ಮತ್ತು ಗ್ರಾಮಕೈಗಾರಿಕೆಗಳ ಉತ್ಪಾದನೆಗಳಿಗಾಗಿ ಮಾರುಕಟ್ಟೆ ಸೌಕರ್ಯಗಳ ವ್ಯವಸ್ಥೆ: (ಡಿ) ರಾಜ್ಯ ಮಂಡಳಿ ಮತ್ತು ಅಖಿಲ ಭಾರತ ಮಂಡಳಿಗಳ ಮತ್ತು ಆಯೋಗಗಳ, ಗುಡಿ ಕೈಗಾರಿಕೆಗಳ ಹಾಗೂ ಗ್ರಾಮೀಣ ಉದ್ಯಮಗಳು ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿಗಾಗಿರುವ ಯೋಜನೆಗಳನ್ನು ಕಾರ್ಯಗತಗೊಳಿಸುವುದು.

9. ತೋಟಗಾರಿಕೆ :

(ಎ) ಗ್ರಾಮೀಣ ಉದ್ಯಾನಗಳು ಮತ್ತು ತೋಟಗಳು. (ಬಿ) ಹಣ್ಣು ಮತ್ತು ತರಕಾರಿಗಳನ್ನು ಬೆಳೆಸುವುದು. (ಸಿ) ಕ್ಷೇತ್ರಗಳ (ಫಾರ್ಮ್) ಸ್ಥಾಪನೆ.

10. ಸಹಕಾರ:

(ಎ) ಸಹಕಾರೀ ಸಂಘಗಳ ಕಾರ್ಯ ಚಟುವಟಿಕೆಗಳಿಗೆ ಪ್ರೋತ್ಸಾಹ ಹಾಗೂ ವಿಸ್ತರಣೆ. (ಬಿ) ಸಹಕಾರೀ ಸಂಘಗಳ ರಿಜಿಸ್ಟ್ರಾರರವರು ವಿಧಿಸಿದ ಷರತ್ತುಗಳಿಗೊಳಪಟ್ಟು, ಸರಕಾರವು ಪಾಲು ಬಂಡವಾಳವನ್ನು ಪಡೆದುಕೊಳ್ಳಬಹುದಾದಂತಹ ಸಂದರ್ಭಗಳಲ್ಲಿ ಸಹಕಾರೀ ಸಂಘಗಳ ಪಾಲು ಬಂಡವಾಳವನ್ನು ಪಡೆದುಕೊಳ್ಳುವುದು.

11. ಶಿಕ್ಷಣ ಮತ್ತು ಸಾಮಾಜಿಕಶಿಕ್ಷಣ

(ಎ) ಇತರ ಸಂಸ್ಥೆಗಳು ಕೈಗೊಂಡ ವಯಸ್ಕ ಶಿಕ್ಷಣ ಯೋಜನೆಗಳನ್ನು ಮಂಡಲ ಪಂಚಾಯತಿಯ ಸಹಕಾರದೊಂದಿಗೆ ಕಾರ್ಯಗತಗೊಳಿಸುವುದು; (ಬಿ) ಶೈಕ್ಷಣಿಕ ಕಾರ್ಯ ಚಟುವಟಿಕೆಗಳ ಸಮೀಕ್ಷೆ ಮತ್ತು ಮೌಲ್ಯಮಾಪನ; (ಸಿ) ಜಿಲ್ಲೆಯಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸುವುದು ಸೇರಿದಂತೆ ಜಿಲ್ಲೆಯಲ್ಲಿನ ಶೈಕ್ಷಣಿಕ ಕಾರ್ಯ ಚಟುವಟಿಕೆಗಳಿಗೆ ನೆರವು ನೀಡುವುದು. ಪ್ರೋತ್ಸಾಹಿಸುವುದು ಮತ್ತು ಮಾರ್ಗದರ್ಶನ ನೀಡುವುದು.ಡಿ) (ಗ್ರಾಮಗಳಲ್ಲಿ ಸೇವಾ ಸಮಾಜ ಕಾರ್ಯಗಳನ್ನು ಸಜ್ಜಿಸುವುದಕ್ಕಾಗಿ ಮಂಡಲ ಪಂಚಾಯತಿಗಳ ಮತ್ತು ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಪ್ರಯತ್ನಗಳನ್ನು ಸಮನ್ವಯಗೊಳಿಸುವುದು; (ಇ) ಯುವಕ ಕೇಂದ್ರಗಳು, ಮಹಿಳಾ ಮಂಡಳಗಳು ಮತ್ತು ಸ್ತ್ರೀ ಸಂಸ್ಥೆಗಳಂತಹ ಸಾಮಾಜಿಕ ಸೇವೆ ಸಲ್ಲಿಸುವ ಸಂಸ್ಥೆಗಳನ್ನು ಮಂಡಲ ಪಂಚಾಯತಿಯ ಸಹಕಾರದೊಂದಿಗೆ ಅಭಿವೃದ್ಧಿಗೊಳಿಸುವುದು ಹಾಗೂ ಪ್ರೋತ್ಸಾಹಿಸುವುದು. (ಎಫ್) ಸಾರ್ವಜನಿಕ ವಸತಿನಿಲಯಗಳು (ಹಾಸ್ಟೆಲುಗಳು) ಆಶ್ರಮ ಶಾಲೆಗಳು ಮತ್ತು ಅನಾಥಾಲಯಗಳನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸುವುದು.

12. ಅಂಕಿ ಅಂಶಗಳು

(ಎ) ಮಂಡಲ ಪಂಚಾಯತಿಗಳು ಮತ್ತು ಜಿಲ್ಲಾ ಪರಿಷತ್ತುಗಳ ಕಾರ್ಯ ಚಟುವಟಿಕೆಗಳ ಸಂಬಂಧಿಸಿದ ಅಂಕಿ ಅಂಶಗಳು ಹಾಗೂ ಇತರ ಮಾಹಿತಿಯ ಪ್ರಕಟಣೆ: (ಬಿ) ಮಂಡಲ ಪಂಚಾಯತಿಗಳು ಮತ್ತು ಜಿಲ್ಲಾ ಪರಿಷತ್ತುಗಳ ಕಾರ್ಯ ಚಟುವಟಿಕೆಗಳಿಗೆ ಅವಶ್ಯವಾದ ಅಂಕಿ [illegible] ಗಳ ಹಾಗೂ ಇತರ ಮಾಹಿತಿಯ [illegible] ನ್ವಯ ಮತ್ತು ಬಳಕೆ; (ಸಿ) ಮಂಡಲ ಪಂಚಾಯತಿಗಳಿಗೆ ಮತ್ತು ಜಿಲ್ಲಾ ಪರಿಷತ್ತಿಗೆ ವಹಿಸಿದ ಯೋಜನೆ ಹಾಗೂ ಕಾರ್ಯಕ್ರಮಗಳ ನಿಯತಕಾಲಿಕ ಪರಿಶೀಲನೆ ಹಾಗೂ ಮೌಲ್ಯಮಾಪನ.

13. ವಿದ್ಯುದೀಕರಣ

ಜಿಲ್ಲಾ ಪರಿಷತ್ತಿನ ಅಧೀನಕ್ಕೆ [illegible] ವಹಿಸಿದ ಕಾಮಗಾರಿಗಳಲ್ಲಿ ವಿದ್ಯುತ್ [illegible] ಯನ್ನು ಅಭಿವೃದ್ಧಿಪಡಿಸುವುದು.

ಗ್ರಾಮೀಣ ವಿದ್ಯುದ್ದೀ[illegible]

ಗ್ರಾಮಾಂತರ ವಿದ್ಯುದ್ದೀಕರಣ:

ಅವಶ್ಯಕ ವಸ್ತುಗಳ ವಿತರಣೆ:

ಅವಶ್ಯಕ ವಸ್ತುಗಳ ವಿತರಣಾ [illegible]

ಈ ಕಾಯಿದೆಯು ಪ್ರಕಿಷ್ಟ [illegible] ಆಯಾ ಜಿಲ್ಲೆಗಳಲ್ಲಿ ಆಗ ಬೇ[illegible] ಷ್ಟಪ್ಟ ಕಾರ್ಯಗಳ ಯ[illegible] ಆಯಾ ಜಿಲ್ಲಾ ಪರಿಷತ್[illegible] ಬೇಕು ಹಾಗೂ ಕಾರ್ಯಗತ[illegible] ಕೃಷಿ ಪ್ರಧಾನವಾದ ಸಮು[illegible] ಔದ್ಯೋಗಿಕ ಬೆಳವಣಿಗೆಯ ಸ[illegible]

ಜಿಲ್ಲಾ ಪರಿಷತ್ ಚುನಾವಣೆ ನಡೆದಿದೆ. ಪ್ರತಿನಿಧಿಗಳು ಯಾರೆಂದು ಘೋಷಣೆ ಆಗಿದೆ. ಕೆಲವೇ ಕಾಲದಲ್ಲಿ ಇವರೆಲ್ಲ ಸೇರಿ ಅಧ್ಯಕ್ಷನನ್ನು ಆರಿಸುತ್ತಾರೆ. ಜಿಲ್ಲಾ ಪರಿಷತ್ ಸ್ಥಾಪನೆ ಆಗಿ ಜಿಲ್ಲೆಯ ಕೆಲಸ ಕಾರ್ಯಗಳನ್ನು ಕೈಗೆತ್ತಿ ಕೊಳ್ಳುತ್ತದೆ. ಅವು ಯಾವುವು ಎಂಬುದನ್ನು ಇಲ್ಲಿ ವಿವರಿಸಲಾಗಿದೆ. ನ್ಯಾಯವಾದಿ ಶಿರ್ತಾಡಿ ವಿಲಿಯಂ ಪಿಂಟೋ ಅವರ ಪುಸ್ತಕದಿಂದ ಈ ಭಾಗವನ್ನು ಉದ್ಧರಿಸಲಾಗಿದೆ.

ಶಿರ್ತಾಡಿ ವಿಲಿಯಂ [illegible]

[illegible]

ಲೋವರ್ ಮರೋಳಿಯ ಜನರ ಸ[illegible]

ಪ್ರಿಯರೆ,

1. ಕಂಕನಾಡಿ ಪಂಪ್‌ವೆಲ್‌ನಿಂದ 5 ರಸ್ತೆಗಳು ಕೂಡುವ ಸ್ಥಳದಲ್ಲಿ ಒಂದಾದರೂ ತಂಗುದಾಣದ ವ್ಯವಸ್ಥೆ ಇಲ್ಲವಾದುದರಿಂದ, ಮಳೆ, ಬಿಸಿಲಿಗೆ ದೈವ ಬಿಟ್ಟ ಇಲ್ಲಿ ಬಂದು ಸೇರುವ ಜನರ ಸ್ಥಿತಿ ಹೇಗಿರಬಹುದೆಂದು ಸಂಬಂಧಪಟ್ಟವರು ಕಣ್ಣಾರೆ ನೋಡಿ ಕೂಡಲೆ ಪಕ್ಷ 3 ತಂಗುದಾಣಗಳ ನ್ನಾದರೂ ವ್ಯವಸ್ಥೆ ಮಾಡಬೇಕು.

2. ಇಲ್ಲಿಂದ ಮುಂದುವರಿದು ಪಾತೂರು ಸೇರುವ ರಾಜ್ಯ ರಸ್ತೆಯಲ್ಲಿ ಬರೇ ಒದ್ದಾಡುವ ಜನರ ಬವಣೆಯನ್ನು ಹೋಗಲಾಡಿಸಬೇಕು.

3. ಈ ರಸ್ತೆಯಲ್ಲಿ ದಾರಿ ದೀಪಗಳೇ ಕೋಟೆಕಾರದಿಷ್ಟಿದ್ದರೂ ಒಂದಾದರೂ ಉರಿಯುತ್ತಿಲ್ಲ. ಈ ಸ್ಥಿತಿ ಯಾಕೆಂದು ವಿಚಾರಿಸಿ ಸರಿಪಡಿಸಬೇಕು.

4. ತಗ್ಗು ಪ್ರದೇಶವಾದ ಕೆಳಗಿನ ಮರೋಳಿಗೆ ಸಂಪರ್ಕ ರಸ್ತೆ ಇಲ್ಲದೆ ಇಲ್ಲಿನ ಶಾಲಾ ಮಕ್ಕಳು, ಕಾರ್ಮಿಕರು ಮತ್ತಿತರರು ಇಲ್ಲಿನ ಗದ್ದೆ ಹುಣಿಯನ್ನೇ ಆಶ್ರಯಿಸಿ, ಬೀಳುತ್ತಾ, ಏಳುತ್ತಾ, ಜಾರುತ್ತಾ ನಡೆದು ಕಷ್ಟ ಪಡುತ್ತಿರುವುದನ್ನು ಕಣ್ಣಾರೆ ಕಂಡು ಮಳೆಗಾಲದ ದಿನಗಳಲ್ಲಿ, ವ್ಯವಸಾಯದ ಸಮಯದಲ್ಲಿ ಅದಕ್ಕೂ ಅವಕಾಶವಿಲ್ಲದೆ ಒದ್ದಾಡುವ ಜನರಿಗೆ ಕೂಡಲೇ ಇಲ್ಲಿನ ರಾಷ್ಟ್ರೀಯ ಹೆದ್ದಾರಿಯ 17 ರಸ್ತೆಯ ಕೆಳಗಿನ ಒಂದು ಸಂಪರ್ಕ ರಸ್ತೆ ನಿರ್ಮಿಸಿಕೊಡುವುದು ಬಹಳ ಅಗತ್ಯ. ಇಲ್ಲಿನ ತೋಡಿಗೆ ಕಿರು ಸೇತುವೆ [illegible] ಒಂದು ಮೋರಿ ಬೇಕು. ಕದ್ರಿ ವಿಭಾಗದಲ್ಲಿರುವ ಶಾಲೆಕಾಲೇಜುಗಳಿಗೆ ಕಾರ್ಖಾನೆಗಳು, ಮತ್ತಿತರ ಉದ್ಯೋಗದಲ್ಲಿರುವ ಕೆಲಸಗಾರರು, ಕನಪತ್ತಿಗ್ಗ ಮತ್ತು ವಿಹಾರಕ್ಕೆ ಹೋಗುವ ಜನರಿಗೆ ಇರುವ ಒಂದೇ ಒಂದು ಸಂಪರ್ಕ ವ್ಯವಸ್ಥೆ.

[illegible]

ನೀರು ಕೊಡಿ

ಪ್ರಿಯರೆ,

ಬಂಟ್ವಾಳ ತಾಲೂಕಿನ ಸಾಲೆತ್ತೂರಿಗೆ ನಳ್ಳಿ ನೀರಿನ ಯೋಜನೆ ಮಂಜೂರಾಯಿತು. ಎಲ್ಲರಿಗೂ ಸಂತೋಷವಾಯ್ತು. ಮೂರು ವರ್ಷದ ಹಿಂದೆ ಪ್ರಾರಂಭವಾದ ಈ ಕೆಲಸ ಇನ್ನೂ ಮುಗಿದಿಲ್ಲ ಅಂದರೆ ಕೊಳವೆ ಬಾವಿಯೇನೋ ತೋಡಿ ಹೋದರು. ನಂತರ ಯಾರೋ ಒಬ್ಬ ಕಂಟ್ರಾಕ್ಟ್‌ದಾರ ವರ್ಷದ ಬದಿಯನ್ನೆಲ್ಲ ಅಗೆದು ಪೈಪ್ ಹೂಳಿ ನಂತರ ಅರ್ಧ ಬಿಟ್ಟು ಬಿಟ್ಟು ಹೋಗಿ ತಿರುಗಿ ನೋಡಲೇ ಇಲ್ಲ. ಈಗವು ಬಯಲಲ್ಲಿ ಒಂದು ಟ್ಯಾಂಕು ಕಟ್ಟಲು ಪಂಚಾಯ್ತು ಕಟ್ಟಡದಲ್ಲಿ ರಾಶಿಬಿತ್ತು. ಒಂದು ವರ್ಷ ಕಳೆದರೂ ಕೆಲಸ ಹಿಡಿಯಲೇ ಇಲ್ಲ. ನಂತರ ಯಾವನೋ ಬಂದೊಬ್ಬ ತಳಪಾಯ ಹಾಕಿ ಹೋದ. [illegible] ಸಿಮೆಂಟು ತಂದು ಹಾಕಿ ಹೋದವನ ಪತ್ತೆ ಇಲ್ಲ. ವರುಷ ಕಳೆಯಿತು. ಸಿಮೆಂಟು ಗಟ್ಟಿಯಾಗಿ ಹಾಳಾಯ್ತು. ನಂತರ ಯಾರೋ ಒಬ್ಬ ಕಂಟ್ರಾಕ್ಟು ದಾರ ತಳಪಾಯದಲ್ಲಿ ಕೆಲಸ ಪ್ರಾರಂಭಿಸಿ, ಗಟ್ಟಿಯಾದ ಸಿಮೆಂಟುಗಳನ್ನು ಒಡೆದು ಕಲ್ಲುಗಳ ಸಂದಿಗೆ ಹಾಕಿದರು. ಹೀಗೆ ಅರ್ಧ ಟಾಂಕಿಮಾಡಿದರೂ ಪೂರ್ತಿಯಾಗಿಲ್ಲ. ಸಿಮೆಂಟಿನಿಂದ ತಯಾರಿಸಿದ ಹಾಸುಗಳು ಈಗ ಇದ್ದಲ್ಲಿಂದ ಮಾಯವಾಗಿವೆ. ಇನ್ನು ಪೈಪ್‌ಗಳು ಹೇಗಿವೆಯೋ? ನಮ್ಮ ಊರಿಗೆ ಎಂಬ ಪ್ರಶ್ನೆ ಸಮಗೆಲ್ಲಾ. 86 ಪೂರ್ತಿಯಾಯಿತು. ಆದರೆ ನಮ್ಮ ಊರಿಗೆ ನೀರಿಗೆ [illegible] ವರ್ಷದ ಮೊದಲು ಪ್ರಾರಂಭವಾದರೂ ಇನ್ನು ಮುಕ್ತಿ ಸಿಕ್ಕಿಲ್ಲ. ಇನ್ನು [illegible] ಪೂರ್ತಿ ಮಾಡುವ ಅಂದಾಜು ಇಲ್ಲ. ಸಂಬಂಧಪಟ್ಟ ಅಧಿಕಾರಿಗಳು [illegible] ಹರಿಸುವರೆ?

—ಬಾಲು

ಸಾಲೆತ್ತೂರು

ಹಿರೆ ಹೋರಿ

ಒಂದು ಬಸ್ಸು ಕಂಕನಾಡಿವರೆಗೆ ಮಾತ್ರ ದಿನಕ್ಕೆ ಮೂರು ಬಾರಿ ಓಡುತ್ತಿದೆ. ಆದರೆ ಅದು ನಗರದೊಳಗಿರುವ ಆಫೀಸುಗಳು, ಶಾಲೆ, ಕಾಲೇಜುಗಳು, ಮತ್ತಿತರ ಅಗತ್ಯಗಳಿಗೆ ಓಡಾಡುವ ಜನರಿಗೆ ಏನೇನೂ ಪ್ರಯೋಜನವಿಲ್ಲ. ಬದಲಾಗಿ ನಂಬ್ರ 4, 3 ಮತ್ತು 6 ಮೊದಲಾದ ಬಸ್ಸುಗಳನ್ನು ಕಂಕನಾಡಿಯಿಂದ ಕೆಳಗಿಳಿಸಿ ಪಂಪ್‌ವೆಲ್ ಮೂಲಕ ಸಂತೂರು ಸೇರಿ ಮುಂದುವರಿಯುವಂತೆ ಮಾಡಿ ಮಳೆ ಬಿಸಿಲಿಗೆ ನಡೆದು

ಹುಲಿ ಓಡಿಸಿ

ಪ್ರಿಯರೆ,

ಬೆಳ್ತಂಗಡಿ ತಾಲೂಕು ಶೆಣ್ಯರುಗ್ರಾಮ ಮತ್ತು ಬಂಟ್ವಾಳ ತಾಲೂಕಿನ ಉಳಗ್ರಾಮಗಳ ನಡುವೆ ಇರುವ "ಮಂಗಳ ಫಲಕ" ಎಂಬ ಅರಣ್ಯದಲ್ಲಿರುವ ಹುಲಿಯು ಕಳೆದ ಮೂರು ತಿಂಗಳಿಂದ ಗ್ರಾಮಸ್ಥರ ಜಾನುವಾರುಗಳನ್ನು ಕೊಂದು ತಿನ್ನುತ್ತಿರುವುದಲ್ಲದೆ ಶಾಲಾ ಮಕ್ಕಳಿಗೆ ಕಾಡುದಾರಿಯಲ್ಲಿ ಹೋಗಲು ಅಪಾಯ ಉಂಟು ಮಾಡಿದೆ.

ಈಗಾಗಲೇ ಸುಮಾರು ಹದಿನೈದ ಕ್ಕಿಂತಲೂ ಜಾಸ್ತಿ ಜಾನುವಾರುಗಳು ಹುಲಿಯ ಬಾಯಿಗೆ ತುತ್ತಾಗಿವೆ. ಇನ್ನೀಗ ಬಿಗೆ ಹಗಲಿನಲ್ಲೇ ಹುಲಿಯು ಅಡ್ಡಾಡುತ್ತಿದೆ.

ಸದರಿ ಹುಲಿಯನ್ನು ಕಾಡಿನಿಂದ ಓಡಿಸುವ ಕ್ರಮವನ್ನು ಜರೂರಾಗಿ ಕೈಕೊಳ್ಳಬೇಕೆಂದೂ, ಆ ಮೂಲಕವಾಗಿ ನಮ್ಮನ್ನೂ ನಮ್ಮ ಜಾನುವಾರುಗಳನ್ನೂ ರಕ್ಷಿಸಬೇಕೆಂದೂ ಸಂಬಂಧ ಪಟ್ಟವರಲ್ಲಿ ಪ್ರಾರ್ಥನೆ.

—ತಿಮ್ಮಪ್ಪ ಪೂಜಾರಿ

ಇರ್ವತ್ತೂರು,

ತುಳುನಾಡು ಯುವಕ ಮಂಡಲ

ಸಂಪರ್ಕ ರಸ್ತೆಗೆ ಕಾಯಕಲ್ಪ ಎಂದು?

ಪ್ರಿಯರೆ,

1974ರ ಮಾಸ್ಟರ್ ಪ್ಲಾನ್ ನಲ್ಲಿ ಮಂಜೂರಾದ ಅಳದಂಗಡಿ–ಸೂಳಬೆಟ್ಟು–ಫಂಡಿಜೆ–ನಡ್ತಿಕಲ್ಲು ಮತ್ತು ವೇಣೂರಿನ ಸಂಪರ್ಕ ರಸ್ತೆ ಇದುವರೆಗೂ ಕೇವಲ ಬ್ಲೂಪ್ರಿಂಟ್‌ನಲ್ಲೆ ಉಳಿದಿರುವುದು ಆಶ್ಚರ್ಯಕರವಾಗಿದೆ.

ಈ ಸಂಪರ್ಕರಸ್ತೆ ಹಾದು ಹೋಗುವ ಪ್ರದೇಶಗಳಲ್ಲಿ ಸುಮಾರು 15,000ಮಂದಿ ವಾಸವಾಗಿದ್ದು ಇವರೆಲ್ಲರೂ ಈಗ ಸುತ್ತು ಬಳಸು ದಾರಿಯಲ್ಲಿ ತಿರುಗುತ್ತಾ ಬಹಳ ಕಷ್ಟಪಡಬೇಕಾಗಿದೆ.

ಸೂಳಬೆಟ್ಟಿನ ಬರೆಯ ಗೋಪಾಲಕೃಷ್ಣ ದೇವಸ್ಥಾನದ ಹತ್ತಿರ ಹಾದು ಹೋಗುವ ನದಿಗೆ ಕಾಲು ಸಂಕ ಹಾಕಲೆಂದು ಹಣ ಮಂಜೂರಾಗಿದ್ದರೂ ಅದು ಕಣ್ಕಟ್ಟಿನ ಸೇತುವೆಗೆ ಮುಗಿದಿದೆ. ಈ ಸಂಪರ್ಕರಸ್ತೆ ಈಗ ಕಚ್ಚಾ ರೂಪದಲ್ಲಿದ್ದು ಅದರ ದುರುಸ್ತಿಗೆಂದು ಲೋಕೋಪಯೋಗಿ ಇಲಾಖೆ ಪ್ರತಿ ವರ್ಷವೂ ಹಣ ಖರ್ಚು ಮಾಡುತ್ತಿದ್ದರೂ ರಸ್ತೆ ವರ್ಷವೂ ಹಾಳಾಗಿ ಹೋಗುತ್ತಿದೆ.

ದುರದೃಷ್ಟಗಾಗಿ ಪ್ರತಿವರ್ಷವೂ ಸರಕಾರದಿಂದ ಮಂಜೂರಾದ ಹಣ ಯಾರ ಯಾರ ಜೇಬಿನೊಳಗೋ ಸೇರಿಕೊಂಡಿರುವುದು ನಿಜವಾದ ಸಂಗತಿ.

ಪ್ರದೇಶದ ಅಭಿವೃದ್ಧಿ ಮತ್ತು ಇತರ ಸೌಕರ್ಯಗಳ ಬಗ್ಗೆ ಯಾರೂ ಇದುವರೆಗೆ ಗಮನಹರಿಸದಿರುವುದು ಆಶ್ಚರ್ಯಕರ. ಈ ಸಂಪರ್ಕ ರಸ್ತೆಯ ಅಭಿವೃದ್ಧಿ ಬಗ್ಗೆ ಸಂಬಂಧಪಟ್ಟವರು ಕೂಡಲೇ ಗಮನಹರಿಸಬೇಕು.

—ಪಿ. ನರಸಿಂಹ ಹೆಬ್ಬಾರ್

ಸೂಳಬೆಟ್ಟು

ಕಮೆಂಟ್ರಿಗೆ ಕತ್ತರಿ

ಪ್ರಿಯರೆ,

ಇದೇ ವರ್ಷ ದಶಮಾನೋತ್ಸವವನ್ನು ಆಚರಿಸುತ್ತಿರುವ ಮಂಗಳೂರು ಆಕಾಶವಾಣಿ ನಿಲಯಕ್ಕೊಂದು ಕಳಕಳಿಯ ಮನವಿ. ಕ್ರಿಕೆಟ್ ಟೆಸ್ಟ್ ಪಂದ್ಯದ ವೀಕ್ಷಕ ವಿವರಣೆಯ ಪ್ರಸಾರದಲ್ಲಿ ಶೇಕಡ 50 ಕಡಿತ ಮಾಡಿ ಕ್ರಿಕೆಟ್ ಪ್ರೇಮಿಗಳಿಗೆ ನಿರಾಶೆಯುಂಟು ಮಾಡುವುದು ತುಂಬಾ ವಿಷಾದನೀಯ. ಕೇವಲ ಭೋಜನ ವಿರಾಮದವರೆಗೆ ಪ್ರಸಾರ ಮಾಡಿ, ಅನಂತರ ಕೇವಲ 45 ನಿಮಿಷಗಳ ಆಟದ ವಿವರಣೆಯನ್ನು ಮಾತ್ರ ಈಗ ಪ್ರಸಾರ ಮಾಡಲಾಗುತ್ತಿದೆ. ಇಂಗ್ಲೆಂಡಿನ ಶ್ರೀಲಂಕಾದೊಂದಿಗೆ ನಡೆದ 2ನೆ ಟೆಸ್ಟ್ ಪಂದ್ಯದ 4ನೆ ದಿನದ ಆಟದಲ್ಲಿ ಭಾರತ ಜಯ ಗಳಿಸುವ ಸಂದರ್ಭದಲ್ಲಿ ಕ್ರಿಕೆಟ್ ಪ್ರೇಮಿಗಳಿಗೆ ಕೇಳುವ ಭಾಗ್ಯ ಇಲ್ಲದಾಯಿತು. ಇನ್ನು ಮುಂದೆಯಾದರೂ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆಗೆ ಹೆಚ್ಚಿನ ಮಹತ್ವ ನೀಡಿ ಕ್ರಿಕೆಟ್ ಪ್ರೇಮಿಗಳಿಗೆ ಸಮಾಧಾನ ಉಂಟಾಗುವಂತೆ ಮಾಡಬೇಕಾಗಿ ವಿನಂತಿ.

ಟಿ. ವಿ. ಪ್ರಸಾರ ಇರುವಲ್ಲಿ ಜನ ಅದನ್ನಾದರೂ ನೋಡಿಯಾರು. ಜಿಲ್ಲೆಯ ಹೆಚ್ಚಿನ ಪ್ರದೇಶದಲ್ಲಿ ಟಿ. ವಿ. ಕಾಣಿಸುತ್ತದಿಲ್ಲ ಎಂಬುದು ಆಕಾಶವಾಣಿಗೆ ತಿಳಿಯದೇ?

—ಕ್ರಿಕೆಟ್ ಪ್ರೇಮಿ

ಹಡುವಣಜಾರು

ಈ [illegible] ಪಟ್ಟವರು ಇದರ [illegible] ದಾರೀಲೇ [illegible] ಒಳ್ಳೆಯ ನೀರ[illegible] ಲಿನ ಕೊಂಪರೆಯ[illegible] ಬೇಕು.

ಸಂಬಂಧ ಪಟ್ಟವರು [illegible] ಸಿದ ಜನರಿಗೆ [illegible] ದರೂ ಕೂಡಲೇ [illegible] ಗಳನ್ನು ಪೂರೈಸಿಕೊಟ್ಟು [illegible] ನಂಬಿಕೆಗೆ ಪಾತ್ರರಾಗುವರೆಂದು [illegible] ಸುವ.

—ಗೇಲ್ ಯರ ಬಳಗ

ಕೆಳಗಿನ ಮರೋಳಿ ನಾಗರಿಕರು.

ಅಸಮರ್ಪಕ ವಿದ್ಯುತ್ ಪೂರೈಕೆ

ಪ್ರಿಯರೆ,

ಕಳೆದ ನವೆಂಬರ್ ತಿಂಗಳಿಂದ ಮೂಡುಬಿದಿರೆ ಆಸುಪಾಸಿನ ವಿದ್ಯುತ್ ಪೂರೈಕೆ ಅಸಮರ್ಪಕ [illegible] ಗಿಲ್ಲದೆ. ದಿನದ 24 ಗಂಟೆಗಳ [illegible] ಗಂಟೆ ಕೂಡಾ ಹಿರಾಮ [illegible] ಬಾರಲಾಗದೆ ಮುಖ್ಯತ [illegible] ಮೊದಲ ಹೆಸಗಳು ಬಾಧಗುತ್ತಿವ [illegible] ದಿಯಲು ಬಿಟ್ಟಿವೆ. ಟ್ಯೂಬ್ ಲೈಟ್ [illegible] ಉರಿಯದೆ ಓದುವ ವಿದ್ಯಾರ್ಥಿಗಳು [illegible] ದಾಡುತ್ತಿದ್ದಾರೆ. ದಿನದಲ್ಲಿ ಕೆಲವು [illegible] ವಿದ್ಯುತ್ ಪೂರೈಕೆ ನಿಂತು ಹೋಗಿ [illegible] ದ ಚಟುವಟಿಕೆಗಳೆಲ್ಲ ಸ್ಥಗಿತಗೊಳ್ಳು[illegible] ಬಳಕೆದಾರರು ಹೇಳ ತೀರದ ಕಷ್ಟ[illegible] ಅನುಭವಿಸುತ್ತಿದ್ದಾರೆ. ವಿದ್ಯುತ್ ಪೂರೈಕೆಯ ಹೊಣೆ ಹೊತ್ತ ಮಂಡಳಿಯ ಅಧಿಕಾರಿಗಳು ಇನ್ನಾದರೂ ಇದರ ಸುಧಾರಣೆಗೆ ತ್ವರಿತ ಕ್ರಮ ಕೈಗೊಂಡು ಬಳಕೆದಾರರ [illegible] ಮನ ಹರಿಸುವರೆ?

ನೊಂದ ಬಳಕೆದಾರ

ಮೂಡಬಿದಿರೆ

ಮೂಡಿಗೆರೆಗೆ [illegible]ಟಿ. ವಿ. ಬೇಕು

[illegible]ರೆ,

ಚಿಕ್ಕಮಗಳೂರು ಜಿಲ್ಲೆ ಇಡೀ ಕರ್ನಾಟಕದಲ್ಲೆ ಅತೀ ಶ್ರೀಮಂತ ಜಿಲ್ಲೆ. ಆದರೂ [illegible] ಯ 7ತಾಲೂಕುಗಳಲ್ಲೂ ಟಿ. ವಿ ರಿಲೇ [illegible] ಲ್ಲದಿರುವುದು ಬೇಸರದ ವಿಷಯ. ಅನೇಕ [illegible] ಯ ಕಾರ್ಯಕ್ರಮಗಳನ್ನು ನೋಡ[illegible] ನಾವು ನತದೃಷ್ಟರು. ಆದ್ದರಿಂದ [illegible] ಬೇಗ ರಿಲೇ ಚಿಕ್ಕಮಗಳೂರು [illegible] ಬೇಕೆಂದು ಆಶಿಸುವೆ.

—ಹೆನ್ರಿ

[illegible]

ಚಿಂತನೆ

ಮನುಷ್ಯನ ಸಂಪ್ರದಾಯಗಳು ರೆಂಬೆಯ ಎಲೆಯಂತೆ ಬದಲಾಗುತ್ತವೆ: ಕೆಲವು ಹೋಗುತ್ತವೆ. ಕೆಲವು ಬರುತ್ತವೆ.

— [illegible]

ಶಾಲಾ ಶಿಲಾನ್ಯಾಸಕ್ಕೂ ವಾರ್ಷಿಕೋತ್ಸವ!

ಸುರತ್ಕಲ್, ಜ. 3–ಶಾಲೆಯ ವಾರ್ಷಿಕೋತ್ಸವವನ್ನು ವರ್ಷ ವರ್ಷವೂ ಆಚರಿ[illegible] ಎಲ್ಲರಿಗೂ ಗೊತ್ತಿರುವ ಸಂಗತಿ. [illegible] ಶಾಲೆಯ ಕಟ್ಟಡಕ್ಕೆ ಶಿಲಾನ್ಯಾಸ [illegible]ರುವ ಕಲ್ಲಿನ ವಾರ್ಷಿಕೋತ್ಸವ ಆಚ[illegible]ಸಿದರೆ ವಿಚಿತ್ರವಲ್ಲದೆ ಇನ್ನೇನು? [illegible] ಸ್ಥಾಪನೆ ಗೈದಿರುವ ಶಾಲೆಯ [illegible]ಕೋತ್ಸವ ನಡೆಸಿದ ಈ ಸ್ವಾರಸ್ಯಕರ [illegible] ನಡೆದದ್ದು ಸುರತ್ಕಲ್‌ನ ಶ್ರೀನಿ[illegible]ಗರದಲ್ಲಿ.

[illegible]ಲ್ ಕೆ. ಆರ್. ಇ. ಸಿ ಕ್ಯಾಂಪಸ್ [illegible] ಕನ್ನಡ ಮಾಧ್ಯಮ ಪ್ರೌಢಶಾಲೆ [illegible] ವರ್ಷಗಳಿಂದ ಸ್ವಂತ ಕಟ್ಟಡ [illegible]ಶೆಡ್‌ನಲ್ಲಿ ನಡೆಯುತ್ತಿದೆ. ಈ [illegible]ಜಿಗೆ 'ಮುಂಗಾರು' ವರದಿ [illegible]

[illegible] ಕಟ್ಟಡಕ್ಕೆ ಶಂಕು ಸ್ಥಾಪನೆ [illegible] ಸ್ವತಃ ಕರ್ನಾಟಕದ ಮುಖ್ಯ ಮಂತ್ರಿ, ರಾಮಕೃಷ್ಣ ಹೆಗ್ಡೆಯವರೇ ಹೊಸ ಕಟ್ಟಡಕ್ಕೆ ರಾಜ್ಯ ಸರ್ಕಾರದಿಂದ ಧನ ಸಹಾಯ ನೀಡುವ ಭರವಸೆ ಒದಗಿಸಿದ್ದರು. ಆದರೆ ಭರವಸೆ ಹಾಗೇ ಉಳಿದಿದೆ. ಕನ್ನಡ ಶಾಲೆಯ ಕಲ್ಲು ಮಳೆ, ಬಿಸಿಲಿಗೆ ಮೈಯೊಡ್ಡಿ ನಿಂತಿದೆ.

ಕಳೆದ ದಿನಾಂಕ 23 ರಂದು ಈ ಅನಾಥ ಶಿಲೆಗೆ ಮೂರು ವರ್ಷ ತುಂಬಿತು. ಮೂರನೇ ವಾರ್ಷಿಕೋತ್ಸವವನ್ನು ಸುರತ್ಕಲ್ ನಾಗರಿಕ ಸಮಿತಿಯವರು ಬಹಳ ದುಃಖದಿಂದಲೇ ಆಚರಿಸಿದರು! ಶಿಲೆಗೆ ಹೂವಿನ ಹಾರ ಹಾಕಿ, ಮುಂದಿನ ವಾರ್ಷಿಕದೊಳಗಾದರೂ ಕಟ್ಟಡ ತಲೆ ಎತ್ತಲೆಂದು ಪ್ರಾರ್ಥಿಸಲಾಯಿತು!

ಸರಕಾರ ಹಾಗೂ ಕೆ. ಆರ್. ಇ. ಸಿ. ಆಡಳಿತ ವರ್ಗ ಇನ್ನಾದರೂ ನಿದ್ರಾವಸ್ಥೆ ತೊರೆದು ಶಾಲೆಯ ಕಟ್ಟಡದ ಕೆಲಸ ಪೂರ್ಣಗೊಳಿಸದಿದ್ದಲ್ಲಿ ದೊಡ್ಡ ಮಟ್ಟದ ಜನಾಂದೋಲನ ನಡೆಸುವ ಯೋಜನೆ ನಾಗರಿಕ ಸಮಿತಿಯದ್ದು. ಅದಕ್ಕೆ ಮುನ್ನ ಸಂಬಂಧಿಕರು ಕಣ್ಣು ತೆರೆಯಬಹುದೆ?

(ಚಿತ್ರದಲ್ಲಿ ನಾಗರಿಕ ಸಮಿತಿಯ ರಾಮಚಂದರ್ ಬೈಕಂಪಾಡಿ, ನಾರಾಯಣ್ ಪಾತ್ರಿತರರಿದ್ದಾರೆ).

ಕೆ. ಆರ್. ಇ. ಸಿ. : ಕನ್ನಡ ಶಾಲೆಯ ಕಣ್ಣೀರು

[illegible]

ಶೇ., ಕಿ. ಲೇ., ಬೆಟ್ಟ

ಫೆ. 17ರಂದು ಪ್ರಾಥಮಿಕ ಶಿಕ್ಷಕರ ವಿಧಾನ ಸೌಧ ಚಲೋ

(ಮುಂಗಾರು ವರದಿ)

ಬೆಂಗಳೂರು, ಜ. 3– ಪ್ರಾಥಮಿಕ ಶಾಲಾ ಶಿಕ್ಷಕರ ಬೇಡಿಕೆಯನ್ನು ಈಡೇರಿಸುವಲ್ಲಿ ರಾಜ್ಯ ಸರಕಾರ ಯಾವುದೇ ಆಸಕ್ತಿ ವಹಿಸದಿರುವುದನ್ನು ಪ್ರತಿಭಟಿಸಿ ಪ್ರಾಥಮಿಕ ಶಾಲಾ ಶಿಕ್ಷಕರು ಫೆಬ್ರವರಿ 17ರಂದು "ವಿಧಾನ ಸೌಧ ಚಲೋ" ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಪತ್ರಿಕಾ ಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕೆ. ಎಲ್. ಜಯಶಂಕರ್ ಅವರು ರಾಜ್ಯ ಸರಕಾರ ಶಿಕ್ಷಕರ ಹಿತ ಸಾಧನೆಯ ಬಗ್ಗೆ ಕೇವಲ ಬೂಟಾಟಿಕೆಯ ಮಾತನಾಡುತ್ತಿದೆಯೆಂದು ಆರೋಪಿಸಿದರು.

ರಾಜ್ಯದ ಎಲ್ಲಾ ಖಾಸಗಿ ಶಿಕ್ಷಕರಿಗೆ ಹೈದರಾಬಾದ್ ವೇತನ ಶ್ರೇಣಿ ನೀಡಿಕೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಇದನ್ನು ಶೀಘ್ರವೆ ಅಂತ್ಯಗೊಳಿಸಬೇಕು ಎನ್ನುವುದು ತಮ್ಮ ಬೇಡಿಕೆಯ ಮುಖ್ಯ ಅಂಶವಾಗಿದೆಯೆಂದು ಅವರು ಹೇಳಿದರು.

ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ಮುಂಬಡ್ತಿ ನೀಡುವ ವಿಷಯದಲ್ಲಿ ಬರೀ ಬೂಟಾಟಿಕೆ ಮಾತನಾಡದೆ ತಕ್ಷಣವೇ 11,800 ಉಪಾಧ್ಯಾಯರುಗಳಿಗೆ ಮುಂಬಡ್ತಿ ನೀಡಬೇಕೆಂದು ಮುಖ್ಯಮಂತ್ರಿಯವರನ್ನು ಅವರು ಆಗ್ರಹಪಡಿಸಿದರು.

ವಿಧಾನ ಸೌಧ ಚಲೋ ಚಳವಳಿಯ ನಂತರ ವಿವಿಧ ಹಂತದ ಹೋರಾಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದೆಂದವರು ತಿಳಿಸಿದರು.

ಮತದಾನಕ್ಕೆ ಬಹಿಷ್ಕಾರ

ಬೆಂಗಳೂರು, ಜ. 3– ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಅಡಗೂರು ಗ್ರೂಪ್ ಪಂಚಾಯತ್ ವ್ಯಾಪ್ತಿಯಲ್ಲಿ 3800 ಮತದಾರರಿದ್ದು ಆ ಪೈಕಿ ಯಾರೂ ಮತ ಚಲಾಯಿಸದಿದ್ದುದು ವರದಿಯಾಗಿದೆ.

ಚಿಕ್ಕಮಗಳೂ[illegible] ಶಾಲಾವನ[illegible]

(ಮುಂಗಾರು ವರದಿ)

ಚಿಕ್ಕಮಗಳೂರು, ಜ. 3- ಪ್ರಸ್ತುತ ವರ್ಷ ಜಿಲ್ಲೆಯಲ್ಲಿ 8.5 ಹೆಕ್ಟೇರ್ ಪ್ರದೇಶದಲ್ಲಿ ಶಾಲಾವನ ಅಭಿವೃದ್ಧಿ ಪಡಿಸಲಾ[illegible]ಗಿದೆ ಎಂದು ಜಿಲ್ಲಾಧಿಕಾರಿ [illegible] ಸಾರಥಿ ತಿಳಿಸಿದರು.

ನಗರದ ರೋಟರಿ ಸಭಾಂಗಣದ[illegible] ಅರಣ್ಯ ಇಲಾಖೆ, ನಗರಸಭೆ ಮತ್ತು [illegible] ಯೂತ್ ಹಾಸ್ಟೆಲ್ ಅಸೋಸಿಯೇಷನ್ ಆಫ್ ಇಂಡಿಯಾ ಇವರ ಸಂಯುಕ್ತಾಶ್ರ[illegible] ಯದಲ್ಲಿ ವ್ಯವಸ್ಥೆ ಮಾಡಿದ್ದ ಪರಿಸರ ಜಾಗೃತಿ ವಿಚಾರಣೆಯನ್ನು ಇತ್ತೀಚೆ[illegible] ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಈ ಅವಧಿಯಲ್ಲಿ 722 ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪು ಅಭಿವೃದ್ಧಿ ಪಡಿಸುವ ಸಲುವಾಗಿ 29.19 ಲಕ್ಷ ಸ[illegible]ಗಳನ್ನು ನೆಡಲಾಗಿದೆ ಎಂದರಲ್ಲದೆ 23.3[illegible] ಲಕ್ಷ ಸಸಿಗಳನ್ನು ಜಿಲ್ಲೆಯ 4500 ಪ್ರಗ[illegible] ಪರ ರೈತರಿಗೆ 20 ಸಂಘ ಸಂಸ್ಥೆಗಳಿ[illegible] ಹಾಗೂ 135 ಶಾಲೆಗಳಿಗೆ ನೀಡಲಾಗಿ[illegible] ಎಂದರು.

[illegible]

ಉಚಿತ ಕಾನೂನು

[illegible] 380 [illegible]

ಮತಗಟ್ಟೆ ಚುನಾವಣಾಧಿಕಾರಿ ನಿಧನ

ಕಾರವಾರ, ಜ. 3-ಜಿಲ್ಲೆಯ [illegible] (35) [illegible]

[illegible]

[illegible]ಸಿಸ್ಟೆಂಟ್ ಲೇಬರ್ [illegible]ಮಿಷನರ್ ಕಚೇರಿ [illegible]ಗೆ ಆಗ್ರಹ

[illegible] ಜ. 3– ಕೇಂದ್ರ ಸರ್ಕಾರ [illegible] ಲೇಬರ್ ಕಮಿಷನರ್ [illegible]

[illegible] ಮಾತನಾಡಿದರು. ಸುರೇಶ್ [illegible]ವಹಿಸಿದ್ದರು.

[illegible] ಕಾರ್ಯದರ್ಶಿ ಎಂ. [illegible]ಸ್ವಾಗತಿಸಿದರು. ಜಿ. ಎನ್. [illegible] ವಂದಿಸಿದರು.

[illegible] ಮುಂದಿನ ಸಾಲಿನ ಪದಾಧಿ[illegible]ಗಿ ಸುರೇಶ್ ಕಾಂಚನ(ಅಧ್ಯಕ್ಷ), [illegible] ಆರ್. ಪ್ರಭಾಕರ್, [illegible]ಪಾಟೀಲ (ಉಪಾಧ್ಯಕ್ಷರು), [illegible]ಪ್ (ಪ್ರಧಾನ ಕಾರ್ಯದರ್ಶಿ) [illegible]ರ್, ಕೆ. ವಿ. ಭಟ್, [illegible] (ಸಹಕಾರ್ಯದರ್ಶಿ) [illegible] ಎಸ್. ಶೆಟ್ಟಿ (ಸಂಘಟನಾ [illegible] ಎಸ್. ಕಡಗುಂದಿ, [illegible] ನಾಯಕ (ಸ್ಥಳಾಧಿ[illegible]) ಜಿ. ಎಸ್. ದತ್ತಾತ್ರಿ [illegible] ಆಯ್ಕೆಯಾದರೆಂದು [illegible]ಸಲಾಗಿದೆ.

ಕಟ್ಟಿಗೆ ಅಕ್ರಮ ಸಾಗಣೆ: ಇಬ್ಬರ ಬಂಧನ

(ಮುಂಗಾರು ವರದಿ)

ಅಂಕೋಲಾ, ಜ. 3– ಕಳ್ಳತನದಿಂದ ಕಟ್ಟಿಗೆಗಳನ್ನು ಅಕ್ರಮವಾಗಿ ಚಕ್ಕಡಿಗಾಡಿಗಳಲ್ಲಿ ಸಾಗಿಸುತ್ತಿದ್ದ ಇಬ್ಬರನ್ನು ಮಾಲು ಸಮೇತ ಅಂಕೋಲಾ ಪಿಎಸ್ಐ ಎಸ್.ಬಿ. ಹಾಮ್ನ ಅವರು ತಮ್ಮ ಸಹೋದ್ಯೋಗಿಗಳೊಂದಿಗೆ ಇತ್ತೀಚೆಗೆ ಬಂಧಿಸಿದ್ದಾರೆ.

ಹೊಸಗದ್ದೆಯ ಫಾಲ್ಗುಣ ಹಾಲು ಗೌಡ ಹಾಗೂ ವಂದಿಗೆಯ ಮಾಣೇಶ್ವರ ವಿಠೋಬ ನಾಯಕ ಈಗ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಇವರು ಪ್ರತ್ಯೇಕವಾಗಿ ಕಟ್ಟಿಗೆಗಳನ್ನು ಸಾಗಿಸುತ್ತಿದ್ದು ಫಾಲ್ಗುಣಗೌಡನ ಚಕ್ಕಡಿಯಲ್ಲಿ ಸುಮಾರು 1500 ರೂ. ಮೌಲ್ಯದ ಕಿಂದಳ ಚಿರಾವ್ ಕಟ್ಟಿಗೆ ಇತ್ತೆನ್ನಲಾಗಿದೆ. ಮಾಣೇಶ್ವರ ವಿಠೋಬ ನಾಯಕ ಎಂಬಾತನ ಗಾಡಿಯಲ್ಲಿ ಸುಮಾರು ಅಷ್ಟೇ ಮೌಲ್ಯದ ಸಾಗವಾನಿ ಹಾಗೂ ಸೀಸಂ ನಾಟುಗಳಿದ್ದವೆಂದು ಗೊತ್ತಾಗಿದೆ.

ಈ ದಿಸೆಯಲ್ಲಿ ಎರಡೂ ಗಾಡಿ ಹಾಗೂ ನಾಲ್ಕು ಎತ್ತುಗಳನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡಿದ್ದು, ಆರೋಪಿಯನ್ನು ಕೋರ್ಟಿಗೆ ಹಾಜರು ಪಡಿಸಲಾಯಿತು. ಅವರೀಗ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ.

ಹೊಸ ವೇತನ ಆಯೋಗದಲ್ಲಾದ ತಾರತಮ್ಯವನ್ನು ಪ್ರತಿಭಟಿಸಿ ಅರಣ್ಯ ರಕ್ಷಣಾಧಿಕಾರಿಗಳಲ್ಲಿ ಸಂಪ ಹೂಡಿದ ಪ್ರಯೋಜನ ಪಡೆದು ಇತ್ತೀಚಿನ ದಿನಗಳಲ್ಲಿ ಕಳ್ಳಕಟ್ಟಿಗೆ ಸಾಗಣೆ ಹಿಂದೆಂದಿಗಿಂತಲೂ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆಯೆಂದು ಜನ ಆಡಿಕೊಳ್ಳುತ್ತಿರುವುದಕ್ಕೆ ಸಮರ್ಥನೆಯಾಗಿ ಈ ಎರಡು ಪ್ರಕರಣಗಳು ಬೆಳಕಿಗೆ ಬಂದಿವೆ.

'ಬ್ಯಾನರ್ಜಿ ಚಹಾಕೂಟ'

(ಮುಂಗಾರು ವರದಿ)

ಬೆಂಗಳೂರು, ಜ. 3- ಕಾಮನ್‌ವೆಲ್ತ್ ರಾಷ್ಟ್ರಗಳ ಸಂಸದೀಯ ಸಮಾವೇಶ ನಿನ್ನೆ ಮುಕ್ತಾಯಗೊಂಡಿದ್ದು ಇದರಲ್ಲಿ ಭಾಗವಹಿಸಿದ ನಿಯೋಗಿಗಳಿಗೆ ರಾಜ್ಯಪಾಲ ಅಶೋಕನಾಥ ಬ್ಯಾನರ್ಜಿಯವರು ಚಹಾ ಕೂಟವೊಂದನ್ನು ಏರ್ಪಡಿಸಿದ್ದರು.

ರಾಜ್ಯ ವಿಧಾನ ಸಭೆಯ ಸ್ಪೀಕರ್ ಬಿ.ಜಿ.ಬಣಕಾರ್, ವಿಧಾನ–ಪರಿಷತ್ತಿನ ಅಧ್ಯಕ್ಷ ಆರ್.ಬಿ.ಪೋತದಾರ್ ಮುಂತಾದ ಗಣ್ಯರು ಚಹಾಕೂಟದಲ್ಲಿ ಭಾಗವಹಿಸಿದ್ದರು.

ದಿಲ್ಲಿಗೆ ಹೋಗಿದ್ದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ವಿಮಾನ ನಿಲ್ದಾಣದಿಂದ ನೇರವಾಗಿ ರಾಜಭವನಕ್ಕೆ ತೆರಳಿ ಚಹಾ ಕೂಟದಲ್ಲಿ ಪಾಲ್ಗೊಂಡರು.

ಮುಖ್ಯಮಂತ್ರಿಯವರು ವಿಮಾನ ನಿಲ್ದಾಣದಿಂದ ರಾಜಭವನಕ್ಕೆ ನೇರವಾಗಿ ತೆರಳಿದರು ಎನ್ನುವುದು ಸೂಚ್ಯವಾದ ರಾಜ್ಯ ಸಂಪುಟ ವಿಸ್ತರಿಸಬಹುದೆನ್ನುವ ವದಂತಿಗೆ ಗ್ರಾಸವಾಗಿ ಸಂಪುಟದ ವಿಸ್ತರಣೆ ಮಾತು ಅಲ್ಲಲ್ಲಿ ಕೇಳಿಬರುತ್ತಿದೆ.

ಫೆ. 15ಕ್ಕೆ ಕುಂಬಳೆ ಮಖಾಂ ಉರೂಸ್

ಕುಂಬಳೆ, ಜ. 3–ಇಲ್ಲಿನ ಬದ್ರಿಯಾ ಜುಮ್ಮಾ ಮಸೀದಿಯಲ್ಲಿ ಅಂತ್ಯಗೊಳ್ಳುವ ಖಾಸೀ ಮಖಾಂ ಉರೂಸ್ ಫೆಬ್ರವರಿ 15ರಂದು ನಡೆಯಲಿದೆ.

ಇತ್ತೀಚೆಗೆ ಇಲ್ಲಿ ಜರಗಿದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ಫೆಬ್ರವರಿ ಆರಂಭದ ಧಾರ್ಮಿಕ ಭಾಷಣ ಕಾರ್ಯಕ್ರಮಗಳನ್ನೂ ನಡೆಸಲು ನಿರ್ಣಯಿಸಲಾಯಿತು.

ಸಮರ್ಪಕ ವಿದ್ಯುತ್ ಸರಬರಾಜಿಗೆ ಆಗ್ರಹ

ಭಟ್ಕಳ, ಜ. 3—ಇತ್ತೀಚೆಗೆ ವಿದ್ಯುತ್ ಬಳಕೆದಾರರು ಹೆಚ್ಚಾಗುತ್ತ ಬಂದಿದ್ದು ಜೊತೆಗೆ ಈ ಭಾಗದಲ್ಲಿ ಕೃಷಿ ವ್ಯವಸಾಯವು ಹೆಚ್ಚಾಗಿ ಪಂಪುಸೆಟ್ಟು ಬಳಕೆಯೂ ಸಾಕಷ್ಟು ಪ್ರಮಾಣದಲ್ಲಿದ್ದು ಇಲ್ಲಿ ಅಳವಡಿಸಲಾದ "ಟ್ರಾನ್ಸ್‌ಫಾರ್ಮರ್" ಅವಶ್ಯಕತೆಗಿಂತ ಕಡಿಮೆ ಕಿಲೋ ವ್ಯಾಟಿನದಾಗಿದ್ದು ಇದರಿಂದ ಬಳಕೆದಾರರು ಅತೀವ ಬವಣೆ ಅನುಭವಿಸುವ ಪರಿಸ್ಥಿತಿ ಒದಗಿ ಬಂದಿದೆ.

ಸಂಬಂಧಪಟ್ಟ ಇಲಾಖಾಧಿಕಾರಿಗಳಲ್ಲಿ ಗ್ರಾಮಸ್ಥರು ಈ ಬವಣೆ ಕುರಿತು ಮನವಿ ಮಾಡಿಕೊಂಡರೂ ಈ ತನಕ ಪ್ರಯೋಜನವಾಗಿಲ್ಲ. ಸರಕಾರ ಸಮಸ್ಯೆಯನ್ನು ಇನ್ನಾದರೂ ಪರಿಹರಿಸುವಲ್ಲಿ ಆಸಕ್ತಿ ತೋರಿಸಲಿ ಎಂದು ಇಲ್ಲಿ ಪಂಚಾಯತ್‌ನ ಮಾಜಿ ಅಧ್ಯಕ್ಷ ಮೆಲ್ವಿನ್ ಅವರು ಪತ್ರಿಕಾ ಹೇಳಿಕೆಯ ಮೂಲಕ ಒತ್ತಾಯಪಡಿಸಿದ್ದಾರೆ.

'ಬಡವರಾದ ಕಾರಣಕ್ಕೆ ನ್ಯಾಯವಂಚಿತರಾಗಬೇಡಿ'

[illegible]ಶಂಕರಪುರ, ಜ. 3– "ನ್ಯಾಯದಾನ [illegible] ಪವಿತ್ರಕಾರ್ಯ. ಅದು ಎಲ್ಲರಿಗೂ [illegible] ಲಭ್ಯವಾಗಬೇಕು. ಹಣವಿಲ್ಲದಕಾರಣಕ್ಕೆ [illegible]ಯಿಂದ ಯಾರೂ ವಂಚಿತರಾಗಬಾರದು. ಈ ನಿಟ್ಟಿನಲ್ಲಿ ಉಚಿತ ಕಾನೂನು ನೆರವು ಶಿಬಿರ ಒಂದು ಉಪಯುಕ್ತ ಹೆಜ್ಜೆ" ಎಂದು ಇಲ್ಲಿನ ಸೈಂಟ್ ಜಾನ್ಸ್ ಚರ್ಚಿನ ಧರ್ಮಗುರು ರೆ| ಫಾ| ಜಿ.ಬಿ. ಡಿ'ಸೋಜ ಹೇಳಿದ್ದಾರೆ.

ಇತ್ತೀಚೆಗೆ ಇಲ್ಲಿ ಜರಗಿದ ಉಚಿತ ಕಾನೂನು ನೆರವು ಶಿಬಿರದಲ್ಲಿ ಮುಖ್ಯ [illegible]ಗಿ ಅವರು ಮಾತನಾಡುತ್ತಿದ್ದರು. [illegible] ನ್ಯಾಯವಾದಿ ಯೋಗೀಶ್ವರ [illegible] ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ನ್ಯಾಯವಾದಿ ಮಹಮ್ಮದ್ ರಫೀಕ್ [illegible] ಪ್ರಾಸ್ತಾವಿಕವಾಗಿ ಮಾತನಾಡಿದರು. ನ್ಯಾಯವಾದಿ ಎಚ್. ಎಸ್. ಶೆಣೈ ಅವರು [illegible] ವ್ಯಾಪ್ತಿ ಮತ್ತು ಉದ್ದೇಶ ವಿವರಿಸಿದರು. ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ [illegible] ಶಿಬಿರದ [illegible]

[illegible] ಸೈಂಟ್ ಜಾನ್ಸ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ [illegible] ಶಿಬಿರವನ್ನು ಉದ್ಘಾಟಿಸಿ[illegible]ದರು. ಶಿಬಿರದಲ್ಲಿ [illegible] ವಿವಿಧ ನ್ಯಾಯಾ[illegible] [illegible] 25 [illegible] ಮತ್ತು ಕೃಷಿ [illegible] ಸಂದರ್ಭದಲ್ಲಿ ವಿಲೇವಾರಿಗೊಳಿಸಲಾಯಿತು. ವೃದ್ಧಾಪ್ಯ, ವಿಧವಾ ಮತ್ತು ಅಂಗವಿಕಲ ಮಾಸಿಕ ವೇತನಗಳಿಗೆ ಸಂಬಂಧಿಸಿದ 68 ಅರ್ಜಿಗಳನ್ನು ಸ್ವೀಕರಿಸಲಾಯಿತು.

ಉಡುಪಿ ತಾಲೂಕು ಕಾನೂನು ನೆರವು ಸಮಿತಿ ಶಂಕರಪುರ ರೋಟರಿ ಕ್ಲಬ್, ರೋಟರ್ಯಾಕ್ಟ್ ಕ್ಲಬ್ ಹಾಗೂ ನಾಗರಿಕ ಸಮಿತಿಗಳ ಸಂಯುಕ್ತ ಆಶ್ರಯದಲ್ಲಿ ಈ ಶಿಬಿರ ಜರಗಿತು. ನಾಗರಿಕ ಸಮಿತಿ ಅಧ್ಯಕ್ಷ ಡಾ| ಎಡ್ವರ್ಡ್ ಲೋಬೊ ಸ್ವಾಗತಿಸಿ ಎಚ್. ಆರ್. ಆಳ್ವ ವಂದಿಸಿದರು.

ನದಿಯಲ್ಲಿ ಮುಳುಗಿ ವಿದ್ಯಾರ್ಥಿ ಸಾವು

ದಾಂಡೇಲಿ, ಜ. 3- ವಿದ್ಯಾರ್ಥಿಗಳ ಜೊತೆ ಪಿಕ್‌ನಿಕ್‌ಗೆ ಹೋಗಿದ್ದ ಸ್ಥಳೀಯ ಬಂಗೂರ ನಗರದ ಪಿಯು ಕಾಲೇಜಿನ ವಿದ್ಯಾರ್ಥಿಯಾದ ರಾಜೀವ್ ತವಾನಿ(17) ಆಕಸ್ಮಿಕವಾಗಿ ಕಾವೇರಿ ನದಿಯಲ್ಲಿ ಮುಳುಗಿ ಮೃತಪಟ್ಟ ಘಟನೆ ವರದಿಯಾಗಿದೆ.

ಇಲ್ಲಿಂದ 25 ಕಿ.ಮೀ. ದೂರದ ಗುಂದ ಗ್ರಾಮದ ಬಳಿ ಕಾಲೇಜಿನ ವಿದ್ಯಾರ್ಥಿಗಳು ಇತ್ತೀಚೆಗೆ ವಿಹಾರಾರ್ಥ ಹೋಗಿದ್ದಾಗ ಈ ಆಕಸ್ಮಿಕ ಸಂಭವಿಸಿತು.

ಮೃತ ವಿದ್ಯಾರ್ಥಿಯ ಗೌರವಾರ್ಥ ಸ್ಥಳೀಯ ಬಂಗೂರನಗರ ಪಿಯು ಹಾಗೂ ಪದವಿ ಕಾಲೇಜುಗಳು ಮುಚ್ಚಲ್ಪಟ್ಟವು.

ಜ. 5ರಿಂದ ಕಿರಿಯ ಆರೋಗ್ಯ ಸಹಾಯಕರ ಉಪವಾಸ ಸತ್ಯಾಗ್ರಹ

ಕಾರವಾರ, ಜ. 3– ಆರೋಗ್ಯ ಇಲಾಖೆಯ ಜೀವನಾಡಿಯಾಗಿರುವ ಕಿರಿಯ ಆರೋಗ್ಯ ಸಹಾಯಕರು ಜನವರಿ 5 ರಿಂದ ಉಪವಾಸ ಸತ್ಯಾಗ್ರಹ ಮಾಡಲು ನಿರ್ಧರಿಸಿದ್ದಾರೆ.

ಕರ್ನಾಟಕ ಕಿರಿಯ ಆರೋಗ್ಯ ಸಹಾಯಕರ ಸಂಘ (ರಿ) ಇದರ ಉ. ಕ. ಶಾಖೆಯ ಕಾರ್ಯಕಾರಿ ಮಂಡಳಿ ಸಭೆಯು ಇತ್ತೀಚೆಗೆ ಇಲ್ಲಿ ವಿಭಾಗೀಯ ಸಂಘಟನಾ ಕಾರ್ಯದರ್ಶಿ ಎಂ. ಎಂ. ದಾವೋದರ ಅವರ ಅಧ್ಯಕ್ಷತೆಯಲ್ಲಿ ಜರಗಿ ಈ ಮೇಲಿನ ನಿರ್ಧಾರ ಕೈಗೊಳ್ಳಲಾಯಿತು.

ಸತ್ಯಾಗ್ರಹದ ಹೋರಾಟ ಸಮಿತಿಯ ಅಧ್ಯಕ್ಷರಾಗಿ ಎ. ಆರ್. ಫೆರ್ನಾಂಡಿಸ್ ಅವರನ್ನು ಆಯ್ಕೆ ಮಾಡಲಾಗಿದೆ.

ದಿನಾಂಕ 5–1–87 ರಂದು ಮುಂಜಾನೆ 10 ಗಂಟೆಗೆ ಬೇಡಿಕೆಗಳ ಮನವಿಯನ್ನು ಮೆರವಣಿಗೆಯಲ್ಲಿ ಹೋಗಿ ಜಿಲ್ಲಾಧಿಕಾರಿಗಳಿಗೆ ಅರ್ಪಿಸಿ ತದನಂತರ ಜಿಲ್ಲಾ ಆರೋಗ್ಯ ಅಧಿಕಾರಿಗಳ ಕಚೇರಿ ಆವರಣದಲ್ಲಿ ಸರದಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಲಾಗುವುದು.

ಕುಟುಂಬ ಕಲ್ಯಾಣದ ಗುರಿ ತಲುಪಿಸಲು ಸಿಬ್ಬಂದಿಯವರ ಮೇಲೆ ಕೈಗೊಳ್ಳುವ ಅವಮಾನಕರ, ವರ್ಗೀಕರಣ ಕ್ರಮಗಳನ್ನು ತಕ್ಷಣ ನಿಲ್ಲಿಸಬೇಕು. ಇಲಾಖೆಯಲ್ಲಿರುವ ಖಾಲಿ ಹುದ್ದೆಗಳಿಗೆ ತಕ್ಷಣ ಬಡ್ತಿ ನೀಡಬೇಕು ಮುಂತಾದ 15 ಬೇಡಿಕೆಗಳ ಈಡೇರಿಕೆಗಾಗಿ ಮನವಿಯಲ್ಲಿ ಒತ್ತಾಯಿಸಲಾಗಿದೆ.

ರಾಜ್ಯ ಸಂಘದ ತೀರ್ಮಾನದಂತೆ ಈ ಸತ್ಯಾಗ್ರಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಪತ್ರಿಕಾ ಪ್ರಕಟಣೆ ತಿಳಿಸಿದೆ.

'ಪೊಲೀಸ್ ಸಂಘದ ಜತೆ ಸಂಬಂಧ ಇಲ್ಲ'

ಮಂಗಳೂರು, ಜ. 3-ರಾಜ್ಯ ಗುಪ್ತದಳದ ಸುಪರಿಂಟೆಂಡೆಂಟ್ ಗೋಪಾಲ ಅಯ್ಯಂಗಾರ್ ಅವರು ಅಧ್ಯಕ್ಷರಾಗಿರುವ ಕರ್ನಾಟಕ ರಾಜ್ಯ ಪೊಲೀಸ್ ಸಂಘದ ಚಟುವಟಿಕೆಗಳಲ್ಲಿ ಈ ರಾಜ್ಯದ ಪೊಲೀಸ್ ಕಾನ್‌ಸ್ಟೇಬಲ್‌ಗಳು ಭಾಗಿಯಾಗುವುದಿಲ್ಲ ಎಂದು ಅಖಿಲ ಕರ್ನಾಟಕ ಪೊಲೀಸ್ ಮಹಾ ಸಂಘದ ಅಧ್ಯಕ್ಷ ವಿ. ಶಶಿಧರ್ ತಿಳಿಸಿದ್ದಾರೆ.

3ನೇ ವೇತನ ಆಯೋಗದಿಂದ ರಾಜ್ಯದ ಪೊಲೀಸರಿಗೆ ಆಗಿರುವ ತಾರತಮ್ಯವನ್ನು ಡಿಸೆಂಬರ್ 31ರೊಳಗೆ ರಾಜ್ಯ ಸರಕಾರ ಸರಿಪಡಿಸದಿದ್ದರೆ "ಶಿಸ್ತಿನ ಚೌಕಟ್ಟಿನೊಳಗೆ ನೇರ ಕ್ರಮವನ್ನು" ಎದುರಿಸಬೇಕಾದೀತು ಎಂಬ ಆವೇಶಕಾರಿ ಪ್ರಚೋದನಾಕಾರಿ ಹೇಳಿಕೆಯು ಅತ್ಯಂತ ಸೂಕ್ಷ್ಮ ಮತ್ತು ಅಶಿಸ್ತಿನ ಇಲಾಖೆಯಾದ ಪೊಲೀಸ್ ಇಲಾಖೆಯಲ್ಲಿ ಗೊಂದಲದ ವಾತಾವರಣವನ್ನು ಉಂಟು ಮಾಡಿದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಹೇಳಿಕೆಯಿಂದ ದ. ಕ. ಜಿಲ್ಲೆಯ ಪೊಲೀಸರು ಜನವರಿ 2ರಂದು ಸಾಮೂಹಿಕ ರಜೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರೂ, ಅಖಿಲ ಕರ್ನಾಟಕ ಪೊಲೀಸ್ ಮಹಾಸಂಘದ ಕರೆಯ ಮೇರೆಗೆ ಅದನ್ನು ರದ್ದು ಪಡಿಸಿ, ಜಿಲ್ಲಾ ಪರಿಷತ್ ಮತದಾನ ಕಾರ್ಯದಲ್ಲಿ ಶಿಸ್ತು ಮತ್ತು ಸಂಯಮದಿಂದ ಭಾಗವಹಿಸಿದುದಕ್ಕಾಗಿ ದ. ಕ. ಜಿಲ್ಲಾ ಪೊಲೀಸರಿಗೆ ಅವರು ಅಭಿನಂದನೆ ಸಲ್ಲಿಸಿದ್ದಾರೆ.

ವೆಂಕಟಸ್ವಾಮಿ ವೇತನ ಆಯೋಗದಲ್ಲಿ ಪೊಲೀಸ್ ಇಲಾಖೆಗೆ ಆಗಿರುವ ಅನ್ಯಾಯವನ್ನು ಮುಖ್ಯಮಂತ್ರಿಯವರು ಸರಿಪಡಿಸುವರೆಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ನಗರದ ಕಪಾಲಿ ಚಿತ್ರಮಂದಿರದ ಬಳಿ ದುಷ್ಕರ್ಮಿಗಳ ಇರಿತಕ್ಕೆ ಬಲಿಯಾಗಿ, ಆಸ್ಪತ್ರೆಯ[illegible] ದಿ| ಪೊಲೀಸ್ ಕಾನ್‌ಸ್ಟೇಬಲ್ [illegible] ಮೂರ್ತಿಯವರ ಕುಟುಂಬಕ್ಕೆ ಪರಿಹಾರ ನೀಡಬೇಕೆಂಬ ತಮ್ಮ ಸಂಘದ [illegible]ಯನ್ನು ಮನ್ನಿಸಿ, ರಾಜ್ಯ ಸರಕಾರ 50,000 ರೂ. ಪರಿಹಾರಧನ ನೀ[illegible] ಮುಖ್ಯಮಂತ್ರಿಯವರು ಸಮ್ಮತಿಸಿ[illegible]ದಕ್ಕೆ ಸಂಘದ ಪರವಾಗಿ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.





'ಜಿ. ಪ. ಆಡಳಿತ ತಲೆ ಇಲ್ಲದ ವ್ಯವಸ್ಥೆ'

ಬೆಳಗಾವಿ, ಮಾ. 21- ಜಿಲ್ಲಾ ಪರಿಷತ್ತಿನ ಆಡಳಿತ ವ್ಯವಸ್ಥೆಯು 'ತಲೆ ಇಲ್ಲದ ಪದ್ಧತಿ' ಎಂದು ಮಾಜಿ ಮುಖ್ಯಮಂತ್ರಿ ಆರ್. ಗುಂಡೂರಾವ್ ವರ್ಣಿಸಿದ್ದಾರೆ.

ಇತ್ತೀಚೆಗೆ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ಪ್ರತಿ ಜಿಲ್ಲೆಗೊಬ್ಬ ಮುಖ್ಯ ಕಾರ್ಯದರ್ಶಿಯಂತೆ ರಾಜ್ಯದಲ್ಲಿ ಒಟ್ಟು 20 ಜನ ಮುಖ್ಯಕಾರ್ಯದರ್ಶಿಗಳಿದ್ದು, ಜಿಲ್ಲಾ ಪರಿಷತ್ತಿನ ಕಾರ್ಯದರ್ಶಿಯನ್ನು ಮುಖ್ಯ ಕಾರ್ಯದರ್ಶಿ ಎಂದು ಕರೆಯುತ್ತಿರುವಾಗ ಜಿ. ಪ. ಅಧ್ಯಕ್ಷರನ್ನು ಮುಖ್ಯಮಂತ್ರಿ ಎಂದೇಕೆ ಕರೆಯಬಾರದು ಎಂದು ವ್ಯಂಗಿಸಿದರು.

ಜಿಲ್ಲಾ ಪರಿಷತ್ತಿನ ವ್ಯವಸ್ಥೆಯು ಪರಿಣಾಮವಾಗಿ ಕೆಳಸ್ತರದ ರಾಜಕೀಯಕ್ಕೆ ಉತ್ತೇಜನ ನೀಡುವಂತಾಗಿದೆ ಎಂದರು.

ಪ್ರಧಾನ ಮಂತ್ರಿ ರಾಜೀವ್ ಗಾಂಧಿ ಅವರ ಜತೆ ಪ್ರಣಬ್ ಮುಖರ್ಜಿ ಹಾಗೂ ತಾವು ಇತ್ತೀಚೆಗೆ ಎರಡು ವಾರಗಳಲ್ಲಿ ಮಾತುಕತೆಗಳನ್ನು ನಡೆಸಿ,ತಾವು ಮತ್ತು ತಮ್ಮ ಬೆಂಬಲಿಗರೊಂದಿಗೆ ಕಾಂಗ್ರೆಸ್‌ಗೆ ಹಿಂತಿರುಗುವುದಾಗಿ ಅವರು ಹೇಳಿದರು.

ಲಿಂಗಪ್ಪಯ್ಯ ಕಾಡಿಗೆ ಹೊಸ ಸರ್ಕಾರಿ ಶಾಲೆ

ಮುಲ್ಕಿ, ಮಾ. 21- ಇಲ್ಲಿನ ಕಿಲ್ಪಾಡಿ ಪಂಚಾಯತಿ ಲಿಂಗಪ್ಪಯ್ಯ ಕಾಡು ಹಾಗೂ [illegible] ವಿದ್ಯಾರ್ಥಿಗಳಿಗೆ ಪ್ರಾಥಮಿಕ ಶಿಕ್ಷಣ ಪಡೆಯಲು ಮೂರು ನಾಲ್ಕು ಮೈಲು [illegible] ಕ್ರಮಿಸಬೇಕಾದ ತ್ರಾಸದಾಯಕ [illegible] ಬಂದಿರುವುದನ್ನು ಪರಿಗಣಿಸಿ [illegible] ವರೇಲ್ ವಾಸುದೇವರಾವ್ [illegible] ಕರ್ನಾಟಕ ಸರಕಾರದ ಎಸ್ ಆರ್. [illegible] ಯೋಜನೆಯ ಸಹಕಾರದೊಂದಿಗೆ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯೊಂದನ್ನು ತೆರೆದಿದೆ.

ನೂತನ ಶಾಲೆಯನ್ನು ಧಾರ್ಮಿಕದತ್ತಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ. ಅಮರನಾಥ ಶೆಟ್ಟಿ ಅವರು ಇತ್ತೀಚೆಗೆ ಉದ್ಘಾಟಿಸಿದರು. ಮುಲ್ಕಿ ಎಜ್ಯುಕೇಶನ್ [illegible] ಸೊಸೈಟಿ ಅಧ್ಯಕ್ಷ ಹರಿಕೃಷ್ಣ [illegible] ಅಧ್ಯಕ್ಷತೆ ವಹಿಸಿದ್ದರು.

ಲಿಂಗಪ್ಪಯ್ಯ ಕಾಡಿಗೆ ವಲಸೆ ಬಂದಿರುವ [illegible] ಬಡ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಪಡೆಯಲು ಈ ಶಾಲೆ ನೆರವಾಗಲಿದೆ.

ಉಚಿತ ನೇತ್ರ ಚಿಕಿತ್ಸಾ ಶಿಬಿರ

ಬಂಟ್ವಾಳ, ಮಾ. 21- ರೋಟರಿ ಕ್ಲಬ್ ಬಂಟ್ವಾಳ ಇದರ ಆಶ್ರಯದಲ್ಲಿ ದ. ಕ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಮಂಗಳೂರು ವೆನ್‌ಲಾಕ್ ಆಸ್ಪತ್ರೆಗಳ ಸಹಕಾರದೊಂದಿಗೆ ಏ. 4ರಿಂದ 10ರ ವರೆಗೆ ಬಂಟ್ವಾಳ, ಪುತ್ತೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಉಚಿತ ಕಣ್ಣಿನ ಪರೀಕ್ಷೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ ನಡೆಯಲಿದೆ.

ಖ್ಯಾತ ನೇತ್ರ ತಜ್ಞರನ್ನೊಳಗೊಂಡ ಎರಡು ತಂಡಗಳು ಶಿಬಿರವನ್ನು ನಡೆಸಿಕೊಡುವರು.

4ರಂದು ಬೆಳಿಗ್ಗೆ 9-30 ಗಂಟೆಗೆ ಪುತ್ತೂರು ಸೈಂಟ್ ವಿಕ್ಟರ್ಸ್ ಗರ್ಲ್ಸ್ ಹೈಸ್ಕೂಲ್ ಮತ್ತು ಪುಂಜಾಲಕಟ್ಟೆ-ಪಿಲಾತ ಬೆಟ್ಟು ಪಂಚಾಯತ್ ಕಚೇರಿ, 11-30ಕ್ಕೆ ಬೆಳ್ತಂಗಡಿ ರೋಟರಿ ಬಾಲ ಭವನ, 5ರಂದು ಬೆಳಿಗ್ಗೆ 9-30ಕ್ಕೆ ಸಿದ್ದಕಟ್ಟೆ ಪಂಚಾಯತ್ ಕಚೇರಿ ಮತ್ತು ಮುಡಿಪು ಪ್ರಾಥಮಿಕ ಆರೋಗ್ಯ ಕೇಂದ್ರ, 11-30ಕ್ಕೆ ವಾಮದ ಪದವು ಪ್ರಾಥಮಿಕ ಆರೋಗ್ಯ ಘಟಕ ಮತ್ತು ಜೋಳೂರು ಚರ್ಚ್ ಸಭಾಂಗಣ, 6ರಂದು ಬೆಳಿಗ್ಗೆ 9-30ಕ್ಕೆ ನೆಲ್ಯಾಡಿ ಸರಕಾರಿ ಶಾಲೆ ಮತ್ತು ವಿಟ್ಲ ಪಂಚಾಯತ್ ಕಚೇರಿ, 7ರಂದು ಬೆಳಿಗ್ಗೆ 9-30ಕ್ಕೆ ಉಪ್ಪಿನಂಗಡಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಮತ್ತು ವಾಣಿ ಮಂಗಳೂರು ಶ್ರೀ ಶಾರದಾ ಹೈಸ್ಕೂಲ್, 8ರಂದು ಬೆಳಿಗ್ಗೆ 9-30ಕ್ಕೆ ಪಾಣೆ ಸರಕಾರಿ ಆಸ್ಪತ್ರೆ ಮತ್ತು ಬಡಗ ಬೆಟ್ಟು ಪ್ರಾಥಮಿಕ ಶಾಲೆ, 11-30ಕ್ಕೆ ಪೆರ್ನೆ ಶ್ರೀ ರಾಮಚಂದ್ರ ಪ್ರೌಢ ಶಾಲೆ ಮತ್ತು ಪೊಳಲಿ ಶ್ರೀ ರಾಜರಾಜೇಶ್ವರಿ ದೇವಳದ ಸಭಾಂಗಣ ಹಾಗೂ 10ರಂದು ಪಾಣೆ ಮಂಗಳೂರು ಶ್ರೀ ಶಾರದಾ ಹೈಸ್ಕೂಲ್‌ನಲ್ಲಿ ಈ ಶಿಬಿರಗಳು ನಡೆಯುವುವು.

ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವವರು ಮತ್ತು ಅವರ ಸಹಾಯಕರಿಗೆ ಊಟ, ವಸತಿಯನ್ನು ಉಚಿತವಾಗಿ ನೀಡಲಾಗುವುದು. ಶಸ್ತ್ರ ಚಿಕಿತ್ಸೆ ಹೊಂದುವವರಿಗೆ ಉಚಿತ ಕನ್ನಡಕವನ್ನು ಕೂಡ ನೀಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬಂದ್: ಗಲಭೆ ಯತ್ನ 10 ಬಂಧನ

(ಮುಂಗಾರು ವಾರ್ತೆ)

ಚಿಕ್ಕಮಗಳೂರು, ಮಾ. 21-ಬಂದ್ ಸಂದರ್ಭದಲ್ಲಿ ವಿಜಯಪುರ ಡಿಪೋದಲ್ಲಿ ಗಲಭೆ ಹಾಗೂ ಸರ್ಕಲ್ ಲಂಚ್ ಹೋಂ ಸಮೀಪ ಅಂಗಡಿಯೊಂದಕ್ಕೆ ನುಗ್ಗಿ ಗಲಾಟೆ ಮಾಡಿದ ಆರೋಪದ ಮೇಲೆ 10 ಜನರನ್ನು ಬಂಧಿಸಲಾಗಿದೆ.

ಈ ಸಂದರ್ಭದಲ್ಲಿ ಅಂಗಡಿಗಳಲ್ಲಿ ತೆಗೆದಿದ್ದ ಬಾಳೆಹಣ್ಣು, ಚಾಕಲೇಟು, ಬೀಡಿ, ಸಿಗರೇಟು ಲೇಪಿಸಿದ್ದ ಕಾರನ್ನು ವಶಪಡಿಸಿಕೊಳ್ಳಲಾಗಿದೆ.

ಶಾಲಾ ವರ್ಧಂತ್ಯುತ್ಸವ

ವರೆಗುತ್ತಿ, ಮಾ. 21- ಇಲ್ಲಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವರ್ಧಂತ್ಯುತ್ಸವವು ಇತ್ತೀಚೆಗೆ ಜರಗಿತು.

ಧಾರ್ಮಿಕ ದತ್ತಿ ಸಚಿವ ಕೆ. ಅಮರನಾಥ ಶೆಟ್ಟಿ, ಎಸ್. ಡಿ. ಸಾಮ್ರಾಜ್ಯ, ಬಿ ದಿನಕರ ಶೆಟ್ಟಿ, ಆರ್. ಮಾಧವ ಶೆಣೈ, ವೃಷಭರಾಜ ಶೆಟ್ಟಿ, ಶಿರ್ತಾಡಿ ಮಂಡಲ ಪ್ರಧಾನ ಸಂಸತ್ ಸಾಮ್ರಾಜ್ಯ ಮೊದಲಾದವರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಶಾಲಾ ಮುಖ್ಯೋಪಾಧ್ಯಾಯ ಎಂ. ಬಾಬು ವರದಿ ಓದಿದರು.

ಪದಾಧಿಕಾರಿ ಆಯ್ಕೆ

ಹೊಸಪೇಟೆ, ಮಾ. 21-ಭಾರತೀಯ ಖನಿಜ ಮತ್ತು ಲೋಹ ವ್ಯಾಪಾರಸಂಸ್ಥೆ (ಎಂ. ಎಂ. ಟಿ. ಸಿ) ಯ ಹೊಸಪೇಟೆ ವಿಭಾಗದ ಕನ್ನಡ ಬಳಗದ ಪದಾಧಿಕಾರಿಗಳಾಗಿ ಬಿ. ಎಂ. ಶಶಿಧರ ಗುಪ್ತ (ಅಧ್ಯಕ್ಷ), ಎ. ಕೃಷ್ಣಮೂರ್ತಿರಾವ್ (ಉಪಾಧ್ಯಕ್ಷ), ಎಚ್. ಸಿದ್ದಪ್ಪ (ಕಾರ್ಯದರ್ಶಿ), ಎಲ್. ಎಸ್.ಆರ್. ನಾಯಕ್ (ಸಹಕಾರ್ಯದರ್ಶಿ), ಜಿ. ಆರ್. ಸತ್ಯನಾರಾಯಣ (ಖಜಾಂಚಿ), ಆರ್. ರಾಜ (ಸಂಚಾಲಕ) ಹಾಗೂ 5 ಜನ ಕಾರ್ಯಕಾರಿ ಸಮಿತಿ ಸದಸ್ಯರು ಆಯ್ಕೆಯಾಗಿದ್ದಾರೆ.

ಕಲಾ-ಗಂಗೋತ್ರಿ ವಾರ್ಷಿಕೋತ್ಸವ

ಸೋಮೇಶ್ವರ, ಮಾ. 21- ಸಮಾಜ ಸೇವೆ, ಲಲಿತಕಲೆಗಳ ಅಭ್ಯಾಸ, ಪುಸ್ತಕ ಭಂಡಾರ ಮತ್ತು ವಾಚನಾಲಯ ಹಾಗೂ ಯಕ್ಷಗಾನದ ಅಧ್ಯಯನ-ಅಭ್ಯಾಸಗಳಿಗಾಗಿ ಹುಟ್ಟಿಕೊಂಡ ಇಲ್ಲಿನ ಕಲಾ ಗಂಗೋತ್ರಿಯ ವಾರ್ಷಿಕೋತ್ಸವವು ಇತ್ತೀಚೆಗೆ ಜರಗಿತು.

ಯಕ್ಷಗಾನ ಕಲಾವಿದ ಅನೆಗುಂಡಿ ಗಣಪತಿ ಭಟ್ ಅವರನ್ನು ಅಧ್ಯಕ್ಷತೆ ವಹಿಸಿದ್ದ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು ಶಾಲು ಹೊದಿಸಿ ಫಲ ತಾಂಬೂಲಗಳೊಂದಿಗೆ ಸಾಂಕೇತಿಕ ನಿಧಿ 5000 ರೂ. ನೀಡಿ ಸನ್ಮಾನಿಸಿದರು.

ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ। ಬಿ. ಎ. ವಿವೇಕ ರೈ ನೆನಪಿನ ಸಂಚಿಕೆ 'ಯಕ್ಷ ವಂದನಾ'ವನ್ನು ಬಿಡುಗಡೆ ಮಾಡಿದರು.

ಮಂಗಳೂರಿನ ಸಾಂಗಿ ಅಧಿಕಾರಿ ಟಿ. ಶ್ಯಾಮ ಭಟ್ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು.

ಅಮೃತ ಸೋಮೇಶ್ವರ ಸನ್ಮಾನಿತರ ಅಭಿನಂದನಾ ಭಾಷಣ ಮಾಡಿದರು.

ಕಲಾಗಂಗೋತ್ರಿಯ ಅಧ್ಯಕ್ಷ ಕೆ ಸದಾಶಿವ ಮಾಸ್ಟರ್ ಸ್ವಾಗತಿಸಿದರು.

ಬಸ್ ಢಿಕ್ಕಿ

ಉಡುಪಿ, ಮಾ. 21-ಕಟಪಾಡಿ ಸಮೀಪದ ಮೂಡಬೆಟ್ಟು ಎಂಬಲ್ಲಿ ಮಾ 19ರಂದು ಖಾಸಗಿ ಬಸ್ಸೊಂದು ಪಾದಚಾರಿ ಹರೀಶ್ (16) ಎಂಬಾತನಿಗೆ ಢಿಕ್ಕಿ ಹೊಡೆದು, ಗಾಯಾಳುವನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಗ್ರಾಮಾಂತರ ಠಾಣೆಯ ಪಿ. ಎಸ್. ಐ. ಪಾವ್ರಾಜ್‌ರವರು ಬಸ್ಸಿನ ಚಾಲಕನ ಮೇಲೆ ಮೊಕದ್ದಮೆ ದಾಖಲು ಮಾಡಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಪ್ರತಿಭಾ ಪುರಸ್ಕಾರ

ಮಂಗಳೂರು, ಮಾ. 21- ನಗರದ ಬಲ್ಮಠ ಶಿಕ್ಷಕ ತರಬೇತಿ ಸಂಸ್ಥೆಯ ಶಿಕ್ಷಣ ವಿದ್ಯಾರ್ಥಿನಿಯರಿಗೆ ಮತ್ತು ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿನಿಯರಿಗೆ ಸಂಸ್ಥೆಯ ಅಭಿವೃದ್ಧಿ ಸಮಿತಿಯಿಂದ ಕೊಡಲಾದ ವಿದ್ಯಾರ್ಥಿವೇತನ ಮತ್ತು ಪ್ರತಿಭಾ ಪುರಸ್ಕಾರ ವಿತರಣೆಯ ಸಮಾರಂಭ ಇತ್ತೀಚೆಗೆ ಸಮಿತಿ ಅಧ್ಯಕ್ಷ, ಶಾಸಕ [illegible] ಎಂ. ಡಿಸೋಜಾರ ಅಧ್ಯಕ್ಷತೆಯಲ್ಲಿ ಜರಗಿತು.

ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿನಿಯರ ಪ್ರತಿಭಾ ಪುರಸ್ಕಾರವನ್ನು [illegible] ಸಮಿತಿ [illegible] ವಿದ್ಯಾರ್ಥಿನಿಯರಿಗೆ [illegible] ಶಿಕ್ಷಕಿ [illegible] ಅಧ್ಯಕ್ಷ [illegible] ಹಾಗೂ ಹಳೆ ವಿದ್ಯಾರ್ಥಿ ಸಂಘದ ವಿದ್ಯಾರ್ಥಿ ವೇತನವನ್ನು [illegible] ಎಸ್. [illegible] ವಿತರಿಸಿದರು.

ಅಭಿವೃದ್ಧಿ [illegible] ಮಾಜಿ ಅಧ್ಯಕ್ಷ [illegible] ಹಳೆ ವಿದ್ಯಾರ್ಥಿ ಸಂಘದ [illegible] ಹಾಗೂ [illegible] ಉಪಸ್ಥಿತರಿದ್ದರು.

ಪ್ರ ಶಿಕ್ಷಕಿಯರಾದ ಟಿ. ಮೈಥಿಲಿ, ಶಿರಿನ್ ಇ. ಆ್ಯಂಡ್ರ್ಯೂಸ್ ಮತ್ತು ಸಿಸಿಲಿಯಾ ಸಲ್ಡಾನಸ್ ಬಹುಮಾನಿತರ ಹೆಸರು ಓದಿದರು.

ಸಂಸ್ಥೆಯ ಅಧಿಕಾರಿ ಎ ಶಿವಪ್ಪ ಪೂಜಾರಿ ಸ್ವಾಗತಿಸಿದರು. ಪ್ರ ಶಿಕ್ಷಕರಾದ ಬಿ. ಭಾಸ್ಕರ ಶೆಟ್ಟಿ ವಂದಿಸಿದರು ಮತ್ತು ಎಂ. ಎಂ. ಪ್ರಭು ಕಾರ್ಯಕ್ರಮ ನಿರ್ವಹಿಸಿದರು.

ಮೂಡಬಿದ್ರೆ ಪುರಸಭಾ ಕಚೇರಿ ಸ್ಥಳಾಂತರ

ಮೂಡಬಿದ್ರೆ, ಮಾ. 21- ಮೂಡಬಿದ್ರೆಯ ಪುರಸಭೆ ಕಚೇರಿ ಇರುವ ಸ್ಥಳ [illegible] ವಾಣಿಜ್ಯ ಸಂಕೀರ್ಣ [illegible] ಆಗುತ್ತಿರುವುದರಿಂದ, [illegible] ಇರುವ ಕಟ್ಟಡವನ್ನು [illegible] ಪುರಸಭಾ ಕಚೇರಿ [illegible] ರಸ್ತೆ [illegible] ಹಿರಿಯ ಪ್ರಾಥಮಿಕ ಶಾಲೆಯ [illegible] ಇರುವ [illegible] ಸ್ಥಳಾಂತರಿಸಲಾಗಿದೆ ಎಂದು ಪುರಸಭಾ ಮುಖ್ಯಾಧಿಕಾರಿ ಎಸ್. ಎನ್. ಕಾಮತ್ ತಿಳಿಸಿದ್ದಾರೆ.

ಪುರಸಭೆಯು ತೆರಿಗೆ ಪಾವತಿದಾರರು 1987-88ರ ಸಾಲಿನ ವರೆಗಿನ [illegible] ಅರ್ಥಿಕ ವರ್ಷ ಮಾ. 31 [illegible] ಪಾವತಿಸಿ ಸಹಕರಿಸಬೇಕೆಂದು ತಿಳಿಸಿದ್ದಾರೆ.

[illegible]

'ವಿಶ್ವ ಮಾನವ' ಪ್ರಶಸ್ತಿಗೆ ಗ್ರಂಥ ಆಹ್ವಾನ

ಮೈಸೂರು, ಮಾ 21- ದೇ ಜ ಗೌ. ಟ್ರಸ್ಟ್ ವತಿಯಿಂದ 1985-86 ಹಾಗೂ 87ರ ಸಾಲಿನಲ್ಲಿ ಮೊದಲ ಬಾರಿಗೆ ಪ್ರಕಟವಾದ ಕನ್ನಡದ ಅತ್ಯುತ್ತಮ ಜೀವನ ಚರಿತ್ರೆಗೆ 11 ಸಾವಿರ ರೂ. ಮೊತ್ತದ 'ವಿಶ್ವ ಮಾನವ' ಪುರಸ್ಕಾರವನ್ನು ನೀಡಲಾಗುತ್ತದೆ.

ಗ್ರಂಥಕರ್ತರು ತಮ್ಮ ಕೃತಿಯ ಮೂರು ಪ್ರತಿಗಳನ್ನು ಏ. 20 ರೊಳಗೆ ದೇಜಗೌ ಟ್ರಸ್ಟ್, ಕಲಾನಿಲಯ, [illegible] ಲಕ್ಷ್ಮೀಪುರಂ, ಮೈಸೂರು ಈ ವಿಳಾಸಕ್ಕೆ ಕಳುಹಿಸಬಹುದು.

ಸಾಹಿತಿಗಳು ಮತ್ತು ವಿಮರ್ಶಕರು ತಮ್ಮ ಗಮನಕ್ಕೆ ಬಂದ ಉತ್ತಮ ಕೃತಿಗಳನ್ನು ಶಿಫಾರಸು ಮಾಡಬೇಕೆಂದು ಸಂಚಾಲಕ ಡಾ॥ ಜಿ. ಶಶಿಧರ ಪ್ರಸಾದ್ ತಿಳಿಸಿದ್ದಾರೆ.

ವಾರ್ಷಿಕೋತ್ಸವ

ಮುಂಬಯಿ, ಮಾ. 21 ಇಲ್ಲಿನ ವಿದ್ಯಾದಾಯಿನಿ ಸಭೆಯ 67ನೇ ವಾರ್ಷಿಕೋತ್ಸವ ಮತ್ತು ಕೆನರಾ ವಿದ್ಯಾದಾಯಿನಿ ರಾತ್ರಿ ಪ್ರೌಢ ಶಾಲೆಯ ಬಹುಮಾನ ವಿತರಣಾ ಸಮಾರಂಭವು ಇತ್ತೀಚೆಗೆ ಪ್ರಾವಸ್ ಜೀ ಕವಾಸ್ಜೀ ಸಭಾ ಗೃಹದಲ್ಲಿ ಡಾ॥ ನವೀನ್ ಕುಮಾರರ ಅಧ್ಯಕ್ಷತೆಯಲ್ಲಿ ಜರಗಿತು.

ಸದ್ರಿ ಶಾಲೆಯಲ್ಲಿ ಶಿಕ್ಷಣ ಪಡೆದ ಮುಂಬೈನ ಭಾರತ್ ಕೋಚ್ ಬಿಲ್ಡರ್ಸ್‌ನ ಮಾಲೀಕ ಸದಾಶಿವ ಎಸ್. ಶೆಟ್ಟಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಶಾಲಾ ಸ್ಕೌಟ್‌ದಳ ಮತ್ತು ವಿದ್ಯಾದಾಯಿನಿ ಸೇವಾ ದಳದವರು ಅತಿಥಿಗಳಿಗೆ ಗೌರವ ರಕ್ಷೆ ನೀಡಿ ಸ್ವಾಗತಿಸಿದರು.

ವಿದ್ಯಾದಾಯಿನಿ ಸಭೆಯ ಅಧ್ಯಕ್ಷ ಆರ್. ಕೆ. ಮುಲ್ಕಿ ಸ್ವಾಗತ ಭಾಷಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಟಿ. ಗೋಪಾಲ ಬೆಲ್ಚಡ ವರದಿ ಓದಿದರು. ಶಾಲೆಯ ಪರವಾಗಿ ಶಿಕ್ಷಕ ರವೀಂದ್ರ ಎನ್. ಶೆಟ್ಟಿ ಮತ್ತು ವಿದ್ಯಾದಾಯಿನಿ ಸಭೆಯ ಪರವಾಗಿ ಜೆ. ಎಂ. ಕೋಟಿಯಾನ್ ವಂದಿಸಿದರು.

ಕೊನೆಯಲ್ಲಿ ಶಾಲಾ ವಿದ್ಯಾರ್ಥಿಗಳಿಂದ ಮನರಂಜನಾ ಕಾರ್ಯಕ್ರಮವಾಗಿ 'ಪರಕೆದ ಕೋಲ'ವನ್ನು ಆಡಿ ತೋರಿಸಲಾಯಿತು. 'ನ್ಯಾಯ ಎಲ್ಲಿದೆ?' ಎಂಬ ಕನ್ನಡ ಚಲನ ಚಿತ್ರ ಪ್ರದರ್ಶನವೂ ಇತ್ತು.

15 ಜನರಿಗೆ ಮುಖ್ಯಮಂತ್ರಿ ನೆರವು

(ಮುಂಗಾರು ವಾರ್ತೆ)

ಬೆಳ್ತಂಗಡಿ, ಮಾ. 21- ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಕಸಬಾ ಗ್ರಾಮದ ಕೊಂಬೆಟ್ಟುವಿನ ನಿವಾಸಿ ರಾಮಭಟ್ಟರ ಮಗ ಸುಬ್ರಹ್ಮಣ್ಯ ಭಟ್ ಅವರ ಹೃದ್ರೋಗ ಶಸ್ತ್ರಚಿಕಿತ್ಸೆಗಾಗಿ ಮುಖ್ಯಮಂತ್ರಿಯವರು ತಮ್ಮ ಪರಿಹಾರ ನಿಧಿಯಿಂದ 5000 ರೂ. ಮಂಜೂರು ಮಾಡಿರುವುದಾಗಿ ಶಾಸಕ ವಸಂತ ಬಂಗೇರ ತಿಳಿಸಿದ್ದಾರೆ.

ಬೆಳ್ತಂಗಡಿ ತಾಲೂಕಿನ ಈ ಕೆಳಗೆ ಹೆಸರಿಸಿದವರಿಗೆ ಅನಾರೋಗ್ಯ, ಬಡತನ, ಆಕಸ್ಮಿಕ ಬೆಂಕಿ ಅನಾಹುತದ ನಷ್ಟದ ಸಲುವಾಗಿ ಮುಖ್ಯಮಂತ್ರಿಯವರು ತಮ್ಮ ಪರಿಹಾರ ನಿಧಿಯಿಂದ ಹಣ ಮಂಜೂರು ಮಾಡಿದ್ದಾರೆ.

ಶ್ರೀಮತಿ ಆಸಮ್ಮ, ಅಬ್ದುಲ್ ರಹಮಾನ್‌ರ ಪತ್ನಿ ಎಸ್.ಕೆ. ಮನೆ ಉಜಿರೆ, ರತ್ನಾವತಿ, ಲಕ್ಷ್ಮಣ ನಾಯ್ಕರ ಪತ್ನಿ ಕಲ್ಲೇರಿ, ಪ್ರಮತಿ, ಗಿರಿಯಪ್ಪ ಪೂಜಾರಿ ಅವರ ಪತ್ನಿ ಕರಾಯ, ಜೋನ್ ಪಾಯಸ್ ನಾಗಾಜೆ- ನಾವೂರು ಗ್ರಾಮ, ಡೀಕಮ್ಮ ಗೌಡ, ನ್ಯಾಯತರ್ಪು ಗ್ರಾಮ, ಮಹಾಬಲ ಶೆಟ್ಟಿ, ಬಿ. ಸಡಗ್ರಾಮ, ಹಾಷಿಂ ಬ್ಯಾರಿ ಸೋಣಂದೂರು ಗ್ರಾಮ ಗೋವಿಂದ ಸಪಲ್ಯ ಗಾರ ಅಳ್ಯಲ ಗ್ರಾಮ, ಎ. ಉಜಿರೆ ಬಡಗ ಕರಂದೂರು, ಸಾಧು ಪೂಜಾರಿ ಶಿರ್ಲಾಲು ಗ್ರಾಮ, ಗಂಗಣ್ಣ ಪೂಜಾರಿ ಬಿನ್ ಪದ್ಮ ಪೂಜಾರಿ ನಾಲೂರು ಗ್ರಾಮ ಸುಂದರಿ ಪೆಂಗ್ಸ, ಕೆಯ್ಯೂರು ಗ್ರಾಮ ಇವರಿಗೆ ತಲಾ 1000 ರೂ. ಗಣಂತೆ, ವಿಜಯ, ಕಳಿಯ ಗ್ರಾಮ, ನೋಣಯ್ಯ ಶೆಟ್ಟಿ, ಅಳ್ಯಲ ಗ್ರಾಮ ಇವರಿಗೆ ತಲಾ 2000 ರೂ. ನಂತೆ ಬಿಡುಗಡೆ ಮಾಡಲಾಗಿದೆ.

ಮೇಲಿನವರಿಗೆ ಕ್ಲುಪ್ತ ಸಮಯದಲ್ಲಿ ಪರಿಹಾರ ಒದಗಿಸಿರುವುದಕ್ಕೆ ಶಾಸಕ ವಸಂತ ಬಂಗೇರ ಅವರು ಮುಖ್ಯಮಂತ್ರಿಯವರನ್ನು ಅಭಿನಂದಿಸಿದ್ದಾರೆ.

ಮಹಾಸಭೆ

ಮಂಗಳೂರು, ಮಾ. 21- ಸೂರ್ಯಕಿರಣ್ ಫ್ರೆಂಡ್ಸ್ ಸರ್ಕಲ್, ಅತ್ತಾವರ ಬಾಬುಗುಡ್ಡೆ, ಇದರ ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಪೂರ್ಣ ಪ್ರಕಾಶ್ ಹೋಟೆಲ್‌ನಲ್ಲಿ ಜರಗಿತು

ಗಿರೀಶ್ ವಾರ್ಷಿಕ ವರದಿ ಓದಿದರು. ಅಸ್ಕರ್ ವಂದಿಸಿದರು.

ನೂತನ ಸಾಲಿನ ಪದಾಧಿಕಾರಿಗಳಾಗಿ ಈ ಕೆಳಗಿನವರನ್ನು ಆರಿಸಲಾಯಿತು.

ವಿನ್ಸೆಂಟ್ ಕುಂದರ್ (ಅಧ್ಯಕ್ಷ) ಗಂಗಾಧರ (ಉಪಾಧ್ಯಕ್ಷ), ಚಂದ್ರ (ಕಾರ್ಯದರ್ಶಿ), ಅಸ್ಕರ್, ನಾರಾಯಣ (ಜತೆ ಕಾರ್ಯದರ್ಶಿ) ಗಿರೀಶ್ (ಖಜಾಂಚಿ), ಕುಮಾರಸ್ವಾಮಿ (ಕ್ರೀಡಾ ಕಾರ್ಯದರ್ಶಿ), ಅಶೋಕ್ ರಾಜನ್ (ಲೆಕ್ಕ ಪರಿಶೋಧಕ) ಹಾಗೂ 5 ಮಂದಿ ಸದಸ್ಯರು.



ಯುವಜನರಿಗೆ ಜಿಲ್ಲಾ ಮಟ್ಟದ ತರಬೇತಿ ಶಿಬಿರ

ಸವಣೂರು, ಮಾ. 21 - ಕರ್ನಾಟಕ ರಾಜ್ಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯು ಸವಣೂರು ಯುವಕ— ಯುವತಿ ಮಂಡಲದ ಸಹಯೋಗದೊಂದಿಗೆ ದ. ಕ. ಜಿಲ್ಲೆಯ ಪ್ರತಿ ತಾಲೂಕಿನಿಂದ ಆಯ್ದ 10 ಯುವಕರು ಮತ್ತು ಐದು ಯುವತಿಯರು ಸೇರಿದಂತೆ ಒಟ್ಟು 120 ಮಂದಿಗೆ 5 ದಿನಗಳ ಶ್ರಮದಾನ ಹಾಗೂ ತರಬೇತಿ ಶಿಬಿರವನ್ನು ಏರ್ಪಡಿಸಿದೆ.

ಶಿಬಿರವು ಮಾ. 27ರಿಂದ 31ರ ವರೆಗೆ ಪುತ್ತೂರು ತಾಲೂಕಿನ ಸವಣೂರಿನಲ್ಲಿ ಜರಗಲಿದೆ ಎಂದು ಸಂಚಾಲಕ ಹಾಗೂ ಯುವಕ ಸಂಘದ ಅಧ್ಯಕ್ಷ ಕೆ. ಸೀತಾರಾಮ ರೈ ಇತ್ತೀಚೆಗೆ ಇಲ್ಲಿ ಪತ್ರಿಕಾ ಗೋಷ್ಠಿಯೊಂದರಲ್ಲಿ ತಿಳಿಸಿದ್ದಾರೆ.

ಶಿಬಿರದಲ್ಲಿ ಸಹಕಾರೀರಂಗ, ಕೃಷಿರಂಗ, ಗ್ರಾಮ ರಕ್ಷಣೆ, ಉಚಿತ ಕಾನೂನು ನೆರವು ಪಂಚಾಯತ್ ಹಾಗೂ ಕ್ರೀಡೆಯಲ್ಲಿ ಯುವಜನರ ಪಾತ್ರ ಎಂಬ 6 ವಿಷಯಗಳ ಬಗ್ಗೆ ತರಬೇತಿ ಮತ್ತು ಮಾಹಿತಿ ನೀಡಲಾಗುವುದು.

ಈ 5 ದಿನಗಳಲ್ಲಿ ಸವಣೂರು ಸರ್ಕಾರಿ ಪ್ರೌಢಶಾಲೆಗೆ ಆಟದ ಮೈದಾನ ರಚಿಸಿ ಕೊಡಲಾಗುವುದು. ಭಾಗವಹಿಸುವ ಯುವಜನರ ಊಟ, ವಸತಿ, ಹಾಗೂ ಬರುವ ಹೋಗುವ ಪ್ರಯಾಣ ಭತ್ಯೆಯನ್ನು ತಮ್ಮ ಸಂಘವೇ ವಹಿಸಿಕೊಳ್ಳುತ್ತದೆ ಎಂದು ರೈ ತಿಳಿಸಿದರು.

ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಲು ಊರ ಹಿರಿಯ ಮುಖಂಡ ಡಿ. ನಾರಾಯಣ ರೈಯವರ ಅಧ್ಯಕ್ಷತೆಯಲ್ಲಿ 7 ಜನರ ಸ್ವಾಗತ ಸಮಿತಿಯಲ್ಲದೆ ಆಹಾರ ಶ್ರಮದಾನ, ವಸತಿ, ಸಾಂಸ್ಕೃತಿಕ ಮತ್ತು ಸಭಾ ಕಾರ್ಯಕ್ರಮ ಎಂಬೀ 5 ಇತರ ಸಮಿತಿಗಳನ್ನು ರಚಿಸಲಾಗಿದೆ.

ಶಿಬಿರವನ್ನು 27 ರಂದು ಜಿಲ್ಲಾ ಉಸ್ತುವಾರಿ ಸಚಿವ ಅಮರನಾಥ ಶೆಟ್ಟರ ಅಧ್ಯಕ್ಷತೆಯಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಸಚಿವ ಬಿ. ಎಲ್. ಶಂಕರ್ ಉದ್ಘಾಟಿಸುವರು. ಸುಳ್ಯ ಶಾಸಕ ಕೆ. ಕುಶಲ ಮುಖ್ಯ ಅತಿಥಿಯಾಗಿ ಭಾಗವಹಿಸುವರು.

ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ಪರಿಷತ್ ಉಪಾಧ್ಯಕ್ಷೆ ಕೆ. ಎಂ. ಪ್ರಭಾದೇವಿ, ಜಿಲ್ಲಾ ಪರಿಷತ್ತಿನ ಕಾಮಗಾರಿ ಅಧ್ಯಕ್ಷ ಬಿ. ಸಂಕಪ್ಪ ರೈ, ಜಿ. ಪ. ಸದಸ್ಯ ಬಿ. ಅಪ್ಪಣ್ಣ ಹೆಗ್ಡೆ, ಎಸ್. ಮೀನಾಕ್ಷಿ ಗೌಡ ಅವರು ಭಾಗವಹಿಸಲಿದ್ದಾರೆ ಎಂದು ಸೀತಾರಾಮ ರೈ ತಿಳಿಸಿದರು.

ಪತ್ರಿಕಾ ಗೋಷ್ಠಿಯಲ್ಲಿ ಪುತ್ತೂರಿನ ಸಹಾಯಕ ಯುವಜನ ಸೇವಾಧಿಕಾರಿ ಕೆ. ಶಂಕರ ನಾಯ್ಕ್ ಅವರೂ ಉಪಸ್ಥಿತರಿದ್ದರು.

ಗುಲ್ಬರ್ಗ ಜನತೆಗೆ ಯುಗಾದಿ ಕೊಡುಗೆ

ಗುಲ್ಬರ್ಗ, ಮಾ. 21- ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳನ್ನೊಳಗೊಂಡಂತೆ 26 ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಹೈದರಾಬಾದ್-ಕರ್ನಾಟಕ ಎಜ್ಯುಕೇಷನ್ ಸೊಸೈಟಿಯು ಗುಲ್ಬರ್ಗ ನಾಗರಿಕರಿಗೆ ಯುಗಾದಿಯ ಕೊಡುಗೆಯಾಗಿ ವಿಶ್ವೇಶ್ವರ ಆಸ್ಪತ್ರೆ ನಿರ್ಮಿಸುವ ಭರವಸೆಯನ್ನು ನೀಡಿದೆ.

ಶರಣ ಬಸವೇಶ್ವರ ಸಂಸ್ಥಾನದ ಪೀಠಾಧಿಪತಿ ಶರಣ ಬಸವಪ್ಪ ಅವರು ಭೂಮಿ ಪೂಜೆ ನೆರವೇರಿಸಿದರು. ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಸವರಾಜ ದೊಡ್ಡಪ್ಪ ಅಪ್ಪ ಸ್ವಾಗತಿಸಿದರು.

[illegible] ಸಿದ್ಧ ಪಡಿಸುತ್ತಿದೆ ಎಂದು ಧಾರ್ಮಿಕ ದತ್ತಿ ಖಾತೆ ರಾಜ್ಯ ಸಚಿವ ಕೆ. ಅಮರನಾಥ ಶೆಟ್ಟಿ ತಿಳಿಸಿದ್ದಾರೆ.

ಮೀಸಲಾತಿ ಬಗ್ಗೆ ವಿಚಾರ ಗೋಷ್ಠಿ

ಮಂಗಳೂರು, ಮಾ. 21- ನಗರದ ದ್ರಾವಿಡ ಬ್ರಾಹ್ಮಣರ ಅಸೋಸಿಯೇಶನ್ ಇದರ ಆಶ್ರಯದಲ್ಲಿ ಇತ್ತೀಚೆಗೆ ರಾಜ್ಯದ ಮೀಸಲಾತಿ ನೀತಿಯ ಬಗ್ಗೆ ವಿಚಾರ ಗೋಷ್ಠಿಯನ್ನು ನಡೆಸಿತು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಬಿ. ಎನ್. ವಿ. ಸುಬ್ರಹ್ಮಣ್ಯಂ ಅವರು ಮಾತನಾಡಿ ಅನಾದಿಕಾಲದಿಂದಲೂ ಯಾರ ಹಂಗೂ ಇಲ್ಲದೆ ಹಿರಿಮೆಯಿಂದ ಬಾಳಿ ಬಂದವರ ಮೇಲೆ ಸರಕಾರವು ವಕ್ರ ದೃಷ್ಟಿ ಬೀರಿ ಬ್ರಾಹ್ಮಣರ ಬದುಕನ್ನೇ ಬವಣೆಯ ಕೂಪಕ್ಕೆ ತನ್ನ ಮೀಸಲಾತಿ ನೀತಿಯಿಂದ ತಳ್ಳಿದೆ. ಇದರಿಂದಾಗಿ ರಾಜ್ಯ ಸರಕಾರದ ಮೀಸಲಾತಿ ನೀತಿಯ ವಿರುದ್ಧ ಬ್ರಾಹ್ಮಣರು ಸುಪ್ರೀಂ ಕೋರ್ಟಿಗೆ ರಿಟ್ ಸಲ್ಲಿಸಬೇಕಾಗಿ ಬಂತು ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಟಿ. ಪಿ. ರಾವ್ ಅವರು ಮಾತನಾಡಿ ಸಂಘಟಿತ ಹೋರಾಟಕ್ಕೆ ಮುಂದಾದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾವು ಈ ಮೀಸಲಾತಿ ನೀತಿಯ ಕಟ್ಟಳೆಯನ್ನು ಸಡಿಲಗೊಳಿಸಲು ಸಮಾಜ ಬಾಂಧವರು ಸಹಕರಿಸಬೇಕೆಂದು ವಿನಂತಿಸಿದರು.

ಖೇತಾನ್ 3 ಅಪ್ ಫ್ಯಾನ್‌ಗಳು

1 ಅಪ್
ತಂಗಾಳಿ ತರುವ ಉತ್ತಮ ಫ್ಯಾನ್
2 ಅಪ್
ದಕ್ಷತೆ ಮತ್ತು ಸುಪ್ರಸಿದ್ಧ
3 ಅಪ್
ನಂಬಿಕೆಗೆ ಪಾತ್ರವಾದ ಫ್ಯಾನ್



"ಅದಕ್ಕಾಗಿಯೇ ನಾನು ಖೇತಾನ್ ಅಭಿಮಾನಿ"
— ಹೇಮಮಾಲಿನಿ

ಇಲ್ಲಿ ದೊರೆಯುವುದು
ಮೆ॥ ಶ್ರೀ ಸಾಯಿ ಸಿಂಡಿಕೇಟ್
ಮೈನ್‌ರೋಡ್, ಕಾರವಾರ-581 301
ಫೋ: 505

ಮೆ॥ಹ್ಯಾಪಿ ಹೋಮ್ ಏಜನ್ಸೀಸ್
ಬಜಾರ್ ರೋಡ್,
ಹೊನ್ನಾವರ-581 334 ಫೋ: 298

ಸಮಾಜವಾದದತ್ತ ಭಾರತೀಯ ದಾರಿ



(ನಿನ್ನೆಯ ಸಂಚಿಕೆಯಿಂದ)

ಸಂಪತ್ತಿನ ಸಂಪ್ರದಾಯ ಸಾಮಾಜಿಕ ಆಸ್ತಿಯನ್ನು ಕೆಲವೇ ಜನರ ಆಸ್ತಿಯಾಗಿ ಪರಿವರ್ತಿಸುತ್ತದೆ. ಆಗ ಅದು ಖಾಸಗಿ ಆಸ್ತಿಯಾಗಿ ಪರಿಣಮಿಸುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಸಂಪತ್ತಿನ ಬಗೆಗಿನ ಮೋಹ ಕಡಿದು ಹಾಕುವ ಪ್ರಯತ್ನ ನಡೆಯಿತು. ಮಾರ್ಕ್ಸ್ ಖಾಸಗಿ ಆಸ್ತಿಯನ್ನೂ ಕೊನೆಗೊಳಿಸಲು ಪ್ರಯತ್ನಿಸಿದ. ಭಾರತೀಯ ಸಂಸ್ಕೃತಿ ತನ್ನ ಉದ್ದೇಶದಲ್ಲಿ ಸೋತಿದೆ. ಒಂದು ಕಂಟಿಯ ಮೇಲೆ ನಡೆವಲ್ಲಿ ಮಾರ್ಕ್ಸ್ ವಾದವೂ ಸೋಲುತ್ತದೆ. ಬರುವ ವರ್ಷಗಳಲ್ಲಿ ಅದು ಇನ್ನೂ ಹೆಚ್ಚಾಗಿ ಸೋಲುವುದನ್ನೂ ಕಾಣಬಹುದು. ಈಗಾಗಲೇ ರಶ್ಯದಿಂದ ಸಿಗುವ ಉದಾಹರಣೆಗಳಿಂದ ...

... ತಯ ಶೋಷಣೆಗಳೂ ಉತ್ಪಾದನೆಯನ್ನು ದೃಷ್ಟಿಯಲ್ಲಿಟ್ಟು ಕೊಂಡೇ ಹೊರ ಹೊಮ್ಮಿದೆ. ನಾವು ಅದರ ಜೊತೆಯಲ್ಲಿ ಹಂಚಿಕೆಯ ಸಮಸ್ಯೆಯನ್ನೂ ಕುರಿತು ಚರ್ಚಿಸಿದರೆ, ಈ ವೇಳೆಗಾಗಲೇ ನಾವು ಸಾಕಷ್ಟು ಪ್ರಗತಿ ಸಾಧಿಸಬಹುದಾಗಿತ್ತು. ಕಡು ಬಡ ರಾಷ್ಟ್ರಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಅಥವಾ ಪ್ರತಿಯೊಂದು ಪರಿವಾರದ ಖರ್ಚು ಅಥವಾ ಆದಾಯಕ್ಕೆ ಒಂದು ನಿಗದಿಯಾದ ಮಿತಿ ಇರಬೇಕು. ದೇಶದ ಹಣ ವ್ಯರ್ಥ ವೆಚ್ಚವಾಗಬೇಕು. ಕರಾಚಿಯ ನಿರ್ಣಯದಲ್ಲಿ ಈ ವಿಚಾರವೂ ಕೂಡಿತ್ತು ಎಂಬುದನ್ನು ನಾವೀಗ ನೆನಪು ಮಾಡಿಕೊಳ್ಳಬಹುದು. ಆಗ ತಿಂಗಳಿಗೆ 500ರೂಪಾಯಿಗಳ ಮಿತಿ ಅತಿ ಅವಾಸ್ತವವೆಂದು ಸಿದ್ಧವಾಯಿತು. ಅದನ್ನು ಕಾರ್ಯರೂಪಕ್ಕೆ ತರಲಾಗಲಿಲ್ಲ. ಮನುಷ್ಯನ ದುರಾಸೆಯೊಂದನ್ನು ಈ ಅಸಫಲತೆಗೆ ಕಾರಣವೆನ್ನಲಾಗದು. ಅಲ್ಲಿ ತಾರ್ಕಿಕವಾದ ದೋಷವಿತ್ತು. ಕರಾಚಿಯ ನಿರ್ಣಯ ಸೋತಿಲು ಅದು ಸತ್ಯದಿಂದ ದೂರವಾಗಿದ್ದುದಷ್ಟೆ ಕಾರಣವಲ್ಲ ಅದರ ನಿರ್ಣಯದಲ್ಲಿಯೇ ತರ್ಕ ದೋಷವಿತ್ತು. 1921ರಲ್ಲಿ ಇಂದಿಗೆ 35ವರ್ಷಗಳ ಹಿಂದೆ ಈ ನಿರ್ಣಯವನ್ನು ಮಂಡಿಸಲಾಗಿತ್ತು. ಅದರ ನುಸಾರವಾಗಿ ಮಂತ್ರಿಗಳು ಹಾಗೂ ಸರ್ಕಾರಿ ನೌಕರರ ವೇತನಗಳ ಗರಿಷ್ಠ ಮಿತಿ ತಿಂಗಳೊಂದಕ್ಕೆ 500ರೂಪಾಯಿ ಎಂದಿತ್ತು. ಜೊತೆಗೆ ...

... ಮಾರ್ಗಗಳಿದ್ದವು. ಅದರಲ್ಲೂ ವಿಶೇಷವಾಗಿ ಎರಡು ಮಾರ್ಗಗಳು ತೆರೆದಿದ್ದವು. ನಮ್ಮ ವಿಚಾರ ಶಕ್ತಿ ಒಂದು ತಪ್ಪು ಮಾಡಿತು. ಅದು ಒಂದು ವರ್ಗ ಆರಿಸಿಕೊಂಡು ಮಿಕ್ಕದ್ದನ್ನು ಬಿಟ್ಟು ಬಿಟ್ಟಿತು. ಅದರಿಂದ ಪರಿಸ್ಥಿತಿ ಇನ್ನೂ ಹದಗೆಟ್ಟಿತು. ದೇಶವನ್ನು ನವೀನೀಕರಿಸಬೇಕೆಂದು ದೊಡ್ಡ ಜನ ಹಾಗೂ ಸರ್ಕಾರಗಳು ನಿರ್ಣಯಿಸಿದವು. ಆದರೆ ಅವರು ಉತ್ಪಾದನೆಯ ನವೀನೀಕರಣದ ಕಡೆ ಗಮನಹರಿಸಲಿಲ್ಲ. ಇಷ್ಟೇ ಏಕೆ ಉತ್ಪಾದನೆಯನ್ನೂ ನವೀನೀಕರಿಸುವವರೆಗೆ ವ್ಯರ್ಥವಾದ ಖರ್ಚು ತಡೆಹಿಡಿಯಬೇಕು ಎಂದೂ ಅವರು ಯೋಚಿಸಲಿಲ್ಲ. ಅವರು ಉತ್ಪಾದನೆಯನ್ನೂ ಬಳಕೆಯನ್ನೂ ಎರಡನ್ನೂ ಒಟ್ಟಿಗೆ ನವೀನೀಕರಿಸಲು ಪ್ರಯತ್ನಿಸಿದರು.

ನಾನು ರಶ್ಯದಲ್ಲಿ ಅದ್ದನ್ನೆಲ್ಲ ಹೋಗುವುದಿಲ್ಲ. ಕೆಲವು ವಿಷಯಗಳಂತೂ ಅವಮಾನವೀಯವಾಗಿವೆ. ಆದರೆ ನಾನಿಲ್ಲಿ ಕೆಲವಂಶಗಳನ್ನು ಸ್ಪಷ್ಟ ಪಡಿಸಬಯಸುತ್ತೇನೆ. ಕ್ರಾಂತಿಯ ನಂತರ ರಶ್ಯದಲ್ಲಿ ಉತ್ಪಾದನೆಯನ್ನು ಕುರಿತ ಹಲವಾರು ಪ್ರಶ್ನೆಗಳು ಎದ್ದಾಗ ಅಲ್ಲಿ ಆರಂಭದಲ್ಲಿ ತನ್ನ ಸಂಪತ್ತನ್ನು ಹೆಚ್ಚು ಮಾಡಿಕೊಳ್ಳಲು ಗಾಂಧಿ ತತ್ವವಾದ ಸರಳತೆಗೇ ಹೆಚ್ಚು ಬೆಂಬಲಕೊಟ್ಟರು. ಆಗ ಜನ ಹಣಾವಂತ್ರಿನ ರೇಜರ್ ಅತಿ ಹೆಚ್ಚು ಬೆಲೆಯಿಂದೂ ಅದು ಕೆನ್ನೆ ಗಾಯ ಮಾಡುತ್ತದೆಯೆಂದೂ ...

... ಮಾಡಿದ್ದರೆ ನಾನು ಸುಮ್ಮನಿರುತ್ತಿದ್ದೆ. ಆದರೆ ಪ್ರತಿಯೊಬ್ಬನೂ ತನಗೆ ಸಾಧ್ಯವಾದಷ್ಟು ತನ್ನ ಮೇಲಿರುವ ವ್ಯಕ್ತಿಯನ್ನು ಅನುಸರಿಸಬಯಸುತ್ತಾನೆ. ರಾಜ್ಯದ ಮುಖ್ಯಮಂತ್ರಿ ಪ್ರಧಾನ ಮಂತ್ರಿಯನ್ನು ಅನುಕರಿಸ ಹೋಗುವುದಿಲ್ಲ ಎಂದು ನಾನೂ ಒಪ್ಪುತ್ತೇನೆ. ಆದರೂ ಯಥಾ ಶಕ್ತಿ ಅತ ಅನುಕರಿಸುತ್ತಾನೆ. ಮಂತ್ರಿ ಯಥಾ ಶಕ್ತಿ ಮುಖ್ಯ ಮಂತ್ರಿಯನ್ನು ಅನುಕರಿಸುತ್ತಾನೆ ನಂತರದಲ್ಲಿ ಅಧಿಕಾರಿ ವರ್ಗ, ತಹಸೀಲ್ದಾರ್ ಪಟವಾರಿ ಹೀಗೆ. ಪಟವಾರಿ ಸಾಮಾನ್ಯ ವ್ಯಕ್ತಿಗಳ ಪಂಕ್ತಿಯಲ್ಲಿ ಬರುತ್ತಾನಾದುದರಿಂದ ನಾವು ಅವನನ್ನು ಉಲ್ಲೇಖಿಸುವ ಅಗತ್ಯವಿಲ್ಲ. ಹೀಗೆ 50ರಿಂದ 60 ಲಕ್ಷ ದೊಡ್ಡ ಮನುಷ್ಯರು ಯುರೋಪ್ ಅಮೆರಿಕಾದದುಂದು ವೆಚ್ಚವನ್ನು ಅನುಕರಿಸ ಹೊರಟಿದ್ದಾರೆ. ನಾನು ಲೆಕ್ಕ ಹಾಕಿ ನೋಡಿದ್ದೇನೆ. ಸುಮಾರು 150 ರಿಂದ 200 ಕೋಟಿ ರೂಪಾಯಿ ಈ ತರಹದ ಅನುಕರಣೆಯಲ್ಲಿ ವ್ಯರ್ಥವಾಗಿ ವೆಚ್ಚವಾಗುತ್ತದೆ. ಈ ಹಣವನ್ನೆಲ್ಲ ಸುಲಭವಾಗಿಯೇ ಉಳಿಸಬಹುದು. ಈ ಹಣವನ್ನೆಲ್ಲ ರಾಷ್ಟ್ರೀಕರಣಗೊಳಿಸಿಯೇ ಅಥವಾ ಹೆಚ್ಚು ಕಂದಾಯ ವಸೂಲಿಯಿಂದ ತೆಗೆದುಕೊಳ್ಳುವ ಅಗತ್ಯವೇನಿಲ್ಲ. ಆದರೆ ಯಾವುದಾದರೂ ... ವನ್ನನುಸರಿಸಿ ಲಾಭ ಜನರ ಕೈ ಸೇರದೆಯೆ ಅವರ ಲೆಕ್ಕಕ್ಕೆ ಜಮೆ ಆಗುವಂತೆ ಏನಾದರೂ ಮಾಡಬೇಕು ಎಂದು ನಾನು ಸೂಚಿಸುತ್ತೇನೆ. ಮುಂದಿನ 10-20 ವರ್ಷಗಳವರೆಗೆ ಅವರಿಗೆ ಲಾಭ ಬರಬಾರದು. ಅದು ಅವರ ಹೆಸರಿಗೆ ಜಮೆ ...

... ವ್ಯವಸ್ಥೆ ಹೇಗೆ ಅಸ್ತಿತ್ವದಲ್ಲಿರಲು ಸಾಧ್ಯ ಎಂದೇ ನನಗೆ ಆಶ್ಚರ್ಯವಾಗುತ್ತದೆ. ಇದೊಂದು ಇಂದ್ರಜಾಲ ಅಷ್ಟೆ. ಒಂದು ಕಡೆ ನಮ್ಮ ಶೇಕಡಾ 60 ಮಂದಿ ದಿನ ಒಂದಕ್ಕೆ 2-4 ಆಣೆ ಸಂಪಾದಿಸುವ ಖರ್ಚು ಮಾಡುವ ಜನರೂ ಇದ್ದಾರೆ. ಏನೇ ಆದರೂ ಇದೊಂದು ಸಾಮಾನ್ಯ ರೂಪ ಅಷ್ಟೆ. ಪ್ರಪಂಚದಲ್ಲೆಲ್ಲೂ ಇಂದಂತಹ ವರ್ಗೀಕರಣ ಇದರ ಹಿಂದಿದೆ.

ಇಲ್ಲಿರುವಂತ ಅಸಮಾನತೆ ಎಲ್ಲೂ ಇಲ್ಲ. ಹಂತಗಳು ಎಲ್ಲೂ ಇಲ್ಲ. ಸಾಮಾನ್ಯವಾಗಿ ದೇಶ ಒಡತನದಿಂದ ಕೂಡಿದ್ದರೆ ಅಸಮಾನತೆಯೂ ಅಷ್ಟೇಹೆಚ್ಚಾಗಿರುತ್ತದೆ. ಆದರೆ ನಾವು ವಾಸ್ತವ ಸ್ಥಿತಿಯನ್ನು ನೋಡಿದಾಗ ವಿವರಣೆ ಅತಿ ನಿರಾಶಾದಾಯಕವಾಗಿರುತ್ತದೆ. 7ರಿಂದ 8 ರೂಪಾಯಿ ದಿನಗೂಲಿ ಪಡೆಯುವ ಕಾರ್ಮಿಕರೂ ಇದ್ದಾರೆ. ದಿನಕ್ಕೆ 10ರಿಂದ 15 ರೂಪಾಯಿ ಪಡೆಯುವ ಕೆಲವು ವರ್ಗಗಳವರೂ ಇಲ್ಲೇ ಇದ್ದಾರೆ ದಿನಕ್ಕೆ 10ರಿಂದ 15ರೂಪಾಯಿ ಪಡೆಯುವ ಕೆಲವು ವರ್ಗಗಳವರೂ

ಅನುವಾದ: ಹನುಮಂತ

ಇಲ್ಲೇ ಇದ್ದಾರೆ. ಇವರು ಎಣ್ಣೆ ಗಿರಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿರಬಹುದು. ಅಥವಾ ಕಬ್ಬಿಣದ ಕಾರ್ಖಾನೆ ಹಾಗೂ ಸಮುದ್ರದ ಬಂದರಿನ ಕಾರ್ಮಿಕರಿರಬಹುದು. ದಿನಕ್ಕೆ 2ರಿಂದ 2½ ರೂ ಮಾತ್ರ ಸಂಪಾದಿಸುವ ಕಾರ್ಮಿಕರೂ ಇಲ್ಲಿದ್ದಾರೆ. ಚಿಕ್ಕ ಪ್ರಮಾಣದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ದಿನಕ್ಕೆ 10ರಿಂದ ...

ಬಸ್ಸಿನಲ್ಲಿ ಧೂಮಪಾನ ನಿಷೇಧವೇಕಿಲ್ಲ ?

ಪ್ರಿಯರೆ,

...

ನೀರಿನ ಸಮಸ್ಯೆ

ಪ್ರಿಯರೆ,

...

ಓಲೆಕೋರ

ವೈದ್ಯರ ಕೊರತೆ

ಪ್ರಿಯರೆ,

...

—ಕೆ. ಜಗದೀಶ ಹೊಳ್ಳ

ವಾಮಪದವು ರಸ್ತೆಯ ವ್ಯಥೆಯ ಕಥೆ

ಪ್ರಿಯರೆ,

ನನ್ನ ಜನನವು 1950ನೇ ಇಸವಿಯ ...

ವೈದ್ಯರಿಲ್ಲದ ಆಸ್ಪತ್ರೆ

ಪ್ರಿಯರೆ,

...

ಚಿಂತನೆ

"ಬದುಕಿನ ಉದ್ದೇಶ ..."

ದಲಿತ ವಿದ್ಯಾರ್ಥಿಗಳ ಗೋಳಾಟಕ್ಕೆ ಕೊನೆ ಎಂದು?

ಜನವಾಣಿ

...

ಕರ್ನಾಟಕ ದಲಿತ ವಿದ್ಯಾರ್ಥಿ ಒಕ್ಕೂಟ ದ. ಕ. ಜಿಲ್ಲಾ ಘಟಕ

ಕನ್ನಡದಲ್ಲಿ ದಲಿತ ಸಾಹಿತ್ಯ: ಒಂದು ಟಿಪ್ಪಣಿ

'ಅಮಾಸ ಎಂಬುದು ಅಮಾಸನ ಹೆಸರು'
—ದೇವನೂರು, 1973, ಪು. 54

ಬಲಿಪ್ರಕ್ರಿಯ ವೇಳೆ ಭೂಮಿಯ ಸಕಲ ಬಂಗಾರದ ವಸ್ತುಗಳು ನೀರಿನಲ್ಲಿ ಮುಳುಗಿದ್ದರೂ ಒಂದು ದೋಲು ಮಾತ್ರ ತೇಲುತ್ತಿತ್ತು ಎಂಬ 'ಇಲ್ಲದಲ್ಲಿ ಕೇಳಿದ್ದ ಜನಪದ ಕತೆ ನೆನಪಾಗುತ್ತದೆ. ಈ ದೋಲು ದಲಿತ ಕಲೆಯ, ದಲಿತಚೇತನದ ಅದಮ್ಯ ಶಕ್ತಿ ಪ್ರಭಾವಗಳ ಪ್ರತೀಕವಾಗಿದೆ ಎಂದು [illegible] ಭಾವನೆ. ಹಾಲಕ್ಕಿ ಒಕ್ಕಲಿಗರು ಸುಗ್ಗಿಯ ಕುಣಿತದ ವೇಳೆ ಹಾಡುವ ಮಾದೇವರಾಯನ ಹಾಡಿನಲ್ಲೂ ಹೆಚ್ಚು ಕಮ್ಮಿ ಇದೇ ಆಶಯವಿರುವುದನ್ನು ಗಮನಿಸಬಹುದು. (ಡಾ। ಎನ್. ಆರ್. ನಾಯಕ, 1982, ಪು. 11–13) ಮಾದೇವರಾಯ ಸೃಷ್ಟಿಮಾಡಿದ ಭೂಮಿ ಮೂಲತಃ ಹಸುಗೂಸುಗಳ ನೆತ್ತಿಯಂತೆ ಮೆತ್ತಗಿತ್ತು. ಇದಕ್ಕೆ ಕಾರಣವೇನೆಂದು ವಿಚಾರಿಸಿದಾಗ ಮಾದೇವರಾಯನಿಗೆ ಉತ್ತರ ಸಿಕ್ಕಿತು: ಹೊಲತಿಯೊಬ್ಬಳು ಸೂಜಿಯ ಮೊನೆಯ ಮೇಲೆ ತಪಸ್ಸು ಮಾಡುವುದನ್ನು ನೋಡಿದನು. ಅವಳನ್ನು ಕೊಂದು ಅವಳ ರಕ್ತದಿಂದ ಭೂಮಿಯನ್ನು ಗಟ್ಟಿಗೊಳಿಸಿದನಲ್ಲದೆ, ಅವಳ ಅಂಗಾಂಗಗಳ [illegible]ದಿಂದ ಬೇರೆ ಬೇರೆ ಜಾತಿಯ ಮಾನವರನ್ನು ಪಡೆದನು.

ಜನಪದ ನಂಬುಗೆಗಳು, ಕತೆಗಳು, ಆಚರಣೆಗಳು, ಸ್ಥಳಪುರಾಣಗಳು' ಇವನ್ನೆಲ್ಲಾ ಗಮನಿಸಿದರೆ ಇವೆಲ್ಲ ಬಹುತೇಕವಾಗಿ ಹೊಲೆಯ ಜನಾಂಗದ ಆದಿಯ ಸ್ವರೂಪವನ್ನು, ಅದ್ಭುತ ಚೈತನ್ಯವನ್ನು, ಆರೋಗ್ಯ [illegible]ವನ್ನು ಪ್ರತಿಪಾದಿಸುವಂತೆ ಕಂಡುಬರುತ್ತದೆ. ದ. ಆಫ್ರಿಕಾದಲ್ಲಿ ದಲಿತರ [illegible] ನೆಲಕ್ಕೆ ಬಿದ್ದರೆ ಅನಿಷ್ಟಕಾರಿ ಎಂಬ ಭಾವನೆಯುಂಟು. ಇಂಡಿಯಾದಲ್ಲಿ ಹಳ್ಳಿ [illegible]ಗಳಲ್ಲಿ ನೀರಿನ ಸೆಲೆ ಚಿಮ್ಮ ಬೇಕಾದರೆ ಹೊಲೆಯನ ರಕ್ತದ ತರ್ಪಣವಾಗಬೇಕು. ಇಂಥ ನಂಬುಗೆಗಳನ್ನು ದ್ವಂದ್ವಾತ್ಮಕವಾಗಿ ಪರಿಭಾವಿಸಿ ಅವುಗಳ ಆಶಯಗಳಲ್ಲಿನ ಗುಣಾತ್ಮಕ ಆಯಾಮಗಳನ್ನಷ್ಟೇ ತೆಗೆದುಕೊಳ್ಳಬೇಕಾಗಿದೆ.

ಮೇಲೆ ಹೇಳಿದ ಆಶಯದ ಹಿನ್ನೆಲೆಯಲ್ಲಿ ದೇವನೂರರ 'ಕುಸುಮ ಬಾಲೆ'ಯ [illegible] ಸನ್ನಿವೇಶದ ಅರ್ಥವಂತಿಕೆಯನ್ನು ಪರಿಶೀಲಿಸಬಹುದು.

ಹದಿನಾರು ಎಳನೀರು ಕದ್ದ ಗಾರ್ಸಿದ್ದ[illegible]ನಿಗೆ ಊರವರು ಕಟ್ಟಿಹಾಕಿ ಹೊಡೆಯುತ್ತಾರೆ. 'ಎರಡನೇ ರೌಂಡ ಹೊಡೆದು [illegible] ಮೂರನೆ ರೌಂಡುಗ ರೋಷವ [illegible] ತುಂಬಿಸಿಕೊಳ್ಳುತ್ತಿತ್ತು. ಆ ಹಣೆಯು ಒಂದು ಬೆಟ್ಟನ ಅಗಲವಿದ್ದರೆ ಈ ಹುಬ್ಬು [illegible] ಬೆಟ್ಟನ ಅಗಲವಾಗಿ ಆ ಗಾರಸಿದ್ ನಾವನಮೈತುಂಬಾರೋಮವುತುಂಬಿಂಡು ಅವಗ ಏನಾರು ಚಿತ್ರಲುಮಾಡಿ ನಿಲ್ಸಿದಲ್ಲಿ ಅವನು ಆ ಗುಂಪಿಗೂ ಮೂಲ ಪುರುಷನಾದ ಆದಿಮಾನವನಾಗಿ ಕಂಡುಬರೋ ಆ ಅವನ ಮುಂದೆ ಬೇಸರದಲ್ಲಿ ಬಿದ್ದಿದ್ದ [illegible] ಗಂಬಕ್ಕೆ ಕಟ್ಟಿಹಾಕಿಸಿದ್ದವು. ಆ ಕಟ್ಟಾಕಿಸಿಕೊಂಡ ಅವನ ದೇಹವು ಹೊಡೆದವರ [illegible]ಗಳನ್ನು ನೋಯಿಸ್ತ ಹಾಗಾಗಿನೊಂದ [illegible]ಗೆ ವಿಶ್ರಾಂತಿ ಕೊಡಲೋಸುಗ ಪ್ರತಿ ಮೊತ್ತದ ರೌಂಡ್‌ನ ನಡುವೂ ಡೈಲಾಗ್ [illegible]ವೆಸುತಿತ್ತು.'

ಇಲ್ಲಿ ಸೂಕ್ಷ್ಮವಾಗಿ ನೋಡ ಬೇಕಾದ ಕೆಲವು ಅಂಶಗಳೆಂದರೆ–

(i) ಹೊಡೆಯುವವರಿಗಿಂತ ಹೊಡೆತ ತಿನ್ನುತ್ತಿರುವವನ ಬಗೆಗೆ ಒತ್ತು ಬಿದ್ದಿದೆ;

(ii) 'ಮೈತುಂಬಾ ರೋಮ,' ಚಿತ್ರಲು ಮಾಡಿ ನಿಲ್ಸಿದಲ್ಲಿ' 'ಗುಂಪಿಗೂ ಮೂಲ ಪುರುಷನಾದ ಆದಿಮಾನವ' ಮತ್ತು ಎಳನೀರು ಬೇಸರದಲ್ಲಿ ಬಿದ್ದಿರುವ ವರ್ಣನೆ, ಹಾಸ್ಯ-ವಿಷಾದಕ್ಕಿಂತ ಹೆಚ್ಚು ಆಳವಾದ ವ್ಯಂಗ್ಯವನ್ನು ಧ್ವನಿಸುತ್ತವೆ; ಅಂದರೆ, ಪೆಟ್ಟು ತಿನ್ನುವ ವ್ಯಕ್ತಿ ಪೆಟ್ಟು ಕೊಡುತ್ತಿರುವ ಜನಾಂಗಕ್ಕೆಲ್ಲಾ ಮೂಲವಾಗುಳ್ಳ ಜನಾಂಗದ ಪ್ರತಿನಿಧಿಯಾಗಿದ್ದಾನೆ ಎಂಬ ಸೂಕ್ಷ್ಮ ಅಂಶ ಇಲ್ಲಿ ಹುದುಗಿದೆ(iii)ಈ ವಿಪರ್ಯಾಸಕುರಿತು ನಿರೂಪಕ ನಮ್ಮ ಲಕ್ಷ್ಯ ಸೆಳೆಯುವುದು ಅಸಾಂಪ್ರದಾಯಿಕವಾದ ವಿಲೋಮ ಪ್ರತಿಕ್ರಿಯೆಯ

ಚಿತ್ರಣದ ಮೂಲಕ ಅಂದರೆ, ಕಟ್ಟಾಕಿಸಿಕೊಂಡವನ ದೇಹ ಹೊಡೆದವರ ಕೈಗಳನ್ನು ನೋಯಿಸುತ್ತಿತ್ತು. ಎಂಬ ಈ ವಿರೋಧಾಭಾಸದ ಆಳದಲ್ಲಿ ಲೇಖಕನ ಆಶಯ ಅಂತರ್‌ವಾಹಿಯಾಗಿದ್ದು ಪ್ರತಿಭಟನೆ ಅ-ವಾಚ್ಯವಾಗಿದೆ ಮಾತ್ರವಲ್ಲ, ಪ್ರತಿಭಟನೆಯ ಸ್ವರೂಪ ಪಾತ್ರದ ಒಟ್ಟು ವ್ಯಕ್ತಿತ್ವದ ಕಲ್ಪನೆಯೊಳಗೇ ಸಾಕಾರಗೊಳ್ಳುತ್ತದೆ; (IV) ಈ ಶಿಕ್ಷೆಗೆ ಈಡು ಮಾಡಿರುವ ಸರಕು-ಎಳನೀರು ನಿರ್ಲಿಪ್ತವಾಗಿರದೆ ಕದ್ದವನನ್ನು ನ್ಯಾಯಗಂಬಕ್ಕೆ ಕಟ್ಟಿ ಹಾಕಿಸಿದೆ: ಇದು ಸಮಾಜದ ಸಮಕಾಲೀನ ವಾಸ್ತವತೆಗೆ ಮಿರಲಾರದ, ಸರಕಿನ ಯಜಮಾನ್ಯದ ಖಾಸಗಿ ಒಡೆತನಕ್ಕೆ ಲಾಯಲ್ಲಾದ ಅದರ 'ಪ್ರವೃತ್ತಿ' ಆದರೆ, ಸಮಕಾಲೀನ ನಿರ್ಬಂಧಗಳನ್ನು ಪಾಲಿಸಲೇಬೇಕಾಗಿರುವ ಅದಕ್ಕೆ 'ಬೇಸರ'ವಾಗಿದೆ. ಏಕೆಂದರೆ, ಕದ್ದವನ ಹಸಿವಿಗೆ ನ್ಯಾಯವಾಗಿ

ಅರ್ಕೆ

ಸಲ್ಲಬೇಕಾದ ಪಾಲು ದಕ್ಕಿಲ್ಲ ಎಂಬ ಮಾನವೀಯ ಕೊರಗು ಮತ್ತು ಪಕ್ಷಪಾತ ಅವರದು; (5) ಅವನ ಒಂದು ಬೆಟ್ಟನಗಲದ ಹಣೆ, ಎರಡು ಬೆಟ್ಟನಗಲದ ಹುಬ್ಬು ಮತ್ತು ಹದಿನಾರು ಎಳನೀರನ್ನು ಕದ್ದು ಕುಡಿಯುವ ಪ್ರಚಂಡ ಹಸಿವಿಗೂ, ಇಂಥ ಹಸಿವನ್ನು ಬಯಲ್ಲಿಟ್ಟ ಅವನ ಒಡಲು, ಹೊಡೆಯುವ ಕೈಗಳನ್ನು ನೋಯಿಸುವುದಕ್ಕೂ ಪರಸ್ಪರ ಸಂಬಂಧವಿದೆ; ಮತ್ತು 6) ಒಟ್ಟನಲ್ಲಿ, ಹೊಡೆತ ತಿನ್ನುವವನ ಕೈ ಹೊಡೆತ ನೀಡುವವರ ಮೇಲಾಗಿದೆ.

ಈ ಭಾಗ ಕಾವ್ಯಾತ್ಮಕವಾಗಿದ್ದು (ಕುಸುಮಬಾಲೆ ಒಂದು 'ಕಥನ ಕಾವ್ಯ' ಎಂದೇ ವಿಶೇಷಿಸಲಾಗಿದೆ) ದೇವನೂರರ ಹಿಂದಿನ ಕತೆಗಳಲ್ಲಿನ ಹೆಚ್ಚು ಕಮ್ಮಿ ಇದೇ ಬಗೆಯ ದಲಿತ ಪ್ರತಿಭಟನೆಯ ಸನ್ನಿವೇಶಗಳಿಗಿಂತ ಆಶಯ ಮತ್ತು ಪ್ರಭಾವಗಳೆರಡರ ದೃಷ್ಟಿಯಿಂದಲೂ ಸ್ಪಷ್ಟವಾಗಿ ಹೆಚ್ಚು ಆಳವೂ ಗಹನವೂ ಆದ ಒಳನೋಟಗಳ ಫಲವಾಗಿದೆ. ಉದಾ:

(1) 'ಅದ್ಯಾಕೊ ಬತ್ತಾ ಬತ್ತಾ ಅವನ ಕಣ್ಣು ಮಂಜಾಗುತ್ತಿತ್ತು. ಕಣ್ಣು ಮಂಜಾದಂತೆಲ್ಲ ಒಂದೊಂದು ಸಲ ರಂಗಪ್ಪನಿಗೆ ಸರ್ಕಸ್ಸಲ್ಲಿ ಬಂದಂತ ಗೌಡ್ರು, ಗೌರವ್ವರು, ನರ್ಸವ್ವ, ಶಾಸ್ತ್ರಿ ಮೇಸ್ರು, ಹೊಸಮೇಸ್ರು ಎಲ್ಲ ಕೊಂಟನಲ್ಲಿಯೆ ಮಾಡುತ್ತಿದ್ದಂತೆಯೆ ಆಗುತ್ತ ಮೈತುಂಬ ಸುಸ್ತು ಒಡದು ಆಗಲೀಗ ನೆಲಕ್ಕೆ ಕಯ್ಯೂರಿ ನಿಧಾನವಾಗಿ ಕೂತನು. ಬಾನಿಂದ ಕತ್ಲಲು ಭೂಮಿಗೆ ತಾರಮಾರ ದುಮುಕ್ತ ನೆಲ ಸೇರ್ತ ಇತ್ತು' ('ಮೂಡಲ ಸೀಮೇಲಿ...' 1972)

2) ಗೌಡರು ಮಲಗಿದ್ದರೂ ನಿದ್ದೆ ಬಾರದ್ದಕ್ಕೆ ಅಡ್ಡಾಡಲು ಹೊರಬಂದರು. ಅವರ ಹಟ್ಟಿ ಜೀತಗಾರನು ಎಚ್ಚರವಾಗಿ ಇದ್ದುದರಿಂದ ಗೌಡರು ಬಂತಲೆ ಎದ್ದು ಕುಂತನು. ಬೀಡೀನ ಬಾಯಿಗೆ ಸಿಕ್ಕಿಸಿ ಕಡ್ಡಿ ಗೀರಲು ಆ ಬೆಳಕಿಗೆ ಆ ಕತ್ತಲಲ್ಲಿ ಅವರ ಮೋಕವಪ್ಪ ಕೆಂಪಗೆ ಕಂಡು ನಂದಿತು. ಗೌಡರು ಹೊಗೆ ನುಂಗುತ್ತ ಇದ್ದು ಆ ಮೇಲ ಜೀತಗಾರನ ದಿಕ್ಕ ತಿರುಗಿ "ಅದೇ ಮನಿಹುಲಿ ಮಾಡಿತ್ತಲ್ಲ ಆ ಹೈದ ಯಾರ್‍ದು" ಎಂದರು. ಜೀತಗಾರ "ಅದೆ ಅಳಿ, ಅಮಾಸ ಅಂತ" ಅಂದನು. "ಅಮಾಸ ಅಂದ್ರು?" ಎಂದು ಮತ್ತು ಕೇಳಿದರು. ಆದಕ್ಕವ 'ಅದೇ ಅಳಿ. ಆ ಕುರಿಯಯ್ನ ಜೊತೇಲಿ ಒಂದು ತಾಯಿ ತಂದ ಇಲ್ದ ತಬ್ಬಲಿ ಹೈದ ಇತ್ತಲ್ಲ ಬುದ್ಧಿ ಅದೇನೆ' ಅಂದನು. ಗೌಡರೇ ಕೇಳಿದವರೆ ಅತ್ಯಾಶ್ಚರ್ಯ ಆದರು. ಗೌಡರ ಕಣ್ಣುಗಳ ಮುಂದಕ್ಕೆ ಅಮಾಸ ಹುಲಿಯಾಸ ಹಾಕಿ ಟಗೆಟಗೆಯಾಗಿ ಕುಣಿಯುತ್ತ ಬಂತೊ' ('ಅಮಾಸ,' 1973).

(3) 'ಇನ್ಸ್‌ಪೆಕ್ಟರ ರೂಲುಗೋಲು ಫುಟಗೌರಿ ಗಲ್ಲವನ್ನು ಸವರುತ್ತಿತ್ತು. ಫುಟಗೌರಿ ಮಾತುಗಳು ಹೊಟ್ಟೆ ಒಳಗೆ ಅವುಚಿಕೊಳ್ಳುತ್ತಿದ್ದವು. ಗುರುಸಿದ್ದು ಇನ್ಸ್‌ಪೆಕ್ಟರ್ ದುರುಗುಟ್ಟಿ ನೋಡುತ್ತಿದ್ದನು. ಸಾಹೇಬರು ರೂಲುಗೋಲನ್ನು ಫುಟಗೌರಿ ಗಲ್ಲದಿಂದ ತಗುದು ಗುರುಸಿದ್ದುನ ಕಣ್ಣಿಕ್ಕ ಚಾಚಿ 'ಮಗ ನೋಡದ್ ನೋಡು ನೋಡದ. ಕಣ್ಣುಡ್ಡೆ ಮೀಟಾಕ್ತೀನಿ... ಹೇ' ಎಂದು ಹಲ್ಲ ನೊರಗುಟ್ಟದರು. ಗುರುಸಿದ್ದು ನೋಟಕ್ಕೆ ಸಾಹೇಬರ ಒಂದೆರಡು ರೋಮಗಳು ಅಳುಕುಪಟ್ಟಿದ್ದವು. ಸಾಹೇಬರು ಸಿಗರೇಟು ಹಚ್ಚಿದರು'. (ಒಡಲಾಳ, 1981 ಪು. 47–48).

ಮೊದಲನೆಯ ಉದಾ.ಯಲ್ಲಿ ಜೀತಗಾರ ರಂಗಪ್ಪ ತನ್ನ ದುಃಸ್ಥಿತಿಗೆ ಮೂಲಕಾರಣರಾಗಿರುವ ವ್ಯಕ್ತಿಗಳನ್ನು ತನ್ನ ಶ್ರಮದ ನಿರರ್ಥಕತೆಯ ಸಂದರ್ಭದಲ್ಲಿ ಗುರುತಿಸುತ್ತಾನೆಯಷ್ಟೆ; ಎರಡನೆಯದರಲ್ಲಿ, ಅಮಾಸನಂಥ ಅನಾಥ ಮಕ್ಕಳ ಹುಟ್ಟಿಗೂ ಕಾರಣರಾಗಿರಬಹುದಾದ ಶೋಷಕ ವರ್ಗದ ಪ್ರತಿನಿಧಿ ಗೌಡರ ನಿದ್ದೆಯನ್ನು ಕೆಡಿಸುವ ಅಮಾಸನ ಹುಲಿವೇಷ ಭಾವೀ ಸಂಘರ್ಷವೊಂದರ ಟ್ರೇಲರಾಗುತ್ತದೆ. ಮೂರನೆಯದರಲ್ಲಿ ಸಾಕವ್ವನ ಕುಟುಂಬದಲ್ಲೆ ತುಸು ಪ್ರಜ್ಞಾವಂತನಾದ ಗುರುಸಿದ್ದ ಇನ್ಸ್‌ಪೆಕ್ಟರನ್ನು ದುರುಗುಟ್ಟಿ ನೋಡುವುದರಲ್ಲಿ ಪ್ರತಿಭಟನೆಯ ಆಶಯ ಪ್ರಕಟವಾಗುತ್ತ ಬಂದಿದೆ. ಹೀಗೆ ಬೆಳೆಯುತ್ತ ಬಂದ ದಲಿತ ಪ್ರತಿಭಟನೆಯ ಆಶಯ ಹೊಸದಾಗಿ ಅಂಕುರವಾಗಿರುವ ದಲಿತಪ್ರಜ್ಞೆಯ ಅಭಿವ್ಯಕ್ತಿಯಾಗಿದೆ ಎಂಬುದನ್ನು 'ಕುಸುಮಬಾಲೆ' ಒಂದಕ್ಕಿಂತ ಹೆಚ್ಚು ಸಂದರ್ಭಗಳಲ್ಲಿ ಸ್ಪಷ್ಟವಾಗಿ ದಾಖಲಿಸುತ್ತದೆ. (ಈ ಕಥನ ಕಾವ್ಯದಲ್ಲಿ ಬರುವ ಪಾತ್ರಗಳಾದ ಅಮಾಸ, ಕುರಿಯಯ್ಯ, ಗಾರಸಿದ್ದ ಮಾದ (ಗುರುಸಿದ್ದ?) ಮುಂತಾದವರು ಹಿಂದಿನ ಕತೆಗಳಲ್ಲಿ ಕಾಣಿಸಿಕೊಂಡ ಪಾತ್ರಗಳೇ ಆಗಿದ್ದರೂ ಇಲ್ಲಿ ವಿಕಾಸಗೊಂಡ ದಲಿತಪ್ರಜ್ಞೆ ಮೂರ್ತರೂಪವಾಗಿ ಕಾಣಿಸಿಕೊಳ್ಳುತ್ತಾರೆ.) ದಲಿತ ಸಂಘರ್ಷ ಸಮಿತಿ ಹುಟ್ಟು ಹಾಕಿದ ಹೊಸ ಸಾಮಾಜಿಕ ಮತ್ತು ರಾಜಕೀಯ ಅರಿವು ದಲಿತ ವ್ಯಕ್ತಿಯನ್ನು ತನ್ನ ಜನಾಂಗದೊಂದಿಗೆ ಪ್ರಜ್ಞಾಪೂರ್ವಕ ಗುರುತಿಸಿಕೊಳ್ಳುವಲ್ಲಿ, ಪ್ರಚಂಡ ಆತ್ಮವಿಶ್ವಾಸ ಕುದುರಿಸುವಲ್ಲಿ ಸಾರ್ಥಕವಾಗಿದೆ ಎಂಬ ಅಂಶ ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಕಳವಿನ ಆರೋಪಕ್ಕೊಳಗಾದ ಗಾರ ಸಿದ್ದಾನ ತಪ್ಪು ಕಾಣಿಕೆಯ ವಿಷಯದಲ್ಲಿ ಸ್ವತಃ ಮುಳ್ಳೂರು ನಾಗರಾಜನನ್ನೆ ದಿಗಿಲುಬೀಳಿಸುವ ಬಗೆಯಲ್ಲಿ ಅಪೂರ್ವ ದಿಟ್ಟತನದಿಂದ ನಡೆಕೊಳ್ಳುವುದು ಹೊಸ ಸಂಘರ್ಷವೊಂದರ ಕಾಣ್ಕೆಯಾಗಿದೆ. ಮುಂದಿನ ವರುಷಕ್ಕೆ ಒಪ್ಪಿಸಲಿಕ್ಕೆ ಎಂದು ತನ್ನ ಪಾಲಿನ ತಪ್ಪು ಕಾಣಿಕೆಯನ್ನು ನಾಗರಾಜನಿಗೆ ಒಪ್ಪಿಸಿದಾಗ ಗ್ರಾಮೀಣ ಜಗತ್ತಿನಲ್ಲಿ ಇನ್ನೂ ಉಳಿದಿರಬಹುದಾದ ಮಾನವೀಯತೆ, ಗುಣಪಕ್ಷಪಾತ, ಹೃದಯ ವೈಶಾಲ್ಯಗಳ ಆವಿಷ್ಕಾರ (ಉದಾ:ಅಮಾಸನಂಥ ತಬ್ಬಲಿ ಆದರೆಸೂಟ ಹುಡುಗನನ್ನು ನೋಡುತ್ತ ನೋಡುತ್ತಾ ಬಂಗಾರಿಗೆ ತನ್ನ 'ಕಂಕುಳಿಗೆ ಅಂಥ ಒಂದು ಕಂದಬೇಕು ಎಂಬಂಥಅತ್ಯುಗ್ರ ಆಸೆಯುಂಟಾಗುವುದು) ಇವೆಲ್ಲವುಗಳನ್ನು ವಸ್ತುವಿನ ವಿನ್ಯಾಸದಲ್ಲಿ ಸಾಮಾಜಿಕ ಪ್ರತಿಮೆಗಳ ಮೂಲಕ (ಉದಾ. 'ಅಮಾಸ'ದಲ್ಲಿ ತೆಂಗಿನ ಮರ; 'ಒಡಲಾಳ'ದಲ್ಲಿ ನವಿಲಿನ ಚಿತ್ರ) ಅಥವಾ ಜನಪದ ಆಶಯಗಳ ಮೂಲಕ (ಅಂದರೆ, 'ಕುಸುಮಬಾಲೆ'ಯಲ್ಲಿ ಮೈದುಂಬಿಸಿಕೊಂಡು ಅಸ್ಪೃಶ್ಯ ಜಾತಿ ಮೂಲದ ಬಗ್ಗೆ ಮಾತನಾಡುವ ಕುರಿಯಯ್ಯನ ಪಾತ್ರ) ಧ್ವನಿಸುತ್ತಿರುವುದು ದೇವನೂರರ ಕತೆಗಳ ವೈಶಿಷ್ಟ್ಯವಾಗಿದೆ. ವಾಸ್ತವತೆಯ ಗ್ರಹಿಕೆಯ ಸ್ವರೂಪದಲ್ಲಿ ಕತೆಗಾರನ ಆಶಯ ಒಡಮೂಡಿರುವುದರಿಂದ ಕಲೆಗಾರಿಕೆ ಸಾರ್ಥಕವಾಗುತ್ತದೆ: ಕತೆಗಳ ಬಂಧ ಸುಸಂಬದ್ಧವಾಗುತ್ತದೆ. ಇದು ಹೊಸದಾಗಿ ಮೂಡುತ್ತಿರುವ ದಲಿತಪ್ರಜ್ಞೆಯು ದಕ್ಕಿಸಿಕೊಳ್ಳಬೇಕಿರುವ ಎಚ್ಚರ ಸೂಕ್ಷ್ಮತೆ ಮತ್ತು ಸಂಕೀರ್ಣತೆಗಳ [illegible] ಆಗಿದೆ.

(ಮುಂದುವರಿಯುವುದು)

ಸ್ವಚ್ಛ ಸರಕಾರದ ಅನ್ವೇಷಣೆಯಲ್ಲಿ..

'ಸ್ವಚ್ಛ ಸರಕಾರ' ಒಂದು ಬಯಕೆ. ಅದರ ಸಾಕಾರ ಸಾಧ್ಯವೆ ಎಂಬ ಪ್ರಶ್ನೆಗೆ, 'ಇಲ್ಲ' ಎನ್ನುವುದೇ ಹೆಚ್ಚು ಪ್ರಾಮಾಣಿಕ. ಅನುಭವ ಸಮ್ಮತವೂ ಹೌದು. 'ಹೌದು' ಎನ್ನುವುದು ಆಶಾವಾದಿಯ ಅನ್ನಿಸಿಕೆ. ಇಲ್ಲ-ಹೌದು ಎಂಬ ವಾದಕ್ಕಿಂತ ಅದೊಂದು ಅನಿವಾರ್ಯವೆಂಬುದು ಸತ್ಯ.

ಸ್ವಚ್ಛ ಸರಕಾರ ಒಬ್ಬನ ಕೊಡುಗೆ ಆಗಲಾರದು. ಆಡಳಿತ ನಡೆಸುವ ಗುಂಪಿನ ರಾಜಕೀಯ ನಿರ್ಧಾರದಿಂದ, ಅದಕ್ಕೆ ಒತ್ತಾಸೆಯಾಗಿ ನಿಲ್ಲುವ ರಾಜಕೀಯ ಸಂಘಟನೆಯ ತತ್ವಬದ್ಧತೆಯಿಂದ ಅದನ್ನು ಪುರಸ್ಕರಿಸಿ ಬೆಂಬಲಿಸುವ ಎಚ್ಚೆತ್ತ ಸಮಾಜದ ಆಶೀರ್ವಾದದಿಂದ ಮಾತ್ರ ಅದು ಸಾಧ್ಯವಾಗಬಹುದು. ಇಷ್ಟೆಲ್ಲ ಆದ್ಯ ಸಿದ್ಧತೆ ಇಲ್ಲದೆ ಘೋಷಣೆಯನ್ನು ಗಿಳಿಯಂತೆ ಪಠಿಸುವ ಜನರ ಗುಂಪು ಸ್ವಚ್ಛ ಸರಕಾರ ನೀಡಬಲ್ಲದು ಎಂದು ಭ್ರಮಿಸಿದರೆ, ಶೀಘ್ರ ಭ್ರಮ ನಿರಸನವಾಗದೆ ಇನ್ನೇನಾದೀತು? ಸ್ವಚ್ಛ ಸರಕಾರ ಪವಾಡವಲ್ಲ. ಸ್ವಚ್ಛ ಸರಕಾರ ಭ್ರಷ್ಟ ಸರಕಾರದ ವಿರುದ್ಧದ ಒಂದು ಪ್ರತಿಕ್ರಿಯೆಯೂ ಅಲ್ಲ. ಅದೊಂದು ನಿಶ್ಚಿತ ಗುರಿಯ ಕಡೆಗೆ ಇಡುವ ಸ್ಪಷ್ಟ ಹೆಜ್ಜೆ-ಸಮಾಜದ ಮನಸ್ಸನ್ನು ಆ ರೀತಿ ತಿದ್ದಿ ಮುನ್ನಡೆಸುವ ಮಹಾನ್ ಪ್ರಯತ್ನದ ದೃಶ್ಯ ಪರಿಣಾಮ-ಹೆಜ್ಜೆ ಹೆಜ್ಜೆಗೂ ಅನುಭವವೇದ್ಯ.

ಕರ್ನಾಟಕದಲ್ಲಿ 1983ರ ವಿಧಾನ ಸಭಾ ಚುನಾವಣೆ. ಆಡಳಿತ ಚುಕ್ಕಾಣಿ ಹಿಡಿದಿದ್ದ ಕಾಂಗ್ರೆಸ್ ಬೇಡವೆಂದು ಸಾಮಾನ್ಯವಾದ ತೀರ್ಮಾನವಾಯಿತು. ಕಾಂಗ್ರೆಸ್ ಭ್ರಷ್ಟ ಆಡಳಿತಕ್ಕೆ ಮನಸ್ಸು ಮಾಡಿತು. ಭ್ರಷ್ಟಾಚಾರವೇ ಅದರ ಆಡಳಿತ ಧರ್ಮವಾಯಿತು. ಆಡಳಿತ ಜನರ ಸಲುವಾಗಿ ಅಲ್ಲ. ಆಡಳಿತ ನಡೆಸುವವರ ಸಲುವಾಗಿಯೇ ಆಡಳಿತ' ಎಂಬ ರೀತಿಯಲ್ಲಿ ರಾಜಾರೋಷವಾಗಿಯೇ ನಡೆಕೊಂಡಿತ್ತು ಎಂಬ ಕಾರಣಕ್ಕಾಗಿಯೇ ಅದು ಬೇಡವಾಯಿತು. ಭ್ರಷ್ಟಾಚಾರದ ವಿರುದ್ಧದ ಪ್ರಬಲವಾದ ಪ್ರತಿಕ್ರಿಯೆ, ಪ್ರಚಾರದ ಅಲೆಯಾಗಿ 36 ವರ್ಷದ ದೀರ್ಘ ಕಾಂಗ್ರೆಸ್ ಆಳ್ವಿಕೆಗೆ ಮುಕ್ತಾಯ ಹಾಡಿತು.

ಆದರೆ ಗೆದ್ದು ಬಂದವರ್ಯಾರು ? ವೇದಿಕೆಗೆ ಬಂದು ತಾವು ಕಾಂಗ್ರೆಸ್ ವಿರೋಧಿ ಎಂದು ಹೇಳಿದವರೆಲ್ಲ. ಸಣ್ಣ ಗುಂಪು ತತ್ವಶಃ ಕಾಂಗ್ರೆಸ್‌ಗೆ ವಿರೋಧವಾಗಿದ್ದವರಾದರೆ, ದೊಡ್ಡ ಗುಂಪು ನಿಕಟ ಪೂರ್ವದಲ್ಲಿ ಅಥವಾ ಸ್ವಲ್ಪ ಮೊದಲೆ ಕಾಂಗ್ರೆಸ್ ಪಾಳೆಯ ಬಿಟ್ಟು ಬಂದವರು-ವಾಸ್ತವಿಕವಾಗಿ ಕಾಂಗ್ರೆಸ್ ಆಗಿದ್ದವರೆ. ಹೊಸ ಲೇಬಲ್ ಮಾತ್ರ ಜನತಾ, ಕ್ರಾಂತಿರಂಗ... ಇತ್ಯಾದಿ ಇತ್ಯಾದಿ. ಗೆಲ್ಲಿಸಿ ತಂದ ಜನರಿಗೆ, "ಹೆತ್ತವರಿಗೆ ಹೆಗ್ಗಣ ಮುದ್ದು", ಎಂಬಂತಾಯಿತು. ಭ್ರಷ್ಟಾಚಾರದ ವಿರುದ್ಧದ ಅಲೆಯಲ್ಲಿ ಗೆದ್ದು ಬಂದುದರಿಂದ ಅವರೆಲ್ಲ ಭ್ರಷ್ಟಾಚಾರ ವಿರೋಧಿಗಳೇ- ಸ್ವಚ್ಛ ಸರಕಾರ ಕೊಡಬಲ್ಲವರೆ, ಎಂಬ ತೀರ್ಮಾನ ಜನರದ್ದು.

ಆರಿಸಿ ಬಂದ ನಂತರ ಆ ಜನರ ಮನಸ್ಥಿತಿ ಹೇಗಿತ್ತು? ಅವಕಾಶಗಳು ಕೈ ಬೀಸಿ ಕರೆಯುವಾಗ, ಪೂರ್ವಜನ್ಮದ ವಾಸನೆ ಗಿಗುರೊಡೆಯಿತು. ಆರಿಸಿ ತಂದ ಜನ ಅದನ್ನು ಒಪ್ಪಲಾರರು ಎಂದು [illegible]ದ್ದರೂ ಅದನ್ನು ಮಾಡದೆ ಇರಲಾರರು. ಮಹಾಭಾರತ ದ ಲ್ಲಿ ದು ರ್ಯೋ ಧ ನ, 'ಜಾನಾಮಿ ಧರ್ಮಂ-ನಚಮೇವ ಪ್ರವೃತ್ತಿ. ಜಾನಾಮಿ ಅಧರ್ಮಂ ನಚಮೇವ ನಿವೃತ್ತಿ' ಎಂಬುದರ ಉಲ್ಲೇಖವಿದೆ. ಅವರ ಸಂಯಮದ ಕಟ್ಟೆ ಒಡೆಯಿತು. ಸ್ವಚ್ಛ ಸರಕಾರದ ಹೆಸರಿನಲ್ಲಿ, ಗುಪ್ತ ಭ್ರಷ್ಟ ಸರಕಾರವೇ ನಡೆಯಿತು. ಅತಿ ಬುದ್ಧಿವಂತಿಕೆಯಿಂದ ಅದನ್ನೆಲ್ಲ 83–84–85 ಇಸವಿಗಳು ಅಂದರೆ 3 ವರ್ಷಗಳ ವರೆಗೆ ಮುಚ್ಚಿಡಲು ಸಾಧ್ಯವಾಯಿತು. ಆ ರೀತಿ ದಿನಾಂಕ 31-1-86ರ ವರೆಗೆ. ಬಾಟ್ಲಿಂಗ್ ಪ್ರಕರಣ ಹೊರ ಬೀಳುವ ವರೆಗೂ ನಡೆಯಿತು. ನಿರಾಕರಿಸಲಾಗದ ಸ್ಪಷ್ಟ ಪುರಾವೆಗಳ ದಾಖಲೆ ಸಹಿತ ಭ್ರಷ್ಟಾಚಾರ, ಮೊದಲ ಬಾರಿಗೆ ಬಯಲಾಯಿತು. ಆದರೆ ಜನತಾ ಸರಕಾರದ ಮೊದಲನೇ ಭ್ರಷ್ಟಾಚಾರದ ಪ್ರಕರಣವಂತೂ ಅದಲ್ಲ.

ಅದರ ಮೊದಲು ಮಾಡಿರುವ ಆರೋಪಗಳನ್ನು ಸಾಬೀತು ಮಾಡಲಾಗಲಿಲ್ಲ. ಗಣೇಶ ಹೆಗ್ಡೆ ಪ್ರಕರಣ, ಬೇಗೂರು-ನವಿಲೆ ಸುರಂಗ ಕಾಲುವೆ ಪ್ರಕರಣ, ಭರತ ಹೆಗ್ಡೆ ಪ್ರಕರಣ ಇತ್ಯಾದಿ ಆ ಸಾಲಿನಲ್ಲಿ ಬರುತ್ತವೆ. ಉಚ್ಚ ನ್ಯಾಯಾಲಯದ ತೀರ್ಪು ಹೊರಬೀಳುವ ತನಕ ಬಾಟ್ಲಿಂಗ್ ಹಗರಣವೂ ಅಷ್ಟೆ. ಆಪಾದನೆ ಮಾತ್ರ. ಬೇಗೂರು-ನವಿಲೆ ಸುರಂಗ ಕಾಲುವೆ ಪ್ರಕರಣದಲ್ಲಿ ಎಂದು ಸೂಚ್ಯವಾಗಿ ಹೇಳಲಾಗಿದೆ.

ಈ ಅವ್ಯವಹಾರಕ್ಕೆ ಮುಖ್ಯಮಂತ್ರಿಗಳು ಹೊಣೆ ಎಂದು ತೀರ್ಪಿನಲ್ಲಿ ಹೇಳಲಿಲ್ಲವೆಂಬುದು ಒಂದು ವಾದ. ಹಾಗೆ ಹೇಳುವ ಅವಶ್ಯಕತೆ ಇಲ್ಲ. ಆದರೆ ಆ ತೀರ್ಪು ಇರುವುದು ಸರಕಾರದ ವಿರುದ್ಧ [illegible] ಮುಖ್ಯಮಂತ್ರಿಗಳ ವಿರುದ್ಧವೆಂದೇ ಅರ್ಥ. ಮುಖ್ಯಮಂತ್ರಿಗಳು ತಾವು ಹೊಣೆ ಅಲ್ಲವಾದರೆ ಇನ್ಯಾರು ಹೊಣೆ ಎಂದು ಹೇಳಬೇಕಾಗುತ್ತದೆ. ಅಬಕಾರಿ ಮಂತ್ರಿಗಳೇ? ಕಾರ್ಯದರ್ಶಿಗಳೇ? ಆಯುಕ್ತರೆ? ಹೀಗೆ ಯಾರಾದರೊಬ್ಬರು ಹೊಣೆಯಾಗಬೇಕಾಗುತ್ತದೆ. ಎಲ್ಲಿಯವರೆಗೆ ಮುಖ್ಯಮಂತ್ರಿಗಳು ಇನ್ನೊಬ್ಬರ ಹೆಸರು ಹೇಳುವುದಿಲ್ಲವೋ ಆ ತನಕ ಅವರೇ ಹೊಣೆ ಎಂದು ಅರ್ಥವಾಗುತ್ತದೆ. ಅವರ ರಾಜೀನಾಮೆ ಅದನ್ನೆ ಧೃಢೀಕರಿಸುತ್ತದೆ.

ಅಳಿಯಾಗಿ ಎದ್ದು ಬಾರದಿದ್ದರೆ ಅದು ಸುಪ್ತವಾಗಿದೆ ಎಂದೇ ಅರ್ಥ.

1975–77ರಲ್ಲಿ, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಇಂದಿರಾಗಾಂಧಿಯ ಬಗ್ಗೆ ಸಾರ್ವಜನಿಕ ರೋಷವಿದ್ದರೂ ಎದ್ದು ಕಂಡು ಬರಲಿಲ್ಲ. ಕಾರಣ ಸಮೂಹ ಮಾಧ್ಯಮಗಳು ಪತ್ರಿಕೆಗಳು, ಸಾರ್ವಜನಿಕ ವೇದಿಕೆಗಳು ಎಲ್ಲವೂ ಅವರ ವಶವಾಗಿದ್ದವು. ಆದರೆ 1977ರ ಲೋಕ ಸಭಾ ಚುನಾವಣೆಯ ಫಲಿತಾಂಶ ತುರ್ತು ಪರಿಸ್ಥಿತಿಗೆ ವ್ಯತಿರಿಕ್ತವಾಗಿ, ಸುಪ್ತವಾಗಿದ್ದ ಅಸಮಾಧಾನದ ಆಳವನ್ನು ವ್ಯಕ್ತಪಡಿಸಿತು.

ಕರ್ನಾಟಕದಲ್ಲಿ ಸಹ ಪ್ರಜಾಪ್ರಭುತ್ವದ ಒಂದು ಪ್ರಧಾನ ಅಂಗವಾದ ಪತ್ರಿಕೆಗಳು– ಹಿಂದಿನ ಕಾಂಗ್ರೆಸ್ ಸರಕಾರದ ಸಂದರ್ಭದಲ್ಲಿ ತಮ್ಮ ಸತ್ವನಿಷ್ಠ ವರದಿಯನ್ನು [illegible] ದ್ದವು. ಆದರಿಂದಾಗಿ ಆ ಸರಕಾರದ ವಿರುದ್ಧವಾಗಿರುವ ಜನರ ಅಸಂತೋಷಕ್ಕೆ ಚಾಲನೆ ಕೊಡಲು ಸಾಧ್ಯವಾಯಿತು.

ಬಾಟ್ಲಿಂಗ್ ಪ್ರಕರಣದಲ್ಲಿ ರಾಜ್ಯದ ಬಹುತೇಕ ಪತ್ರಿಕೆಗಳು ಉಚ್ಚ ನ್ಯಾಯಾಲಯದ ತೀರ್ಪನ್ನು ಪ್ರಕಟ ಮಾಡಿದರೂ [illegible] ಉತ್ಸಾಹ, ಆವೇಶ ತೋರಿಸಲಿಲ್ಲ. ಅವು ಪ್ರಕಟಿಸಿದ ವರದಿ ಸಾಮಾನ್ಯವಾದ, ಹೇಳುವುದಕ್ಕೆ ಬೇಕೆಂದೇ ಬಂದಿದೆ ಎನ್ನುವ ಹಾಗೆ ತೋರುತ್ತದೆ. ಆದ್ದರಿಂದ ಜನರ ಅಸಮಾಧಾನ ಚಾಲನೆ ಪಡೆಯಲಿಲ್ಲ. ಸ್ವಚ್ಛ ನಿಧಾನವಾಗಿಯಾದರೂ ಚಾಲನೆ ಪಡೆದೀತು. ಆದರೂ ಪತ್ರಿಕೆಗಳೂ ವ್ಯಕ್ತಿಗೆ ಬದ್ಧವಾಗಿರುವುದನ್ನು ಬದಲಾಯಿಸಿ ಪ್ರಜಾಪ್ರಭುತ್ವಕ್ಕೆ ಬದ್ಧವಾಗಿ ನಿಷ್ಠೆ ತೋರಿದೀತು. ಅನ್ಯಾಯದ ಬಗ್ಗೆ ಭ್ರಷ್ಟಾಚಾರದ ಬಗ್ಗೆ ಅಸಮಾಧಾನ ತೋರುವ ಜನಸಾಮಾನ್ಯರ ಮನಸ್ಸಿನ ಸ್ಥಿತಿಯೇ ಸ್ವಚ್ಛ ಆಡಳಿತದ ಬಗ್ಗೆ ಇರುವ ಭರವಸೆ.

ಕಾಂಗ್ರೆಸ್–ಜನತಾ ಇವೆರಡನ್ನು ಬಿಟ್ಟು ಮೂರನೇಯ ಶಕ್ತಿ ಗುಂಪನ್ನು ಕಾಣದ ಜನ ಇನ್ಯಾರ ಮೇಲೆ ಸ್ವಚ್ಛ ಆಡಳಿತದ ಬಗ್ಗೆ ವಿಶ್ವಾಸ ಇಡಬೇಕು ಎನ್ನುವ ಪ್ರಶ್ನೆಯೂ ಇದೆ.

1983ರ ವಿಧಾನ ಸಭೆಯ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸನ್ನು ಬಿಟ್ಟರೆ ಇನ್ನಾವ ಸಮರ್ಥ ರಾಜಕೀಯ ಗುಂಪು ಕಾಣಿಸುತ್ತಿಲ್ಲವಿತ್ತು. ಜನತಾ ಅತ್ಯಂತ ಕೃಶವಾಗಿದ್ದ ಸಂದರ್ಭ ಅದು. ಆದರೆ ಚುನಾವಣೆಯ ನಂತರ ರಾಜಕೀಯ ಶೂನ್ಯತೆ ಇರಲಿಲ್ಲ. ಬದಲಿ ವ್ಯವಸ್ಥೆ ರೂಪುಗೊಂಡಿತು.

ಆರು ವರ್ಷಗಳ ಹಿಂದೆ ಅಸ್ಸಾಂನಲ್ಲಿ ವಿದೇಶಿ ವಲಸಿಗರಿಗೆ ಪರವಾಗಿ ನಿಂತಿರುವ ಸಶಕ್ತವಾದ ಕಾಂಗ್ರೆಸ್– ದುರ್ಬಲವಾದ ವಿರೋಧ ಪಕ್ಷಗಳ ನಡುವೆ ಸಮರ್ಥವಾದ ತೃತೀಯ ರಾಜಕೀಯ ಗುಂಪಾಗಿ ಯುವ ಜನರ ಪಕ್ಷವಾಗಿ ಅಸ್ಸಾಂ ಗಣತಂತ್ರ ಪರಿಷತ್ ಮೂಡಿಬಂದಿದೆ.ಇದು ಅಸ್ಸಾಂ ಜನತೆಯ ಸ್ವಾಂತಿಕೆಯನ್ನು ಉಳಿಸಿಕೊಳ್ಳುವ ಅಂತಃಶಕ್ತಿಗೆ ನಿದರ್ಶನವಾಗಿ ನಿಂತಿದೆ. ರಾಜಕೀಯ ಶೂನ್ಯತೆಯನ್ನು ತುಂಬಿ ನಿಂತಿದೆ.

ಹಾಗೆಯೇ ಸ್ವಚ್ಛ ಆಡಳಿತವನ್ನು ಬಯಸುವ ಕರ್ನಾಟಕದ ಜನರ ಅಂತಃಶಕ್ತಿ ಈಗಿನ ಸವಾಲನ್ನೂ ಸ್ವೀಕರಿಸಿತು. ಸ್ವಚ್ಛ ಸರಕಾರದ ಸ್ವಪ್ನವನ್ನು ಸಾಕಾರಗೊಳಿಸಿತು. ಜನರ ಕೃತುಶಕ್ತಿ ಸಾಮಾಜಿಕ ನೆಮ್ಮದಿಗೆ ಸಾಮೂಹಿಕ ಉತ್ಕರ್ಷಕ್ಕೆ ಬದ್ಧವಾಗಿ ನಿಂತೀತು ಎಂಬುದರಲ್ಲಿ ಭರವಸೆ ಇಡಬೇಕಾಗುತ್ತದೆ.

ಸಂವಾದ

ಸಾರ್ವಜನಿಕ ಲೆಕ್ಕಪತ್ರ ಸಮಿತಿ ಇಲಾಖೆಯನ್ನು ದೋಷ ಮುಕ್ತ ಮಾಡಲಿಲ್ಲ ಎಂಬುದೂ ಗಮನಾರ್ಹ. ಸಾಮಾನ್ಯ ಜನರಿಗೆ ಜನತಾ ಆಡಳಿತದ ವೈಖರಿಯ ಬಿಸಿ ಆಗಾಗ ತಟ್ಟುತ್ತಲೇ ಇತ್ತು.

ಜನತಾ ಸರಕಾರ ರಚಿಸಿರುವ ಭೂನ್ಯಾಯ ಮಂಡಲಿಗಳು, ಸರಕಾರದ ಬೇರೆ ಬೇರೆ ಹುದ್ದೆಗಳ ನೇಮಕಾತಿಗೆ ರಚಿಸಿರುವ ನೇಮಕಾತಿ ಸಮಿತಿಗಳು, ರೆವಿನ್ಯೂ ಅಧಿಕಾರಿಗಳು, ಸರಕಾರಿ ಆಸ್ಪತ್ರೆಯ ವೈದ್ಯರುಗಳು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಶಿಕ್ಷಣ ಇಲಾಖೆಯ ಕಛೇರಿಗಳು, ಅರಣ್ಯ ಇಲಾಖೆಗಳು, ಇತ್ಯಾದಿ ಸ್ಥಾನೀಯವಾಗಿರುವ ಆಡಳಿತದ ಹತ್ತು ಮುಖಗಳು ಸರಕಾರದ ಲಜ್ಜೆ ಇಲ್ಲದ ಭ್ರಷ್ಟಾಚಾರವನ್ನು ಸಮರ್ಥಿಸಿದವರಿಗೆ ಸಾರಿ ಹೇಳುತ್ತಿದ್ದವು. ಆ ಬಗ್ಗೆ ಮುಖ್ಯಮಂತ್ರಿಯವರು 1984ರ ವರೆಗೆ ಹೇಳುತ್ತಿದ್ದ ಉದ್ಗಾರಗಳೆ ನಿದರ್ಶನ. ಭ್ರಷ್ಟಾಚಾರ ಕೆಳಮಟ್ಟದಲ್ಲಿದೆ. 'ಆದರೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿಲ್ಲ' ಎಂಬುದು.

ಕೆರಂಬಳ್ಳಿ ಸಂಜೀವ ಶೆಟ್ಟಿ
ವಿಧಾನ ಪರಿಷತ್ ಸದಸ್ಯ

ಬಾಟ್ಲಿಂಗ್ ಹಗರಣದ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠದ ತೀರ್ಪು ವಿಧಾನ ಸೌಧದ ಮೂರನೇ ಮಹಡಿಯಲ್ಲಿ ಮನೆ ಮಾಡಿರುವ ಭ್ರಷ್ಟಾಚಾರದ ಮೇಲೆಯೇ ಬೆಳಕು ಚೆಲ್ಲಿದೆ. ಅದರಲ್ಲಿ ಮಾಡಿರುವ ಆಪಾದನೆಗಳನ್ನು ಸರಕಾರದ ಯಾವ ವಕ್ತಾರನೂ ಅಲ್ಲಗೆಳೆಯಲಿಲ್ಲ. ಸರಕಾರ ಕೊಟ್ಟಿರುವ ಬಾಟ್ಲಿಂಗ್ ಗುತ್ತಿಗೆ ನಿಯಮ ಬಾಹಿರವೆಂದು ಕೋರ್ಟ್ ಅದನ್ನು ರದ್ದುಗೊಳಿಸಿದೆ. ಗುತ್ತಿಗೆಯ ನಿರ್ಧಾರದ ಬಗ್ಗೆ ಸ್ಪಷ್ಟೀಕರಣ ಬಯಸಿ ಸರ್ಕಾರದ ಕಾರ್ಯದರ್ಶಿಯವರು ಅಬಕಾರಿ ಆಯುಕ್ತರಿಗೆ ಬರೆದದ್ದು, ಆ ಬಗ್ಗೆ ಮುಖ್ಯಮಂತ್ರಿಯವರೊಡನೆ ಚರ್ಚಿಸಲಾಗಿದೆ. ಅದಕ್ಕೆ ಅವರ ಒಪ್ಪಿಗೆ ದೊರೆತಿದೆ. ಆದ್ದರಿಂದ ಅದನ್ನು ಶೀಘ್ರ ಮಾಡಬೇಕೆಂದು "ಅಬಕಾರಿ ಸಚಿವರು ಬರೆದಿರುವ ಕಡತ ಕೋರ್ಟ್ ಪರಿಶೀಲನೆಗೂ ಬಂದಿರುವುದು ತೀರ್ಪಿನಲ್ಲಿ ಗೊತ್ತಾಗುತ್ತದೆ. ಆ ತೀರ್ಪಿನಲ್ಲಿ ದೊಡ್ಡ ಮೊತ್ತದ ಅಂದರೆ ಕೋಟಿಗಟ್ಟಲೆ ಲಾಭಗಳಿಸುವ ಅವಕಾಶದ ವ್ಯವಹಾರ ಅಡಗಿದೆ

ಸರಕಾರ ನಡೆಸುವ ಗುಂಪು ಕಾನೂನನ್ನು ಗೌರವಿಸುವವರಲ್ಲ, ನಿಷ್ಪಕ್ಷಪಾತಿಗಳಲ್ಲ, ಪ್ರಾಮಾಣಿಕರಲ್ಲ, ಸುಲಭ ಲಾಭಕ್ಕಾಗಿ ಆಸೆ ಮಾಡುವವರು, ನಯವಂಚಕರು, ಎಂದಾದ ಮೇಲೆ ಅವರಿಂದ ಸ್ವಚ್ಛ ಸರಕಾರ ಕೊಡಲು ಎಂದೂ ಸಾಧ್ಯವಿಲ್ಲ.

ಸಾರ್ವಜನಿಕ ವ್ಯವಹಾರದಲ್ಲಿ ಒಬ್ಬ ಮನುಷ್ಯನು ತಪ್ಪು ಮಾಡಿದರೆ ಕಳಂಕ ರಹಿತನಾದ ಇನ್ನೊಬ್ಬನನ್ನು ನೇಮಕ ಮಾಡುವ ಬದಲು ತಪ್ಪಿತಸ್ಥನನ್ನೆ ಪುನಃ ಬೇಕೆನ್ನುವ ಜನತಾ ಸಂಸದೀಯ ಗುಂಪು ಸ್ವಚ್ಛ ಸರಕಾರದ ಯೋಚನೆಯಿಂದ ಬಹು ದೂರ ಸರಿದಿದೆ ಎಂದರ್ಥ. ಇದು ಜನರನ್ನು ಇನ್ನಷ್ಟು ನಿರಾಶೆಗೊಳಿಸಿರುವ ಅಂಶ. ಸ್ವಚ್ಛ ಸರಕಾರದ ಕನಸನ್ನು ಭಗ್ನಗೊಳಿಸಿರುವ ಅಂಶ.

ಆದರೂ ಸ್ವಚ್ಛ ಸರಕಾರದ ಆಸೆ ಕೈ ಬಿಡುವ ಹಾಗಿಲ್ಲ. ಬದುಕಬೇಕೆಂದಿದ್ದರೆ ಖಾಯಿಲೆ-ಶುಶ್ರೂಷೆ, ಪುನಃ ಅದೇ ಚಕ್ರ ನಡೆಯುವ ಹಾಗೆ, ಸ್ವಚ್ಛ ಸರಕಾರ ಬೇಕೆಂದಿದ್ದರೆ ಆಸೆ– ನಿರಾಶೆ, ಈ ಚಕ್ರವನ್ನು ದಾಟಲೇ ಬೇಕಾಗುತ್ತದೆ. ಬಿದ್ದಾಗಲೆಲ್ಲ ಎದ್ದು, ಎದ್ದು ಸ್ವಚ್ಛ ಸರಕಾರದ ಬಗ್ಗೆ ಪ್ರಯತ್ನಿಸಬೇಕಾಗುತ್ತದೆ.

ಮೇಲಿನ ಹಗರಣದ ಬಗ್ಗೆ ಬಂದಿರುವ ಸಾರ್ವಜನಿಕ ಪ್ರತಿಕ್ರಿಯೆ ಎಷ್ಟು ಪ್ರಖರವಾಗಿದೆಯೋ ಅದರ ಮೇಲೆ ಸ್ವಚ್ಛ ಸರಕಾರದ ಮೇಲೆ ಜನರಿಗಿರುವ ಇಚ್ಛೆಯ ಪ್ರಖರತೆಯೂ ವ್ಯಕ್ತವಾಗುತ್ತದೆ.

ಸಾರ್ವಜನಿಕ ಪ್ರತಿಕ್ರಿಯೆ ಪ್ರಖರವಾಗಿಯೇ ಇದೆ. ಸಾರ್ವಜನಿಕರಿಗೆ ನಿರಾಶೆಯೂ ಇದೆ, ದುಃಖವಾಗಿದೆ, ಹೆಗ್ಡೆಯವರು ಸ್ವಚ್ಛ ಆಡಳಿತ ಕೊಡಬಲ್ಲರೆಂಬ ಭ್ರಮೆ ಇಳಿದು ಹೋಗಿದೆ, ಎಂಬ ವಿಚಾರ ಕಂಡು ಬಂದಿರುವ ಅಂಶ. ಆದರೆ ಅಸಮಾಧಾನ, ಅತೀ-ಅಲೆಯಾಗಿ ಎದ್ದು ಬರುವುದು ಮಾತ್ರ ಕಂಡುಬರುತ್ತಿಲ್ಲ. ಇದು ಆಶ್ಚರ್ಯವೆಂದು ಕಂಡುಬರಬಹುದು. ಆತುರ ಇಲ್ಲವೋ ಎಂದು ಅನುಮಾನ ಪಡಬಹುದು. ಅಲೆ–

ಚಿಂತನೆ

ಕಬ್ಬಿಣದಂತೆ ತುಕ್ಕು ಹಿಡಿದು ನಶಿಸಬೇಡ. ಉಕ್ಕಿನಂತೆ ತೇದು ಸವೆದು ಸೇವೆ ಸಲ್ಲಿಸು.

—ಸರ್. ಎಂ. ವಿಶ್ವೇಶ್ವರಯ್ಯ

ವಿ.ವಿ.ಉಪಕುಲಪತಿಗಳಲ್ಲ ಕುಲಪತಿ ರಾಜೀನಾಮೆ ಬೇಕು

ಪ್ರಿಯರೆ,
ಮಹಾರಾಷ್ಟ್ರದ ಮುಖ್ಯಮಂತ್ರಿಯೊಬ್ಬರು ತಮ್ಮ ಮಗಳ ಪರೀಕ್ಷೆಯ [illegible] ರಾಜೀನಾಮೆ [illegible] [illegible] ಮುಖ್ಯಮಂತ್ರಿ [illegible] ಉಪಕುಲಪತಿ ಡಾ. [illegible] ರಾಜೀನಾಮೆ. ಇದಕ್ಕೆ [illegible] ಕುಲಪತಿ [illegible] ಪ್ರಭಾಕರ [illegible] ಮುಖ್ಯಮಂತ್ರಿಗಳ [illegible] ಕುಲಪತಿ [illegible] ಅಧಿಕಾರದ [illegible] [illegible] 140 ವಿ.ವಿ. [illegible]

ಳನ್ನು ವಿದ್ವತ್ತಿದ್ದೂ ಒಬ್ಬಗಿರುವ ಉಪಕುಲಪತಿಗಳು ಕೇವಲ 10–12ಕ್ಕಿಂತ ಹೆಚ್ಚಿರಲಾರರು" ಎಂದು ಭಾರತದ ವಿ.ವಿ.ಗಳ ಒಕ್ಕೂಟದ ಅಧ್ಯಕ್ಷರಾಗಿದ್ದ, ಹಿರಿಯ ಶಿಕ್ಷಣತಜ್ಞ ಡಾ.ಅಮ್ರಿಕ್ ಸಿಂಗ್, ಗೋರೆಯವರ ರಾಜೀನಾಮೆಯ ಸುದ್ದಿ ಹೊರಬರುತ್ತಲೇ ಉದ್ಗರಿಸಿದ್ದಾರೆ. ಅನೇಕ ಉಪಕುಲಪತಿಗಳು ವಿದ್ವಾಂಸರಿರಬಹುದು.

ಜನವಾಣಿ

ಆದರೆ ವಿದ್ವತ್ತಿಗಿಂತಲೂ ನ್ಯಾಯ–ನೀತಿಗಳಿಗೆ ಬದ್ಧರಾಗಿ ನಿಲ್ಲುವ ವ್ಯಕ್ತಿತ್ವವು ಇಂದಿಗೆ ಅಪರೂಪವಾಗುತ್ತಿದೆ. ತಮ್ಮನ್ನು ನೇಮಿಸಿದವರ, ತಮ್ಮ ಪೀಠದ ಭದ್ರತೆಗೆ ಅನುಕೂಲವಾಗುವವರ, ಕುಲಪತಿಗಳ ಮತ್ತು ಆಳುವ ಸರಕಾರದ ಕೈಗೊಂಬೆಗಳಂತೆ ನರ್ತಿಸುವವರೇ ಹೆಚ್ಚು ಇಂದಿನ ದಿನಗಳಲ್ಲಿ. ಬಾಗಿಲಿಗೆ ಸಿಗದಂತೆ ದೂರವಾಣಿಯ ಮೂಲಕ ಕುಲಪತಿ–ರಾಜ್ಯಪಾಲರ ಕಛೇರಿಯಿಂದ ಆಗಾಗ ಬರುತ್ತಿರುವ ಕರೆಗಂಟೆಗಳ ಭಾಷೆಗೆ ಸರಿಯಾಗಿ ತಾಳ ಹಾಕುವವರೇ ಹೆಚ್ಚು ಈ ದಿನಗಳಲ್ಲಿ. ಇಂದಿಗೆ ಉಪಕುಲಪತಿಗಳಾಗಲು ಬೇಕಾದ ಮೊದಲ ಅರ್ಹತೆಯೂ ಇದೇ ಕುಲಪತಿಗಳ ಮತ್ತು ಸರಕಾರಗಳ ದೃಷ್ಟಿಯಿಂದ.

ಭಾರತದಲ್ಲಿ ಮೊದಲು ಸ್ಥಾಪಿತವಾದ ಮೂರು ವಿ.ವಿ.ಗಳಲ್ಲಿ ಮುಂಬಯಿ ವಿಶ್ವವಿದ್ಯಾಲಯವು ಒಂದು. ಒಂದೂ ಕಾಲು ಶತಮಾನಕ್ಕೂ ಮೆಚ್ಚಿನ ಇತಿಹಾಸದ ಈ ವಿಶ್ವ ವಿದ್ಯಾಲಯವು ಈ ದೇಶದ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯ ತಿಲಕ, ಗೋಖಲೆ, ವಲ್ಲಭಭಾಯಿ ಪಟೇಲರಂತಹ ಅನೇಕ ನಾಯಕರನ್ನು ತಯಾರಿಸಿ ಕೊಟ್ಟಿದೆ. ಅನೇಕ ವಿಶ್ವಮಾನ್ಯ ವಿದ್ವಾಂಸರನ್ನು ದೇಶಕ್ಕೆ ನೀಡಿದೆ. ತೀರ ಇತ್ತೀಚಿನವರೆಗೆ ಇಲ್ಲಿಯ ಅನೇಕ ವಿಭಾಗಗಳಲ್ಲಿ ಕಲಿಸುತ್ತಿದ್ದ ಪ್ರಾಧ್ಯಾಪಕರುಗಳು ದೇಶದ ಅಗ್ರಗಣ್ಯ ವಿದ್ವಾಂಸರ ಶ್ರೇಣಿಗೆ ಸೇರಿದವರಾಗಿದ್ದರು. ಇದೇ ಸಾಲಿಗೆ ಸೇರಿದ ಒಬ್ಬ ಮಹಾವಿದ್ವಾಂಸ, ಟಾಟಾ ಸಮಾಜದ ವಿಜ್ಞಾನ ಸಂಸ್ಥೆಯ ನಿರ್ದೇಶಕರಾಗಿ ದಶಕಗಳ ಸೇವೆ ಸಲ್ಲಿಸಿದ ಡಾ. ಗೋರೆಯವರು ಉಪಕುಲಪತಿಗಳಾಗಲು ಒಪ್ಪಿದ್ದು ವಿ.ವಿ.ದ ಘನತೆಯನ್ನು ಹೆಚ್ಚಿಸಿತ್ತು. ಇಂತಹ ಘನ ಪರಂಪರೆಯ ಈ ವಿ.ವಿ.ವನ್ನು ಇಂದಿಗೆ ಆಕ್ಸ್‌ಫರ್ಡ್, ಕೇಂಬ್ರಿಡ್ಜ್, ಹಾರ್ವರ್ಡ್ ವಿ. ವಿ. ಗಳ ಮಟ್ಟದಲ್ಲಿ ವಿಶ್ವವಿಖ್ಯಾತವಾಗುವಂತೆ ಬೆಳೆಸುವ ಬದಲು, ಮಹಾರಾಷ್ಟ್ರದ ರಾಜಕೀಯ ವ್ಯವಸ್ಥೆಯು, ಅವಿವಾದವೆಂಬಂತೆ ಗೋರೆಯಂತಹ ಒಬ್ಬೊಬ್ಬರು ಅಪರೂಪವಾಗಿ ಸಿಗುವ ವಿಶ್ವಮಾನ್ಯ ವಿದ್ವಾಂಸರೂ ಬಿಟ್ಟು ಹೋಗುವ ದುಸ್ಥಿತಿಯನ್ನು ತಂದೊಡ್ಡುತ್ತಿರುವುದು ಶೋಚನೀಯ.

ಎಲ್ಲಕ್ಕೂ ಮಿಗಿಲಾದ ಆಶ್ಚರ್ಯ, ಇಷ್ಟೆಲ್ಲಾ ಆದರೂ ಅಲ್ಲಿರುವ ಪ್ರಾಧ್ಯಾಪಕರ, ಶಿಕ್ಷಕ ವರ್ಗದವರ ಮೌನ! ಶೈಕ್ಷಣಿಕ ಘನತೆಯನ್ನೇ ಗಾಳಿಗೊಡ್ಡಿದ ಕೋನ ಪ್ರಭಾಕರರಾಯರಂತಹ ಕುಲಪತಿಯ ವರ್ತನೆಯ ವಿರುದ್ಧ ಒಂದೇ ಒಂದು ಕ್ಷೀಣದನಿಯೂ ಹೊರ ಹೊಮ್ಮಲಿಲ್ಲ ಈ ವರ್ಗದಿಂದ! ವೈಯಕ್ತಿಕವಾಗಿಯಾಗಲೀ, ಅಧ್ಯಾಪಕರ ಸಂಘದ ಮೂಲಕವಾಗಲಿ, ಯಾವ ಪ್ರತಿಭಟನೆಯ ಸೊಲ್ಲೂ ಕೇಳಿಸುತ್ತಿಲ್ಲ! ಗೋರೆಯಂತಹ ಉಪಕುಲಪತಿಗಳು ಮೂಕವೇದನೆಯಿಂದ ಪೀಠ ಬಿಟ್ಟು ತೆರಳಿದಾಗಲೂ ಈ ಬುದ್ಧಿ ಜೀವಿಗಳ ಬುದ್ಧಿಯೇಕೆ ಜಾಗ್ರತವಾಗುತ್ತಿಲ್ಲ? ಇದರರ್ಥ ಇಷ್ಟು ಗುಲ್ಲೆಬ್ಬಿಸಿದ ಡಾ. ರಾವಳರ ಅಂಕಪಟ್ಟಿಯ ಕಾರ್ಯವು, ಹೆಚ್ಚಿನವರೆಲ್ಲ ಮಾಡುವ ಮಾಮೂಲೀ ಸೈಜತೆಯೆಂದೇ ಇವರು ಪರಿಗಣಿಸಿದ್ದಾಗಿರಬಹುದೇ ? ಡಾ. ರಾವಳರೇ ವಾದಿಸಿದ್ದಾರೆ- ಇದು ತಮ್ಮ ವಿ.ವಿ.ದ ಅಲಿಖಿತ ಸಂಪ್ರದಾಯ ಹೌದು!

ಮುಂಬಯಿ ವಿ.ವಿ.ದ ಪ್ರಾಧ್ಯಾಪಕರಲ್ಲಿ ಶೈಕ್ಷಣಿಕ ಮೌಲ್ಯ ಪ್ರಜ್ಞೆ ಉಳಿದಿದೆಯೆಂದಾದೆ. ಹಿಂದಿನ ಘನ ವಿದ್ವತ್ ಪರಂಪರೆಯನ್ನು ಉಳಿಸಿಕೊಳ್ಳುವ ಕಾಳಜಿ ಇದ್ದರೆ, ಅವರೆಲ್ಲ ಒಟ್ಟಾಗಿ, ಉಪಕುಲಪತಿ ಡಾ. ಗೋರೆಯವರ ರಾಜೀನಾಮೆ ಹಿಂತೆಗೆಯಲು, ಹಾಗೂ ಅವಿದ್ವಾಂಸ ರಾಜಕಾರಣಿ ರಾಜ್ಯಪಾಲ ಕೋನ ಪ್ರಭಾಕರರಾಯರನ್ನು ಕುಲಪತಿ ಸ್ಥಾನದಿಂದ ಕಿತ್ತು ಹಾಕಲು ಹೋರಾಟ ನಡೆಸಬೇಕು.

ಪಿ.ಶ್ರೀಪತಿತಂತ್ರಿ
ಸೆನೆಟ್ ಸದಸ್ಯ
ಮಂಗಳೂರು ವಿಶ್ವ ವಿದ್ಯಾನಿಲಯ
ಮಂಗಳೂರು

ಎಡರಾಮನ ಹಳ್ಳಿಯಿಂದ-ಪಶ್ಚಿಮ ಜರ್ಮನಿಗೆ

ತೊಗಲು ಗೊಂಬೆ ಆಟ

ಪಶ್ಚಿಮ ಜರ್ಮನಿಗೆ ತೆರಳುವ ತೊಗಲು ಗೊಂಬೆ ಆಟದ ತಂಡದಲ್ಲಿರುವ ಕೆ. ವಿರೂಪಾಕ್ಷ ಗೌಡ, ದೇವೇಂದ್ರಪ್ಪ, ಭರಮಪ್ಪ, ಸಿಂಗಪ್ಪ, ಯಲ್ಲಪ್ಪ ಮತ್ತು ಜಿ. ವಿ. ಶೆಂಡ ಕೂರ್.

ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಎಡರಾಮನಹಳ್ಳಿ ಎತ್ತರಾದ ಹಳ್ಳಿ. ಅಲ್ಲಿಯ ಅತ್ಯಂತ ಬಡ ಕುಟುಂಬಗಳಲ್ಲಿ ಒಂದು ಶಿಳ್ಳೇಕ್ಯಾತರ ದೊಡ್ಡ ಭರಮಪ್ಪನದು. ಬಡವನಾದ ದೊಡ್ಡ ಭರಮಪ್ಪನಲ್ಲಿ ಅಡಗಿರುವ ಅಮೂಲ್ಯವಾದ ಸಂಪತ್ತೆಂದರೆ– ತೊಗಲು ಗೊಂಬೆಗಳನ್ನು ಆಡಿಸುವ ಕುಶಲತೆ.

ಸುಮಾರು ಎರಡು ನೂರು ವರ್ಷಗಳ ಹಿಂದೆ ಜಿಂಕೆಯ ತೊಗಲಿನಿಂದಲೋ, ಆಡಿನ ಚರ್ಮದಿಂದಲೋ ತಯಾರಿಸಲ್ಪಟ್ಟು, ಬಣ್ಣ ವರ್ಣಗಳಿಂದ ಅಲಂಕೃತವಾದ ಈ ಗೊಂಬೆಗಳು ಇಂದಿಗೂ ಅತ್ಯಂತ ಸುಂದರವಾಗಿವೆ. ಆಡುವುದು ರಾಮಾಯಣದ ಕತೆ ರಾತ್ರಿಯೆಲ್ಲಾ ಜೊತೆ ಕೂಡುವುದು ಅವರ ಪರಿವಾರ.

ದೊಡ್ಡ ಭರಮಪ್ಪನು, ತನ್ನ ಉಚ್ಚಸ್ವರದ ಕಂಠದಿಂದ ಕತೆ ಹೇಳುತ್ತಾ ಗೊಂಬೆ

ಒಂದು ತೊಗಲು ಗೊಂಬೆ

ಕುಣಿಸುತ್ತಿದ್ದರೆ, ಆತನ ಕುಟುಂಬದ ಇತರ ಸದಸ್ಯರು ರಂಗಮಂಚದ ಮುಂದೆ ಕುಳಿತು ಮೇಳ, ತಾಳಗೆಜ್ಜೆ ಬಾರಿಸುತ್ತ ದನಿಗೂಡಿಸಿ ಹಾಡುತ್ತಾರೆ.

ಊರಲ್ಲಿ ರೋಗರುಜಿನಗಳು ಬಂದಾಗ, ಮಳೆ ಬಾರದೇ ಬರಗಾಲ ಬಂದಾಗ ಗ್ರಾಮಸ್ಥರೇ ವೀಳ್ಯನೀಡಿ ಶಿಳ್ಳೇಕ್ಯಾತನನ್ನು ಆಮಂತ್ರಿಸಿ ಆಟ ಆಡಿಸುವುದು ಪರಿಪಾಠ. ಶಿಳ್ಳೇಕ್ಯಾತ ಗ್ರಾಮಕ್ಕೆ ಬಂದು ಕೇಡು ತೊಲಗಲೆಂದು ಗ್ರಾಮದ ಕರಿಗಲ್ಲುಗಳಿಗೆ ಪೂಜೆ ಮಾಡಿ, ದೇವತಾಸ್ತುತಿ ಮಾಡಿ ಆಟ ಪ್ರಾರಂಭಿಸುತ್ತಾನೆ. ಹಳ್ಳಿಯ ಹತ್ತು ಸಮಸ್ತರು ನೀಡಿದ ಧನ, ಧಾನ್ಯವೇ ಅವನ ಬುತ್ತಿ.

ರಾಜ್ಯದ ಜನಪದ ಅಕಾಡೆಮಿ 1982ರಲ್ಲಿಯೇ ಪ್ರಶಸ್ತಿ ನೀಡಿ ಗೌರವಿಸಿದೆ. ಆದರೆ ಈ ಯಾವ ಪ್ರಶಸ್ತಿ, ಗೌರವ ಮೆಚ್ಚುಗೆಯ ಮಾತಿನಿಂದ ಆತನ ಕಡು ಬಡತನ ಹಿಂಗಲಿಲ್ಲ. ಹಗರಿಬೊಮ್ಮನಹಳ್ಳಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಾಗಿದ್ದ ರಾ. ರು. ಕುಸುಗೂರು ಅವರು ಇತ್ತೀಚೆಗೆ ಒಂದು ಜನತಾ ಮನೆ ಮಾಡಿಕೊಟ್ಟಿದ್ದಾರೆ. ಆತನ ವ್ಯವಸಾಯಕ್ಕೆ ಎತ್ತಿದ್ದರೆ ನೇಗಿಲಿಲ್ಲ. ನೇಗಿಲಿದ್ದರೆ ಬಂಡಿ ಇಲ್ಲ. ಸರಕಾರದಿಂದ ಬರುವ ಮಾಸಾಶನ ತಿಂಗಳಿಗೆ ನೂರು ರೂ. ಮಾತ್ರ. ಪ್ರಶಸ್ತಿ ಪಡೆದವರಿಗೆ ಕನಿಷ್ಠ 500 ರೂ. ಮಾಸಾಶನ ನೀಡಬೇಕೆಂದು ಸರಕಾರವನ್ನು ಕೇಳಿ ಕೇಳಿ ಸಾಕಾಗಿದೆ.

ಫ್ರಾನ್ಸಿನ್ ಮೇರಿಪಾಲ್ ಬೋಸ್ ಅವರು ಅಂತರ್ರಾಷ್ಟ್ರೀಯ ಗೊಂಬೆಯಾಟ ಪ್ರದರ್ಶನದಲ್ಲಿ ಭಾಗವಹಿಸಲು ಸೂಕ್ತ ತಂಡಗಳನ್ನು ಆರಿಸಲು 1983ರಲ್ಲಿ ಭಾರತಕ್ಕೆ ಬಂದರು. ರಾಜಸ್ಥಾನ, ಮಹಾರಾಷ್ಟ್ರ, ಆಂಧ್ರ, ಕರ್ನಾಟಕ ಮತ್ತು ಇತರೆಡೆ ತಂಡಗಳನ್ನು ನೋಡಿ ಸಂಕರಗೊಳ್ಳದೇ ಮೂಲದ ಸಂಪತ್ತನ್ನು ಉಳಿಸಿಕೊಂಡಿರುವ ತಂಡವೆಂದರೆ ದೊಡ್ಡ ಭರಮಪ್ಪನ ತಂಡವೆಂದು ಶಿಫಾರಸ್ಸು ಮಾಡಿ ಭಾರತ ಸರಕಾರದೊಂದಿಗೆ ಕಳೆದ ವರ್ಷವೆಲ್ಲಾ ಹೋರಾಡಿ ಈಗ ಈ ತಂಡವು ಬೋನ್‌ನಲ್ಲಿ ನಡೆಯಲಿರುವ ಉತ್ಸವದಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ.

‘ಸೌಲಭ್ಯ ವಂಚಿತ ಶಿಕಾರಿಪುರ ತಾಲೂಕು ಹಿಂದುಳಿದ ವರ್ಗ’

ಶಿಕಾರಿಪುರ, ಮಾ. 21–ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರ ಕ್ಷೇಮಾಭಿವೃದ್ಧಿಗಾಗಿ ಸರಕಾರ ಕೈಗೊಂಡಿರುವ ಅನೇಕ ಯೋಜನೆಗಳ ಪ್ರಯೋಜನ ಶಿಕಾರಿಪುರ ತಾಲೂಕಿನ ಶೇ. ಐದರಷ್ಟು ಮಂದಿಗೂ ದೊರೆತಿಲ್ಲ ಎಂದು ಶಿಕಾರಿಪುರ ಪುರಸಭಾ ಸದಸ್ಯ ಆರ್. ನಾಗರತ್ನಮ್ಮ ಅವರು ಸಚಿವ ಜಿ. ಬಸವಣ್ಣಪ್ಪ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಅಭಿವೃದ್ಧಿ ಯೋಜನೆಯಲ್ಲಿ ಸೌಲಭ್ಯ ಪಡೆಯಲು ನಿಗದಿತ ಅರ್ಜಿ ಫಾರಂಗಳನ್ನು ಇಲಾಖೆಯಲ್ಲಿ ಕೇಳಿದರೆ ಅರ್ಜಿ ಫಾರಂಗಳ ಕೊರತೆ ಎಂದು ಇಲಾಖೆ ತನ್ನ ಅಸಹಾಯಕತೆ ವ್ಯಕ್ತಪಡಿಸುತ್ತಿರುವುದಕ್ಕೆ ನಾಗರತ್ನಮ್ಮ ವಿಷಾದ ವ್ಯಕ್ತಪಡಿಸಿದ್ದಾರೆ.

ಶಿಕ್ಷಣಾಧಿಕಾರಿಗಳಿಗೆ ಪ್ರಯಾಣ ಭತ್ಯೆ ಏರಿಕೆ ಸಂಭವ

ಬೆಳ್ತಂಗಡಿ, ಮಾ. 21-ಶಿಕ್ಷಣ ಇಲಾಖೆಯಲ್ಲಿ ಸಹಾಯಕ ಶಿಕ್ಷಣಾಧಿಕಾರಿಗಳಾಗಿ ಹಾಗೂ 58 ಪರೀಕ್ಷಣಾಧಿಕಾರಿಗಳ ಸೇವೆ ಸಲ್ಲಿಸುತ್ತಿರುವವರಿಗೆ ಮಾಸಿಕ ಪ್ರಯಾಣ ಭತ್ಯೆ ಹೆಚ್ಚಿಸಲು ಸರ್ಕಾರ ಆಲೋಚಿಸುತ್ತಿದೆ ಎಂದು ತಿಳಿದುಬಂದಿದೆ.

ವಿಧಾನ ಸಭೆಯಲ್ಲಿ ಶಾಸಕ ವಸಂತ ಬಂಗೇರ ಅವರ ಪ್ರಶ್ನೆಗೆ ಶಿಕ್ಷಣ ಸಚಿವರು ಲಿಖಿತ ಉತ್ತರದಲ್ಲಿ ಈಗಿರುವ ಮಾಸಿಕ ಪ್ರಯಾಣ ಭತ್ಯೆ ಕ್ರಮವಾಗಿ 100ರೂ. ಗಳಿಂದ 500ರೂ. ಹಾಗೂ 50ರಿಂದ250 ರೂ.ಗಳಿಗೆ ಏರಿಸಲಾಗುವುದೆಂದು ತಿಳಿಸಿರುವುದಾಗಿ ಗೊತ್ತಾಗಿದೆ.

ವರ್ಗಾವಣೆ

ಬೆಂಗಳೂರು ಜಿಲ್ಲೆಯ ಹೇಸರಘಟ್ಟ ಸರ್ಕಾರಿ ಕಿರಿಯ ಕಾಲೇಜಿನ ಕೆಲ ಉಪನ್ಯಾಸಕರನ್ನು ವರ್ಗಾಯಿಸಬೇಕೆಂದು ಶಾಸಕ ಬಂಗೇರ ಅವರು ಕೇಳಿದಾಗ ಮುಖ್ಯಮಂತ್ರಿಯವರು ಲಿಖಿತ ಉತ್ತರದ ಮೂಲಕ ಸದ್ರಿ ಉಪನ್ಯಾಸಕರನ್ನು ವರ್ಗಾಯಿಸುವಂತೆ ವಿದ್ಯಾ ಇಲಾಖೆಯ ಕಾರ್ಯದರ್ಶಿಯವರಿಗೆ ಆದೇಶ ನೀಡಿದ್ದಾರೆಂದು ಗೊತ್ತಾಗಿದೆ.

ಸೂಕ್ತ ನೆರವು

ಕುಟುಂಬ ಯೋಜನೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ನಿಷ್ಕ್ರಿಯೆಯಿಂದ ಇಲ್ಲವೇ ಇನ್ನಿತರ ತೊಂದರೆಗಳಿಗೀಡಾದವರಿಗೆ ಸರ್ಕಾರದಿಂದ ಸೂಕ್ತ ನೆರವು ನೀಡುವುದಾಗಿ ಆರೋಗ್ಯ ಸಚಿವರು ಶಾಸಕ ಬಂಗೇರ ಅವರಿಗೆ ಲಿಖಿತ ಉತ್ತರದ ಮೂಲಕ ತಿಳಿಸಿದ್ದಾರೆಂದು ಗೊತ್ತಾಗಿದೆ.

ಕಟ್ಟಡ ಕೆಲಸ

ಸುಮಾರು 4.5 ಲಕ್ಷ ರೂ. ವೆಚ್ಚದಲ್ಲಿ 25 ಎಕರೆ ಜಮೀನು ಪ್ರದೇಶದಲ್ಲಿ ಬೆಳ್ತಂಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡದ ಕೆಲಸ ನಿರ್ಮಾಣ ಹಂತದಲ್ಲಿದೆ.

ಶಾಸಕ ವಸಂತ ಬಂಗೇರ ಅವರ ನೇತೃತ್ವದಲ್ಲಿ ಸುಮಾರು 2 ಲಕ್ಷ ರೂ. ದೇಣಿಗೆಯನ್ನು ಸಾರ್ವಜನಿಕರಿಂದ ಸಂಗ್ರಹಿಸುವ ಹಾಗೂ ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಯೋಜನೆಯನ್ವಯ 2.5 ಲಕ್ಷ ರೂ. ನೆರವು ಸರ್ಕಾರದಿಂದ ದೊರೆಯುವ ನಿರೀಕ್ಷೆಯಿದೆ ಎಂದು ತಿಳಿದು ಬಂದಿದೆ.

ಮೈಸೂರಿನಲ್ಲಿ

‘ದಲಿತ, ರೈ

ಮೈಸೂರು, ಮಾ. 21– “ರಾಜ್ಯದ ಇಂದಿನ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ರೈತ ಸಂಘಟನೆ ಹಾಗೂ ದಲಿತ ಸಂಘರ್ಷ ಸಮಿತಿಗಳು ಒಟ್ಟಾಗಿ ನಿಂತು ಸಾಮರಸ್ಯದಿಂದ ಹೋರಾಡಬೇಕಾಗಿದೆ” ಎಂದು ಅಧ್ಯಾಪಕ ಟಿ. ಸುಬ್ರಹ್ಮಣ್ಯಂ ಅವರು ಹೇಳಿದ್ದಾರೆ.

ಕರ್ನಾಟಕ ರಾಜ್ಯ ರೈತ ವಿದ್ಯಾರ್ಥಿ ಒಕ್ಕೂಟ ಇತ್ತೀಚೆಗೆ ಏರ್ಪಡಿಸಿದ್ದ “ರೈತ-ದಲಿತ ಚಳವಳಿ: ನಾಳಿನ ದಿಕ್ಕು” ವಿಚಾರ ಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಈ ಸಿಟಿನಲ್ಲಿ ಮೊದಲ ಪ್ರಯತ್ನವಾಗಿ ರಾಜ್ಯದಲ್ಲಿ ಮೂಡಿ ಬಂದ ಕರ್ನಾಟಕ ರಾಜ್ಯ ರೈತ ಸಂಘ ನಡೆಸಿದ ಪ್ರಜಾಸತ್ತಾತ್ಮಕ ಅಹಿಂಸಾತ್ಮಕ ಚಳವಳಿ ಪ್ರಾರಂಭದ... ಅತ್ಯಂತ ಸಮರ್ಪಕವಾಗಿ ಮೂ... ಬಂದರೂ ಈಗ ಅದರ ಸತ್ವ ಕಡಿಮೆಯಾ... ಗುತ್ತಿದೆ ಎಂದು ಅವರು ಅಭಿಪ್ರಾಯಪಟ್ಟರು.

ರೈತ ಚಳವಳಿಗಳಲ್ಲಿ ಆಂತರಿಕ ಪ್ರ... ಪ್ರಭುತ್ವ ಇಲ್ಲದಿದ್ದುದು ಹಾಗೂ ಅದ... ಕಾರ್ಯಕರ್ತರು ತಮ್ಮ ಮುಂದಾಳುಗಳ... ಮನಬಿಚ್ಚಿ ಮಾತನಾಡಲು ಸಂಕೋ...

ಚಿಕ್ಕಮಗಳೂರಿನಲ್ಲಿ ಶುಚಿತ್ವಕ್ಕೆ ಹೆಚ್ಚಿನ ಗಮನದ ಭರವಸೆ

(ಮುಂಗಾರು ವರದಿ)

ಚಿಕ್ಕಮಗಳೂರು, ಮಾ. 21— ಕು... ಯುವ ನೀರು, ಬೀದಿ ದೀಪ ಹಾ... ಶುಚಿತ್ವಕ್ಕೆ ಹೆಚ್ಚು ಗಮನ ನೀಡುವುದ... ಇತ್ತೀಚೆಗೆ ಆಯ್ಕೆಯಾದ ನಗರಸಭೆ ಅಧ್ಯ... ಕೆ. ಎಂ. ಮಂಜುನಾಥ್ ಮತ್ತು ಉ... ಧ್ಯಕ್ಷ ಕೋಟೆ ಶ್ರೀನಿವಾಸ ತಿಳಿಸಿದರು.

ಹೊಸದಾಗಿ ಆಯ್ಕೆಯಾದ ನಾ... ಪತ್ರಕರ್ತರೊಂದಿಗೆ ಮಾತನಾಡುತ್ತಿ... ಅವರು ಜಿಲ್ಲಾಧಿಕಾರಿಗಳು ಕೈಗೊಂಡಿರು... ಕಾರ್ಯಗಳನ್ನು ತ್ವರಿತವಾಗಿ ಪೂ... ಗೊಳಿಸಲಾಗುವುದು ಎಂದರು. ಶೇ. 1... ಹಣದಲ್ಲಿ ಕಾಮಗಾರಿಗಳ ಬಗ್ಗೆ ಸೂಕ್ತ ಕ... ಕೈಗೊಳ್ಳುವುದಾಗಿ ತಿಳಿಸಿದ ಅ... ಮಾರ್ಚ್ ಅಂತ್ಯದವರೆಗೆ 13 ಲಕ್ಷ ರೂ... ವೆಚ್ಚದಲ್ಲಿ ಡಾಮರು ಹಾಕಲಾಗುವುದೆಂದರು.

ಗೃಹನಿರ್ಮಾಣ ಮಂಡಳಿ ಬಳಿ ನಿವೇಶ... ಹಂಚಲು ನೂರು ಎಕರೆ ಪ್ರದೇಶವ... ಸ್ವಾಧೀನಪಡಿಸಿಕೊಳ್ಳಲು ಮಂಡಳಿ ವ... ಡಿದ್ದು ಮಂಜೂರಾತಿ ಆದಲ್ಲಿ ನಿವೇಶನ ಇಲ್ಲ... ದವರಿಗೆ ನಿವೇಶನ ಹಂಚಲಾಗುವುದೆಂ... ತಿಳಿಸಿದರು. ನಗರಸಭೆಗೆ ಲಾರಿಯೊಂದ... ಕೊಳ್ಳಲು ಸರ್ಕಾರವನ್ನು ಕೇಳಲಾಗಿದ್ದು... ಸದ್ಯದಲ್ಲೇ ಬರುವ ನಿರೀಕ್ಷೆ ಇದೆ ಎಂ... ಅವರು ಮುಂದಿನ ಬಜೆಟ್‌ನಲ್ಲಿ ಇನ್ನೂ... ಒಂದು ವಾಹನಕೊಳ್ಳಲು ಹಣ ವಿನಿಯೋ... ಲಾಗುವುದೆಂದರು.

ನಗರಸಭೆಗೆ 28 ಲಕ್ಷ ರೂ ಗಳ ತೆರಿಗೆ... ಬಾಕಿ ಇದ್ದು ನಾಗರಿಕರು ತೆರಿಗೆ ಪಾವ... ಸಲು ಮನವಿ ಮಾಡಿದ ಅವರು ಸಾರ್ವಜನಿಕ... ರಿಂದ ಬರುವ ಅರ್ಜಿಗಳಿಗೆ 10 ದಿನಗಳ... ಒಳಗಾಗಿ ಉತ್ತರ ನೀಡಲಾಗುವುದೆಂದರು.

ಎರಡನೇ ಮದುವೆ: ಮೊದಲ ಪತ್ನಿ ದೂರು

ಸಾಗರ, ಮಾ. 21– ಸೊರಬ ತಾಲ್ಲೂಕು ಬಂಕಸಾಣದಲ್ಲಿ ಇತ್ತೀಚೆಗೆ ನಡೆದ ಸಾಮೂಹಿಕ ಮದುವೆ ಕಾರ್ಯಕ್ರಮದಲ್ಲಿ ವಾಸು ಭಂಡಾರಿ ಎಂಬವನಿಗೆ ಎರಡನೇ ಮದುವೆ ಮಾಡಲಾಗಿದೆ ಎಂದು ಅವರ ಪತ್ನಿ ನ್ಯಾಯಾಲಯದಲ್ಲಿ ದೂರು ಸಲ್ಲಿಸಿದ್ದಾರೆ.

ಇಲ್ಲಿಗೆ ಸಮೀಪದ ತಾಳಗುಪ್ಪ ಹೋಬಳಿ ಮತ್ತೂರು ಗ್ರಾಮದ ಮಹಿಳೆಯೊಬ್ಬರು. ಈ ರೀತಿ ದೂರು ಸಲ್ಲಿಸಿದವರು. ದೂರನ್ನು ಸ್ವೀಕರಿಸಿದ ನ್ಯಾಯಾಧೀಶರು ಈ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಡಿವೈ. ಎಸ್. ಪಿ. ಗೆ ಆದೇಶಿಸಿದ್ದಾರೆಂದು ತಿಳಿದುಬಂದಿದೆ.

ಕೊಲೆಯಾದ ಕಾರ್ಮಿಕನ ಪತ್ನಿಗೆ ಪರಿಹಾರ

ಚಿಕ್ಕಮಗಳೂರು, ಮಾ. 21:- ಕರ್ತವ್ಯದಲ್ಲಿದ್ದಾಗ ಕೊಲೆಯಾದ ಕಾರ್ಮಿಕನ ಪತ್ನಿಗೆ 18 ಸಾವಿರ ರೂ. ಪರಿಹಾರ ನೀಡಲು ಕಾರ್ಮಿಕ ಅಧಿಕಾರಿ ವಿ. ಎಸ್. ಪಟ್ಟಣಗಿ ಆದೇಶ ನೀಡಿದ್ದಾರೆ.

ಮೂಡಿಗೆರೆಯ ತತ್ಕೊಳ ಕಾಫಿ ತೋಟದಲ್ಲಿ ವಾಚ್‌ಮನ್ ಕೆಲಸ ಮಾಡುತ್ತಿದ್ದ ಕೃಷ್ಣ ಎಂಬಾತನ ಕೊಲೆಯು 1984ರ ಜನವರಿ 13ರಂದು ನಡೆದು ವಾಚ್‌ಮನ್ ಪೌಲ್ ಪೆರೇರಾ ಎಂಬಾತನನ್ನು ಈ ಸಂಬಂಧದಲ್ಲಿ ಬಂಧಿಸಲಾಗಿತ್ತು. ಆದರೆ ಆತನನ್ನು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ವಿಮುಕ್ತಗೊಳಿಸಿದ್ದರು.

ಗಂಡನನ್ನು ಕಳೆದುಕೊಂಡ ಪತ್ನಿ ಶಾರದಮ್ಮ ಕಾರ್ಮಿಕ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ಪರಿಶೀಲಿಸಿದ ಪಟ್ಟಣಗಿ ಅವರು 18 ಸಾವಿರ ರೂ.ಪರಿಹಾರ ನೀಡಲು ತೀರ್ಪು ನೀಡಿದರು. ಕೊಲೆಯಾದ ಕೃಷ್ಣನಿಗೆ ಮೂರು ಮಕ್ಕಳು. ಆತನ ಕುಟುಂಬ ಅನಾಥವಾಗಿತ್ತು.

ದಲಿತ ವಿದ್ಯಾರ್ಥಿಗೆ ಥಳಿಸಿದರು!

ಆಲ್ದೂರಿನ ಹಿಂದುಳಿದ ವಿದ್ಯಾರ್ಥಿಗಳ ಹಾಸ್ಟೆಲಿನ ವಿದ್ಯಾರ್ಥಿ ಮಾಳಯ್ಯ ಎಂಬಾತನಿಗೆ ಏಳು ಜನರು ಕಳೆದ ಶುಕ್ರವಾರ ಅವಮಾನಕರವಾಗಿ ಥಳಿಸಿ ಜಾತಿ ಹೆಸರು ಹೇಳಿ ಬೈದು ಅವಮಾನಪಡಿಸಿದ್ದಾರೆ. ಪರೀಕ್ಷೆಗೆ ತಯಾರಾಗಲು ಪ್ರವಾಸಿ ಮಂದಿರದ ಬಳಿ ಓದುತ್ತಾ ಕುಳಿತ ಈ ವಿದ್ಯಾರ್ಥಿಯ ಮೇಲೆ ಏಕಾಏಕಿ ಹಲ್ಲೆ ನಡೆಸಿ ಬಟ್ಟೆಯನ್ನೆಲ್ಲಾ ಹರಿದು ಹಾಕಿದ್ದಾರೆ. ಈ ಬಗ್ಗೆ ಆ ವಿದ್ಯಾರ್ಥಿ ಆಲ್ದೂರು ಪೊಲೀಸರಿಗೆ ದೂರು ನೀಡಿದ್ದಾರೆ.

ಪೊಲೀಸರು ಮೊಕದ್ದಮೆ ದಾಖಲು ಮಾಡಿಕೊಂಡು ತನಿಖೆ ನಡೆಸುತ್ತಿದ್ದಾರೆ.

37 ಇಡ್ಲಿ ತಿಂದು ಮುಗಿಸಿದ ಭೂಪ

ತೀರ್ಥಹಳ್ಳಿ, ಮಾ. 21–ಮಾರಿಜಾತ್ರೆಯ ಪ್ರಯುಕ್ತ ಇತ್ತೀಚೆಗೆ ಇಲ್ಲಿ ನಡೆದ ಇಡ್ಲಿ ತಿನ್ನುವ ಸ್ಪರ್ಧೆಯಲ್ಲಿ 37ಇಡ್ಲಿಯನ್ನು ತಿಂದ ಎಸ್. ವಿ. ಶ್ರೀನಿವಾಸ ಪ್ರಥಮ ಬಹುಮಾನ ಪಡೆದರು.

33ಇಡ್ಲಿಯನ್ನು ತಿಂದು ಮುಗಿಸಿದ ಟಿ. ಜೆ. ಅಶೋಕ ದ್ವಿತೀಯ ಬಹುಮಾನ ಗಿಟ್ಟಿಸಿಕೊಂಡರು.

ಈ ಸ್ಪರ್ಧೆಯನ್ನು ಸ್ಥಳೀಯ ಮಾರಿಗುಡಿ ಫ್ರೆಂಡ್ಸ್ ಅಸೋಸಿಯೇಷನ್ ಏರ್ಪಡಿಸಿತ್ತು. ಸ್ಪರ್ಧೆಯಲ್ಲಿ 18ಮಂದಿ ಭಾಗವಹಿಸಿದ್ದರು.

ತೀವ್ರ ಪ್ರಚಾರ ಆಂದೋಲನ

ಚಿಕ್ಕಮಗಳೂರು, ಮಾ. 21–ಶೃಂಗೇರಿ ತಾಲೂಕಿನ ಮೆಣಸೆ... ದಲ್ಲಿ ಇತ್ತೀಚೆಗೆ ನಡೆದ ನಾಲ್ಕು ದಿನಗಳ ತೀವ್ರ ಪ್ರಚಾರ ಆಂದೋಲನವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಎಸ್. ಜಿ. ... ಉದ್ಘಾಟಿಸಿದರು.

ಈ ಆಂದೋಲನವನ್ನು ವಾರ್ತಾ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ... ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ವ್ಯವಸ್ಥೆ ಮಾಡಲಾಗಿತ್ತು.

ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿ ಡಿ. ರಾಮನಾಯಕ್ ಅಧ್ಯಕ್ಷತೆ ವಹಿಸಿದ್ದರು. ವಾರ್ತಾ ಸಹಾಯಕ ಎಚ್. ಪಿ. ರಾಮಲಿಂಗೇಗೌಡ ಸ್ವಾಗತಿಸಿ ವಂದಿಸಿದರು.

ಪ್ರೋತ್ಸಾಹದಿಂದ ನೃತ್ಯ ಕಲೆ ಉಳಿವು ಸಾಧ್ಯ

ಕಾರವಾರ, ಮಾ. 21-ಭಾರತೀಯ ನೃತ್ಯ ಕಲೆಯನ್ನು ಇತರ ಕಲೆಯಿಂದ ಪ್ರತ್ಯೇಕಪಡಿಸಿ ಅದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಆಗ ಮಾತ್ರ ಈ ಕಲೆ ಉಳಿಯಲಿಕ್ಕೆ ಸಾಧ್ಯ ಎಂದು ಖ್ಯಾತ ಯಕ್ಷಗಾನ ಕಲಾವಿದ ಕೆರೆಮನೆ ಶಿವರಾಮ ಹೆಗಡೆ ಅಭಿಪ್ರಾಯಪಟ್ಟಿದ್ದಾರೆ.

ಅವರು ಇತ್ತೀಚೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹೊನ್ನಾವರದ ಸೈಂಟ್ ಥಾಮಸ್ ಪ್ರೌಢಶಾಲೆ ಆವರಣದಲ್ಲಿ ಏರ್ಪಡಿಸಿದ ಮೂರು ದಿನಗಳ ನೃತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ನಾಶದ ಪಥ ಸಂಪ್ರದಾಯದ ಈ ಕಲೆ ಉಳಿದಾಗ ಸಂಸ್ಕೃತಿ ಉಳಿಯುತ್ತದೆ ಎಂದು ಅವರು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಹೊನ್ನಾವರ ಎಸ್. ಡಿ ಎಂ. ಕಾಲೇಜಿನ ಪ್ರಿನ್ಸಿಪಾಲ್ ಆರ್. ಎನ್. ನಾಯಕ ಅವರು ಮಾತನಾಡುತ್ತ, ಕರ್ನಾಟಕ ತನ್ನ ಯಕ್ಷಗಾನ ಕಲೆಯನ್ನು ಭಾರತಕ್ಕೆ ವಿಶಿಷ್ಟ ಕೊಡುಗೆಯಾಗಿ ನೀಡಿದೆ. ಇಂಥ ಕಾರ್ಯಕ್ರಮಗಳಲ್ಲಿ ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಅವಕಾಶ ನೀಡಬೇಕು ಎಂದು ಸಲಹೆ ಇತ್ತರು.

ಪ್ರಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎ. ಎಸ್. ನಾಗರಾಜ ಅವರು ಸ್ವಾಗತಿಸಿದರು. ಕೊನೆಯಲ್ಲಿ ಅಶೋಕ ಎಸ್. ವಿಶ್ವೇಶ್ವರ ಅವರು ವಂದಿಸಿದರು.

ಸಮಾರೋಪ

ಹೊನ್ನಾವರದ ತಹಸೀಲ್ದಾರ್ ಲಮಾಣಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿ ಜಿ. ಎಸ್. ಪೂಜಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಪ್ರಾರಂಭದಲ್ಲಿ ಎ. ಎಸ್. ನಾಗರಾಜ ಸ್ವಾಗತಿಸಿದರು. ಕೊನೆಯಲ್ಲಿ ಅಶೋಕ ಉಳ್ವೇಕರ್ ವಂದಿಸಿದರು.

ಜನತಾ ಅಧ್ಯಕ್ಷರ ಆಯ್ಕೆ

ಮೈಸೂರು, ಮಾ. 21–ಇಲ್ಲಿನ ಕೃಷ್ಣರಾಜ ವಿಧಾನ ಸಭಾ ಕ್ಷೇತ್ರದ ಜನತಾ ಅಧ್ಯಕ್ಷರಾಗಿ ಯು. ಎಂ. ಶಾಂತಪ್ಪ ಅವರು ಆಯ್ಕೆಯಾಗಿದ್ದಾರೆ.

ಅವರು ಇದೀಗ ಮೂರನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.



ಆದರ್ಶ ಮದುವೆ

ವರ್ಕಾಡಿ ಕೃಷ್ಣಪೂಜಾರಿ ಅವರ ಪುತ್ರ ರಾಮಚಂದ್ರ ಮತ್ತು ಬೋಳಾರ ಬಾಲಕೃಷ್ಣ ಶೆಟ್ಟಿ ಅವರ ಪುತ್ರಿ ವಿಶಾಲಾಕ್ಷಿ ಅವರು ಇತ್ತೀಚೆಗೆ ಮಂಗಳಾದೇವಿಯಲ್ಲಿ ಅಂತರ್ಜಾತಿ ಮದುವೆಯಾದರು.

ಹೊಸ ದಂಪತಿಗಳಿಗೆ “ಮುಂಗಾರು” ಬಳಗದ ಶುಭಾಶಯಗಳು.

ಮೈಸೂರು ವಿ. ವಿ. ಸಾಮಾನ್ಯ ಸಭೆ

ಸೆನೆಟ್ ಸದಸ್ಯರು ಮತ್ತು ಅರ್ಹತೆ

ಮೈಸೂರು, ಮಾ. 21:- ಮೈಸೂರು ವಿ.ವಿ. ಸೆನೆಟ್ ಸಭೆಗೆ ಹೊಸದಾಗಿ ನೇಮಕಗೊಂಡ ಹತ್ತು ಕಾಲೇಜುಗಳ ಪ್ರಿನ್ಸಿಪಾಲರ ಪೈಕಿ ನಾಲ್ಕು ಕಾಲೇಜುಗಳ ಪ್ರಿನ್ಸಿಪಾಲರು ಸೆನೆಟ್ ಸದಸ್ಯರಾಗಿ ಮುಂದುವರಿಯಲು ಅರ್ಹರೇ? ಅನರ್ಹರೇ?

ಪ್ರಸ್ತುತ ವರ್ಷದ ಮೈಸೂರು ವಿ. ವಿ. ಎರಡನೇ ಸಾಮಾನ್ಯ ವಾರ್ಷಿಕ ಸಭೆಯ ಚರ್ಚೆಯ ಮುಖ್ಯ ವಿಷಯ ಇದಾಗಿತ್ತು.

ಸಭೆ ಆರಂಭವಾಗುತ್ತಿದ್ದಂತೆ ಕ್ರಿಯಾಲೋಪ ಎತ್ತಿದ ಸೆನೆಟ್ ಸದಸ್ಯ ಬಿ. ಎಸ್. ಪಂಡಿತ ಅವರು ಶ್ರೀರಂಗಪಟ್ಟಣ ಮೊದಲಾದ ನಾಲ್ಕು ಊರುಗಳಲ್ಲಿ ನೂತನವಾಗಿ ಸ್ಥಾಪನೆಯಾಗಿರುವ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ವಿ. ವಿ. ಮಾನ್ಯತೆಯನ್ನೇ ನೀಡದಿರುವುದರಿಂದ ಆ ಕಾಲೇಜಿನ ಪ್ರಿನ್ಸಿಪಾಲರು ಸೆನೆಟ್ ಸದಸ್ಯರಾಗಲು ಅರ್ಹರಾಗುತ್ತಾರೆಯೇ? ಎಂದು ಅನುಮಾನ ವ್ಯಕ್ತಪಡಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿ. ವಿ. ಉಪಕುಲಪತಿ ಡಾ। ಪ್ರೊ. ಪಿ. ರುದ್ರಪ್ಪ ಅವರು ಈ ಸಂದರ್ಭದಲ್ಲಿ ಮಾತನಾಡುತ್ತಾ ವಿ. ವಿ. ಯು ಆ ಕಾಲೇಜುಗಳಿಗೆ ಮಾನ್ಯತೆ ನೀಡದಿರುವುದು ನಿಜ. ಆದರೆ ಮಾನ್ಯತೆ ನೀಡುವ ದಾರಿಯಲ್ಲಿ ವಿ. ವಿ. ಇರುವುದರಿಂದ ಸಭೆಗೆ ಈ ನಾಲ್ಕು ಕಾಲೇಜುಗಳ ಪ್ರಿನ್ಸಿಪಾಲರು ಬಂದಿದ್ದರೆ ತಕ್ಷಣ ಹಿಂದಿರುಗಬೇಕೆಂದು ತಿಳಿಸಿದರು.

ಈ ಮಾತಿಗೆ ಬಿ. ಎಸ್. ಪಂಡಿತ್ ಸೇರಿದಂತೆ ಹಲವರು ಪ್ರತಿಭಟನೆ ವ್ಯಕ್ತಪಡಿಸಿದುದಲ್ಲದೆ ಸಭೆಗೆ ಆಹ್ವಾನಿಸಿ, ಹೊರಗೆ ಹೋಗಿ ಅನ್ನುವುದು ಮಕ್ಕಳಾಟ, ನಾಚಿಕೆಗೇಡಿತನ ಎಂದರು.

ಬಿಗು ವಾತಾವರಣದಲ್ಲಿ ಬಿಸಿ ಚರ್ಚೆಯ ಮಧ್ಯೆ ಪ್ರವೇಶಿಸಿದ ಸಭಾಧ್ಯಕ್ಷರು ಸಭೆಗೆ ಆಗಮಿಸಿರುವ ಕಾಲೇಜಿನ ಪ್ರಿನ್ಸಿಪಾಲರು ಹೊರಗೆ ಹೋಗಬೇಕಾದ ಅಗತ್ಯವಿಲ್ಲ ಎಂದು ತಿಳಿಸಿ ಮುಂದೆ ಆ ಕಾಲೇಜಿಗೆ ವಿ. ವಿ. ಮಾನ್ಯತೆ ದೊರಕಿದ ಮೇಲೆ ಆ ಪ್ರಿನ್ಸಿಪಾಲರು ಸಭೆಯ ಪೂರ್ಣಾವಧಿ ಸದಸ್ಯರಾಗಿ ಮುಂದುವರಿಯಬಹುದೆಂಬ ಹೇಳಿಕೆ ನೀಡುವುದರೊಂದಿಗೆ ಚರ್ಚೆಗೆ ತೆರೆ ಎಳೆದರು.

ಮೈಸೂರು ವಿ. ವಿ. ಪರಿಶಿಷ್ಟ ಜಾತಿಯವರಿಗೆ ನೇಮಕಾತಿ ಹಾಗೂ ಇನ್ನಿತರ ವಿಷಯಗಳಲ್ಲಿ ಮಲತಾಯಿ ಧೋರಣೆ ತೋರಿಸುತ್ತಿದೆ. ಇದೇ ದೃಷ್ಟಿ ಮುಂದುವರಿದರೆ ತೀವ್ರ ಪ್ರತಿಭಟನೆ ಎದುರಿಸಬೇಕಾದೀತೆನ್ನುವ ಎಚ್ಚರಿಕೆಯನ್ನು ಸೆನೆಟ್ ಸದಸ್ಯ ಕೆ. ಆರ್. ಭಾಸ್ಕರ್ ಅವರು ಸಭೆಯಲ್ಲಿ ನೀಡಿದರು. ತಕ್ಷಣ ಕ್ರಮತೆಗೆದುಕೊಳ್ಳುವ ಭರವಸೆಯನ್ನು ಸಭಾಧ್ಯಕ್ಷರು ನೀಡಿದರು.

ಮೈಸೂರು ವಿ. ವಿ. ಮಾಜಿ ಉಪಕುಲಪತಿ ಪ್ರೊ॥ ಕೆ. ಎಸ್. ಹೆಗ್ಡೆ ಅವರು ತಮ್ಮ ಕಾರ್ಯಾವಧಿಯಲ್ಲಿ ಪ್ರವಾಸ ಕೈಗೊಂಡಾಗ ನಿಗದಿತ ಹಣಕ್ಕಿಂತ ಹೆಚ್ಚು ಪಡೆದಿರುವುದರಿಂದ ಅದನ್ನು ಹಿಂತಿರುಗಿಸಲು ಅವರಿಗೆ ಕಾಗದ ಬರೆಯಲಾಗಿದೆ ಎಂದು ಸೆನೆಟ್ ಸಭಾಧ್ಯಕ್ಷ ರುದ್ರಪ್ಪ ಅವರು ಡಾ॥ ಆರ್. ನಾಯರ್ ಅವರ ಲಿಖಿತ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ತಿಳಿಸಿದರು.

ಎಚ್. ಎಸ್. ರಾಮತೀರ್ಥ ಅವರ ಲಿಖಿತ ಪ್ರಶ್ನೆಗೆ ಉತ್ತರಿಸಿದ ಸಭಾಧ್ಯಕ್ಷರು ಹಣಕಾಸು ತೊಂದರೆ ಅವರ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಹರಿದಾಸ ಸಾಹಿತ್ಯ ವಿಭಾಗವನ್ನು ಮುಚ್ಚುವ ಸಾಧ್ಯತೆಗಳಿವೆ. ಈ ಬಗೆಗಿನ ನಿರ್ಧಾರ ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ ಎಂದು ತಿಳಿಸಿದರು.

ಎಲ್ಲಾ ಲಾಭ ಸಹಿತ ಜೀವ ವಿಮಾ ಪಾಲಿಸಿಗಳು ಈಗ ಎಲ್.ಐ.ಸಿ.ಯು ಘೋಷಿಸಿದ ಹೆಚ್ಚಳದ ಬೋನಸ್ ದರಕ್ಕೆ ಕೆಳಗೆ ನಮೂದಿಸಿರುವಂತೆ ಅರ್ಹವಾಗುತ್ತವೆ

ಹೋಲ್ ಲೈಫ್ ವಿಮೆಗಳು:
ರೂ. 55.00
ಪ್ರತಿ ರೂ. 1000 ವಿಮೆಗೆ ಪ್ರತಿ ವರ್ಷಕ್ಕೆ,

ಎಂಡೋಮೆಂಟ್ ವಿಮೆಗಳು:
ರೂ. 44.00
ಪ್ರತಿ ರೂ. 1000 ವಿಮೆಗೆ ಪ್ರತಿ ವರ್ಷಕ್ಕೆ,

ಈಗಲೇ ಜೀವ ವಿಮೆ ಇಳಿಸಿ ನಿಮ್ಮ ಕುಟುಂಬಕ್ಕೆ ಅವಶ್ಯಕವಾದ ಆರ್ಥಿಕ ರಕ್ಷಣೆಯನ್ನು ನೀಡಿ.

ತ್ವರೆ ಮಾಡಿರಿ! ಜೀವ ವಿಮಾ ಏಜಂಟರಲ್ಲಿ ಯಾ ಹತ್ತಿರದ ಎಲ್.ಐ.ಸಿ. ಕಚೇರಿಯಲ್ಲಿ ವಿಚಾರಿಸಿ.

ವಿಮೆ ಇಳಿಸಿ ಸುರಕ್ಷಿತರಾಗಿರಿ.
ಲೈಫ್ ಇನ್‌ಶೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ

RADEUS LIC 1 86 R



ಶಿಕ್ಷಕರ ಶಾಲಾಭಿವೃದ್ಧಿ ಸಮಿತಿ ಸಮ್ಮೇಳನ

ಬಂಟ್ವಾಳ, ಎ.26– ಬಂಟ್ವಾಳ ತಾಲೂಕಿನ ಪ್ರಾಥಮಿಕ ಶಾಲೆಗಳ ಶಿಕ್ಷಕರ ಮತ್ತು ಪ್ರಾಥಮಿಕ ಶಾಲೆಗಳ ಅಭಿವೃದ್ಧಿ ಸಮಿತಿಗಳ ಸಮ್ಮೇಳನವು ಎಸ್. ವಿ. ಎಸ್. ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಸಭಾಭವನದಲ್ಲಿ ದ. ಕ. ಜಿಲ್ಲಾ ಪರಿಷತ್ತಿನ ವಿದ್ಯಾಸಮಿತಿಯ ಅಧ್ಯಕ್ಷರಾದ ಕುಂಞಾಪಳ್ಳಿಯವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರಗಿತು.

ಸಮ್ಮೇಳನದ ಉದ್ಘಾಟನೆಯನ್ನು ಮಾಜಿ ಶಾಸಕ ಹಾಗೂ ಬಂಟ್ವಾಳ ತಾಲೂಕು ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಬಿ. ಎ. ಉಮರಬ್ಬರವರು ನೆರವೇರಿಸಿದರು.

ಶಿಕ್ಷಕರ ಸಮಸ್ಯೆಗಳ ಕುರಿತಾದ ಪ್ರಬಂಧವನ್ನು ಸಿದ್ಧಕಟ್ಟೆ ಹಿ. ಹಿ. ಪ್ರಾ. ಶಾಲೆಯ ಮುಖ್ಯ ಶಿಕ್ಷಕರಾದ ಬಿ. ಚೆನ್ನಕೇಶವ ರಾವ್‌ರವರೂ ಶಿಕ್ಷಕರ ಸಮಸ್ಯೆಗಳನ್ನು ಮಣಿನಾಲ್ಕೂರು ಯಸ್. ವಿ. ಯಸ್. ಹಿ.ಪ್ರಾ. ಶಾಲೆಯ ಮುಖ್ಯ ಶಿಕ್ಷಕ ಯುನ್. ಕೃಷ್ಣರಾಜ ಶೆಟ್ಟರೂ, ಪೋಷಕರ ಸಮಸ್ಯೆಗಳನ್ನು ಪೋಷಕ ಪ್ರತಿನಿಧಿ ಪರಿಕೋಟು ನಾರಾಯಣ ರಾಯರೂ, ಆಡಳಿತಾತ್ಮಕ ಸಮಸ್ಯೆಗಳನ್ನು ಬಂಟ್ವಾಳ ತಾಲೂಕಿನ ಪ್ರಾಥಮಿಕ ಶಾಲೆಗಳ ಪದವೀಧರ ತಪಾಸಣಾಧಿಕಾರಿ ಪಿ. ಈಶ್ವರ ಭಟ್ಟರೂ ಮಂಡಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಮಾಜಿ ಶಾಸಕ ಬಿ. ರಮಾನಾಥ ರೈಯವರೂ, ದ. ಕ. ಜಿಲ್ಲಾ ವಿದ್ಯಾಂಗ ಉಪನಿರ್ದೇಶಕಿ ಶ್ರೀಮತಿ ಶರತ್‌ಕುಮಾರಿ ಮತ್ತು ಉಪನಿರ್ದೇಶಕರ ಕಚೇರಿಯ ಆಂಗ್ಲ ಭಾಷಾ ವಿಷಯ ನಿರೀಕ್ಷಕರಾದ ಆರ್. ಎಸ್. ಬೆಳ್ಳೆಯವರೂ ಪ್ರಚಲಿತ ಸಮಸ್ಯೆಗಳನ್ನೂ, ಅವುಗಳ ಪರಿಹಾರ ವಿಧಾನಗಳನ್ನೂ ವಿಶ್ಲೇಷಿಸಿದರು.

ಅಧ್ಯಕ್ಷತೆ ವಹಿಸಿದ್ದ ಕುಂಞಾಪಳ್ಳಿಯವರು, ಶಿಕ್ಷಣದಲ್ಲಿ ಈಗ ತಲೆದೋರಿರುವ ಸಮಸ್ಯೆಗಳ ಪರಿಹಾರಕ್ಕಾಗಿ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆಯನ್ನು ನೀಡುವುದರ ಜತೆಯಲ್ಲೇ ಶಿಕ್ಷಕರ ಮತ್ತು ಪೋಷಕರ ಪೂರ್ಣ ಸಹಕಾರವನ್ನು ಕೋರಿದರು.

1988–'89ನೇ ಸಾಲಿನಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿ, ಶಾಲೆಯ ಸರ್ವಾಂಗೀಣ ಪ್ರಗತಿಗಾಗಿ ಶ್ರಮಿಸಿದ ಶಾಲಾಭಿವೃದ್ಧಿ ಸಮಿತಿಗಳನ್ನು ಗುರುತಿಸಿ, ಅವುಗಳ ಶಾಲೆಗಳಿಗೆ ಬಹುಮಾನಗಳನ್ನು ನೀಡಿ ಗೌರವಿಸಲಾಯಿತು. ಈ ಬಹುಮಾನಗಳಲ್ಲಿ ಜಿ. ಪ. ಹಿ. ಪ್ರಾ. ಶಾಲೆ, ಮಂಚಿಯು ಪ್ರಥಮ ಸ್ಥಾನವನ್ನೂ, ಜಿ. ಪ. ಮಾ. ಹಿ. ಪ್ರಾ. ಶಾಲೆ, ಬಂಟ್ವಾಳವು ದ್ವಿತೀಯ ಸ್ಥಾನವನ್ನೂ, ಜಿ.ಪ. ಮಾದರಿ ಹಿರಿಯ ಪ್ರಾಥಮಿಕ ಶಾಲೆ, ವಿಟ್ಲವು ತೃತೀಯ ಬಹುಮಾನವನ್ನೂ ಗಳಿಸಿದವು.

ಶ್ರೀಮತಿ ವಿಜಯ ಕುಮಾರಿ ಪ್ರಾರ್ಥಿಸಿದರು. ಬಂಟ್ವಾಳ ತಾಲೂಕಿನ ಸಹಾಯಕ ಶಿಕ್ಷಣಾಧಿಕಾರಿ ರಾಮಶೇಷ ಶೆಟ್ಟರು ಸ್ವಾಗತ ಭಾಷಣವನ್ನು ಮಾಡಿ ಸಮ್ಮೇಳನದ ಉದ್ದೇಶವನ್ನು ವಿವರಿಸಿದರು.

ಕಾರ್ಯಕ್ರಮವನ್ನು ಬಂಟ್ವಾಳ ತಾಲೂಕಿನ ಪದವೀಧರ ತಪಾಸಣಾಧಿಕಾರಿ ಕೆ. ರಾಮಣ್ಣ ಆಳ್ವರು ನಿರೂಪಿಸಿದ್ದರು. ಬಂಟ್ವಾಳ ತಾಲೂಕಿನ ಪದವೀಧರ ತಪಾಸಣಾಧಿಕಾರಿ ಯುನ್. ಕೃಷ್ಣರಾಯರು ವಂದಿಸಿದರು.

ಮಾಜಿ ಶಾಸಕ ಬಿ. ಎ. ಉಮರಬ್ಬ ಅವರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದಾಗ. ಎಡದಿಂದ ಬಲಕ್ಕೆ– ಬಿ. ರಮಾನಾಥ ರೈ, ಕುಂಞಾಪಳ್ಳಿ, ಶ್ರೀಮತಿ ಶರತ್ ಕುಮಾರಿ, ಆರ್. ಎಸ್. ಬೆಳ್ಳೆ ಹಾಗೂ ಪಿ.ಈಶ್ವರ ಭಟ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಬೀಡಿ ಕಂಟ್ರಾಕ್ಟ್ ಪದ್ಧತಿ ರಕ್ಷಣೆಗೆ ಹೋರಾಟ

ಮಂಗಳೂರು, ಎ. 26– ದ.ಕ. ಜಿಲ್ಲೆಯಲ್ಲಿ ಸ್ಥಾಪಿತವಾದ ಬೀಡಿ ಕಾರ್ಮಿಕರ ಹಿತರಕ್ಷಣಾ ವೇದಿಕೆ ಎಂಬ ಕಾರ್ಮಿಕ ಸಂಘಟನೆಗೆ ಸಾಧ್ಯವಿರುವ ಎಲ್ಲಾ ಸಹಾಯ-ಸಹಕಾರಗಳನ್ನು ನೀಡುವುದಾಗಿ ದ.ಕ. ಜಿಲ್ಲಾ ಬೀಡಿ ಕಂಟ್ರಾಕ್ಟುದಾರರ ಸಂಘವು ಭರವಸೆ ನೀಡಿದೆ.

ಇತ್ತೀಚೆಗೆ ಸಂಘದ ಅಧ್ಯಕ್ಷ ಬಿ. ಶಂಭು ನಾಯ್ಕ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಣಯವನ್ನು ಕೈಗೊಳ್ಳಲಾಯಿತು.

ಸರಕಾರವು ಬೀಡಿ ಕಂಟ್ರಾಕ್ಟ್ ಪದ್ಧತಿ ಪರಿಶೀಲನಾ ಸಮಿತಿ ರಚಿಸಿದ್ದು, ಸದ್ರಿ ಸಮಿತಿ ಜಿಲ್ಲೆಯ ಹಾಗೂ ರಾಜ್ಯದ ಬಹಳ ಕಡೆ ಮೊಕ್ಕಾಂ ಮಾಡಿ ಅಭಿಪ್ರಾಯ ಸಂಗ್ರಹಿಸಿದೆ.

ಈಗಾಗಲೇ ವರದಿ ತಯಾರಿ ಅಂತಿಮ ಹಂತಕ್ಕೆ ತಲುಪಿರಬಹುದೆಂದು ಸಂಘವು ಭಾವಿಸಿದ್ದು, ಸದ್ರಿ ಸಮಿತಿಯು ಸದಸ್ಯರು ವಿಷಯವನ್ನು ಕೂಲಂಕಷವಾಗಿ ಅರ್ಥ ಮಾಡಿಕೊಳ್ಳದೇ ಯಾವುದೇ ಪೂರ್ವಾಗ್ರಹ ಪೀಡಿತರಾಗಿ ಬೀಡಿ ಕಂಟ್ರಾಕ್ಟ್ ಪದ್ಧತಿ ರದ್ದತಿ ಮಾಡುವಂತೆ ವರದಿ ಒಪ್ಪಿದರೆ ಆ ಬಗ್ಗೆ ಸಂಘಟಿತ ಹೋರಾಟ ಕೊಡುವುದಕ್ಕೆ ಸಿದ್ಧರಾಗಿರುವಂತೆ ಕಂಟ್ರಾಕ್ಟ್ ಬಾಂಧವರಿಗೆ ಸೂಚನೆ ಕೊಡುವುದೇ ಮೊದಲಾದ ಕೆಲವು ನಿರ್ಣಯಗಳನ್ನು ಸಭೆ ಅಂಗೀಕರಿಸಿತು.

ಸಂಘಟನಾ ಕಾರ್ಯದರ್ಶಿ ಕೃಷ್ಣಪ್ಪ ಕದ್ರಿ, ಕಾರ್ಯದರ್ಶಿ ಕೆ.ಯೂಸುಫ್, ಉಪಾಧ್ಯಕ್ಷ ಯು. ಸೀತಾರಾಮ, ರಮೇಶ್ ಬಂಗೇರ ಮುಂತಾದವರು ಸಭೆಯಲ್ಲಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಜೆ. ಇಬ್ರಾಹಿಂ ವಂದಿಸಿದರು.

ಗ್ರಾಫಿಕ್ ಡಿಸೈನರ್ಸ್ ಸಂಸ್ಥೆ ಉದ್ಘಾಟನೆ

ಬೆಳ್ತಂಗಡಿ, ಎ. 26– ಗ್ರಾಫಿಕ್ ಡಿಸೈನರ್ಸ್ ಎಂಬ ತಾಂತ್ರಿಕ ಸಂಸ್ಥೆಯನ್ನು ಮಾಜಿ ಶಾಸಕ ಕೆ. ವಸಂತ ಬಂಗೇರ ಅವರು ಇತ್ತೀಚೆಗೆ ಬಜಿರೆಯಲ್ಲಿ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಪಂಚಾಯತ್ ಸದಸ್ಯ ಇ. ಸುಂದರಗೌಡ ಮತ್ತು ಮುಂಡಾಜೆ ವಿಜಯಾ ಬ್ಯಾಂಕ್ ಮ್ಯಾನೇಜರ್ ಬಿ. ರಾಮಯ್ಯ ರೈ ಆಗಮಿಸಿದ್ದರು.

ಸಂಸ್ಥೆಯ ಮಾಲೀಕ ಸೂರ್ಯ ನಾರಾಯಣ ಅವರು ಸ್ವಾಗತಿಸಿ, ವಂದಿಸಿದರು.

ಧ್ವಜಕಟ್ಟೆ ಉದ್ಘಾಟನೆ

ಮುಂಗೆರಡ್ಕ ಶಾಲಾವಠಾರದಲ್ಲಿ ಇತ್ತೀಚೆಗೆ ಸತ್ಯನಾರಾಯಣ ಪೂಜೆಯನ್ನು ನೆರವೇರಿಸಲಾಯಿತು ಹಾಗೂ ಧ್ವಜಕಟ್ಟೆಯನ್ನು ಉದ್ಘಾಟಿಸಲಾಯಿತು.

ನಿವೃತ್ತ ಶಾಲಾ ಅಧ್ಯಾಪಕ ಪಿ. ಶಂಕರಗೌಡರು ಧ್ವಜಕಟ್ಟೆಯನ್ನು ಉದ್ಘಾಟಿಸಿದರು. ಸಂಜೆ ಕಣಿಯೂರು ಮಂಡಲ ಪಂಚಾಯತ್ ಪ್ರಧಾನ ಚಂದಪ್ಪ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮದಲ್ಲಿ ಕೇಶವ ಶೆಟ್ಟಿ ಧಾರ್ಮಿಕ ಪ್ರವಚನ ನೀಡಿದರು.

ಜಯಮಾರ್ಗರಾಜ್, ಪಿ. ಶಂಕರಗೌಡ, ಪಿ. ವೆಂಕಟ್ರಮಣ ಭಟ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಸಮಾರಂಭದ ಅಂಗವಾಗಿ ಅನ್ನ ಸಂತರ್ಪಣೆ ನಡೆಯಿತು.

ರಿಕ್ಷಾ ಚಾಲಕರ ಮತ್ತು ಮಾಲೀಕರ ಸಂಘಕ್ಕೆ ಆಯ್ಕೆ

ಉಡುಪಿ, ಎ. 26 – ಸ್ಥಳೀಯ ರಿಕ್ಷಾ ಚಾಲಕರು ಮತ್ತು ಮಾಲೀಕರ ಸಂಘದ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷ ಹಾಗೂ ಲೋಕಸಭಾ ಸದಸ್ಯ ಆಸ್ಕರ್ ಫೆರ್ನಾಂಡಿಸ್‌ರವರ ಅಧ್ಯಕ್ಷತೆಯಲ್ಲಿ ಉಡುಪಿಯ ಡಾನ್ ಬಾಸ್ಕೋ ಹಾಲ್‌ನಲ್ಲಿ ಸೇರಿ ಮುಂದಿನ ವರ್ಷಕ್ಕೆ ಪದಾಧಿಕಾರಿಗಳನ್ನು ಆರಿಸಿತು.

ಪ್ರಾರಂಭದಲ್ಲಿ ಸಮಿತಿಯ ಸದಸ್ಯ ಜಿ. ನರಸಿಂಹ ಮೂರ್ತಿ ಸ್ವಾಗತಿಸಿದರು. ಹಿಂದಿನ ಕಾರ್ಯಕಾರೀ ಸಮಿತಿಯು ಕೈಗೊಂಡ ನಿರ್ಣಯವನ್ನು ಸಭೆಯ ಮುಂದಿಟ್ಟು ಅಂಗೀಕರಿಸಲಾಯಿತು. ಸಂಘದ ಕಾನೂನು ಸಲಹೆಗಾರರಾದ ಅಡ್ವ. ಶ್ರೀನಿವಾಸ ಆಚಾರ್ಯರು ಸಂಘದ ಪದಾಧಿಕಾರಿಗಳ ಚುನಾವಣೆ ನಡೆಸಿದರು.

ಆಸ್ಕರ್‌ಫೆರ್ನಾಂಡಿಸ್‌ರವರು 1989-90ನೇ ವರ್ಷದ ಸಾಲಿಗೆ, ಹನ್ನೆರಡನೇ ಬಾರಿಗೆ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಗೊಂಡರು. ಇತರ ಪದಾಧಿಕಾರಿಗಳಾಗಿ ಜೆರೋಮ್ ಡಿ'ಸಿಲ್ವ ಮತ್ತು ಪಿ. ನರಸಿಂಹ ಮೂರ್ತಿ (ಉಪಾಧ್ಯಕ್ಷರು) ಸುಧಾಕರ ಶೆಟ್ಟಿ ಕಪ್ಪೆಟ್ಟು (ಪ್ರಧಾನ ಕಾರ್ಯದರ್ಶಿ), ಜತೆ ಕಾರ್ಯದರ್ಶಿಗಳಾಗಿ ಕೃಷ್ಣರಾಜ್, ಪುಷ್ಪರಾಜ್, ಉಮೇಶ್ ಕುಲಾಲ್ ಮತ್ತು ಖಜಾಂಚಿಯಾಗಿ ಬಾಬು ಜತ್ತನ್ನ ಅಲ್ಲದೆ 31 ಜನ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಯಾದರು.

ಅಧ್ಯಕ್ಷ ಸ್ಥಾನದಿಂದ ಆಸ್ಕರ್ ಫೆರ್ನಾಂಡಿಸ್ ಮಾತನಾಡುತ್ತಾ ಪ್ರಾರಂಭದಲ್ಲಿ ಅಲ್ಪ ಸದಸ್ಯರಿಂದ ಕೂಡಿದ ನಮ್ಮ ಸಂಘ ಈಗ ಬೆಳೆದಿರುವುದನ್ನು ನೋಡುವಾಗ ತುಂಬಾ ಸಂತೋಷವಾಗುತ್ತಾ ಇದೆ. ಮುಂದೆಯೂ ಬೆಳೆಯಲಿ ಎಂಬುದು ನನ್ನ ಹಾರೈಕೆ. ನಾವು ಪ್ರತಿಯೊಬ್ಬರು ತಮ್ಮ ಸ್ವಂತ ನೆಲೆಯಲ್ಲಿ ದುಡಿಯುವಂತೆ ಆಗಬೇಕು. ಪ್ರತಿಯೊಬ್ಬರೂ ಜೀವನದಲ್ಲಿ ಮುಂದೆ ಬರಬೇಕು. ಅದಕ್ಕಾಗಿ ನಮ್ಮ ಸಂಘ ಮುಂದೆ ಯೋಜನೆಗಳನ್ನು ಹಾಕಿಕೊಳ್ಳಲಿದೆ ಎಂದು ಹೇಳಿದರು. ಹೊಸದಾಗಿ ಆಯ್ಕೆಯಾದ ಎಲ್ಲಾ ಪದಾಧಿಕಾರಿಗಳನ್ನು ಅಭಿನಂದಿಸಿ ಅವರು ತನ್ನನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದುದಕ್ಕೆ ಎಲ್ಲಾ ಸದಸ್ಯರಿಗೆ ಕೃತಜ್ಞತೆಯನ್ನು ಸಲ್ಲಿಸಿದರು.

ಕಾರ್ಯದರ್ಶಿ ಸುಧಾಕರ ಶೆಟ್ಟಿ ವಂದಿಸಿದರು.

ಖಂಡನೆ

ಕಾರ್ಕಳ, ಎ. 26– ಕಾರ್ಕಳ ಜನತಾದಳದ ಅಧ್ಯಕ್ಷ ಎಂ.ಎಸ್. ರಾಜೇಂದ್ರ ಕುಮಾರ್, ಪತ್ರಕರ್ತರ ಸಂಘದ ಅಧ್ಯಕ್ಷ ಹರಿಶ್ಚಂದ್ರ ಹೆಗ್ಡೆ, ಹಿರಿಯ ಜನತಾದಳ ಕಾರ್ಯಕರ್ತ ಪಿ.ಎಂ. ಸಾಹೇಬ್, ಶಿರ್ಲಾಲು ಮಂಡಲದ ವಿರೋಧ ಪಕ್ಷದ ನಾಯಕ ಫೆಡ್ರಿಕ್ ಪಿಂಟೋ, ಯುವ ಜನತಾದಳದ ಕಾರ್ಯಾಧ್ಯಕ್ಷ ಸುನಿಲ್ ಕುಮಾರ್ ಮುಂತಾದವರು ಜಂಟಿಯಾಗಿ ಹೇಳಿಕೆ ನೀಡಿ, ಪ್ರಜಾಪ್ರಭುತ್ವದ ಸತ್ಸಂಪ್ರದಾಯಗಳನ್ನು ಗಾಳಿಗೆ ತೂರಿ ಕಾಂಗ್ರೆಸ್ ಕೈಗೊಂಬೆಯಾಗಿ ವರ್ತಿಸಿದ ರಾಷ್ಟ್ರಪತಿ ಮತ್ತು ರಾಜ್ಯಪಾಲರ ನೀತಿಯನ್ನು ಅನುಸರಿಸಿ ಜನತಾದಳ ಸರಕಾರವನ್ನು ವಜಾ ಮಾಡಿರುವುದನ್ನು ತೀವ್ರವಾಗಿ ಖಂಡಿಸಿದ್ದಾರೆ.

ಸಮಗ್ರಗ್ರಾಮೀಣಾಭಿವೃದ್ಧಿ ಯೋಜನೆ 192.15 ಲಕ್ಷ ರೂ. ಸಹಾಯ ಧನ ವಿತರಣೆ

ಮಂಗಳೂರು, ಎ. 26– ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 192.15 ಲಕ್ಷ ರೂಪಾಯಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿ ಸಹಾಯಧನ ವಿತರಿಸಲಾಗಿದೆ ಎಂದು ಜಿಲ್ಲಾ ಪರಿಷತ್ ಅಧ್ಯಕ್ಷರಾದ ಬಿ. ಸಂಕಪ್ಪ ರೈ ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ 1988–89 ನೇ ಸಾಲಿನಲ್ಲಿ ಕೈಗೊಂಡ ಅಭಿವೃದ್ಧಿ ಯೋಜನೆಗಳ ಸಾಧನೆಗಳ ವಿವರ ನೀಡಿರುವ ಅವರು ಜಿಲ್ಲೆಗೆ 194.91 ಲಕ್ಷ ರೂಪಾಯಿ ಸಹಾಯಧನ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಫಲಾನುಭವಿಗಳಿಗೆ ಮಂಜೂರಾಗಿತ್ತು ಎಂದಿದ್ದಾರೆ.

ಒಟ್ಟು 7989 ಫಲಾನುಭವಿಗಳಿಗೆ ನೆರವು ಕಲ್ಪಿಸಲಾಗಿದ್ದು ಜಿಲ್ಲೆಯಲ್ಲಿ 6220 ಹೊಸ ಫಲಾನುಭವಿಗಳಿಗೆ ಸಹಾಯಧನ ನೀಡುವ ಗುರಿ ಒದಗಿಸಲಾಗಿತ್ತು, 1406 ಹಳೆಯ ಫಲಾನುಭವಿಗಳ ಬದಲು 1462 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

ಎನ್‌ಆರ್‌ಇಪಿ ಯೋಜನೆಯಲ್ಲಿ 12.76 ಲಕ್ಷ ಮಾನವ ದಿನಗಳನ್ನು ಉತ್ಪಾದಿಸಿ ನಿರುದ್ಯೋಗ ಕಾರ್ಮಿಕರಿಗೆ ಉದ್ಯೋಗ ಒದಗಿಸಲಾಗಿದೆ. ಈ ಯೋಜನೆಯಲ್ಲಿ 242.08 ಲಕ್ಷ ರೂಪಾಯಿ ವಿನಿಯೋಗಿಸಲಾಗಿದೆ ಎಂದಿದ್ದಾರೆ.

ಆರ್‌ಎಲ್‌ಇಜಿಪಿ ಯೋಜನೆಯಲ್ಲಿ 125,14 ಲಕ್ಷ ರೂಪಾಯಿ ವಾರ್ಷಿಕ ಗುರಿ ನಿಗದಿಪಡಿಸಲಾಗಿದ್ದು ವರ್ಷಾಂತ್ಯದಲ್ಲಿ 163.22 ಲಕ್ಷ ರೂಪಾಯಿ ವೆಚ್ಚ ಮಾಡಿ ಶೇಕಡ 130 ರಷ್ಟು ಗುರಿ ಸಾಧಿಸಲಾಗಿದೆ ಎಂದಿದ್ದಾರೆ.

ಜಿಲ್ಲಾ ಜಾನಪದ ಕಲಾ ಮಹೋತ್ಸವ ಮೇ 1 ಮತ್ತು 2ಕ್ಕೆ

(ಮುಂಗಾರು ವರದಿ)

ಅಂಕೋಲಾ, ಎ. 26– ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ನೆರವಿನಿಂದ ಉ.ಕ. ಜಿಲ್ಲೆಯ ಅಂಕೋಲೆಯಲ್ಲಿ ಎಪ್ರಿಲ್ 23 ಮತ್ತು 24 ರಂದು ನಡೆಯಬೇಕಾಗಿದ್ದ ಜಿಲ್ಲಾಮಟ್ಟದ ಜಾನಪದ ಕಲಾ ಮಹೋತ್ಸವವನ್ನು ಅನಿವಾರ್ಯ ಕಾರಣಗಳಿಂದಾಗಿ ಮೇ 1 ಮತ್ತು 2 ರಂದು ನಡೆಸಲಾಗುತ್ತಿದೆಯೆಂದು ಅಧಿಕೃತವಾಗಿ ಗೊತ್ತಾಗಿದೆ.

ಈ ಸಮ್ಮೇಳನದ ಉದ್ಘಾಟಕರಾಗಿ ಖ್ಯಾತ ಸಾಹಿತಿ ಡಾ| ಶಿವರಾಮ ಕಾರಂತರು ಆಗಮಿಸಲಿದ್ದಾರೆ. ಆರ್. ವಿ. ದೇಶಪಾಂಡೆ, ಜಿ.ಎಸ್. ಹೆಗಡೆ ಅಜ್ಜೀಬಳ, ಅಕಾಡೆಮಿ ಅಧ್ಯಕ್ಷ ಕೆಂಪರಾಜ್ ಮುಂತಾದವರನ್ನು ಅತಿಥಿಗಳಾಗಿ ಆಗಮಿಸುವರೆಂದು ಗೊತ್ತಾಗಿದೆ.

ಜಿಲ್ಲೆಯ ಹನ್ನೊಂದು ತಾಲೂಕುಗಳನ್ನು ಪ್ರತಿನಿಧಿಸುವ ಹಲವಾರು ಜಾನಪದ ಕಲೆಗಳ ಪ್ರದರ್ಶನ ಹಾಗೂ ಅದಕ್ಕಿಂತ ಪೂರ್ವದಲ್ಲಿ ಈ ಎಲ್ಲ ಕಲೆಗಳನ್ನು ಪ್ರತಿನಿಧಿಸುವ ಸುಮಾರು ಮೂನ್ನೂರು ಕಲಾವಿದರುಳ್ಳ ಕಲಾ ತಂಡಗಳ ರಂಗು ರಂಗಿನ ಮೆರವಣಿಗೆ ಏರ್ಪಡಿಸಲಾಗಿದೆ.

ಎರಡು ದಿನಗಳ ಈ ಕಲಾ ಮಹೋತ್ಸವವನ್ನು ವಿಶಿಷ್ಟ ರೀತಿಯಲ್ಲಿ ಸಂಘಟಿಸಲಾಗಿದ್ದು, ಬೇರೆ ಬೇರೆ ಉಪಸಮಿತಿಗಳು ಭರದಿಂದ ಸಿದ್ಧತೆಗೆ ತೊಡಗಿವೆ. ಪಿ. ಎಂ. ಹೈಸ್ಕೂಲಿನ ಆವಾರದಲ್ಲಿರುವ ಡಾ| ದಿನಕರ ದೇಸಾಯಿ ಸ್ಮಾರಕ ಬಯಲು ರಂಗ ವೇದಿಕೆಯಲ್ಲಿ ಇದು ನಡೆಯುವುದು.

ಹೊಲಿಗೆ ತರಬೇತಿಗೆ ಅರ್ಜಿ ಆಹ್ವಾನ

ಬೇಲೂರು, ಎ. 26–ಮಾರುತಿ ಯುವಜನ ಸಂಘದ ವತಿಯಿಂದ ಯುವಕ ಯುವತಿಯರಿಗಾಗಿ 2ನೇ ತಂಡದ ಉಚಿತ ಹೊಲಿಗೆ ತರಬೇತಿಯನ್ನು ನೀಡಲಾಗುವುದು.

ತರಬೇತಿಯು ಮೇ 1 ರಿಂದ ಪ್ರಾರಂಭವಾಗಲಿದ್ದು ಸೇರಲಿಚ್ಛಿಸುವವರು ಅರ್ಜಿಗಳನ್ನು ಎ. 30 ರೊಳಗೆ ಕಾರ್ಯದರ್ಶಿ, ಮಾರುತಿ ಯುವಜನ ಸಂಘ, ಬೇಲೂರು ಈ ವಿಳಾಸಕ್ಕೆ ಕಳುಹಿಸಬೇಕೆಂದು ಕೋರಲಾಗಿದೆ.

ಸತ್ಯಾಗ್ರಹ ಅಂತ್ಯ

ಬೆಂಗಳೂರು, ಎ. 26– ರಾಜ್ಯ ಮುಖ್ಯ ಕಾರ್ಯದರ್ಶಿಯವರ ಆಶ್ವಾಸನೆ ಮೇರೆಗೆ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಪದಾಧಿಕಾರಿಗಳು ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಹಿಂತೆಗೆದುಕೊಂಡಿದ್ದಾರೆ.

ಬಂದ್ ತಿರಸ್ಕರಿಸಲು ಮಸೂದ್ ಮನವಿ

ಮಂಗಳೂರು, ಎ. 26– ವಿರೋಧ ಪಕ್ಷಗಳು ಎ. 27ರಂದು ಬಂದ್ ಆಚರಿಸುವಂತೆ ಕೊಟ್ಟಿರುವ ಕರೆಯನ್ನು ತಿರಸ್ಕರಿಸಬೇಕೆಂದು ವಿಧಾನ ಪರಿಷತ್ ಸದಸ್ಯ ಕೆ.ಎಸ್.ಎಂ. ಮಸೂದ್ ದ.ಕ ಜಿಲ್ಲೆಯ ಜನತೆಯನ್ನು ವಿನಂತಿಸಿಕೊಂಡಿದ್ದಾರೆ.

ಜನತಾದಳ ಸರಕಾರವು ತನ್ನ ಒಳ ಜಗಳದ ಪರಿಣಾಮವಾಗಿ ವಿಫಲಗೊಂಡಿರುವುದಕ್ಕೆ ಕಾಂಗ್ರೆಸನ್ನು ಹೊಣೆಗಾರರನ್ನಾಗಿ ಮಾಡಿದ ಪ್ರತಿಪಕ್ಷಗಳ ನೀತಿಯನ್ನು ಖಂಡಿಸುವ ಅವರು ಬಡವರ ಬಗ್ಗೆ ಸದಾ ಕಾಳಜಿ ವಹಿಸುವ ಕಮ್ಯುನಿಸ್ಟ್ ಪಕ್ಷಗಳು ಬಡವರ ವಿರೋಧಿ ಜನತಾ ದಳ ಸರಕಾರದ ಪರ ನಿಲುವು ವಹಿಸಿರುವುದು ದುಃಖಕರ ವಿಷಯ ಎಂದು ಪ್ರತಿಕ್ರಿಯಿಸಿದ್ದಾರೆ.

ಆಳಿದ ದಿನಗಳಲ್ಲಿ ಹೊಟ್ಟೆಪಾಡಿನ ಮೀನುಗಾರರ ಜೀವದೊಂದಿಗೆ ಚೆಲ್ಲಾಟವಾಡಿದ ಜನತಾದಳ ಸರಕಾರದ ಪರವಾಗಿ ನಡೆಯುವ ಎ. 27ರ ಜಿಲ್ಲಾ ಬಂದ್ ಕಾರ್ಯಕ್ರಮವನ್ನು ವಿಫಲಗೊಳಿಸಬೇಕೆಂದು ಜಿಲ್ಲೆಯ ಮೀನುಗಾರರಿಗೆ ಕೆ. ಎಸ್. ಎಂ. ಮಸೂದ್ ಕರೆ ನೀಡಿದ್ದಾರೆ.

ಅಂಗನವಾಡಿ ಕಾರ್ಯಕರ್ತೆ - ಸಹಾಯಕಿಯರ ಸಭೆ

ಗೌರವ ಧನ ವಿತರಣೆಗೆ ದಿನ ನಿಗದಿಗೆ ಒತ್ತಾಯ

ಉಡುಪಿ, ಎ. 26– ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಗೌರವಧನವನ್ನು ಪಾವತಿ ಮಾಡುವಾಗ ನಿರ್ದಿಷ್ಟ ದಿನವೊಂದನ್ನು ನಿಗದಿ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಉಡುಪಿ ತಾಲೂಕು ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘ ಸಂಬಂಧಪಟ್ಟವರನ್ನು ಒತ್ತಾಯಿಸಿದೆ.

ಇತ್ತೀಚೆಗೆ ಉಡುಪಿಯ ಸತ್ಯಮೂರ್ತಿ ಸಭಾಭವನದಲ್ಲಿ ನಡೆದ ಸಂಘದ ಸರ್ವ ಸದಸ್ಯೆಯರ ಸಭೆಯ ಅಧ್ಯಕ್ಷತೆಯನ್ನು ರಮಣಿ ಅಮ್ಮಣ್ಣ ವಹಿಸಿದ್ದರು.

ಗೌರವಧನವು ತಿಂಗಳ ನಿರ್ದಿಷ್ಟ ದಿನದಂದು ಪಾವತಿಯಾಗದುದರಿಂದ ಇದಕ್ಕಾಗಿ ಅನೇಕ ಬಾರಿ ಶಿಶು ವಿಕಾಸ ಯೋಜನಾಧಿಕಾರಿಯವರ ಕಚೇರಿಗೆ ಅಲೆದಾಡಬೇಕಾದ ಪರಿಸ್ಥಿತಿಯ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗಾಗಿ ತಾಲೂಕು ಮಟ್ಟದ ಕ್ರೀಡಾಕೂಟದ ವ್ಯವಸ್ಥೆ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ರಾಜ್ಯ ಸಂಘದ ಕರೆಯಂತೆ ಮೇ 2 ರಂದು ಜರಗಲಿರುವ ವಿಧಾನ ಸೌಧ ಚಲೋ ಕಾರ್ಯಕ್ರಮದಲ್ಲಿ ಉಡುಪಿ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತೆ ಮತ್ತು ಸಹಾಯಕಿಯರು ಭಾಗವಹಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು. ಅಲ್ಲದೆ ಯಾವ ಕಾರಣಕ್ಕೂ ಅಂದು ಕೇಂದ್ರವನ್ನು ತೆರೆಯದಿರಲು ನಿರ್ಧರಿಸಲಾಯಿತು.

ಸಭೆಯಲ್ಲಿ ಉಪಸ್ಥಿತರಿದ್ದ ತಾಲೂಕು ಹಾಗೂ ದ.ಕ. ಜಿಲ್ಲಾ ಸಂಘದ ಸಲಹೆಗಾರರಾದ ಎಸ್. ಎಸ್. ತೋನ್ಸೆ, ದ.ಕ. ಜಿಲ್ಲಾ ಸಂಘದ ಪ್ರತಿನಿಧಿ ಅಪ್ಪಿ ಎಸ್. ಸಾಲ್ಯಾನ್ ಅವರು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಂಘಟಿತರಾಗಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕೆಂದರು.

ಸಂಘದ ಉಪಾಧ್ಯಕ್ಷೆ ಶಾರದ ಎಸ್. ಶೆಟ್ಟಿ ಸ್ವಾಗತಿಸಿ ಕಾರ್ಯದರ್ಶಿ ಸುಗುಣ ವಂದಿಸಿದರು.

ಯಾ
ಹಿಂಡುಗ
'ಮಿಲ್ಕ್‌ಕ್ಯಾನ್
ಪಶುಗಳು
ಪ್ರಮುಖವಾಗಿ
ಕಾಣಿಸುತ್ತವೆ

mysore feeds ltd.
19, ಬೆಂಗಳೂರು-560 020

Mudra Bir MF 19

ಅಂಬೇಡ್ಕರ್ - ಗಾಂಧಿ; ತಾತ್ವಿಕ ಚಿಂತನೆ...

[illegible]

ವಿ. ಜೋಳ ಬಂಡಿಸ್ಟ

[illegible]

ಭವಿಷ್ಯದ ಶಿಲ್ಪಿ ಆಟದ ವಸ್ತುವೇ?

ಪ್ರಿಯರೆ,

ದ.ಕ.ಪ.ಸ.ದವರು ಇದ್ದಕ್ಕಿದ್ದಂತೆ ಅಧ್ಯಾಪಕರುಗಳ ಮೇಲೆ ಎರಗಿ ಬಿಟ್ಟಿದ್ದಾರೆ. ಪ್ರತೀ ಶಾಲೆಯಿಂದ ಮೂರು ಅಥವಾ ಅದಕ್ಕಿಂತ ಮೇಲ್ಪಟ್ಟ ಎಲ್ಲಾ ಅಧ್ಯಾಪಕರುಗಳ ಸೇವಾವಧಿ ವಿವರಗಳನ್ನು ಕೂಡಲೇ ಜಿ.ಪ.ಗೆ ಕಳುಹಿಸತಕ್ಕದ್ದೆಂದು ಶಿಕ್ಷಣ ಇಲಾಖೆಗೆ ಆದೇಶಿಸಲಾಗಿದೆ. ಇದರಲ್ಲಿ [illegible] ಪರಸ್ಪರ, ಅಂತರ್ಜಿಲ್ಲಾ ವರ್ಗಾವಣೆ ಬಯಸುವವರಿಗೂ ಕೇಳಲಾಗಿದೆ. ಸಾಮಾನ್ಯವಾಗಿ ಶಿಕ್ಷಕರನ್ನು ವರ್ಗಾವಣೆ ಮಾಡುತ್ತಿರಬೇಕೆಂಬುದು ಒಪ್ಪತಕ್ಕದ್ದೆ. ಆದರೆ ಈಗಿನ ಹೆಚ್ಚಿನ ಶಾಲೆಗಳಲ್ಲಿ ಹತ್ತು ಹದಿನೈದು ವರುಷಕ್ಕೂ ಮೇಲ್ಪಟ್ಟು ಒಂದೇ ಕಡೆ ಇದ್ದು ಬೇರೆ ಬೇರೆ ವ್ಯವಹಾರ ಮಾಡುತ್ತಿರುವವರೂ ಇದ್ದಾರೆ. ಸಾಮಾನ್ಯವಾಗಿ ಹತ್ತು ಹದಿನೈದು ವರ್ಷ ಒಂದೇ ಕಡೆಯಿದ್ದು ಸ್ಥಳೀಯ ರಾಜಕೀಯ ಸಕ್ರಿಯರಾಗಿರುವವರೂ ಸಾಕಷ್ಟು ಮಂದಿಯಿದ್ದಾರೆ. ಇಂಥವರನ್ನು ವರ್ಗಾಯಿಸುವಾಗ ರಾಜಕೀಯ ವಶೀಲಿಯಿಂದ, ಅವರು ಬಯಸುವ ಅವರ 'ಸೈಡ್ ಬಿಸಿನೆಸ್'ಗೆ ಅನುಕೂಲವಾಗುವ ಶಾಲೆಗೆ ಕೇಳಿದಾಗ, ಕೇವಲ ಮೂರು ವರ್ಷವಷ್ಟೆ ಸೇವೆ ಸಲ್ಲಿಸಿ ಪರಿಸರಕ್ಕೆ ಆಗಷ್ಟೆ ಸ್ಪಂದಿಸುತ್ತಿರುವ ಅಧ್ಯಾಪಕನು ಬಲಿಪಶುವಾಗುತ್ತಾನೆ. ವಶೀಲಿಯಿದ್ದವ ತಾನು ಸೇರಬೇಕಾದಲ್ಲಿಗೆ ಸೇರುತ್ತಾನೆ. ಇದೆಂಥ ವಿಪರ್ಯಾಸ! ಪರಿಸರದಲ್ಲಿ ಹೊಂದದೋ (?) ಶಾಲೆಗೆ ಬಾಧಿಸುವ ಹೊಸಬನಾಗುವನೋ ಬೆ...ಶಾಲೆಗೆ (!) ಘಾಸಿ "ಜನಾಂಗದ ಶಿಲ್ಪಿ" ಎಂಬ ದೊಡ್ಡ ಪಟ್ಟ ಹೊತ್ತುಕೊಂಡಿರುವ ಒಬ್ಬ ಶಿಕ್ಷಕ ಎದುರಿಸಬೇಕಾದ ದುರಂತ ಸನ್ನಿವೇಶ ಅಲ್ಲವೇ ಇದು! ಹಾಗಾದರೆ ವರ್ಗಾವಣೆಯು ಶಿಕ್ಷೆಯಾದರೂ ಏನು! ಪಂಡಿತರಾಗಿಯೂ ವರ್ಗಾವಣೆಯಲ್ಲಿ ತಾರತಮ್ಯ ನಡೆದರೆ (ವರ್ಗಾವಣೆ ಆಗದಿದ್ದರೆ ಆದರೆ) ಶೋಷಿತ ಬಲಿಪಶು ಶಿಕ್ಷಕರು ಜಿ.ಪ. ಕಚೇರಿ ಎದುರು ಸಾಮೂಹಿಕ ಧರಣಿ ನಡೆಸದಿದ್ದರೆ 'ಅಧ್ಯಾಪಕ' ಕೇವಲ ಜಿಲ್ಲಾ ಪರಿಷತ್ತಿನ "ಆಟದ ವಸ್ತು"ವಾಗಿ ಬಿಡುವ ಸಾಧ್ಯತೆಗಳಿವೆ.

—ನಂದಿನಿ

ಕೋಟ

ಜನವಾಣಿ

ಅಂಗನವಾಡಿ ಕಾರ್ಯಕರ್ತೆಯರಿಗೆ ಸರಕಾರಿ ರಜೆ ಸಿಗಲಿ

ಪ್ರಿಯರೆ,

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂಗನವಾಡಿ ಕೇಂದ್ರ ಹೊಂದಿರುವ [illegible] ಕುಂದಾಪುರ ಆಗಿದೆ. 312 ಅಂಗನವಾಡಿಕಾರ್ಯಕರ್ತೆಯರೂ ಮತ್ತು ಸಹಾಯಕಿಯರು ಗೌರವಧನ ಪಡೆದು ಕಾರ್ಯನಿರ್ವಹಿಸುತ್ತಿದ್ದಾರೆ. [illegible] ಪುರ ತಾಲೂಕು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಸಂಘ ಅಸ್ತಿತ್ವದಲ್ಲಿದ್ದು ಕಳೆದ ಹಲವಾರು ವರ್ಷಗಳಿಂದ ಸಂಘಟನೆಯ ನೇತೃತ್ವದಲ್ಲಿ ಅಂಗನವಾಡಿ ನೌಕರರ ಹಿತಸಾಧನೆಗಾಗಿ ನ್ಯಾಯಯುತ ಹೋರಾಟ ನಡೆಸಿಕೊಂಡು ಬಂದಿರುತ್ತದೆ.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು [illegible] ಗೌರವಧನಪಡೆಯುವವರು(ಕನಿಷ್ಠ ವೇತನ)ಕಡೆಗಣಿಸಲ್ಪಟ್ಟವರೂ ಸಮಾಜದ ದೃಷ್ಟಿಯಲ್ಲಿ ತಿರಸ್ಕರಿಸಲ್ಪಟ್ಟವರೂ ಆಗಿದ್ದಾರೆ. ರಜೆ [illegible] ಸಿಗದೇ ಗತಿಗೆಟ್ಟು, ಕೂಲಿಯ ಆಳು ಈ ಕೆಲಸವೆಂಬ ಭಾವನೆ ಸಾರ್ವತ್ರಿಕ ಮೂಡುತ್ತಿದೆ. ಅಂಗನವಾಡಿ ಕಾರ್ಯಕರ್ತೆಯರು ಕನಿಷ್ಠ ವೇತನ ಪಡೆಯುವ ಸರಕಾರೀ ಜೀತದಾಳುಗಳಂತೆ ನೋಡಿ, ತಾತ್ಸಾರ ಭಾವನೆಯಲ್ಲಿ ಏಕವಚನದಲ್ಲಿ ಸಂಬೋಧಿಸುವ ಇಲಾಖಾ ಮೇಲಧಿಕಾರಿಗಳ ವರ್ತನೆ ಸಹಿಸಲಸಾಧ್ಯವಾಗಿದೆ. ಮಾನಸಿಕ ಹಿಂಸೆಯಾಗುತ್ತದೆ. ಸರಕಾರದ ಪುಕ್ಕಟೆಸಂಬಳವೆಂಬ "ಎಂಜಲು ಎಲೆ ತಿನ್ನುವ ನಾಯಿ" ಎಂದು ಕರೆಯಿಸಿಕೊಂಡ ಕಹಿ ಅನುಭವದ ಉದಾಹರಣೆ ನಮ್ಮ ಮುಂದಿದೆ. ಇದರ ವಿರುದ್ಧ ಹೋರಾಟ ಮಾಡಿದ ಕೀರ್ತಿ ನಮ್ಮ ಸಂಘಟನೆಗೆ ಇದೆ.

ಸ್ವಾಭಿಮಾನ, ಆತ್ಮಾಭಿಮಾನ ಸಾಮಾನ್ಯ ಭಿಕ್ಷುಕನಿಗೂ ಇರುತ್ತದೆ. ಯಾವುದೇ ರೀತಿಯ ಅಪಮಾನವನ್ನು ನಾವು ಸಹಿಸಲಾರೆವು. ಸಂಘಟಿತ ಹೋರಾಟದಿಂದ ನ್ಯಾಯ ಪಡೆಯಲು ಮುಂದಾಗಬೇಕಾಗುತ್ತದೆ. ಮಹಿಳಾ ಮತ್ತು ಶಿಶುಕಲ್ಯಾಣ ಇಲಾಖೆಗೆ ಸೇರಿರುವ ಈ ಅಂಗನವಾಡಿ ಕೇಂದ್ರಗಳೆಲ್ಲವೂ ಸರಕಾರಿ ಕಚೇರಿಗಳಿಗೆ ಸಂಬಂಧಿಸಿದವುಗಳಾಗಿರುತ್ತವೆ. ಎಲ್ಲಾ ಸರಕಾರಿ ರಜಾ ಸೌಲಭ್ಯವು ಇಲಾಖೆಯ ಸಿಬ್ಬಂದಿಗಳಿಗೆ ಸಿಗುತ್ತಿರುವಾಗ ಅಂಗನವಾಡಿ ಕೇಂದ್ರಗಳಿಗೆ ರಜಾ ಸೌಲಭ್ಯಗಳು ದೊರಕದಿರುವುದು ಖಂಡನಾರ್ಹವಾಗಿದೆ. ಸರಕಾರೀ ರಜಾಸೌಲಭ್ಯವು ಅಂಗನವಾಡಿ ಕೇಂದ್ರಗಳಿಗೆ ಕಡ್ಡಾಯ ಸಿಗಬೇಕೆಂದು ಒತ್ತಾಯಿಸಿ ನಮ್ಮ ಸಂಘಟನೆಯು ಪರವಾಗಿ ಮೇಲಧಿಕಾರಿಗಳಿಗೆ ಮನವಿ ಅರ್ಪಿಸಿರುತ್ತೇವೆ. ಈವರೆಗೆ ನಮಗೆ ಎಲ್ಲಾ ಸರಕಾರಿ ರಜಾ ಪಡೆಯುವ ಹಕ್ಕಿಲ್ಲ. ಮೇಲಧಿಕಾರಿಗಳ 'ಮೌಖಿಕ ಒಪ್ಪಿಗೆಯ ಮೇಲೆ ಅನುಗ್ರಹ ರಜಾಸೌಲಭ್ಯ ಪಡೆಯಬೇಕಾಗಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ.

ನಮ್ಮ ನೆರೆರಾಜ್ಯಗಳ ಅಂಗನವಾಡಿ ನೌಕರರಿಗೆ ಗೌರವಧನ ನಮ್ಮ ರಾಜ್ಯಕ್ಕಿಂತ ಹೆಚ್ಚಿಗೆ ಸಿಗುತ್ತಿದೆ. ಈ ಬಗ್ಗೆ ವೇತನ ಹೆಚ್ಚಳವಾಗಬೇಕೆಂದೂ ಒತ್ತಾಯಿಸಿ ಇದೇ ಮೇ 2ರಂದು ರಾಜ್ಯ ರಾಜಧಾನಿ ಬೆಂಗಳೂರು "ವಿಧಾನಸೌಧ ಚಲೋ" ಬೃಹತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ನಮ್ಮ ಹೋರಾಟವನ್ನು ತೀವ್ರಗೊಳಿಸಬೇಕಾಗಿದೆ.

—ಓರ್ವ ಅಂಗನವಾಡಿ ಕಾರ್ಯಕರ್ತೆ

[illegible]

ರಾಜ್ಯಕ್ಕೆ ಪರ್ಯಾಯ ಶಕ್ತಿನೀಡಿ

ಪ್ರಿಯರೆ,

ರಾಮಕೃಷ್ಣ ಹೆಗಡೆ ಅವರ ವರ್ಚಸ್ಸು ಧಾರಿತ ಅಡಳಿತದ ವಿವಾದ ಗಂಟನ್ನು ಹೊತ್ತುಕೊಂಡೇ ಅಧಿಕಾರಕ್ಕೆ ಬಂದಿದ್ದ ವ್ಯಕ್ತಿತ್ವ ಓಲ ಬೊಮ್ಮಾಯಿ ಸರಕಾರ ಕೊನೆಗೂ ತನ್ನ ನೀತಿ ಭ್ರಷ್ಟ ಪದಸ್ಥರ ಒಳ ಬಂಡಾಯದಿಂದಾಗಿಯೇ ಇತಿಹಾಸದ ಕಸದ ಬುಟ್ಟಿ ಸೇರಿದೆ. ತಡವಾಗಿ ಯಾದರೂ ಚಿಂತೆ ಇಲ್ಲ; ರಾಷ್ಟ್ರಪತಿಗಳಿಂದ ವಜಾ ಮಾಡಲ್ಪಟ್ಟ ಜನತಾದಳ ಸರ್ಕಾರದ [illegible] ಅವಸಾನಕ್ಕಾಗಿ ಯಾರೂ ಕಣ್ಣೀರು ಹಾಕಬೇಕಾಗಿಲ್ಲ.

ಈಗ ಮತ್ತು ಬರಲಿರುವ ಚುನಾವಣೆಯ ನಡುವಿನ ಅವಧಿಯಲ್ಲಿ ರಾಷ್ಟ್ರಪತಿ [illegible]ದ ಉಂಟಾದ ಶೂನ್ಯ ವಾತಾವರಣದಲ್ಲಿ ಕೇಂದ್ರದ ಸತ್ತಾರೂಢ ಕಾಂಗ್ರೆಸ್ ಪಕ್ಷ ಮರಳಿ ಕರ್ನಾಟಕದಲ್ಲಿ ಅಧಿಕಾರಕ್ಕೆ [illegible] ಸನ್ನಾಹ ಹೂಡುವುದು ನಿಶ್ಚಿತ. ಸ್ವಾತಂತ್ರ್ಯ ನಂತರದ ಅವಧಿಯಲ್ಲಿ ನಮ್ಮ ಜನ ಈ ಕಾಂಗ್ರೆಸ್ ಪಕ್ಷದ ಆಡಳಿತವನ್ನು ಅನೇಕ ವರ್ಷ ಕಂಡವರು 1983 ರಿಂದ ಈಚೆಗೆ ಜೆ.ಪಿ. ಹೆಸರು ಹೇಳಿ ಅಧಿಕಾರಕ್ಕೆ ಬಂದ ಜನತಾ ಪಕ್ಷದ ಹಾಗೂ ಅದರ ಹೊಟ್ಟೆ ಸೀಳಿಕೊಂಡು ಬಂದ ಜನತಾದಳ ಪಕ್ಷದ ಆಡಳಿತದ ವೈಖರಿಯನ್ನೂ ಕಂಡವರು. ಈ ತಥಾಕಥಿತ "ರಾಷ್ಟ್ರೀಯ" ಪಕ್ಷಗಳ ಸಂಬಂಧ ಬಾಹುವಿನಿಂದ ಪಾರಾಗಲು ಕಳೆದ 3-4 ವರ್ಷಗಳಿಂದ ಕರ್ನಾಟಕದಲ್ಲಿ ಮೂರನೆಯ ಶಕ್ತಿ"ಯ ಬಗ್ಗೆ ಮಾತಾಡುತ್ತಿರುವ ಕನ್ನಡ ಜನತೆ ಈಗ ಬಹಳ ಗಂಭೀರವಾಗಿ ಆ ಮಾತಿಗೊಂದು ಅರ್ಥ ಮಾಡಿಸುವ ಪ್ರಯತ್ನ ಮಾಡಬೇಕಾಗಿದೆ.

ಜನಪರ ಹೋರಾಟಗಳ ಹಿನ್ನೆಲೆ ಇರುವ ಈ ನಾಡಿನ ರೈತರು, ದಲಿತರು, ಕಾರ್ಮಿಕರು, ವಿದ್ಯಾರ್ಥಿಗಳು ಬುದ್ಧಿಜೀವಿಗಳು, ಕನ್ನಡ ಹೋರಾಟಗಾರರು ಇಂದು ಇತಿಹಾಸದ ಸವಾಲನ್ನು ಸ್ವೀಕರಿಸಿ, ತಮ್ಮ ಸೈದ್ಧಾಂತಿಕ ಹಾಗೂ ವೈಯಕ್ತಿಕ ಪರಿಮಿತಿಗಳನ್ನು ವಿಸ್ತರಿಸಿಕೊಂಡು ತಮ್ಮ ಎಲ್ಲಾ ಸಾಮರ್ಥ್ಯವನ್ನು

ಅನಿಸಿಕೆ

ಕ್ರೋಢೀಕರಿಸಿ ಪ್ರಬಲ ರಾಜಕೀಯ ಶಕ್ತಿಯಾಗಿ ಬೆಳೆದು ಕರ್ನಾಟಕದ ಜನತೆಗೆ ಒಂದು ಪರ್ಯಾಯವನ್ನು ನೀಡಬೇಕಾಗಿದೆ.

ಈ ನಿಟ್ಟಿನಲ್ಲಿ ಈಗಾಗಲೇ ಕ್ರಿಯಾಶೀಲವಾಗಿರುವ ಕರ್ನಾಟಕ ರಾಜ್ಯ ರೈತ ಸಂಘವೇ ಆದಿಯಾಗಿ ದಲಿತ ಸಂಘರ್ಷ ಸಮಿತಿ, ಕರ್ನಾಟಕ ಪ್ರಗತಿ ರಂಗ, ಬಂಡಾಯ ಸಾಹಿತ್ಯ ಸಂಘಟನೆ, ಕೇಂದ್ರ ಕನ್ನಡ ಕ್ರಿಯಾ ಸಮಿತಿ, ರಾಜಕುಮಾರ್ ಅಭಿಮಾನಿಗಳ ಸಂಘ, [illegible]ದ ಶಕ್ತಿ ಕೇಂದ್ರ ಮುಂತಾದ ಸಂಘಟನೆಗಳ ಪ್ರತಿನಿಧಿಗಳಲ್ಲದೆ ನಾಡಿನ ಪ್ರತಿಷ್ಠಾವಂತ ಸಾಹಿತಿಗಳು, ಕಲಾವಿದರು, ಪತ್ರಕರ್ತರು, ಬುದ್ಧಿಜೀವಿಗಳು ಶೀಘ್ರದಲ್ಲಿಯೇ ರಾಜ್ಯಮಟ್ಟದ ವೇದಿಕೆಯೊಂದರಲ್ಲಿ ಸಮಾಲೋಚನೆ ಮಾಡುವ ಕಾಲ ಬಂದಿದೆ. ನಾಡಿನ ಪ್ರಗತಿಪರ ವ್ಯಕ್ತಿಗಳು ಹಾಗೂ ಸಂಘಟನೆಗಳು ಈ ಸಲಹೆಗೆ ಸ್ಪಂದಿಸುವರೆಂಬ ನಂಬಿಗೆ ನನಗಿದೆ.

—ಪ್ರೊ. ಚಂದ್ರಶೇಖರ ಪಾಟೀಲ

ಧಾರವಾಡ

ಚಿಂತನೆ

ಪ್ರೀತಿಯು ಅನ್ಯಾಯವನ್ನು ನೋಡಿ ಸಂತೋಷ ಪಡದೆ, ಸತ್ಯಕ್ಕೆ ಜಯವಾಗುವಲ್ಲಿ ಸಂತೋಷ ಪಡುತ್ತದೆ.

— ಬೈಬಲ್

... ಸಮ್ಮೇಳನ ಹಾಗೂ ಮುಸ್ಲಿಮರು

ಸಂವಾದ

[illegible]

—ಸದಾನಂದ ನಾಯಕ

ಜನತೆಗೆ ಪ್ರಗತಿಪರ ಚಿಂತನೆ ನೀಡಿದ 'ಮುಂಗಾರು'

— ಓದುಗರೊಬ್ಬರ ಅನಿಸಿಕೆ

ನಾಸ್ತಿಕರ ಪರವಾಗಿದೆ ಎಂಬ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಪ್ರಕಟವಾಗುತ್ತಿರುವ ಸಂಚಿಕೆಗಳನ್ನು ಗಮನಿಸಿದಾಗ ಯಾವನೇ ಓದುಗನೊಬ್ಬನಿಗೆ ಈ ಆರೋಪ ಕೆಲವೊಂದು ಸ್ಥಾಪಿತ ಹಿತಾಸಕ್ತಿಗಳ ನಿಗೂಢ ಕಾರಸ್ಥಾನದ ಸಂಚಿನ ಫಲ ಎಂಬುದನ್ನು ಅರಿಯಲು ಹೆಚ್ಚಿನ ಪ್ರಯಾಸಪಡಬೇಕಾಗಿಲ್ಲ. ಎಲ್ಲರಿಗೂ ಸಮಾನ ವೇದಿಕೆಯಾಗಿ ನಿಷ್ಪಕ್ಷಪಾತದಿಂದ ವರ್ತಿಸುವ 'ಮುಂಗಾರು' ವಿನಲ್ಲಿ ಪ್ರಕಟವಾಗುವ ಕೆಲವು ಬರಹಗಳು ಹಲವು ಹಿರಿಯ ವ್ಯಕ್ತಿಗಳ ನಿಜ ಬಣ್ಣವನ್ನು ಕೂಡಾ ತಿಳಿಯಲು ಸಹಕಾರಿಯಾಗುತ್ತದೆ.

'ಓದುಗರೊಡನೆ ಸಂಪಾದಕ' ಹಾಗೂ 'ಸಂಪಾದಕರೊಂದಿಗೆ ಓದುಗ' ಅಂಕಣ ಒಟ್ಟು ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿಯೇ ಪ್ರಥಮ ಪ್ರಯೋಗವಾಗಿದೆ. ಇಲ್ಲಿ ತಪ್ಪು ಸಂಭವಿಸಿದ್ದರೆ ಓದುಗರೊಡನೆ ಮುಕ್ತ ಮನಸ್ಸಿನಿಂದ ಕ್ಷಮೆ ಯಾಚಿಸುವ ಸಂಪಾದಕರ ಹೃದಯ ವೈಶಾಲ್ಯ ಮೆಚ್ಚುವಂತದ್ದು.

ಒಂದು ವಿಚಾರದ ಕುರಿತಾಗಿದ್ದರೆ ಇರುವುದು ಮತ್ತೊಂದು ವಿಷಯ. ಈ ರೀತಿ ಶೀರ್ಷಿಕೆ ಆಡಲು ಬದಲಾಗುವುದರಿಂದ ಓದುಗರಿಗೆ ತುಂಬಾ ತೊಂದರೆಯಾಗುತ್ತದೆ. ರವಿವಾರದ 'ಮ್ಯಾಗಜಿನ್' ವಿಭಾಗವನ್ನು ಕೂಡಾ ಸುಧಾರಿಸಬೇಕಾಗಿದೆ. "ಮುಂಗಾರು"ವಿನ ಮ್ಯಾಗಜಿನ್ ವಿಭಾಗದಲ್ಲಿ ಪ್ರಗತಿಪರ ವಿಚಾರಗಳಿಗೆ ಹೆಚ್ಚಿನ ಅವಕಾಶವಿರಲಿ. ಸಾಧ್ಯವಿದ್ದರೆ ಮ್ಯಾಗಜಿನ್ ವಿಭಾಗದಲ್ಲಿ ಇನ್ನೆರಡು ಪುಟಗಳನ್ನು ಹೆಚ್ಚಿಸಿ ನಾಡಿನ 'ಪ್ರಜಾವಾಣಿ' ಪತ್ರಿಕೆಯ ಮ್ಯಾಗಜಿನ್ ವಿನ್ಯಾಸ ಪಡೆಯಲಿ. ಕ್ರೀಡಾಪುಟ ಮುಂಗಾರುವಿನ ಆರಂಭ ಕಾಲಕ್ಕಿಂತ ಇತ್ತೀಚೆಗೆ ಚೆನ್ನಾಗಿ ಮೂಡಿ ಬರುತ್ತಿದೆ. ಈ ವಿಭಾಗದಲ್ಲಿ ಗ್ರಾಮೀಣ ಕ್ರೀಡೆಗೆ ಪ್ರೋತ್ಸಾಹ ನೀಡುವ ಧೋರಣೆ ಸರಿಯಾದರೂ ...

ಪ್ರತಿಕ್ರಿಯೆ

— ಅಬ್ದುಲ್ ಜಬ್ಬಾರ್

ಪಡಿತರ ವಿತರಣೆ ... ವಿವರಗಳು...

ಅಕ್ಕಿ ಕ್ವಿಂಟಾಲ್ ಒಂದಕ್ಕೆ ರೂ. 59-28

ಗೋಧಿಗೆ ಕ್ವಿಂಟಾಲ್ ಒಂದಕ್ಕೆ ರೂ. 83-25

ಬೀಡಿ ಕಾರ್ಮಿಕರನ್ನು ಹಿಂಡುವ ಕಂಟ್ರಾಕ್ಟ್ ಬೇಡ

ಉಡುಪಿ.

ಇತ್ತೀಚೆಗೆ ಬೀಡಿ ಕಂಟ್ರಾಕ್ಟ್ ಪದ್ಧತಿಯ ಪರಿಶೀಲನಾ ಸಮಿತಿಯು ಮಂಗಳೂರಿನ ಕಾರ್ಮಿಕ ಸಂಘಸಂಸ್ಥೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಬೀಡಿ ಕಾರ್ಮಿಕರು ಹಾಗೂ ಕಂಟ್ರಾಕ್ಟ್‌ದಾರರು ಪ್ರತ್ಯೇಕ ಪ್ರದರ್ಶನ ನಡೆಸಿ ಸಮಿತಿಗೆ ಮನವಿ ಅರ್ಪಿಸಿದರು.

ಬೀಡಿ ಕೈಗಾರಿಕೆಯಲ್ಲಿ ಕಂಟ್ರಾಕ್ಟ್ ಪದ್ಧತಿ ರದ್ದಾಗಬೇಕೆಂದು ಬೀಡಿ ಕಾರ್ಮಿಕರು ಘೋಷಣೆ ಕೂಗುತ್ತಿದ್ದರೆ ಕಂಟ್ರಾಕ್ಟ್ ಪದ್ಧತಿ ರದ್ದತಿ ಸಲ್ಲದು ಎಂಬ ಘೋಷಣೆಯು ... ಕಂಟ್ರಾಕ್ಟುದಾರರು ...

ಯಾಗಿ ಬೀಡಿ ದಸ್ತುಗಳಿಗೆ ಒದಗಿಸುವುದು ಇವರ ಕೆಲಸ. ... ಈ ಕೆಲಸಕ್ಕಾಗಿ ಕಾರ್ಮಿಕರು ಉತ್ಪಾದಿಸಿದ ಸಾವಿರ ಬೀಡಿಯ ಮೇಲೆ ರೂ. 1-35 ರಷ್ಟು ಕಮಿಷನನ್ನು ಮಾಲೀಕರು ನೀಡುತ್ತಿದ್ದಾರೆ. ... ಕಾರ್ಮಿಕರನ್ನು ಸುಲಿಗೆ ಮಾಡುವ ಲಾಭವೇ ಹೆಚ್ಚು ಪ್ರಾಮುಖ್ಯವಾಗಿದೆ.

ಈ ಕೈಗಾರಿಕೆಯಲ್ಲಿರುವ ಅಸಂಘಟಿತ ಬೀಡಿ ಕಾರ್ಮಿಕರು ... ಬಳಸುತ್ತಿದ್ದಾರೆ.

— ಬಾಬು ಪಿಲಾರ್

ಬೀಡಿ ಕಂಟ್ರಾಕ್ಟ್ ಪದ್ಧತಿ ರದ್ದಾಗಬೇಕೇ?

ಜನವಾಣಿ

— ಕೆ. ಎಲ್. ಶೆಟ್ಟಿ

ಚಿಂತನೆ

— ಸೀತಾರಾಮ್

ಪಡಿತರ: ಪಬ್ಬದ ಪಯುಕ್ತ 1 ಕೆ.ಜಿ. ಅಧಿಕ ಸಕ್ಕರೆ

ಮಂಗಳೂರು, ಅ. 8– ಹಬ್ಬದ ಪ್ರಯುಕ್ತ ದ. ಕ. ಜಿಲ್ಲೆಯ ಪಡಿತರ ಚೀಟಿದಾರರಿಗೆ ಈ ತಿಂಗಳಲ್ಲಿ ಒಂದು ಕೆ. ಜಿ. ಸಕ್ಕರೆಯನ್ನು ಹೆಚ್ಚುವರಿಯಾಗಿ ವಿತರಣೆ ಮಾಡಲಾಗಿದೆ.

ಜಿಲ್ಲೆಯ ಅನೌಪಚಾರಿಕ ಪಡಿತರ ಪ್ರದೇಶ ಮತ್ತು ನಗರ ಪ್ರದೇಶಕ್ಕೆ ವಿತರಿಸಲು ಈ ತಿಂಗಳಲ್ಲಿ ಒಟ್ಟು 3740 ಕ್ವಿಂಟಾಲ್ ಸಕ್ಕರೆಯನ್ನು ಆಹಾರ ನಿಗಮ ಬಿಡುಗಡೆ ಮಾಡಿದೆ. ಕಾರ್ಡುದಾರರಿಗೆ ಸಕ್ಕರೆಯ ಪ್ರಮಾಣವು ಯುನಿಟಿಗೆ 200 ಗ್ರಾಂ ಮತ್ತು ಕಾರ್ಡಿಗೆ ಗರಿಷ್ಠ 2 ಕೆ. ಜಿ. ಆಗಿರುತ್ತದೆ.

ಈ ತಿಂಗಳಲ್ಲಿ ಜಿಲ್ಲೆಗೆ ಅಕ್ಕಿ 13,800 ಕ್ವಿಂಟಾಲ್ ಬಿಡುಗಡೆಯಾಗಿದೆ. ಮಂಗಳೂರಿನ ಅನೌಪಚಾರಿಕ ಪಡಿತರ ಪ್ರದೇಶದಲ್ಲಿ ಕಾರ್ಡೊಂದಕ್ಕೆ 15 ಕೆ. ಜಿ. ಉಡುಪಿಯಲ್ಲಿ 10 ಕೆ.ಜಿ. ಮತ್ತು ಪುರಸಭಾ ಪ್ರದೇಶದಲ್ಲಿ 8 ಕೆ. ಜಿ. ಯಂತೆ ವಿತರಿಸಲು ಸೂಚಿಸಲಾಗಿದೆ.

ಸಾರ್ವಜನಿಕ ವಿತರಣೆಗೆ 800 ಕ್ವಿಂಟಾಲ್ ಗೋಧಿ ಬಿಡುಗಡೆಯಾಗಿದ್ದು, ಗೋಧಿಯ ಚಿಲ್ಲರೆ ಮಾರಾಟ ದರವು ಕೆ. ಜಿಗೆ 2-30 ಆಗಿರುತ್ತದೆ.

ಜಿಲ್ಲೆಗೆ ಈ ತಿಂಗಳಿಗೆ 29000 ಕಿಲೋ ಲೀಟರ್ ಸೀಮೆಎಣ್ಣೆ ಹಂಚಿಕೆಯಾಗಿ ಬಿಡುಗಡೆಯಾಗಿದ್ದು ಅನೌಪಚಾರಿಕ ಪಡಿತರ ಪ್ರದೇಶದಲ್ಲಿ ಕಾರ್ಡೊಂದಕ್ಕೆ 15 ಲೀಟರ್‌ನಂತೆ, ಪುರಸಭಾ ಪ್ರದೇಶದಲ್ಲಿ 10 ಲೀಟರ್‌ನಂತೆ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಕಾರ್ಡೊಂದಕ್ಕೆ 5 ಲೀಟರ್‌ನಂತೆ ವಿತರಿಸಲು ಸೂಚಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಉಚಿತ ಕಾನೂನು ನೆರವು ಶಿಬಿರ

ಬ್ರಹ್ಮಾವರ, ಅ. 8– ಉಡುಪಿ ತಾಲೂಕು ಕಾನೂನು ನೆರವು ಸಮಿತಿ, ಬ್ರಹ್ಮಾವರ ಜೇಸೀಸ್ ಹಾಗೂ ಬ್ರಹ್ಮಾವರ ಮಂಡಲ ಪಂಚಾಯತ್ ಇದರ ಸಂಯುಕ್ತಾಶ್ರಯದಲ್ಲಿ ಅ.15 ರಂದು ಬ್ರಹ್ಮಾವರ ಮಂಡಲ ಪಂಚಾಯತ್ ವಠಾರದಲ್ಲಿ ಉಚಿತ ಕಾನೂನು ಶಿಬಿರವನ್ನು ಏರ್ಪಡಿಸಲಾಗಿದೆ.

ಅ.ಭಾ. ಯುವ ಜನತಾ ಕೋಶಾಧಿಕಾರಿ ಜಯಪ್ರಕಾಶ ಹೆಗ್ಡೆ ಅವರು ಈ ಶಿಬಿರವನ್ನು ಉದ್ಘಾಟಿಸಲಿದ್ದು, ಶಾಸಕ ಬಸವರಾಜ್ ಅಧ್ಯಕ್ಷತೆ ವಹಿಸುವರು.

ತುಂಗಾ ಮೇಲ್ದಂಡೆ ಯೋಜನೆ ಯುವ ಜನರ ತೀವ್ರ ವಿರೋಧ

(ಮುಂಗಾರು ವರದಿ)

ತೀರ್ಥಹಳ್ಳಿ, ಅ. 8– ಸರಕಾರದ ಉದ್ದೇಶಿತ ತುಂಗಾ ಮೇಲ್ದಂಡೆ ಯೋಜನೆ ಯಾವ ಕಾರಣದಿಂದಲೂ ಕಾರ್ಯಗತವಾಗದಂತೆ ತಡೆಯಲು ಸ್ಥಳೀಯ ಯುವ ಜನರು ನಿರ್ಧರಿಸಿದ್ದಾರೆ.

ಇತ್ತೀಚೆಗೆ ಇಲ್ಲಿಗೆ ಸಮೀಪದ ಮೇಗರವಳ್ಳಿಯಲ್ಲಿ ತುಂಗಾ ಮೇಲ್ದಂಡೆ ಯೋಜನೆ ವಿರುದ್ಧ ನಡೆದ ಯುವಜನರ ಸಭೆಯು ಉದ್ದೇಶಿತ ಯೋಜನೆಯನ್ನು ಕಾರ್ಯಗತ ಮಾಡಬಾರದೆಂದು ಒತ್ತಾಯಿಸಲು ಹಾಗೂ ಈ ಯೋಜನೆಯಿಂದ ಆಗಬಹುದಾದ ತೊಂದರೆಗಳನ್ನು ಆಳುವ ವರ್ಗಕ್ಕೆ ತಿಳಿಯಪಡಿಸಲು ನಿರ್ಧರಿಸಿತು.

ಈಗಾಗಲೇ ವಿವಿಧ ಯೋಜನೆಗಳ ಹೆಸರಿನಲ್ಲಿ ಮಲೆನಾಡಿನ ಬಹುಭಾಗವನ್ನು ಮುಳುಗಡೆ ಮಾಡಿರುವ ಸರಕಾರ ಇದೀಗ ಮತ್ತೆ ತುಂಗಾ ಮೇಲ್ದಂಡೆ, ಭದ್ರಾ ಮೇಲ್ದಂಡೆ ಇತ್ಯಾದಿ ಯೋಜನೆಗಳನ್ನು ಕೈಗೆತ್ತಿಕೊಂಡು ಇನ್ನುಳಿದ ಮಲೆನಾಡಿನ ಪ್ರಕೃತಿ ಸಂಪತ್ತನ್ನು ನಿರ್ನಾಮ ಮಾಡಿ ಸ್ಥಳೀಯ ಜನತೆಯನ್ನು ಅತಂತ್ರರನ್ನಾಗಿ ಮಾಡ ಹೊರಟಿರುವುದನ್ನು ಯುವಜನರು ಖಂಡಿಸಿದರು.

ಮೇಗರವಳ್ಳಿ ಮಂಡಲ ಪ್ರಧಾನ ಶಿವಲಿಂಗ ವೃತ್ಯಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ತುಂಗಾ ಮೇಲ್ದಂಡೆ ಯೋಜನೆ ಕಾರ್ಯಗತವಾದಂತೆ ತಡೆಯಲು ಯಾವುದೇ ರೀತಿಯ ತ್ಯಾಗಕ್ಕೂ ಸಿದ್ಧರಾಗುವುದಾಗಿ ಯುವಜನರು ಪ್ರತಿಜ್ಞೆಗೈದರು.

ಸಭೆಯನ್ನುದ್ದೇಶಿಸಿ ಜಾವಗಲ್ ವಿಜಯ ಕುಮಾರ್, ಅಪ್ಪಣ್ಣ ಹೆಗ್ಡೆ, ರಾಘವೇಂದ್ರ ಮೊದಲಾದವರು ಮಾತನಾಡಿದರು. ಎ. ಎಸ್. ಸತೀಶ್ ವಂದಿಸಿದರು.

ಲಂಚ ಸ್ವೀಕರಿಸಿದ ಗ್ರಾಮಕರಣಿಕ ಲೋಕಾಯುಕ್ತ ಬಲೆಗೆ

ಮಂಗಳೂರು, ಅ. 8– ಸುಳ್ಯ ತಾಲೂಕು ಅರಂತೋಡು ಗ್ರಾಮಕರಣಿಕ ಜನ್ನಯ್ಯ ನಾಯ್ಕ ಅವರು ಅಕ್ರಮ ಸಂಭಾವನೆ ಪಡೆಯುತ್ತಿದ್ದಾಗ ಲೋಕಾಯುಕ್ತ ದಳದ ಬಲೆಗೆ ಬಿದ್ದರೆಂದು ತಿಳಿದು ಬಂದಿದೆ.

ಅರಂತೋಡು ಗ್ರಾಮದ ದೊಡ್ಡಡ್ಕ ನಿವಾಸಿ ಬಿ. ಅಬ್ದುಲ್ ಖಾದರ್ ಅವರು ಅನಧಿಕೃತವಾಗಿ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಅದರಲ್ಲಿ ಮನೆಕಟ್ಟಿ ಕೃಷಿ ಮಾಡುತ್ತಿದ್ದ 1 ಎಕ್ರೆ 16 ಸೆಂಟ್ಸ್ ಭೂಮಿಯನ್ನು ತಮ್ಮ ಹೆಸರಿಗೆ ನೋಂದಾಯಿಸಿಕೊಳ್ಳಲು ತಹಸೀಲ್ದಾರ್ ಅವರಿಗೆ ಅರ್ಜಿ ಸಲ್ಲಿಸಿದ್ದರು.

ತಹಸೀಲ್ದಾರ್ ಅವರು ಗ್ರಾಮಕರಣಿಕ ಜನ್ನಯ್ಯ ನಾಯ್ಕ ಅವರಿಗೆ ರವಾನಿಸಿ ವರದಿ ಬಯಸಿದ್ದರು. ಆದರೆ ಜನ್ನಯ್ಯ ನಾಯ್ಕ ಅವರು ಒಂದು ಸಾವಿರ ರೂಪಾಯಿ ಲಂಚ ಕೇಳಿದರೆಂದು ಲೋಕಾಯುಕ್ತ ಡಿವೈಎಸ್ಪಿ ಎಸ್. ಕೆ. ಘೋಡ ಅವರಲ್ಲಿ ದೂರು ಕೊಟ್ಟಿದ್ದರು.

ಅ. 7 ರಂದು ಡಿವೈಎಸ್ಪಿ ಘೋಡ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಶಾಂತಾರಾಮ ರೈ ಹಾಗೂ ಎಚ್ ಇನ್ಸ್‌ಪೆಕ್ಟರ್ ಕೇಶವ ಅವರು ಜನ್ನಯ್ಯ ನಾಯ್ಕ ಅವರು 500 ರೂಪಾಯಿ ಲಂಚ ಸ್ವೀಕರಿಸುತ್ತಿದ್ದಾಗ ಬಂಧಿಸಿದರೆಂದು ತಿಳಿಸಲಾಗಿದೆ.

ಇಂದು ಕುಂದಾಪುರದಲ್ಲಿ ಬಿ.ಇ.ಎಫ್.ಐ. ವಲಯ ಸಮ್ಮೇಳನ

ಕುಂದಾಪುರ, ಅ. 8– ವಿಜಯಾ ಬ್ಯಾಂಕ್ ನೌಕರರ ಸಂಘ(ಬಿ.ಇ.ಎಫ್.ಐ)ದ ಮಂಗಳೂರು ವಲಯ ಸಮ್ಮೇಳನ ಆಕ್ಟೋಬರ್ 9ರಂದು ಕುಂದಾಪುರದಲ್ಲಿ ನಡೆಯಲಿದೆ. ವಿಧಾನ ಪರಿಷತ್ ಸದಸ್ಯ ಬಿ. ಅಪ್ಪಣ್ಣ ಹೆಗ್ಡೆ ಸಮ್ಮೇಳನವನ್ನು ಉದ್ಘಾಟಿಸಲಿದ್ದು, ಸಿ.ಐ.ಟಿ.ಯು. ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ. ಮಾಧವ ಹಾಗೂ ವಿಜಯಾ ಬ್ಯಾಂಕ್ ನೌಕರ ಸಂಘದ ನಾಯಕ ಬಿ. ಎಂ. ಮಾಧವ ಅವರು ಮುಖ್ಯ ಅತಿಥಿಗಳಾಗಿ ಆಗಮಿಸುವರು.

ಸಮ್ಮೇಳನ ನೌಕರರ ಹಲವಾರು ಬೇಡಿಕೆಗಳು, ಆಡಳಿತ ವರ್ಗ ನಡೆಸುತ್ತಿರುವ ದಬ್ಬಾಳಿಕೆ ಮುಂತಾದ ವಿಷಯಗಳ ಬಗ್ಗೆ ಚರ್ಚಿಸಲಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕರಿಸಬೇಕೆಂದು ಸಮ್ಮೇಳನ ಸ್ವಾಗತ ಸಮಿತಿಯ ಸಂಚಾಲಕ ಎ. ಕೆ. ಶೆಟ್ಟಿ ವಿನಂತಿಸಿದ್ದಾರೆ.

ದಸರಾ ಉತ್ಸವ: ಪ್ರವಾಸಿಗರಿಗೆ ಬಸ್ ಸೌಕರ್ಯ

(ಮುಂಗಾರು ವರದಿ)

ಮೈಸೂರು, ಅ. 8–ದಸರಾ ಉತ್ಸವದ ದಿನಗಳಲ್ಲಿ ನಗರಕ್ಕೆ ಬರುವ ಪ್ರವಾಸಿಗರು ಇತರ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗಿ ಬರಲು ಅನುಕೂಲವಾಗಲು ಸಾರಿಗೆ ಸಂಸ್ಥೆಯವರು ಬಸ್ ಸೌಕರ್ಯ ಏರ್ಪಡಿಸಿದ್ದಾರೆ.

ಮೈಸೂರಿನಿಂದ ಬೆಂಗಳೂರು, ನಂಜನಗೂಡು, ಮಂಡ್ಯ, ಚಾಮುಂಡಿ ಬೆಟ್ಟ, ಕೃಷ್ಣರಾಜನಗರ, ಕೊಳ್ಳೇಗಾಲ, ಬನ್ನೂರು, ಮಳವಳ್ಳಿ, ಮಂಡಕಳ್ಳಿ, ರಂಗನತಿಟ್ಟು ಪಕ್ಷಿಧಾಮಗಳಿಗೆ ವಿಶೇಷ ಬಸ್‌ಗಳನ್ನು ಓಡಿಸಲಾಗುವುದು ಎಂದು ತಿಳಿದು ಬಂದಿದೆ.

ಹಾಗೂ ಈ ತಿಂಗಳ 8 ರಿಂದ 10 ರ ವರೆಗೆ ಮಲೆ ಮಹದೇಶ್ವರ ಬೆಟ್ಟಕ್ಕೆ ಬಸ್‌ಗಳನ್ನು ಓಡಿಸಲಾಗುತ್ತದೆ.

ತರುಣಿಯ ಮಾನಭಂಗ ಆರೋಪಿ ಬಂಧನ

(ಮುಂಗಾರು ವರದಿ)

ಚಿಕ್ಕಮಗಳೂರು, ಅ. 8– ಸಖರಾಯ ಪಟ್ಟಣದ ಸಮೀಪ ಯುವತಿಯೋರ್ವಳ ಮೇಲೆ ಅತ್ಯಾಚಾರ ಎಸಗಿದ ಆರೋಪಕ್ಕಾಗಿ ಯುವಕನೋರ್ವನನ್ನು ಬಂಧಿಸಲಾಗಿದೆ.

ನಾಗೇನಹಳ್ಳಿಯ ಯುವತಿಯೋರ್ವಳು ತನ್ನ ಅಣ್ಣನ ಮಗಳೊಂದಿಗೆ ತರಕಾರಿ ತರಲು ಹೊಲಕ್ಕೆ ಹೋಗಿದ್ದಾಗ ಚಂದ್ರಪ್ಪ ಎಂಬ ಯುವಕ ಆಕೆಯನ್ನು ಅಡ್ಡಗಟ್ಟಿ ಅತ್ಯಾಚಾರವೆಸಗಿದ್ದಾನೆ.

19 ವರ್ಷದ ಈ ಯುವತಿ ಹೊಲದಿಂದ ಹಿಂದಿರುಗುವಾಗ ನೀಲಗಿರಿ ಪ್ಲಾಂಟೇಷನ್ ಬಳಿ ಈ ದುರ್ಘಟನೆ ನಡೆದಿದೆ. ಈ ಘಟನೆಯ ನಂತರ ಹಳ್ಳಿಯಲ್ಲಿ ಎರಡು ಗುಂಪುಗಳ ನಡುವೆ ಘರ್ಷಣೆ ಪ್ರಾರಂಭವಾಗಿದ್ದು ಪೋಲೀಸರು ಆಗಮನದಿಂದ ತಣ್ಣಗಾಯಿತೆನ್ನಲಾಗಿದೆ.

ಆರೋಪಿ ಚಂದ್ರಪ್ಪನನ್ನು ಪೋಲಿಸರು ಬಂಧಿಸಿದ್ದಾರೆ.

ಆತ್ಮಹತ್ಯೆ

ಇಲ್ಲಿನ ಶಂಕರಪುರ ಬಡಾವಣೆಯ ಶಾರದ (16) ಎಂಬ ಯುವತಿ ಬಸವನಹಳ್ಳಿ ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ತನಗೆ ಒಲ್ಲದ ಹುಡುಗನೊಂದಿಗೆ ಮದುವೆ ಮಾಡಲು ಮನೆಯವರು ಯತ್ನಿಸಿದ್ದು ಈ ದುರ್ಘಟನೆಗೆ ಕಾರಣವೆನ್ನಲಾಗಿದೆ. ಬಸವನಹಳ್ಳಿ ಪೊಲೀಸರು ಮೊಕದ್ದಮೆ ದಾಖಲು ಮಾಡಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಬಂಧನ

ಅಜ್ಜಂಪುರ ಸಮೀಪದ ಬಳೆಕೆರೆ ಎಂಬಲ್ಲಿ ಜೂಜಾಡುತ್ತಿದ್ದ 18 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಈ ಸಂಬಂಧವಾಗಿ 792 ರೂಗಳನ್ನು ವಶಪಡಿಸಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಗುಡಿಸಲು ಭಸ್ಮ

ಬೀರೂರಿನ ಸರಸ್ವತಿಪುರಂ ಕಾಲೋನಿಯ ಗುಡಿಸಲೊಂದಕ್ಕೆ ಆಕಸ್ಮಿಕ ಬೆಂಕಿ ಬಿದ್ದು 5 ಸಾವಿರ ರೂ ನಷ್ಟ ಸಂಭವಿಸಿದೆ ಎಂದು ತಿಳಿದು ಬಂದಿದೆ.

ಈ ದುರ್ದೈವಿಗಳಿಗೆ ಪುರಸಭೆಯಿಂದ ಪರಿಹಾರ ಒದಗಿಸುವುದಾಗಿ ಅಧ್ಯಕ್ಷ ಶಾಂತರಾಜ್ ಹೇಳಿದ್ದಾರೆ.

ಅಡ್ಡಗಟ್ಟಿ ದರೋಡೆ

ಬಾಳೆಹೊನ್ನೂರು ಸಮೀಪದ ಕಡಬಗೆರೆ ... ರಾತ್ರಿ ನಡೆದು ಹೋಗುತ್ತಿದ್ದ ಶಂಕರ್ ಎಂಬವರನ್ನು ನಾಲ್ವರು ಅಡ್ಡಗಟ್ಟಿ ಥಳಿಸಿ 4 ಸಾವಿರ ರೂ ಕಿತ್ತುಕೊಂಡು ಪರಾರಿಯಾಗಿದ್ದಾರೆ ಎಂದು ವರದಿಯಾಗಿದೆ. ಬಾಳೆಹೊನ್ನೂರು ಪೋಲೀಸರು ತನಿಖೆ ನಡೆಸುತ್ತಿದ್ದಾರೆ.

ಅ. 11: ದಸರಾ ವಸ್ತು ಪ್ರದರ್ಶನ ಉದ್ಘಾಟನೆ

(ಮುಂಗಾರು ವರದಿ)

ಮೈಸೂರು, ಅ. 8–ಈ ವರ್ಷದ ಶರನ್ನವರಾತ್ರಿ ಮಹೋತ್ಸವ ದಸರಾ ವಸ್ತು ಪ್ರದರ್ಶನವನ್ನು ಇದೇ ಅ. 11 ರಂದು ಸಂಜೆ 4.45 ಕ್ಕೆ ರಾಜ್ಯಪಾಲ ವೆಂಕಟಸುಬ್ಬಯ್ಯನವರು ಉದ್ಘಾಟಿಸುವರು.

ವಸ್ತು ಪ್ರದರ್ಶನದಲ್ಲಿ ಪಾಲ್ಗೊಳ್ಳುವ ಎಲ್ಲ ಉದ್ಯಮಿಗಳು, ಮಳಿಗೆಗಳವರು ಅ. 9 ರ. ಹೊತ್ತಿಗೆ ಪ್ರೇಕ್ಷಕರಿಗಾಗಿ ತೆರೆದಿರಬೇಕೆಂದು ವಸ್ತು ಪ್ರದರ್ಶನದ ಕಾರ್ಯದರ್ಶಿ ಎಚ್. ಆರ್. ಮಹದೇವಯ್ಯನವರು ಕೋರಿದ್ದಾರೆ.

ಈ ಹೊತ್ತಿನಲ್ಲೇ ವಸ್ತು ಪ್ರದರ್ಶನದ ಕಾಮಾಮಹೋತ್ಸವದ ನೆನಪಿನ ಸಂಚಿಕೆಯೊಂದನ್ನು ಹೊರತರಲಾಗುವುದೆಂದು ಅವರು ತಿಳಿಸಿದ್ದಾರೆ.

ಅಂಗನವಾಡಿ ಕಾರ್ಯಕರ್ತೆಯ[ರ] ಮುಷ್ಕರಕ್ಕೆ ಬೆಂಬ[ಲ]

ಕುಂದಾಪುರ, ಅ. 8– ಅಂಗನವಾಡಿ ಕೇಂದ್ರಗಳಿಗೆ ಕನಿಷ್ಠ ಸೌಲಭ್ಯ ನೀಡು[ವಂತೆ] ಒತ್ತಾಯಿಸಿ ಹಾಗೂ ಅಂಗನವಾಡಿ ಕಾರ್ಯಕರ್ತೆಯರ–ಸಹಾಯಕಿಯರ ಬೇಡಿಕೆಗಳ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಗಮನ ಸೆಳೆಯಲು ಅ. 11ರಂದು ರಾಜ್ಯಾದ್ಯಂತ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ನಡೆಸಲಿರುವ ಧರಣಿ ಮುಷ್ಕರಕ್ಕೆ ಕುಂದಾಪುರ ತಾಲೂಕು ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಮಂಡಳಿ ಬೆಂಬಲ ವ್ಯಕ್ತಪಡಿಸಿದೆ.

ಕುಂದಾಪುರ ತಾಲೂಕಿನ ಎಲ್ಲಾ ... ಅಂಗನವಾಡಿ ಕೇಂದ್ರಗಳು ಅ. 11ರ ... ಮುಷ್ಕರದಲ್ಲಿ ಭಾಗವಹಿಸಲು ನಿ... ಸಿದ್ದು ಕಾರ್ಯಕರ್ತೆಯರು ಜಿಲ್ಲಾ ... ಕ್ಕಿನ ಎದುರು ನಡೆಸಲಿರುವ ಧ... ಮುಷ್ಕರದಲ್ಲಿ ಭಾಗವಹಿಸುವರು ಎಂ... ಕುಂದಾಪುರ ತಾಲೂಕು ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾ... ಯರ ಮಂಡಳಿಯ ಸಲಹೆಗಾರ ... ಉಮಾನಾಥ ಗಂಗೊಳ್ಳಿ ಪ್ರಕಟಣೆ... ತಿಳಿಸಿದ್ದಾರೆ.

ಕುಂಬಳೆ, ಅ. 8–ಇಲ್ಲಿನ ದೇ... ಟಾಕೀಸಿನ ಸಮೀಪ ಇತ್ತೀಚೆಗೆ ... ಯೊಂದು ಮಗುಚಿ ಬಿದ್ದು ನಾಲ್ವ... ಗಾಯಗೊಂಡಿದ್ದಾರೆ.



ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲೂಕು ... ಶಾಲಾ ಮುಖ್ಯೋಪಾಧ್ಯಾಯ ಮಂಜಪ್ಪ ರಾಘವೇಂದ್ರ ಅವರು ಈ ವರ್ಷದ ಶಿಕ್ಷಕ ದಿನಾಚರಣೆಯಂದು ದೆಹಲಿಯಲ್ಲಿ ರಾಷ್ಟ್ರಪತಿ ಆರ್. ವೆಂಕಟರಾಮನ್ ಅವರಿಂದ ರಾಷ್ಟ್ರ ಪ್ರಶಸ್ತಿ ಸ್ವೀಕರಿಸಿದರು.

ಜಿಲ್ಲಾ ಮಟ್ಟದ ತುಳು ನಾಟಕ ಸ್ಪರ್ಧೆ

ಬೈಕಂಪಾಡಿ, ಅ. 8–ಬೈಕಂಪಾಡಿ ವಿದ್ಯಾರ್ಥಿ ಸಂಘ ಹಾಗೂ ಅದರ ಅಂಗಸಂಸ್ಥೆಯಾದ ಮೀನಕಳಿಯ ಮಹಿಳಾ ಸಮಾಜದ ಜಂಟಿ ವಾರ್ಷಿಕೋತ್ಸವದ ಅಂಗವಾಗಿ 1989ರ ಜನವರಿ 29ರಿಂದ ಫೆಬ್ರವರಿ 4ರವರೆಗೆ ಜಿಲ್ಲಾ ಮಟ್ಟದ (ಕಾಸರಗೋಡು ಸೇರಿ) ತುಳು ಸಾಮಾಜಿಕ ನಾಟಕ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಜಿಲ್ಲಾ ಮಟ್ಟದ ಎಲ್ಲಾ ಕಲಾಭ್ಯಾಸಿ ನಾಟಕ ಸಂಸ್ಥೆಗಳಿಗೆ ಅವಕಾಶವಿದ್ದು, ಪ್ರವೇಶ ಪತ್ರ ಸ್ವೀಕರಿಸಲು ಕೊನೆಯ ದಿನಾಂಕ 5-11-1988.

ಪ್ರಥಮ ಬಹುಮಾನ 1,500ರೂ., ದ್ವಿತೀಯ ಬಹುಮಾನ 1,000ರೂ., ತೃತೀಯ ಬಹುಮಾನ 500ರೂ.ಹಾಗೂ ಹಲವಾರು ವೈಯಕ್ತಿಕ ಬಹುಮಾನ ಕೊಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ವಾಸುದೇವ ಎಸ್.ಪುತ್ರನ್, ಗೌ.ಪ್ರ. ಕಾರ್ಯದರ್ಶಿ ವಿದ್ಯಾರ್ಥಿ ಸಂಘ. ಮಾಲೀಕರು, ವಿಜಯಾ ಟೈಲರ್ಸ್ ಸುರತ್ಕಲ್ ಅಥವಾ ಹರಿಶ್ಚಂದ್ರ ಎಸ್. ಕರ್ಕೇರ, ಸಂಘಟನಾ ಕಾರ್ಯದರ್ಶಿ, ಬೈಕಂಪಾಡಿ ವಿದ್ಯಾರ್ಥಿ ಸಂಘ ಅಂಚೆ ಮೀನಕಳಿಯ, ನವ ಮಂಗಳೂರು ಇವರನ್ನು ಸಂಪರ್ಕಿಸಬಹುದೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹಡಗುಗಳಿಗೆ ತಡೆ: ಮೀನುಗಾರರ ಬೆದರಿಕೆ

ಮಂಗಳೂರು, ಅ. 8– ಮಂಗಳೂರು ಹಳೆ ಬಂದರಿನ ಅಳಿವೆಯ ಹೂಳು ತೆಗೆಯಲು ರಾಜ್ಯ ಸರಕಾರ ನಿರ್ಲಕ್ಷಿಸಿದರೆ ಎರಡನೆಯ ಹಂತದ ಹೋರಾಟವಾಗಿ ನವ ಮಂಗಳೂರು ಬಂದರಿಗೆ ಪ್ರವೇಶಿಸುವ ಎಲ್ಲಾ ಹಡಗುಗಳನ್ನು ತಡೆಹಿಡಿಯಲಾಗುವುದೆಂದು ಮೀನುಗಾರ ಮುಖಂಡ ಕಾಶೀನಾಥ ಕರ್ಕೇರ ಅವರು ಘೋಷಿಸಿದರು.

ಅವರು ನಿನ್ನೆ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಜಮಾಯಿಸಿದ್ದ ಮೀನುಗಾರರನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಮೀನುಗಾರರಿಗೆ ಸರಕಾರದಿಂದ ಬರೇ ಆಶ್ವಾಸನೆ ದೊರಕಿದ್ದಲ್ಲ. ಕೆಲಸ ಆಗಬೇಕು ಎಂದು ನುಡಿದ ಅವರು ಹೋರಾಟದ ಮೊದಲ ಹಂತವಾಗಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಇಂದಿನಿಂದ ಪ್ರತಿದಿನ 200 ಜನ ಮೀನುಗಾರರು ಧರಣಿ ಕುಳಿತುಕೊಳ್ಳುತ್ತಾರೆ. ಬೇಡಿಕೆ ಈಡೇರುವ ತನಕ ಈ ಧರಣಿ ಮುಂದುವರಿಯುತ್ತದೆ ಎಂದರು.

ಮೀನುಗಾರರು ಯಾವುದೇ ರಾಜಕೀಯ ಕಾರಣಕ್ಕಾಗಿ ಧರಣಿ ನಡೆಸುತ್ತಿಲ್ಲ. ಎಂದ ಅವರು ರಾಜ್ಯ ಸರಕಾರವನ್ನು ಮಾತ್ರ ಟೀಕೆ ಮಾಡುತ್ತಿದ್ದೇವೆ ಎಂಬ ತಪ್ಪು ಕಲ್ಪನೆ ಯಾರಿಗೂ ಬೇಡ. ಕೇಂದ್ರ ಸರಕಾರವೂ ಇದರಲ್ಲಿ ಹೊಣೆ ಎಂದರು.

ರಾಜ್ಯ ಸರಕಾರ ಹೊಳೆತ್ತಲು ಹಿಂದೇಟು ಹಾಕಿದರೆ ನವಮಂಗಳೂರು ಬಂದರಿಗೆ ಪ್ರವೇಶಿಸುವ ಎಲ್ಲಾ ಹಡಗುಗಳನ್ನು ತಡೆಹಿಡಿಯುವ ಮೂಲಕ ಇಡೀ ಬಂದರಿನ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವುದು ಅನಿವಾರ್ಯ ಎಂದು ಎಚ್ಚರಿಸಿದರು.

ಕುಸ್ತಿ ಸಂಘಕ್ಕೆ ಆಯ್ಕೆ

ಕಾರ್ಕಳ, ಅ. 8– ದಸರಾ ಸಂದರ್ಭದಲ್ಲಿ ರಾಜ್ಯ ಮಟ್ಟದ ಕುಸ್ತಿ ಸ್ಪರ್ಧೆಯನ್ನು ಏರ್ಪಡಿಸಲು ಇಲ್ಲಿನ ಶ್ರೀ ದೇವಾ ಸಿಷ್ಯೆಕ್ಷಾರ ಗರಡಿ ಕುಸ್ತಿ ಸಂಘ ನಿರ್ಧರಿಸಿದೆ.

ಕುಸ್ತಿ ಸಂಘದ ಹೊಸ ಪದಾಧಿಕಾರಿಗಳಾಗಿ ಟಿ.ಕೆ.ಪರಶಪ್ಪ (ಅಧ್ಯಕ್ಷ), ಟಿ. ಆರ್.ಬಸವರಾಜ್ (ಉಪಾಧ್ಯಕ್ಷ), ಟಿ. ಎಚ್.ಶಿವಶಂಕರ್ (ಕಾರ್ಯದರ್ಶಿ), ಟಿ. ಎಸ್.ಸುಬ್ರಹ್ಮಣ್ಯ (ಸಹ ಕಾರ್ಯದರ್ಶಿ), ಮತ್ತು ಎಂ.ಮಂಜುನಾಥ್ (ಖಜಾಂಚಿ) ಅವರು ಆಯ್ಕೆಯಾಗಿದ್ದಾರೆ.

ಭಟ್ಕಳದಲ್ಲಿ ಹುಲಿಗಳ ಕಾಟ

(ಮುಂಗಾರು ವರದಿ)

ಭಟ್ಕಳ, ಅ. 8– ತಾಲೂಕಿನ ಕೊಪ್ಪ ಮಂಡಲ ಪಂಚಾಯತ್ ವ್ಯಾಪ್ತಿಯ ಅರಣ್ಯದಲ್ಲಿ ಹುಲಿಗಳ ಕಾಟ ಅಧಿಕವಾಗಿದ್ದು, ಸಾಕುದನ, ಎತ್ತುಗಳು ಅವುಗಳ ಗ್ರಾಸಕ್ಕೆ ತುತ್ತಾಗುತ್ತಿವೆ ಎಂದು ತಿಳಿದು ಬಂದಿದೆ.

ಇತ್ತೀಚೆಗೆ ಮೇವಿಗಾಗಿ ಹೋದ ನಾಲ್ಕು ದನ ಮತ್ತು ಎತ್ತುಗಳು ಹುಲಿಗಳ ಬಾಯಿಗೆ ಸಿಕ್ಕಿ ಸತ್ತು ಹೋಗಿದ್ದು ಗ್ರಾಮಸ್ಥರು ಈ ಬಗ್ಗೆ ತೀವ್ರ ಕಳವಳಗೊಂಡಿದ್ದಾರೆ. ಗ್ರಾಮಸ್ಥರ ಅಹವಾಲಿನ ಮೇರೆಗೆ ಅರಣ್ಯ ಇಲಾಖೆಯವರು ಸ್ಥಳಕ್ಕೆ ಭೇಟಿ ನೀಡಿ ಮೃತಪಟ್ಟ ಜಾನುವಾರುಗಳ ಮಹಜರು ನಡೆಸಿದ್ದಾರೆ ಎಂದು ಕಾಂಗ್ರೆಸ್ ನಾಯಕ ಕೆ. ಎನ್. ನಾಯ್ಕ ತಿಳಿಸಿದ್ದಾರೆ.

ಜಾನುವಾರುಗಳನ್ನು ಕಳೆಕೊಂಡ ಬಡ ರೈತರಿಗೆ ಸರಕಾರದಿಂದ ಪರಿಹಾರ ದೊರಕಿಸಿ ಕೊಡಬೇಕೆಂದು ಅವರು ಅರಣ್ಯ ಇಲಾಖೆಯ ಅಧಿಕಾರಿಯನ್ನು ಆಗ್ರಹಪಡಿಸಿದ್ದಾರೆ.



A
DELUXE HOTEL FOR YOUR COMFORTABLE STAY CLOSE TO MANGALORE-PORT, AIR-PORT, M.C.F. AND OTHER MAJOR INDUSTRIES OF BAIKAMPADY INDUSTRIAL AREA.

ಕದ್ರಿಯಲ್ಲಿರುವ ಉರಗ ಉದ್ಯಾನಕ್ಕೆ ಒಂಭತ್ತೂವರೆ ಅಡಿ ಉದ್ದದ ಒಂಭತ್ತು ಕೆ. ಜಿ. ಭಾರದ ಈ ಹೆಬ್ಬಾವು ಹೊಸ ಸೇರ್ಪಡೆ. ಪೊಲೀಸ್ ಡಿ. ಐ. ಜಿ. ರೇವಣ ಸಿದ್ದಯ್ಯ ಅವರ ನಿವಾಸದ ಬಳಿ ಇದ್ದ ಈ ಹಾವನ್ನು ಹಿಡಿದು ಉರಗ ಉದ್ಯಾನಕ್ಕೆ ಕೊಟ್ಟವರು ಸಬ್ ಇನ್ಸ್‌ಪೆಕ್ಟರ್ ಪಿ. ಎಂ. ಪೆಮ್ಮಯ್ಯನವರು.

ಜನರನ್ನು ಕಾಡುವ ನಿಗೂಢ ರೋಗ

(ಮುಂಗಾರು ವರದಿ)

ಮಂಗಳೂರು, ಅ. 26– ಇಲ್ಲಿನ ಅಶೋಕ ನಗರದಲ್ಲಿ ನಿಗೂಢ ಕಾಯಿಲೆಯೊಂದಕ್ಕೆ ಕಳೆದ ಒಂದು ತಿಂಗಳಿಂದ ಮೂರು ಮಕ್ಕಳು ಬಲಿಯಾಗಿದ್ದರು. ಇಲ್ಲಿನ ಜನರು ಈ ನಿಗೂಢ ಕಾಯಿಲೆಯಿಂದಾಗಿ ಚಿಂತೆಯಿಂದ ತೊಳಲಾಡುತ್ತಿದ್ದಾರೆ. ರಾತ್ರಿ ಬೆಳಗಾಗುವುದರೊಳಗೆ ಕಾಣಿಸಿಕೊಂಡು ಮತ್ತೆ ಒಂದೆರಡು ದಿನಗಳಲ್ಲಿ ಸಾವಿನ ದವಡೆಗೆ ನೂಕುವ ಕಾಯಿಲೆಯಿಂದಾಗಿ ಅಶೋಕ ನಗರದ ಜನರು ಭಯಗ್ರಸ್ಥರಾಗಿದ್ದಾರೆ.

ಪ್ರಾರಂಭದಲ್ಲಿ ಜ್ವರ ಕಾಣಿಸಿಕೊಳ್ಳುತ್ತದೆ. ನಂತರ ಹೊಟ್ಟೆ ನೋವು. ತಲೆ ಬಾಧೆ, ರಕ್ತಬೇಧಿ, ವಾಂತಿ ಎಲ್ಲವೂ ಒಂದೇ ಸಪನೇ ಬರುತ್ತದೆ ಎಂದು ಅಶೋಕ ನಗರದ ಸೀತಮ್ಮ ತಮ್ಮ ದುಃಖವನ್ನು ತೋಡಿಕೊಂಡರು.

ಈ ಕಾಯಿಲೆಯನ್ನು ಡಾಕ್ಟರರು ರಕ್ತಬೇಧಿಯೆಂದು ಕರೆಯುತ್ತಾರೆ. ಆದರೆ ರೋಗ ತಾಗಿದ ಮೇಲೆ ಇದು ರಕ್ತಬೇಧಿ" ಅಲ್ಲ, ಇದೊಂದು ಹೆಸರಿಲ್ಲದ ಕಾಯಿಲೆ ಎಂದು ಇತ್ತೀಚೆಗೆ ಈ ಕಾಯಿಲೆಯಿಂದ ಗುಣಮುಖರಾದ ಸೀತಾರಾಮ್ ನುಡಿದಿದ್ದರು.

ಈ ನಿಗೂಢ ಕಾಯಿಲೆ ಅಶೋಕ ನಗರದ ಮುದ್ದು ಮಕ್ಕಳಾದ ರೇಖಾ (12) ದೀಪಕ್(3) ವಸಂತ (14) ಇವರೆಲ್ಲರನ್ನು ಒಂದೇ ಒಂದು ವಾರದಲ್ಲಿ ಕಾಯಿಲೆ ಬಲಿ ತೆಗೆದು ಕೊಂಡಿತು.

ಮನೆಯಿಂದ ಮನೆಗೆ ಕ್ಷಣದಲ್ಲೇ ಹಬ್ಬುವ ಈ ಕಾಯಿಲೆ ಅಶೋಕ ನಗರದ ಇನ್ನೂ ರಕ್ಕೂ ಹೆಚ್ಚು ಜನರನ್ನು ಕಳೆದ ಒಂದು ತಿಂಗಳಿಂದ ರೋಗಿಗಳನ್ನಾಗಿ ಮಾಡಿತ್ತು.

ಇದು ನಿಗೂಢ ಕಾಯಿಲೆಯೇನಲ್ಲಾ, ರಕ್ತಬೇಧಿ. ಕೊಳಚೆ ಪ್ರದೇಶದಲ್ಲಿ ವಾಸಿಸುವ ಜನರಲ್ಲಿ ಈ ಕಾಯಿಲೆ ಹೆಚ್ಚಾಗಿ ಕಂಡುಬರುತ್ತದೆ, ನೀರನ್ನು ಕಾಯಿಸಿ ಕುಡಿಯುವುದರಿಂದ ಹಬ್ಬುವ ಈ ಕಾಯಿಲೆಯನ್ನು ತಡೆಗಟ್ಟಬಹುದು ಎಂದು ಮಂಗಳೂರಿನ ವೈದ್ಯರು ವಿವರಿಸಿದ್ದರು.

ಅಶೋಕ ನಗರದ ಜನರು "ರಕ್ತಬೇಧಿ ಕಾಯಿಲೆ" ಪ್ರಾರಂಭವಾದ ಕೂಡಲೇ ಸರಕಾರಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡರು. ಆದರೂ ಈ ಪ್ರದೇಶದ ಕೆಲವು ಮನೆಗಳಲ್ಲಿ ಇನ್ನೂ ಈ ಕಾಯಿಲೆ ಕಂಡು ಬರುತ್ತಿದೆ.

ಆದರೂ ರಕ್ತಬೇಧಿ ಕಾಯಿಲೆಯಿಂದ ಕಂಗಾಲಾದ ಅಶೋಕ ನಗರಕ್ಕೆ ಸೂಕ್ತ ವೈದ್ಯಕೀಯ ಸೌಲಭ್ಯವು ಇಷ್ಟರ ತನಕವೂ ಲಭಿಸದೇ ಇದ್ದುದೂ ಆಶ್ಚರ್ಯಕರ. ಕಾಯಿಲೆ ಹಿಡಿದವರು ನರಳುತ್ತಾ, ನರಳುತ್ತಾ ಸರ್ಕಾರಿ ಆಸ್ಪತ್ರೆಗೆ ಹೋಗಬೇಕೇ ಹೊರತು ಯಾವ ವೈದ್ಯಕೀಯ ತಂಡವು ಈ ಕಡೆಗೆ ಬಂದಿಲ್ಲ ಎಂದು ಅಶೋಕ ನಗರದ ನಾಗರಿಕರು ನೋವಿನಿಂದ ವಿನಂತಿಸಿದ್ದಾರೆ.

ಬಿ. ಜೆ. ಪಿ. ಸಭೆ

ಮಂಗಳೂರು ಅ. 26–ಮುಂಬರುವ ಲೋಕಸಭಾ ಚುನಾವಣೆಯ ಸಿದ್ಧತೆಯ ಬಗ್ಗೆ ವಿಚಾರ ವಿನಿಮಯ ಮಾಡಲು ಅಕ್ಟೋಬರ್ 27ರಂದು ಮಂಗಳೂರು ಪಾಲ್ಕೆ ಕೃಷ್ಣಾಚಾರ್ ಹಾಲ್‌ನಲ್ಲಿ ಬಿ.ಜೆ.ಪಿ ಕಾರ್ಯಕರ್ತರ ಸಭೆ ನಡೆಯಲಿದೆ.

ಬಿ.ಜೆ.ಪಿ. ಅಖಿಲ ಭಾರತೀಯ ಕಾರ್ಯದರ್ಶಿ ಜ.ನಾ. ಕೃಷ್ಣಮೂರ್ತಿ, ರಾಜ್ಯ ಸಮಿತಿಯ ಅಧ್ಯಕ್ಷರಾದ ಬಿ.ಬಿ. ಶಿವಪ್ಪನವರು ಸಭೆಯಲ್ಲಿ ಭಾಗವಹಿಸುವರು ಎಂದು ಬಿ.ಜೆ.ಪಿ.ಯ ಜಿಲ್ಲಾ ಸಮಿತಿ ಪ್ರಕಟಿಸಿದೆ.

'ರೈತ ಸಹಾನುಭೂತಿ ಕಪಟ ನಾಟಕ'

ಮಂಗಳೂರು, ಅ- 26: 'ರೈತರ ಹಿತ ಚಿಂತಕರೆಂಬ ಮುಖವಾಡ ಧರಿಸಿ, ರೈತರ ಮೇಲೆ ಸಹಾನುಭೂತಿ ತೋರಿಸುತ್ತಿರುವುದು ಕಾಂಗ್ರೆಸ್ (ಐ) ಪಕ್ಷದ ಕಪಟ ನಾಟಕ ಎಂದು ಹಿಂದ್ ಮಜ್ದೂರ್ ಸಭಾ ಆರೋಪಿಸಿದೆ.

ಗುಂಡೂರಾಯರ ಸರ್ಕಾರವಿದ್ದಾಗ ರೈತರಿಗೆ ಯಾವುದೇ ಸಹಾಯವನ್ನು ಮಾಡದೆ, ರೈತರ ಮೇಲೆ ಗುಂಡಿನ ಮಳೆಗರೆದ ಕಾಂಗ್ರೆಸ್ (ಐ) ಸರ್ಕಾರಕ್ಕೆ ರೈತ ಅಧ್ಯಯನ ಸಮಿತಿಯ ಮೂಲಕ ಅವರ ಸಮಸ್ಯೆಗಳನ್ನು ವಿಚಾರಿಸುವ ನೈತಿಕ ಹಕ್ಕು ಇಲ್ಲ ಎಂದು ಎಚ್. ಎಂ. ಎಸ್ ಪತ್ರಿಕಾ ಪ್ರಕಟಣೆಯೊಂದರಲ್ಲಿ ತಿಳಿಸಿದೆ.

ವಿಚಾರ ಗೋಷ್ಠಿ

ಉಡುಪಿ, ಅ. 26– ಇಲ್ಲಿಯ ಲಯನ್ ಕ್ಲಬ್‌ನ ಆಶ್ರಯದಲ್ಲಿ "ಮಾದಕ ವಸ್ತು ಹಾಗೂ ಔಷದಗಳ ದುಷ್ಪರಿಣಾಮ" ಮತ್ತು "ವಿಶ್ವದ ಏಕತೆಯಲ್ಲಿ ಸೇವಾ ಸಂಸ್ಥೆಗಳ ಪಾತ್ರ" ಎಂಬ ವಿಚಾರಗೋಷ್ಠಿಗಳು ನಡೆದವು.

ಮುಖ್ಯ ಭಾಷಣಕಾರರಾಗಿ ಸರ್ಕಾರಿ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ॥ ಬಿ. ಎಸ್. ನಾಗರಾಜ್, ಮುಖ್ಯ ಅತಿಥಿಗಳಾಗಿ ರೋಟರಿಯ ಮಾಜಿ ಜಿಲ್ಲಾ ಗೌವರ್ನರ್ ರಾಜಾರಾಮ ಮಲ್ಯ ಅವರುಗಳು

ಮಂಗಳೂರಿಗೆ ಪೂಜಾರಿ

ಮಂಗಳೂರು, ಅ. 26– ಕೇಂದ್ರ ಹಣಕಾಸು ಉಪ ಸಚಿವ ಜನಾರ್ದನ ಪೂಜಾರಿಯವರು ಅ. 29ರಂದು ಮಂಗಳೂರಿಗೆ ಆಗಮಿಸಲಿದ್ದಾರೆ.

ಅವರು ನವೆಂಬರ್ ಒಂದರಂದು ಇಲ್ಲಿಂದ ಮುಂಬಯಿಗೆ ತೆರಳುವರು.

ಕುಟುಂಬ ಕಲ್ಯಾಣ ತರಬೇತಿ ಶಿಬಿರ

ಬೆಳ್ತಂಗಡಿ, ಅ. 26– ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಗ್ರಾಮೀಣ ಜನರಿಗೆ ಕುಟುಂಬ ಕಲ್ಯಾಣ ಮುಖಂಡರ ತರಬೇತಿ ಶಿಬಿರವನ್ನು ಇತ್ತೀಚೆಗೆ ಅರಂಬೋಡಿಯಲ್ಲಿ ಏರ್ಪಡಿಸಲಾಯಿತು.

ಹನ್ನೆರಡು ಕಾವಲು ಶಾಲೆಯ ಮುಖ್ಯೋಪಾಧ್ಯಾಯ ಡಿ. ಊವಯ್ಯ ಅವರು ಶಿಬಿರದ ಅಧ್ಯಕ್ಷತೆ ವಹಿಸಿದ್ದು. ಸ್ಥಳೀಯ ಶಾಲೆಯ ಮುಖ್ಯೋಪಾಧ್ಯಾಯ ಕೃಷ್ಣಪ್ಪ ಮುಖ್ಯ ಅತಿಥಿಯಾಗಿದ್ದರು.

ಶಿಬಿರದಲ್ಲಿ ಕ್ಷೇತ್ರ ಪ್ರಚಾರ ಇಲಾಖೆಯ ವತಿಯಿಂದ ಚಲನಚಿತ್ರ ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು.

ಅತಿಥಿ ಗೃಹ

ಪೆರಡಾಲ, ಅ. 26- ಕಾಸರಗೋಡಿನ ಪಿಲಿಕುಂಜೆಯಲ್ಲಿ ಸುಮಾರು 20 ಲಕ್ಷ ರೂಪಾಯಿ

ಮಂಗಳೂರಿಗೆ ದೈಹಿಕ ಶಿಕ್ಷಣ ಕಾಲೇಜು

ಮಂಗಳೂರು, ಅ. 26–ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಪ್ರಪ್ರಥಮವಾದ ಶಾರೀರಿಕ ಶಿಕ್ಷಣ ಕಾಲೇಜು ಉಡುಪಿ ತಾಲೂಕಿನ ಕೊರಾಡಿಯಲ್ಲಿ ನವೆಂಬರ್ 5ರಂದು ಆರಂಭವಾಗಲಿದೆ.

ರಾಜ್ಯದ ಶಿಕ್ಷಣ ಸಚಿವ ಎಂ. ರಘುಪತಿ ಅವರು ಕಾಲೇಜನ್ನು ಉದ್ಘಾಟಿಸಲಿರುವರು.

ಕಾಲೇಜಿನ ಕ್ರೀಡಾಂಗಣ ಮತ್ತು ಹಾಸ್ಟೆಲಿಗೆ ಅದೇ ದಿನ ಸಚಿವರಾದ ಡಾ॥ ಜೀವರಾಜ ಆಳ್ವ ಹಾಗೂ ಕೆ. ಅಮರನಾಥ್ ಶೆಟ್ಟಿ ಶಂಕು ಸ್ಥಾಪನೆ ಮಾಡುವರು.

ಪದಾಧಿಕಾರಿಗಳು

ಮುಲ್ಕಿ, ಅ. 26– ಇಲ್ಲಿಯ ಸರ್ಕಾರಿ ಜೂನಿಯರ್ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ 1984–85ರ ಸಾಲಿಗೆ ಈ ಕೆಳಗಿನವರು ಪದಾಧಿಕಾರಿಗಳಾಗಿ ಆಯ್ಕೆಗೊಂಡಿದ್ದಾರೆ.

ಡಾ॥ ಎಂ. ಎ. ಆರ್. ಕುಡ್ವ (ಅಧ್ಯಕ್ಷ,) ವೇದದಾಸ ಕಾಮತ್, ಡಾ॥ ಸುರೇಶ ಅರಾಹ್ನ (ಉಪಾಧ್ಯಕ್ಷರು) ಸ್ಯಾಮ್ ಮಾಬೆನ್ (ಕಾರ್ಯದರ್ಶಿ) ಮನ್ಸೂರ್ ಹಳೆಯಂಗಡಿ, ಎಂ. ಭಾಸ್ಕರ ಹೆಗ್ಡೆ (ಜತೆ ಕಾರ್ಯದರ್ಶಿಗಳು) ಎಂ. ಬಿ. ನೂರ್ ಮುಹಮ್ಮದ್ (ಕೋಶಾಧಿಕಾರಿ)

ಕಾರ್ಕಳ, ಅ. 26– ಇಲ್ಲಿಯ ಜನತಾ ಬಜಾರ್‌ಗೆ ಈ ಕೆಳಕಂಡ ಪದಾಧಿಕಾರಿಗಳು ಆಯ್ಕೆಯಾಗಿದ್ದಾರೆ.

ಕೆ. ಸದಾನಂದ ಕಾಮತ್ (ಅಧ್ಯಕ್ಷ) ಬಾಲಕೃಷ್ಣ ಶೆಟ್ಟಿ (ಉಪಾಧ್ಯಕ್ಷ) ಎನ್. ಲೋಕಯ್ಯ ನಾಯಕ್, ಕೆ. ಗೋಪಾಲ ಭಂಡಾರಿ, ಕೆ. ರವಿರಾವ್, ಶೀನಶೆಟ್ಟಿಗಾರ, ಐತು ಶೆಟ್ಟಿ, ಸುರೇಶರಾವ್, ಟಿ.ರಮಾನಾಥ ನಾಯಕ್, ಜಯಪ್ರಕಾಶ್, ಶಿಶುಪಾಲ ಜೈನ್, ಕೆ. ಪ್ರಕಾಶ್ ಕಾಮತ್, ಕಿಟ್ಟು ದೇವಾಡಿಗ, ನೋರಾಲ್ಡ್ ನೋರ್ಬಟ್, ನಾರಾಯಣ ಪೈ, (ನಿರ್ದೇಶಕರು)

ಮಹಿಳಾ ಪ್ರಯಾಣಿಕರ ರಕ್ಷಣೆಯ ಭರವಸೆ

ಮಂಗಳೂರು, ಅ. 26– ಮಹಿಳಾ ಪ್ರಯಾಣಿಕರ ರಕ್ಷಣೆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ರೈಲ್ವೆ ಪೊಲೀಸ್ ಅಧಿಕಾರಿಗಳು ಬಿ. ಜೆ. ಪಿ. ಯ ಮಂಗಳೂರು ಘಟಕದ ನಿಯೋಗಕ್ಕೆ ಭರವಸೆ ನೀಡಿದ್ದಾರೆ.

ರೈಲ್ವೆ ನಿಲ್ದಾಣದಲ್ಲಿ ಇತ್ತೀಚೆಗೆ ನಡೆದ ಮಹಿಳೆಯೊಬ್ಬಳ ಮಾನಭಂಗ ಪ್ರಕರಣದ ಹಿನ್ನೆಲೆಯಲ್ಲಿ ಬಿ.ಜೆ.ಪಿ ನಿಯೋಗವು ರೈಲ್ವೆ ನಿಲ್ದಾಣದ ಮುಖ್ಯ ಅಧಿಕಾರಿಗಳು ಹಾಗೂ ರೈಲ್ವೆ ಪೊಲೀಸ್ ಅಧಿಕಾರಿಗಳನ್ನು ಭೇಟಿ ಮಾಡಿತ್ತು.

Oct-27 1987

ಯಾರಿಗೆ ಬೇಡ? ಯಾಕೆ ಬೇಡ?

(ಒಂದನೇ ಪುಟದಿಂದ)

ರಾಜ್ಯದಲ್ಲಿ ಥರ್ಮಲ್ ಘಟಕವೊಂದು ಈಗ ನಿರ್ಮಾಣ ಹಂತದಲ್ಲಿದೆ. ರಾಯಚೂರಿನ ಬಳಿ ತಲೆ ಎತ್ತುತ್ತಿರುವ ಈ ಥರ್ಮಲ್ ಘಟಕಕ್ಕೆ 400 ಮೆಗಾವಾಟ್ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವಿದೆ. ಇದರ ಅಂದಾಜು ವೆಚ್ಚ ರೂ. 400 ಕೋಟಿ. ಪ್ರತಿದಿನವೂ ಆಂಧ್ರ ಪ್ರದೇಶದ ಸಿಂಗರೇಣಿಯಿಂದ ಈ ಥರ್ಮಲ್ ಘಟಕಕ್ಕೆ 5,250 ಟನ್ ಕಲ್ಲಿದ್ದಲು ಬರಬೇಕು. ಸಲೀಸಾಗಿ ಈ ಕಲ್ಲಿದ್ದಲು ಸಾಗಿ ಬರುವುದು ಇನ್ನೂ ನಿಶ್ಚಿತವಾಗಿಲ್ಲ. ಒಂದು ವೇಳೆ ಬಂದರೂ ಅದರಿಂದ ಹರಿದು ಬರುವ ವಿದ್ಯುತ್‌ನ ಬೆಲೆ ಯೂನಿಟ್‌ಗೆ ರೂ. 1 ಕ್ಕಿಂತ ಕಡಿಮೆ ಆಗುವುದಿಲ್ಲ. ಅಂದರೆ ಈ ವಿದ್ಯುತ್ ಗ್ರಾಹಕರಿಗೆ ತಲುಪುವಾಗ ಅದರ ಬೆಲೆ ಕಡಿಮೆ ಪಕ್ಷ ಯೂನಿಟ್‌ಗೆ 4 ರೂ. ಆಗುವುದು.

ಹೆಚ್ಚೆಂದರೆ ಯೂನಿಟ್‌ಗೆ 12 ಪೈಸೆ ವೆಚ್ಚ ತಗಲುವ ಬೇಡ್ತಿ ಒಳಿತೇ ? ಅಥವಾ ಅನಿಶ್ಚಿತ ಹಾಗೂ ದುಬಾರಿಯಾಗಿರುವ ಥರ್ಮಲ್ ಘಟಕ ಒಳಿತೇ? ಜಲಾಶಯದಿಂದ ಬೀಸಿ ಬರುವ ತಂಗಾಳಿ ಒಳಿತೇ? ಥರ್ಮಲ್ ಘಟಕ ಉಗಿ ಬಿಡುವ ವಿಷಪೂರಿತ ಗಾಳಿ ಒಳಿತೇ?.

ನೆಚ್ಚಿಕೆ ಇಲ್ಲ

ಕರ್ನಾಟಕದಲ್ಲಿ ಥರ್ಮಲ್ ಘಟಕಗಳು ಒಂದು ಅವಲಂಬನೀಯ ವಿದ್ಯುತ್ ಮೂಲಗಳಾಗಲು ಸಾಧ್ಯವಿಲ್ಲ. ಅದೂ ಆಗದೆಂದಾದರೆ ನಮಗಿರುವ ಇನ್ನೊಂದು ಮಾರ್ಗವೆಂದರೆ ಅಣುಶಕ್ತಿ ವಿದ್ಯುದಾಗಾರಗಳನ್ನು ಕಟ್ಟುವುದು. ವಿಜ್ಞಾನದಲ್ಲಿ ನಾವು ಸಾಧಿಸಿರುವ ಮುನ್ನಡೆಯ ದೃಷ್ಟಿಯಿಂದ ಇದು ಸಾಧ್ಯವಾಗುವ ಕೆಲಸ. ಆದರೆ ಅದರ ವೆಚ್ಚವನ್ನು ನಾವಿಲ್ಲಿ ಗಮನಿಸಿದರೆ ಮೈ ನಡುಗೀತು. ಇಂದಿನ ಧಾರಣೆವಾಸಿಯಲ್ಲಿ ಒಂದು ಅಣುಶಕ್ತಿ ವಿದ್ಯುದಾಗಾರವನ್ನು ಕಟ್ಟಿದರೆ ಅದರ ಉತ್ಪಾದನಾ ವೆಚ್ಚ ಯೂನಿಟ್‌ಗೆ ರೂ 2 ಕಿಂತ ಕಡಿಮೆಯಾಗುವ ಸಾಧ್ಯತೆಯೇ ಇಲ್ಲ. ಅಂದರೆ ಈಗ ಯೂನಿಟ್‌ಗೆ ರೂ. 1.25 ಕೊಡುತ್ತಿರುವ ಗ್ರಾಹಕ ನಾಳೆ ರೂ. 8 ತೆರಬೇಕಾಗುವುದು. ಇದರ ಪರಿಣಾಮವಾಗಿ ಕೈಗಾರಿಕಾ ಉತ್ಪನ್ನಗಳ ಬೆಲೆ ಆರು ಪಟ್ಟು ಹೆಚ್ಚಿ ಒಂದು ಆರ್ಥಿಕ ವಿಷ ವರ್ತುಲದ ಸೃಷ್ಟಿಯಾಗುವುದು.

ಸಾಮರ್ಥ್ಯ

ಬೆಳೆಯುತ್ತಿರುವ ವಿದ್ಯುಚ್ಛಕ್ತಿ ಅವಶ್ಯಕತೆಯನ್ನು ಗಮನಿಸಿದರೆ ಇನ್ನು 30–40 ವರ್ಷಗಳಲ್ಲಿ ಕರ್ನಾಟಕ ದಿನಕ್ಕೆ ಸುಮಾರು 8,000 ಮೆಗಾವಾಟ್ ವಿದ್ಯುತ್ ಬಳಕೆಯ ಸಾಮರ್ಥ್ಯ ಗಳಿಸಬಹುದು. ಇರುವ ಬೃಹತ್ ಜಲವಿದ್ಯುತ್ ಮೂಲಗಳನ್ನು ಹಂತ–ಹಂತವಾಗಿ ಬಳಸಿಕೊಂಡರೆ ಮುಂದಿನ 30 ವರ್ಷಗಳಲ್ಲಿ ಎಲ್ಲ ಮೂಲಗಳನ್ನೂ ಬಳಸಿ ಬಹುದು.

ಜಲವಿದ್ಯುತ್ ಮೂಲವೊಂದೇ ಎಲ್ಲ ಕಾಲಕ್ಕೂ ಅವಲಂಬನೀಯ. ಮಲೆನಾಡಿನಲ್ಲಿ ಕಾಡು ಕಡಿದು ಜಲಾಶಯ ನಿರ್ಮಾಣ ಮಾಡಿದರೆ ಮಳೆ ಕಡಿಮೆ ಆಗುವುದೆಂಬ ವಾದದಲ್ಲಿ ತಿರುಳಿಲ್ಲವೆಂಬುದನ್ನು ಶರಾವತಿ ಯೋಜನೆ ತೋರಿಸಿ ಕೊಟ್ಟಿದೆ.

ಶರಾವತಿ ಜಲಾಶಯದ ನಿರ್ಮಾಣವಾದ ನಂತರದ 20 ವರ್ಷಗಳಲ್ಲಿ ಅದರ ಜಲಾನಯನ ಪ್ರದೇಶದಲ್ಲಿ ಮಳೆ ಶೇಕಡಾ 10 ರಷ್ಟು ಹೆಚ್ಚಿದೆ. ಕರ್ನಾಟಕ ವಿದ್ಯುತ್ ನಿಗಮದ ನಿವೃತ್ತ ಚೀಫ್ ಎಂಜಿನಿಯರ್ ಎಚ್. ಎಸ್. ಭಟ್ ಇವರ ಅಭಿಪ್ರಾಯದಲ್ಲಿ ಜಲಾಶಯ ನಿರ್ಮಾಣ ಅರಣ್ಯ ವೃದ್ಧಿಗೆ ಪೋಷಕವಾಗಬಲ್ಲುದು. ವನ್ಯಜೀವಿಗಳ ವಿಕಸನಕ್ಕೆ ಹಿತಕಾರಿಯಾಗಬಲ್ಲುದು.

ಗಂಭೀರ ಪ್ರಶ್ನೆ

ಆದ್ದರಿಂದ ರಾಜ್ಯದ ಭವಿಷ್ಯದ ಬಗ್ಗೆ ಚಿಂತನೆ ಇರುವವರು ಅಥವಾ ಕಾರ್ಖಾನೆಗಳನ್ನು ಕಟ್ಟಿ ಉತ್ತಮ ಬದುಕು ನಡೆಸಬೇಕೆಂದು ಬಯಸುವವರು ಮತ್ತೆಲ್ಲರೂ ಗಂಭೀರವಾಗಿ ಯೋಚಿಸಬೇಕಾದ ಹಲವಾರು ಪ್ರಶ್ನೆಗಳನ್ನು ಬೇಡ್ತಿ ಹುಟ್ಟುಹಾಕಿದೆ. ಬೇಡ್ತಿ ಬೇಡವಾದರೆ ಇನ್ನು ಮುಂದೆ ರಾಜ್ಯದಲ್ಲಿ ಯಾವುದೇ ಜಲವಿದ್ಯುತ್ ಯೋಜನೆಯನ್ನು ಕೈಗೊಳ್ಳಲು ಸಾಧ್ಯವಿಲ್ಲ. ಬೇಡ್ತಿಯನ್ನು ಬಿಟ್ಟು ವಾರಾಹಿಯನ್ನು ಹಿಡಿದ ಅಥವಾ ಕಾಳಿ ಎರಡನೆ ಹಂತವನ್ನು ಮುನ್ನಡೆಸಿದ ಕಪಟಾಟ ಇನ್ನು ಸಾಧ್ಯವಿಲ್ಲ. ಅಘನಾಶಿನಿ, ನೇತ್ರಾವತಿ, ಬರಾಪೊಳೆ, ಕಾವೇರಿ, ಎಲ್ಲವನ್ನೂ ಮರೆತು ಬಿಡಬೇಕು. ಉತ್ಪಾದನಾ ವೆಚ್ಚ ಯೂನಿಟ್‌ಗೆ 25 ಪೈಸೆಗಿಂತ ಹೆಚ್ಚಾಗದೆ ಬದಲಿ ವಿದ್ಯುತ್ ಮೂಲವನ್ನು ಬೇಡ್ತಿಯ ಮರಗಳನ್ನು ಅಪ್ಪಿಕೊಂಡ ಪರಿಸರ ಪ್ರೇಮಿಗಳು ತೋರಿಸಿ ಕೊಡಬೇಕು. ಇದು ಈ ರಾಜ್ಯದ ಆರ್ಥಿಕ ಮುನ್ನಡೆಯ ಪ್ರಶ್ನೆ.

ಬೇಡ್ತಿ ಕೆಲವರಿಗೆ ಬೇಡವಾದುದಕ್ಕೆ ನಿಜವಾಗಿಯೂ ಪರಿಸರ ಪ್ರೇಮವೇ ಕಾರಣವೇ? ಎಂಬುದನ್ನಿಲ್ಲಿ ಸ್ವಲ್ಪ ವಿವೇಚಿಸಬೇಕಾಗಿದೆ.

ಏನು ಕಾರಣ?

ಮೊದಲೇ ಹೇಳಿದಂತೆ ಬೇಡ್ತಿ ಮುಳುಗಡೆ ಪ್ರದೇಶದ ಜನರಿಗೆ ಬಾಯಿ ಬಲ ಇದೆ. ಭಾಷೆ ಬಲ್ಲವರು. ಪರಿಸರದ ಸಂರಕ್ಷಣೆಯ ಸೋಗು ಹಾಕಿಕೊಂಡು ನಿಜಸಂಗತಿಯನ್ನು ಮುಚ್ಚಿಡಲು ಇವರಿಂದ ಸಾಧ್ಯವಾಯಿತು.

ಇದರಲ್ಲಿ ಉತ್ತರ ಕನ್ನಡ ಜಿಲ್ಲೆಯ ಎಲ್ಲರಿಗೂ ಗೊತ್ತಿರುವ ಆದರೆ ಯಾರೂ ಹೇಳದಾಗಿರುವ, ಹೇಳಿದರೂ ಕೇಳುವವರಿಲ್ಲದಂತಾಗಿರುವ ಒಂದು ಅಂಶವಿದೆ. ಅದೆಂದರೆ ಇದರಲ್ಲಿ ಮುಳುಗಡೆಯಾಗುವ ಜಮೀನಿನ ವರ್ಗೀಕರಣಕ್ಕೆ ಸಂಬಂಧಿಸಿದ್ದು.

ಸರಕಾರಿ ದಾಖಲೆಯಲ್ಲಿರುವಂತೆ ಅದರಲ್ಲಿ ಮುಳುಗಡೆಯಾಗುವ ಅರಣ್ಯ ಪ್ರದೇಶ 23,000 ಎಕರೆ, ತೋಟ 60 ಎಕರೆ ಮತ್ತು ಸಾಗುವಳಿ ಜಮೀನು 100 ಎಕರೆ, ದಾಖಲೆಯ ಮಾತು ಇದಾದರೆ ನಿಜಾಂಶ ಬೇರೆಯೇ ಆಗಿದೆ.

ಅರಣ್ಯ ಪ್ರದೇಶವೆಂದು ವರ್ಗೀಕರಿಸಿರುವ 23,000 ಎಕರೆಗಳ ಪೈಕಿ ಈಗ ಸುಮಾರು 8,000 ಎಕರೆ ಪ್ರದೇಶದಲ್ಲಿ ಸೊಗಸಾದ ಅಡಿಕೆ ತೋಟಗಳಿವೆ. ಇವೆಲ್ಲಾ ಕಳೆದ ನಾಲ್ಕಾರು ದಶಕಗಳಿಂದ "ಬುದ್ಧಿವಂತ" ಜನರು ಸರಕಾರಿ ಅರಣ್ಯವನ್ನು ಅತಿಕ್ರಮಿಸಿ ಬೆಳೆಸಿದ ತೋಟಗಳು. ಇವೆಲ್ಲಾ ಮುಳುಗಡೆಯಾದರೆ ತೋಟ ಬೆಳೆಸಿದವರಿಗೆ ಪುಡಿಗಾಸೂ ಪರಿಹಾರ ಸಿಗೋದಿಲ್ಲ.

ನಾವು ಅತಿಕ್ರಮಿಸಿ ಬೆಳೆಸಿದ ತೋಟ, ಕಟ್ಟಿದ ಮನೆಗಳಿಗೆ ಪರಿಹಾರ ಕೊಡಿರೆಂದು ಬೇಡುವ ಹುಂಬತನವನ್ನು ಈ "ಬುದ್ಧಿವಂತ" ಜನರು ಮಾಡಲಿಲ್ಲ. ಮುಗ್ಧ ಜನರೆಲ್ಲಾ ಸೈಗುಡುವ ಪರಿಸರ ಪ್ರೇಮವನ್ನು ಉಕ್ಕಿ ಹರಿಸಿದರು. ಬೇಡ್ತಿ ಯಾರಿಗೂ ಬೇಡವಾಯಿತು.

ಇದೆಂತಹ ದುರಂತ! 1980 ರಲ್ಲಿ ಗುಂಡೂರಾವ್ ಸರಕಾರ ಬೇಡ್ತಿ ಯೋಜನೆಯ ಕೆಲಸ ನಿಲ್ಲಿಸಿದಾಗ ಅದರ ಮೇಲೆ ಸುಮಾರು 7 ಕೋಟಿ ರೂ. ವೆಚ್ಚ ಮಾಡಿಯಾಗಿತ್ತು. ಈ ವೆಚ್ಚಕ್ಕೆ ಹೊಣೆ ಯಾರು? ಸಾರ್ವಜನಿಕ ಹಣ ವಿನಿಯೋಗದ ಬಗ್ಗೆ ಕಾಳಜಿ ತೋರಿಸುವವರೆಲ್ಲಾ ಯೋಚಿಸಬೇಕಾದ ಅಂಶ ಇಲ್ಲಿದೆ.

ಸಿರಸಿಯ ಈ ಬುದ್ಧಿವಂತರ ಪರಿಸರ ಪ್ರೇಮ ಅದೆಷ್ಟು ಆಳವಾದುದೆಂಬುದನ್ನು ಅಳೆಯಬೇಕೆನ್ನುವವರು ಒಮ್ಮೆ ಸಿರಸಿಯ ಸುತ್ತ–ಮುತ್ತ ತಿರುಗಾಡಬೇಕು.

1962 ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಪ್ರದೇಶಗಳಲ್ಲಿ ಒಂದು ಭಾಗವನ್ನು ಕೃಷಿ ಉದ್ದೇಶಕ್ಕೆ ಬಿಡುಗಡೆ ಮಾಡಬೇಕೆಂದು ಚಳವಳಿ ಮಾಡಿದವರು ಇದೇ "ಬುದ್ಧಿವಂತ" ಜನ. ಈ ಚಳವಳಿಯ ಪರಿಣಾಮವಾಗಿ ಸಿರಸಿ ಮತ್ತು ಕುಮಟಾ ತಾಲೂಕುಗಳಲ್ಲಿ ಸುಮಾರು 50,000 ಎಕರೆಗೂ ಹೆಚ್ಚು ಅರಣ್ಯ ಪ್ರದೇಶ ಕೃಷಿಗಾಗಿ ಬಿಡುಗಡೆಯಾಗಿತ್ತು.

ಇದೇ ಜನ 1960 ರ ದಶಕದಲ್ಲಿ ತೋಟಗಾರಿಕೆಯ ಸಹಕಾರಿ ಸಂಘವೊಂದನ್ನು ಸ್ಥಾಪಿಸಿ ಅನಾನಸ್ ಹಣ್ಣು ಬೆಳೆಸಲು ಸಾವಿರಾರು ಎಕರೆ ಅರಣ್ಯ ಪ್ರದೇಶವನ್ನು ಪಡೆದಿದ್ದರು. ಅಲ್ಲಿದ್ದ ದಟ್ಟಾರಣ್ಯವನ್ನು ಕಡಿದು ಬೋಳುಮಾಡಿ ಅನಾನಸ್ ಗಿಡ ನೆಟ್ಟಿದ್ದರು. ಸಿರಸಿಯಿಂದ ಬನವಾಸಿಗೆ ಹೋಗುವ ದಾರಿಯಲ್ಲಿ ಈ ಪರಿಸರ ಪ್ರೇಮಿಗಳು ಬೋಳಿಸಿದ ಕಾಡುಗಳನ್ನು ಉದ್ದಕ್ಕೂ ಕಾಣಬಹುದು.

ಇದೆಲ್ಲವನ್ನೂ ತಜ್ಞರ ಸಮಿತಿ ತನ್ನ ವರದಿಯಲ್ಲಿ ಹೇಳಿದೆ. ಆದರೆ ಅದೀಗ ಹೊರಗೆ ಬರಲಾಗದ ಸತ್ಯವಾಗಿ ಉಳಿದಿದೆ.

ಬೆಳಗ್ಗೆ ನಾನೆದ್ದು...

ಕಳ್ಳಬಟ್ಟಿ ಪತ್ತೆಗಾಗಿ ಪೊಲೀಸರು ಮೀಸೆಯ ಮೇಲೆ ಕಣ್ಣು ಹಾಕಿರುವ ಸುದ್ದಿ ತಿಳಿದು ಭರತ ಖಂಡದ ಗಿರಿಜಾ ಮೀಸೆ ಘಡವಗಳೆಲ್ಲ ಕೆಂಡ ಕಾರತೊಡಗಿವೆ. ಕೆಂಡ ಕಾರುವಂತ ಸಿಟ್ಟು ಘಡವಗಳಿಗೇಕೆ ಬಂತು ಅಂತ ಅನುಮಾನಿಸೋ ಹಾಗಂತೂ ಇಲ್ಲ. ಯಾಕಂದರೆ ಘಡವಗಳ ಗತ್ತು ಗಮ್ಮತ್ತನ್ನೇ ಕಿತ್ತು ನಾಶಮಾಡುವ ಪೊಲೀಸರ ಹಿಕಮತ್ತಿಗೆ ಕೆಂಡ ಕಾರದೆ ಬೇರೇನು ತಾನೆ ಮಾಡಲು ಸಾಧ್ಯ?

ಸಾಧ್ಯಾಸಾಧ್ಯತೆ ಬಗ್ಗೆ ಹೇಳೋದು ಸ್ವಲ್ಪ ಕಷ್ಟವೇ! ಆದರೂ, ಕಳ್ಳಬಟ್ಟಿಗಾಗಿ ಜನ ಏನೇನೋ ಆಗಿದ್ದರೂ ಮೀಸೆ ಕಳಕೊಂಡಿರಲಿಲ್ಲ, ಬೆಂಗಳೂರಿನ ಕಳ್ಳಬಟ್ಟಿ ರಾಜ ಸುಲ್ತಾನ್ ಅವರನ್ನೇ ಕೇಳಿ ನೋಡಿ ಬೇಕಿದ್ದರೆ. ಅವರ ಮೇಲೆ ಅನುಮಾನ ಬಂದರೆ ಕಳ್ಳಬಟ್ಟಿ ರಾಣಿ ಮಾರಿಮುತ್ತೂನೇ ಕೇಳಿ.

ಬೆಂಗಳೂರಿನ ಈ ರಾಜ-ರಾಣಿಯರು ನಡೆಸಿದ ಕಳ್ಳಬಟ್ಟಿ ಪ್ರಯೋಗದಲ್ಲೇ ಇಂಥ ಫಲಿತಾಂಶ ಬಂದಿರಲಿಲ್ಲ. ಏನೋ ಒಂದು ಮುನ್ನೂರು ನಾನೂರು ಜನ ಪ್ರಾಣ ಅನ್ನೋದನ್ನ ಕಳಕೊಂಡಿದ್ದರು. ಮತ್ತೆ ಕೆಲವರು, ಕಣ್ಣು ಕಳಕೊಂಡು ನಮ್ಮ ಚಿಕನ್ ಗುಂಡಣ್ಣನವರಿಂದ ಬೆನ್ನು ತಟ್ಟಿಸಿಕೊಂಡಿದ್ದರು. ಆದ್ರೆ ಮೀಸೆ ಅಂತ ಅನ್ನೊದನ್ನ ಮಾತ್ರ ಯಾರೂ ಕಳಕೊಂಡಿರಲಿಲ್ಲ.

ಅದಕ್ಕೇ ನೋಡಿ, ಕೆಲವರು ಯಾಕೆ ಈ ತರಲೆ ಅಂತ ಮೀಸೇನೆ ಬಿಡೊಲ್ಲ. ಮೀಸೆ ಬಿಟ್ರೆ ತಾನೆ ಇವೆಲ್ಲ ಸಮಸ್ಯೆ? ಅದೂ ಸರೀನೆ. ಆದರೆ ಈ ಮೀಸೆಗೂ ಕಳ್ಳಬಟ್ಟಿಗೂ ನಂಟುಕಟ್ಟಿ 'ನಿಜಾ' ಅನ್ನೋ ನಿಗೂಢತೇನಾ ಬೇಧಿಸಲಿಕ್ಕೆ ಹೊರಟ ಪೊಲೀಸರ ಸಾಹಸ ಮಾತ್ರ ಮೆಚ್ಚುವಂಥಾದ್ದೆ.

ಏನು ಮೆಚ್ಚಬೇಕೋ ಏನ್ಕತೆಯೋ? ಸಾಹಸ ಮಾಡೋಕೂ ಒಂದು ಮಿತಿ ಬೇಡ್ವೆ? ಮೊನ್ನೆ ನೋಡಿ ಮಡಿಕೇರಿ ಹತ್ರ ನಮ್ಮ ಅಯ್ಯಪ್ಪ ಸ್ವಾಮಿ ಭಕ್ತನೊಬ್ಬ ಇಂಥದೇ ಸಾಹಸ ಮಾಡೋಕೆ ಅಂತ ಹೋಗಿ ಇದೇ ಪೊಲೀಸರಿಂದ ಮುಸುಡಿ ಮೇಲೆ ಇಕ್ಕಿಸಿಕೊಳ್ಳಬೇಕಾಯ್ತು.

ನೋಡಿ ಸಾಹಸ ಮಾಡೋಕೂ ಖಾಖಿ ಪ್ರಸಾದ ಬೇಕು ಅನ್ನೋದು ಇದಕ್ಕೇ. ಏನೋ ಅಯ್ಯಪ್ಪ ಅಯ್ಯಪ್ಪ ಅಂತ ಎರಡು ಬಾರಿ ವದರಾಡಿ ನಾಲ್ಕು ಕಾಸು ಮಾಡ್ಕೊಳ್ಳೋ ಬದಲು ದೆವ್ವ ಭೂತ ಬಿಡಿಸೋ ಸಾಹಸಕ್ಕೆ ಕೈ ಹಚ್ಚೋದೆ? ಯಾರಾದರೂ ಒಪ್ಪೊ ಅಂತ ಕೆಲಸಾನಾ ಇದು?

ಒಳ್ಳೆ ಚನ್ನಾಯ್ತುಲ್ಲಾ. ಜನಕ್ಕೆ ಅದನ್ನ ಕಟ್ಕೊಂಡೇನಾಗ್ಬೇಕಿದೆ ಅಂತ? ಅವರವರ್ದೇ ಅವರಿಗೆ ಹಾಸ್ಕೊಂಡು ಹೊದ್ಕೋಳ್ಳೋ ಅಷ್ಟಿದೆ. ಅಂಥಾದ್ರಲ್ಲಿ ಬೆಳಿಗ್ಗೇನೆ ಎದ್ದು, ಇಂಥ ತರ್ಲೇನೆಲ್ಲಾ ತಲೇಲಿ ತುಂಬ್ಕೋಬೇಕಲ್ಲ!

ಓಹೋ ತಲೇಲಿ ತುಂಬ್ಕೊಳ್ಳೋಕೆ ಬೇರೇನೋ ಇದೆ ಅನ್ನೋ ರೀತಿ ಮಾತಾಡಿದ್ರೆ ನಂಬೋಕಾಗುತ್ತಾ? ನೋಡಿ, ತಲೇ ಇರೋದೆ ಅದಕ್ಕೆ. ಒಬ್ಬೊಬ್ರು ಒಂದೊಂದನ್ನ ತುಂಬ್ತಾ ಇರ್ತಾರೆ. ಅದು ಪೂರ್ಣ ತುಂಬಿ ಬಿಟ್ರೆ ಇಡೀ ಜಗತ್ತೇ ಕತ್ತಲಾಗಿ ಬಿಡುತ್ತೆ! ಆದಕ್ಕೆ ಯಾವಾಗ್ಲೂ ಅಲ್ಪ ಸ್ವಲ್ಪ ಖಾಲಿ ಇಟ್ಕೊಬೇಕು!

ಯಾಕೆ ಹೀಗೆ ಹೇಳ್ತಾ ಇದ್ದೀನಿ ಅಂದ್ರೆ, ನಮ್ಮ ಡೆಲ್ಲಿ ರಾಣಿ ಇಂದ್ರಮ್ಮನ್ನೋರು 'ಟೀವಿ' ಕೊಡ್ತಾ ಇದ್ದಾರೆ, ಚುನಾವಣೆ ಅನ್ನೋ ಟಾನಿಕ್ ಕೊಡ್ತಾ ಇದ್ದಾರೆ, ಅದನ್ನೆಲ್ಲಾ ತುಂಬೋಕೆ ಜಾಗ ಬೇಡ್ವೆ. ಅಷ್ಟು ಸಹಾಯಾನ ಮಾಡದೆ ಇದ್ರೆ ತಾಯಿಗೆ ದ್ರೋಹ ಮಾಡಿದಂತಾಗೋದಿಲ್ವೆ?

ಹಿಂದೂ ಮತ್ತು ಮುಸ್ಲಿಮರು-5

ಶೇಕ್ ಅಬ್ದುಲ್ಲಾ, ಬಾದ್‌ಶಾಹ ಖಾನ್ ಬಗ್ಗೆ...



ಲೋಹಿಯಾ ಚಿಂತನೆ

(ನಿನ್ನೆಯ ಸಂಚಿಕೆಯಿಂದ)

ಶೇಖ್ ಅಬ್ದುಲ್ಲಾರ ಜತೆ ಕಾಯಿದೆ ಕಟ್ಟಳೆಗಳ ವರ್ತನೆ ನಡೆದಿದೆಯೇ ಇಲ್ಲ. ನಿರಂಕುಶಾಧಿಕಾರದ ವರ್ತನೆ ನಡೆದಿದೆಯೇ ಎನ್ನುವುದನ್ನು ನಾವೀಗ ನೋಡಬೇಕಿದೆ. ಅವರ ಜತೆ ನಿರಂಕುಶವಾಗಿ ವರ್ತಿಸಲಾಗಿದೆಯೆಂಬುದರ ಬಗ್ಗೆ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಆ ವ್ಯಕ್ತಿ ಒಳ್ಳೆಯವನೊ, ಕೆಟ್ಟವನೊ ಅಥವಾ ದೇಶಭಕ್ತನೊ, ದೇಶದ್ರೋಹಿಯೊ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕಾದ ಅಗತ್ಯ ನನಗಿಲ್ಲ. ನಾನು ಹೇಳುವುದಿಷ್ಟೆ, ಕಳ್ಳನಾಗಿರಲಿ, ಧಣಾಯಿತವಾಗಲೀ, ದೇಶದ್ರೋಹಿಯಾಗಿರಲಿ; ಭಾರತದಲ್ಲಿ ಅವನ ಜತೆ ಕಾನೂನು ಪ್ರಕಾರವೇ ವ್ಯವಹರಿಸಬೇಕು. ಅವನ ವಿರುದ್ಧ ಮನಸೋ ಇಚ್ಛೆ ಅಧಿಕಾರ ಚಲಾಯಿಸುವುದಲ್ಲ. ಯಾರಾದರೂ ಪೊಲೀಸರ ಜತೆ ಕಳ್ಳನೂ ಕೂಡಿ ವ್ಯವಹರಿಸುವುದನ್ನು ನೀವು ನೋಡಿದರೂ ಸಹ ಪ್ರತಿಭಟಿಸಬೇಕು. ಹೆದರುವುದಲ್ಲ. ಹೆದರಿದರೆ ಪೊಲೀಸರ ಇಂತಹ ಕೃತ್ಯಗಳು ಹೆಚ್ಚುತ್ತವೆ. ಇವತ್ತು ಕಳ್ಳರ ಜತೆ ವರ್ತಿಸಿದಂತೆಯೇ ನಾಳೆ ಅವರು ಸಾಹುಕಾರರ ಜತೆಯೂ ಶಾಮೀಲಾಗುತ್ತಾರೆ. ಇದಕ್ಕಾಗಿಯೇ ಕಾನೂನು ಕಟ್ಟಳೆಗಳ ಸರಕಾರ ನಡೆಸಬೇಕು ಎನ್ನುವುದು.

ಭಾರತದಲ್ಲಿ ಕೈಕೋಳ ತೊಡಿಸಿ ಖೈದಿಗಳನ್ನು ಕರೆದೊಯ್ಯುವುದನ್ನು ನೋಡಿದಾಗ ಬಹಳ ಕೆಟ್ಟದೆನ್ನಿಸುತ್ತೆ. ಸಭ್ಯವ್ಯಕ್ತಿಗಳು ಕೈಕೋಳಗಳನ್ನು ಬಚ್ಚಿಡಲು ಯತ್ನಿಸುತ್ತಾರೆ. ಕೈಕೋಳ ತೊಡಿಸಲೇಬೇಕೆಂದಾದರೆ ಕನಿಷ್ಠ ಕಾಣದಂತೆ ತೊಡಿಸಿ. ಕೇವಲ ಕೈಕೋಳ ತೊಡಿಸುವುದು ಮಾತ್ರವಲ್ಲ, ಹಗ್ಗದಿಂದ ಬಂಧಿಸುತ್ತಾರೆ. ರಸ್ತೆಗಳಲ್ಲೇ ಹೊಡೆಯುತ್ತಾರೆ. ಮೊದಮೊದಲು ನಾನು ಪ್ರತಿಭಟಿಸುತ್ತಿದ್ದೆ. ಆದರೆ ಎಷ್ಟು ಕಡೆಯೆಂದು ಪ್ರತಿಭಟಿಸಲಿ. ಮತ್ತೆ ಜನರು, ಈತನೇನು, ಎಲ್ಲರ ಜತೆಗೂ ಜಗಳ ಆಡುತ್ತಿದ್ದಾನೆ ಎಂದು ಹೇಳುತ್ತಾರೆ. ಆದರೆ ನೀವಿಲ್ಲಿ ಬಹಳಷ್ಟು ಯುವಕರು ಸೇರಿದ್ದೀರಿ. ನಿಮ್ಮ ವಯಸ್ಸಿನವನಾಗಿದ್ದಾಗ ಪೊಲೀಸರು ರಸ್ತೆಯಲ್ಲಿಯೇ ಹೊಡೆಯುವುದನ್ನು ನೋಡಿ ನನಗೆ ಸಹಿಸಲಾಗದೆ, ಪ್ರತಿಭಟಿಸುತ್ತಿದ್ದೆ, ಅದನ್ನು ಕರ್ತವ್ಯವೆಂದು ಭಾವಿಸುತ್ತಿದ್ದೆ. ಒಂದು ಸಲ ನಮ್ಮ ರಸ್ತೆಗಳಲ್ಲಿ, ನಗರಗಳಲ್ಲಿ ವರ್ತನೆ ಬಿಗಡಾಯಿಸತೊಡಗಿತೆಂದರೆ ಮತ್ತೆ ಅದು ಬಹಳಷ್ಟು ದೂರ ಸಾಗುತ್ತದೆ.

ನನಗೀಗ ಖಾನ್ ಅಬ್ದುಲ್ ಗಫಾರ್ ಖಾನ್‌ರ ಬಿಡುಗಡೆಯ ಬಗ್ಗೆಯೂ ಆಗ್ರಹಿಸುವ ಹಕ್ಕು ಇದೆಯೆಂದು ಭಾವಿಸುತ್ತೇನೆ. ಅವರು ಪಾಕಿಸ್ತಾನದ ಜೈಲಿನಲ್ಲಿದ್ದಾರೆ. ಭಾರತದ ಜೈಲಿನಲ್ಲಿ ಬಂಧಿತರಾಗಿರುವ ಶೇಖ್ ಅಬ್ದುಲ್ಲಾರ ಬಿಡುಗಡೆಗೆ ಆಗ್ರಹಿಸಿದಾಗ ಮಾತ್ರ ನನಗೆ ಖಾನ್ ಅವರ ಬಿಡುಗಡೆಗೆ ಆಗ್ರಹಿಸುವ ಹಕ್ಕು ದೊರೆಕುತ್ತದೆ. ಭಾರತದಲ್ಲಿ ಸುಮ್ಮನಿದ್ದು ಪಾಕಿಸ್ತಾನದಲ್ಲಿ ಮಾತ್ರ ಬಿಡುಗಡೆ ಮಾಡಿ ಎಂದು ಹೇಳಲು ಆಗುವುದಿಲ್ಲ. ನನ್ನ ಸ್ವರ ಪಾಕಿಸ್ತಾನಕ್ಕೆ ತಲುಪುತ್ತಿದೆಯೊ ಇಲ್ಲವೊ ಗೊತ್ತಿಲ್ಲ. ಆದರೆಂದಲ್ಲ ಒಂದು ದಿನ ತಲುಪೀತು. ಎಷ್ಟು ದಿವಸ ಜನರನ್ನು ಬಾಯಿ ಮುಚ್ಚಿಸಲಾದೀತು? ಒಂದಲ್ಲ ಒಂದು ದಿನ ಜನರಿಗೆ ಈತ ಒಳ್ಳೆಯ ಮನುಷ್ಯ. ನ್ಯಾಯವನ್ನು ಕೇಳುತ್ತಿದ್ದಾನೆ ಎಂದೆನ್ನಿಸದಿರದು. ಎಲ್ಲಿಯೇ ಇರಲಿ, ಮನುಷ್ಯ ನ್ಯಾಯಕ್ಕಾಗಿ ಹೋರಾಡಬೇಕು.

ಹಾಗಂತ, ಖಾನ್ ಅಬ್ದುಲ್ ಗಫಾರ್ ಖಾನ್‌ರನ್ನೂ ಶೇಖ್ ಅಬ್ದುಲ್ಲಾರನ್ನೂ ನಾನು ಒಂದೇ ತೆರನಾಗಿ ನೋಡುತ್ತಿದ್ದೇನೆಂದು ತಪ್ಪು ತಿಳಿದುಕೊಳ್ಳಬೇಡಿ. ಖಾನ್‌ರಂತೂ ಬಹಳ ದೊಡ್ಡ ಮನುಷ್ಯ. ಶೇಖ್ ಅಬ್ದುಲ್ಲಾರಲ್ಲೇನಿದೆ ಅವರ ಜತೆ ಹೋಲಿಸೋದು? ಇಲ್ಲಿ ದೊಡ್ಡ ಮನುಷ್ಯರಿರಲಿ, ಸಣ್ಣವರಿರಲಿ, ಕಾಯ್ದೆ-ಕಾನೂನುಗಳ ಪ್ರಶ್ನೆ ಬರುತ್ತದೆ. ಕಾನೂನಿಗೆ ದೊಡ್ಡವರೂ, ಸಣ್ಣವರೂ ಒಂದೇ ಆಗಬೇಕು. ಕಾಶ್ಮೀರವನ್ನು ಪಾಕಿಸ್ತಾನದ ಜತೆ ವಿಲೀನಗೊಳಿಸಬೇಕು ಎಂಬ ಮಾತನ್ನಂತೂ ಶೇಖ್ ಅಬ್ದುಲ್ಲಾ ಹೇಳಿಲ್ಲ; ಕಾಶ್ಮೀರವನ್ನು ಭಾರತ-ಪಾಕಿಸ್ತಾನ ಎರಡರಿಂದಲೂ ಬೇರ್ಪಡಿಸಿ ಸ್ವತಂತ್ರ ಮಾಡಿ ಎಂದಷ್ಟೇ ಅವರ ಬೇಡಿಕೆ. ಈ ಬೇಡಿಕೆ ಬಗ್ಗೆ ನನಗೆ ಸಹಾನುಭೂತಿ ಇಲ್ಲ. ಆದರೆ ನಾನು ನಿಮಗೊಂದು ಸತ್ಯ ವಿಷಯ ಹೇಳುತ್ತೇನೆ. ಇದಕ್ಕೆ ನನ್ನ ಬಳಿ ಸಾಕಷ್ಟು ಸಾಕ್ಷ್ಯಗಳಿಲ್ಲದಿರಬಹುದು. ಆದರೆ ಇದು ಸತ್ಯವಾದ ಮಾತು. ನನಗೆ ಬಹಳಷ್ಟು ಮಂದಿ ಹೇಳಿದರು. ಸ್ವತಃ ಶೇಖ್ ಅಬ್ದುಲ್ಲಾ ಅವರೇ

> 'ಭಾರತದ ಜೈಲಿನಲ್ಲಿ ಬಂಧಿತರಾಗಿರುವ ಶೇಕ್ ಅಬ್ದುಲ್ಲಾರ ಬಿಡುಗಡೆ ಬಗ್ಗೆ ಆಗ್ರಹಿಸುವ ಭಾರತೀಯನಿಗೆ ಮಾತ್ರ ಪಾಕಿಸ್ತಾನದ ಜೈಲಿನಲ್ಲಿ ಬಂಧನಕ್ಕೊಳಗಾಗಿರುವ ಖಾನ್ ಅಬ್ದುಲ್ ಗಫಾರ್ ಖಾನ್‌ರ ಬಿಡುಗಡೆಗೆ ಒತ್ತಾಯಿಸುವ ಹಕ್ಕು ಬರುತ್ತದೆ'

ಇದನ್ನು ಬಾಯಿಬಿಟ್ಟು ಹೇಳಲು ಹೆದರಬಹುದು. ನಾನಲ್ಲ. ಸ್ವತಂತ್ರ ಕಾಶ್ಮೀರದ ಮಾತನ್ನು ಮೊದಲು ಎತ್ತುವಾಗ ಶೇಖ್ ಅಬ್ದುಲ್ಲಾರಿಗೆ ಸಾಕಷ್ಟು ಪ್ರೋತ್ಸಾಹ ಭಾರತದ ಪ್ರಧಾನ ಮಂತ್ರಿಯವರಿಂದಲೇ ಸಿಕ್ಕಿತ್ತು. ಈತ (ನೆಹ್ರೂ) ಬಹಳ ಕೆಟ್ಟ ಮನುಷ್ಯ ಇನ್ನೊಬ್ಬರನ್ನು ಹಚ್ಚಿಬಿಟ್ಟು ನಿಲ್ಲುತ್ತಾನೆ. ಸರಿ ಈಗ ಶೇಖ್ ಅಬ್ದುಲ್ಲಾ ಬೊಬ್ಬೆ ಹೊಡೆಯುತ್ತಿದ್ದರೆ ತಮಾಷೆ ನೋಡುತ್ತಾನೆ. ನಮ್ಮಂತಹ ಮನುಷ್ಯರು ಇಂತಹ ಮೂರ್ಖ ಕೆಲಸ ಮಾಡಿದ್ದರೂ ಜೈಲು ತಿನ್ನಬೇಕಾಗುತ್ತೆ. ಯಾಕೆಂದರೆ ಕಾನೂನು ಇಲ್ಲಿ ಹದಗೆಟ್ಟುಹೋಗಿದೆ.

ನಿಮಗೊಂದು ವಿಷಯ ಹೇಳುತ್ತೇನೆ. ಮುಖ ಮುಚ್ಚಿಕೊಳ್ಳುವಂತಹ ವಿಷಯವೇ ಅದು. ನನ್ನ ಬಳಿ ಒಬ್ಬ ವ್ಯಕ್ತಿ ಬಂದಿದ್ದ. ಯಾರು. ಎಲ್ಲಿಯವನು ಎನ್ನುವುದನ್ನು ಬಿಟ್ಟುಬಿಡಿ. ಶೇಖ್ ಅಬ್ದುಲ್ಲಾರ ಬಗ್ಗೆ ಆತ ನನ್ನ ಜತೆ ಮಾತನಾಡಿದ. ನನ್ನ ಮೇಲೆ ಪ್ರಭಾವ ಬೀರಲು ಯತ್ನಿಸಿದ. ನಾನಂತೂ ಸ್ಪಷ್ಟವಾಗಿದ್ದೆ. 'ಕಾಶ್ಮೀರದ ಜನತೆಯ ವಿಷಯದಲ್ಲಿ, ಹಿಂದೂಸ್ತಾನದ ಜನರಿಗೆ ಅನ್ಯಾಯವಾಗುವಂತಹದ್ದೇನನ್ನೂ ನಾನು ಮಾಡುವುದಿಲ್ಲ' ಎಂದು ಶೇಖ್ ಅಬ್ದುಲ್ಲಾರೇ ಸ್ವತಃ ಹೇಳಿದ್ದಾರೆಂದು ಆತ ನನಗೆ ತಿಳಿಸಿದ. ಇದೊಂದು ಸಣ್ಣ ಮಾತಿರಬಹುದು. ಆದರೆ ಒಂದರ್ಥದಲ್ಲಿ ಇದು ಬಹಳ ದೊಡ್ಡ ಮಾತು ಕೂಡಾ. ಶೇಖ್ ಅಬ್ದುಲ್ಲಾರ ಬಿಡುಗಡೆಗಾಗಿ ಸಹಿಸಂಗ್ರಹ ನಡೆಸಲೂ ಕೆಲವರು ನನ್ನ ಬಳಿ ಬಂದಿದ್ದರು. 'ಏನು, ಪ್ರಧಾನಮಂತ್ರಿಯವರು (ನೆಹ್ರೂ) ಸಹಿ ಸಂಗ್ರಹ ಆಂದೋಲನ ಕೂಡಾ ಶುರು ಮಾಡಿದರೆ?' ಎಂದು ನಾನು ನಗುತ್ತಾ ಕೇಳಿದ್ದೆ. ಎಲ್ಲಿ ಯಾವ ರೀತಿಯ ವ್ಯವಹಾರ ನಡೆಯುತ್ತದೆಯೆಂದು ನಾನು ತಿಳಿದುಕೊಂಡಿದ್ದೆ. ಮತ್ತೆ ಹೇಳಿದೆ- ನಾನಂತೂ ಸರಿಯಾದ ಕಡೆ ಸಹಿ ಮಾಡುತ್ತೇನೆ. ನಿಮ್ಮ ಹಸ್ತಾಕ್ಷರ ಪಟ್ಟಿಗಾಗಿ ಎಲ್ಲಿಂದ ಬೇಕಿದ್ದರೂ ಸೂಚನೆ ಬಂದಿರಲಿ ಇದು ಸರಿ ಹಾಗೂ ಒಳ್ಳೆಯದು ಎಂದು ತಿಳಿದಿರುವುದರಿಂದಲೇ ಸಹಿ ಹಾಕುತ್ತೇನೆ. ಆದರೆ ಶೇಖ್ ಅಬ್ದುಲ್ಲಾರಿಗೆ ನನ್ನ ಕೆಲವು ಮಾತುಗಳನ್ನು ನೆನಪಿಸಿರಿ. ನಮ್ಮ ಗೆಳೆತನ ಬಹಳ ಹಳೆಯದು. ಸ್ವಲ್ಪ ಮಟ್ಟಿಗೆ ಪರಸ್ಪರರನ್ನು ತಿಳಿದುಕೊಂಡಿದ್ದೇವೆ. ಹಲವು ದಿಕ್ಕುಗಳಿಂದ, ಒಳ್ಳೆಯ ಹಾಗೂ ಕೆಟ್ಟ ದಿಕ್ಕುಗಳಿಂದ ಪರಸ್ಪರ ಅರ್ಥಮಾಡಿಕೊಂಡಿದ್ದೇವೆ. 1946-47ರ ವೇಳೆಗೆ, ನಾನು ಶೇಖ್‌ರಿಗೆ ಹೇಳಿದ್ದೆ-ನಮ್ಮ ಸಮಯ ಮುಗಿಯಿತು. ನನ್ನದೂ, ನಿಮ್ಮದೂ ಕೂಡ. ನಿಮ್ಮ ಗೆಳೆಯನ (ನೆಹ್ರೂ) ಭಕ್ತನಾಗಿದ್ದುಕೊಂಡು ಜನರಿಗೆ ಒಳ್ಳೆಯದು ಮಾಡಲು ಯತ್ನಿಸಿದ್ದೀರಿ. ಇನ್ನು ಅಧಿಕಾರದ ಗದ್ದುಗೆ ಮೇಲೇರುವ ಆಸೆ ಇಟ್ಟುಕೊಳ್ಳುವುದಿಲ್ಲವೆಂದು ಸಂಕಲ್ಪ ಮಾಡಿ. ಒಂದು ವೇಳೆ ಈಗ ಬಿಡುಗಡೆಯಾದರೆ ಭಾರತದ ಹಿಂದೂ-ಮುಸ್ಲಿಮರ ಮನಸ್ಸು ಜೋಡಿಸಲು ಅಧಿಕಾರದಿಂದ ದೂರವೇ ಉಳಿದು ಪ್ರಯತ್ನಿಸುವ ಇನ್ನೊಂದು ಸಂಕಲ್ಪ ಕೈಗೊಳ್ಳಲು ತಿಳಿಸಿ. ಅವರಲ್ಲಿ ಮುಂದುವರಿದರೆ ಭಾರತ-ಪಾಕಿಸ್ತಾನ ಮಹಾಸಂಘದ ರಚನೆಯ ಯತ್ನ ನಡೆಸೋಣ.

ನಾನು ಹೇಳಿದ ಈ ಮಾತುಗಳು ಅವರಿಗೆ ತಲುಪಿದೆಯೋ, ಇಲ್ಲವೊ ಗೊತ್ತಾಗಿಲ್ಲ.

ಹಾಂ! ಲೋಕಸಭೆಯಲ್ಲಿ ನಾನು ಭಾರತ-ಪಾಕಿಸ್ತಾನ ಮಹಾಸಂಘ ರಚಿಸುವ ಮಾತೆತ್ತಿದೆ ನೋಡಿ. ಆಗ ಹಲವು ಮಂದಿ ಬಡಬಡಿಸಲು ತೊಡಗಿದರು. ಮಾತಿನ ಮಧ್ಯೆ ಗದ್ದಲ ಎಬ್ಬಿಸಲು ತೊಡಗಿದರು. ಒಬ್ಬರಂತೂ ಎದ್ದು ಗಟ್ಟಿಸ್ವರದಲ್ಲಿ, 'ನಿಮ್ಮನ್ನು ಮಾತಾಡಲು ಬಿಡುವುದಿಲ್ಲ' ಎಂದು ಕೂಗಿದ್ದಲ್ಲದೆ ಇವರೊಬ್ಬ ದೊಡ್ಡ ಮುಖಂಡರು. ಸಾಮಾನ್ಯರಲ್ಲ. ಇವರ ತುಟಿಯಿಂದ ಶಬ್ದಗಳು ಬಹಳಷ್ಟು ಹೊರಬೀಳಬಹುದು. ಅದನ್ನು ಪ್ರಶ್ನಿಸುವುದು ನಮ್ಮ ಹಕ್ಕು. ಭಾರತ-ಪಾಕಿಸ್ತಾನದ ಏಕತೆಯನ್ನು ಇವರು ಯಾವ ರೀತಿಯಿಂದ ಮಾಡಬಲ್ಲರು? ಎಂದೂ ಸವಾಲು ಹಾಕಿದರು. ಈ ಸವಾಲನ್ನು ಅವರು ಲೋಕಸಭೆಯಲ್ಲಿ ಹಾಕಿದ್ದರು. ನಾನೂ ಅಲ್ಲೇ ಉತ್ತರ ಕೊಡುತ್ತಿದ್ದೆ. ಆದರೆ ಸ್ಪೀಕರ್‌ರು ನಡುವೆ ಬಂದು, 'ಲೋಹಿಯಾರು ಈಗಾಗಲೇ ಬಹಳಷ್ಟು ಸಮಯ ಮಾತನಾಡಿದ್ದಾರೆ. ಇನ್ನೂ ಉದ್ದ ಹೋದರೆ ಮತ್ತೆ ತಕರಾರು ಬೆಳೆಯುತ್ತದೆ. ಅವರಿಗೆ ಅವಕಾಶ ಕೊಡುವುದಿಲ್ಲ' ಎಂದು ತೀರ್ಪಿತ್ತರು. ಸ್ಪೀಕರ್‌ರ ತೀರ್ಪು ತಾನೆ, ಏನು ಮಾಡುವುದು? ಆದರೆ ನಾನು ಇಷ್ಟನ್ನು ಮಾತ್ರ ಹೇಳಿದೆ- 'ಒಂದು ಮಾತನ್ನಂತೂ ತಿಳಿದುಕೊಳ್ಳಿ, ನಾವು ಕನಸು ಕಟ್ಟಬೇಕು. ಭಾರತ-ಪಾಕಿಸ್ತಾನ ಮಹಾಸಂಘದ ಕನಸು ಕಾಣಬೇಕು.'

'ಕನಸು, ಕನಸಂತೆ... ಏನು ಕನಸು ಕಾಣುವುದು?' ಎಂದೆಲ್ಲ ಕೆಲವರು ಕಿಲಾಡಿ ಮಾಡಿದರು. ನಾನು ಹೇಳಿದೆ- 'ಹಾಂ. ಕಾಂಗ್ರೆಸ್ಸಿಗರು ಈಗ ಕನಸು ಕಾಣುವುದನ್ನು ಮರೆತಿದ್ದಾರೆ. ಮೊದಲು ಕನಸು ಕಾಣುತ್ತಿದ್ದರು. ಈಗ ಕುರ್ಚಿಯ ಮೇಲೆ ಕುಳಿತ ನಂತರ ದೈನಂದಿನ ಗಡಿಬಿಡಿಯಲ್ಲಿ, ಪಾಪ, ಕನಸಾದರೂ ಹೇಗೆ ಬಿದ್ದೀತು? ಅವರು ಕನಸು ಕಂಡಿದ್ದಾಗ ಆಂಗ್ಲರು ದೇಶ ಬಿಟ್ಟು ಹೊರಟುಹೋದರು. ಆಮೇಲೆ ಕೆಲವು ಕೆಟ್ಟ ಕನಸುಗಳನ್ನು ಕಂಡರು. ... ದೇಶ ಇಬ್ಭಾಗವಾಯಿತು. ಬಹ... ಈಗ ಒಳ್ಳೆಯ ಕನಸು ಕಾಣತೊಡಗಿದ... ಮತ್ತೆ ಜೋಡಿಸುವ ಕೆಲಸ ಮಾ...ಹುದು. ಮನುಷ್ಯನಿಗೆ ನಿದ್ದೆ ... ಮಾತ್ರ ಕನಸು ಕಾಣುವುದಲ್ಲ ... ಯಾ... ಕನಸು ಕಾಣಬಹು... ...ದ ಜನರಂತೂ ಬ... ...ತ್ತಾರೆ. ನೀವು ಬೇ... ...ತ್ತೀರಾದರೆ ಭ... ...ದ ಕನಸೂ ... ...ವುದು ...

(ವ...

ಹಿಂದಿಯಿಂದ

ಬಿ. ಎಂ. ಹನೀಫ್



Another pioneer plant in coa
to Manufacture Ver

KARNATAKA'S HER

The vision behind the venture is that of Sri. K. Aboobaker, a leading entrepreneur in the wood based industry. Karnataka Wood Industry was a maiden venture of his in 1972.

He introduced to the industry an era of excellence by bringing in the latest techniques and a completely revamped set-up. He adopted modern technology and the best handpicked professionals to stay ahead in the contemporary competitive environment.



ಎಂದು ಹೇಳಿದರು.

ಎಲ್ಲಾ ವರ್ಗದ ಜನರೂ ಒಂದಾಗಿ, ಒಮ್ಮನಸ್ಸಿನಿಂದ, ಆತ್ಮ ಸಮರ್ಪಣ ಭಾವದಿಂದ ಕಾರ್ಯ ಪ್ರವೃತ್ತರಾದರೆ ಮಾತ್ರ ಶಾಂತಿ ಸಾಧ್ಯ. ಇದಕ್ಕೆ ಕೆಲವರು ತಮ್ಮ ಹಕ್ಕುಗಳನ್ನು ಮನ್ನಿಸಬೇಕಾಗುತ್ತದೆ. ಕಾನೂನು ಆಜ್ಞೆಗಳನ್ನು ಹೊರಡಿ

ಪುತ್ತೂರು ಡಾನ್ ಬಾಸ್ಕೊ ಕ್ಲಬ್ ಅಧ್ಯಕ್ಷರಾಗಿ ಲೂವಿಸ್ ಮಸ್ಕರೇಂಞಾಸ್

ಪುತ್ತೂರು, ಜ. 3-ಇಲ್ಲಿನ ಡಾನ್ ಬಾಸ್ಕೊ ಕ್ಲಬ್ಬಿನ ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಜರಗಿತು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮಂಗಳೂರು ವಿಭಾಗದ ಕಾರ್ಮಿಕ ಕಲ್ಯಾಣಾಧಿಕಾರಿ ಲೂಯಿಸ್ ಮಸ್ಕರೇಂಞಾಸ್ ಅವರು ನೂತನ ಅಧ್ಯಕ್ಷರಾಗಿ ಆಯ್ಕೆಯಾದರು.

ಸಭೆಯಲ್ಲಿ ನೂತನ ಸಾಲಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ವೈಶಾಲ್ಯ ಬೆಳೆಸಿ ಕೊಂಡರೆ ಕೋಮು ಸೌಹಾರ್ದ ಸಾಧ್ಯ ಎಂದು ಹೇಳಿದರು.

ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಜೇಶನಿನ ಮಂಗಳೂರು ವಿಭಾಗದ ಸಂಘಟಕ ಅಬ್ದುಸ್ ಸಲಾಂ ಅವರು ಜನಸಾಮಾನ್ಯರಿಗೆ ಇಸ್ಲಾಂ ಧರ್ಮದ ಬಗ್ಗೆ ತನಗಿರುವ ತಪ್ಪು ತಿಳುವಳಿಕೆಯನ್ನು ದೂರ ಮಾಡಿ ಮನೋವೈಶಾಲ್ಯವನ್ನು ಬೆಳೆಸಿಕೊಳ್ಳಬೇಕು ಆಗ ಮಾತ್ರ ಕೋಮು ಸೌಹಾರ್ದ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಾಜಿ ಸಚಿವ ಪಿ. ಎಫ್. ರೊಡ್ರಿಗಸ್ ಅವರು ಮಾತನಾಡಿ ಎಲ್ಲಾ ಧರ್ಮಗಳೂ ಶಾಂತಿಯನ್ನೇ ಸಾರುತ್ತಿದ್ದರೂ, ಜಗತ್ತು ಇಂದು ಅದನ್ನು ಮರೆತಿದೆ. ಆದ್ದರಿಂದ ಧರ್ಮ ಏನು ಹೇಳುತ್ತದೆ ಎಂಬುದನ್ನು ಮೊದಲು ಅರ್ಥೈಸಿಕೊಳ್ಳೋಣ ಎಂದು ಹೇಳಿದರು.

ಸಂಘದ ಸದಸ್ಯರಿಂದ ಕ್ರಿಸ್‌ಮಸ್ ಗೀತೆಯನ್ನು ಹಾಡಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಇಬ್ರಾಹಿಂ ಸಯ್ಯದ್ ಸ್ವಾಗತಿಸಿ, ಫಾ। ರೋನಿ ಪ್ರಭು ವಂದಿಸಿದರು.

ನಟಿ ಪ್ರಶಸ್ತಿ ಪಡೆದ ಕೆ. ನಾಗರತ್ನಮ್ಮ.

ತನ್ನ ಜೀವದ ಹಂಗು ತೊರೆದು, ನೀರಿನಲ್ಲಿ ಮುಳುಗಿ ಸಾವಿನಂಚಿನಲ್ಲಿದ್ದ ನಾಲ್ವರು ಮಹಿಳೆಯರನ್ನು ಬದುಕಿಸಿ ರಾಜ್ಯ ಪ್ರಶಸ್ತಿ ಪಡೆದ ಉ. ಕ. ಜಿಲ್ಲೆಯ ಯಲ್ಲಾಪುರ ತಾಲೂಕಿನ ಅರೆಬೈಲಿನ ಕೂಲಿ ಕೆಲಸಗಾರ 16 ವರ್ಷದ ಧೀರ ಬಾಲಕ 'ದೇವೇಂದ್ರ ಪುಟ್ಟಗೌಡ'.

ರತ್ ಫೈನಾನ್ಸಸ್ ರಾಮಭವನ್ ಕಮರ್ಶಿಯಲ್ ಕಾಂಪ್ಲೆಕ್ಸ್, 2ನೇ ಮಹಡಿ,
ಕೊಡಿಯಾಲಬೈಲ್, ಮಂಗಳೂರು - 575 003
ಮದ್ರಾಸ್.

ಬಡ್ಡಿಯ ಸೇವೆ

1 ವರ್ಷ—22%
2 ವರ್ಷಗಳು—23%
3 ವರ್ಷಗಳು—24%

ದ್ರಾಸ್, ಮಧುರೈ, ಈರೋಡ್, ಮಂಗಳೂರು ಬೆಂಗಳೂರು ಶಾಖೆಗಳಲ್ಲಿ! ನಿರ್ದಿಷ್ಟ ಠೇವಣಿಯನ್ನು ಸ್ವೀಕರಿಸಲಾಗುತ್ತದೆ.

ರುಗಳ ಅಲಾಟ್‌ಮೆಂಟ್‌ನಲ್ಲಿ, ನಮ್ಮ ಹೊಸ ಲಿಮಿಟೆಡ್ ಕಂಪನಿಯ ಡಿಬೆಂಚರ್‌ಗಳಲ್ಲಿ ಆದ್ಯತೆ ಕೊಡಲಾಗುವುದು.

ವಿವರಗಳಿಗೆ ಸಂಪರ್ಕಿಸಿರಿ:
703, ಮೌಂಟ್ ರಸ್ತೆ, ಮದ್ರಾಸ್–600 006 ಫೋನ್: 840 784
46, ನೇತಾಜಿ ರಸ್ತೆ, ಮಧುರೈ - 625 001 ದೂರವಾಣಿ: 30804
1-7-145-C/10, ಸುಭಾಸ್ ಥಿಯೇಟರ್‌ನ ಎದುರುಗಡೆ, ಮುಶಿ೯ದಾಬಾದ್, ಹೈದರಾಬಾದ್ - 500 048
70 & 70/1, ಮಹಾತ್ಮಾಗಾಂಧಿ ರೋಡ್, ಬೆಂಗಳೂರು - 560001
ತಿರುಕುಮಾರನ್ ಕಟ್ಟಡ, 11-F, ಮೆಟ್ಟೂರು ರಸ್ತೆ, ಈ ರೋಡ್ - 638 011

ನಮ್ಮ ಸಹ ಕಂಪೆನಿಗಳು:

ಸತ್ಯ ಮರೆಸುವ ಕಚೇರಿ

ಪ್ರಿಯರೆ,

ಸತ್ಯವನ್ನು ಲೀಲಾಜಾಲವಾಗಿ ಮರೆಸುವ ಉಪಾಯಗಳನ್ನು ಮತ್ತು ಅವಕಾಶಗಳನ್ನು ಹೊಂದಿರುವ, ವರ್ಷಗಟ್ಟಳೆ ನಿರುತ್ತರವನ್ನೇ ಉತ್ತರವನ್ನಾಗಿಸಿದ್ದರೂ, ತಕ್ಕ ಕ್ರಮವನ್ನು ನಾಲ್ಕೂವರೆ ವರ್ಷಗಳಷ್ಟು ಹಿಂದೆಯೇ ಮುಗಿಸಲಾಗಿತ್ತೆಂದು ಈಗ ವಾದಿಸುವ, ಆದರೆ ಅದೇನು ಕ್ರಮವಾಗಿತ್ತೆನ್ನುವುದನ್ನು ಹೇಳದಿರುವ, ಈಗ ಅದಕ್ಕೆ ಸಂಬಂಧಪಟ್ಟ ಕಡತವನ್ನು 'ಕಾನೂನು ಪ್ರಕಾರ' ನಾಶಪಡಿಸಲಾಗಿದೆ ಎನ್ನುವ ತಾಲೂಕು ಕಚೇರಿಯ ವಿರುದ್ಧ ಸತ್ಯಕ್ಕಾಗಿ ಸತ್ಯವಂತ ಬಳಕೆದಾರರಿಗೂ ಏನು ರಕ್ಷೆಯಿದೆ, ಎನ್ನುವುದು ಭಾರತದ ಸಾರ್ವಜನಿಕ ಆಡಳಿತ ವ್ಯವಸ್ಥೆಯ ಕುರಿತ 'ಯಕ್ಷ ಪ್ರಶ್ನೆ'ಯೇ ಆಗಿದೆ.

ಉಡುಪಿ ತಾಲೂಕಿನ ಮೂಡಬೆಟ್ಟು ಗ್ರಾಮದ ಕೆ. ಸರ್ವೋತ್ತಮ ಶೆಣೈಯವರು ತನ್ನ ಜಮೀನಿನ ಮಾಪನಕ್ಕಾಗಿ ಉಡುಪಿಯ ತಹಸೀಲ್ದಾರರಿಗೆ 28–5–82ರಷ್ಟು ಹಿಂದೆಯೇ ಸಲ್ಲಿಸಿದ್ದ ಅರ್ಜಿ ಮತ್ತು ರೂ. 35ರ ಚಲನ್ ಇನ್ನೂ ನೆನೆಗುದಿಯಲ್ಲೇ ಉಳಿದಿವೆ ಎಂಬುವುದನ್ನು, ಹಾಗೂ ಅನಂತರದ ನಾಲ್ಕೂವರೆ ವರ್ಷಗಳಲ್ಲಿ ಅವರು ಹಲವು ಬಾರಿ ತಾಲೂಕು ಕಚೇರಿಗೆ ಹೋಗಿ ತನ್ನ ಅರ್ಜಿಯ ಕುರಿತು ವಿಚಾರಿಸಿದ್ದು ಮತ್ತು ನೆನಪಿಸುವ ಪತ್ರಗಳನ್ನು ಬರೆದುದು ವ್ಯರ್ಥವೆನ್ನಿಸಿವೆ ಎಂಬುದನ್ನು ಬಳಕೆದಾರರ ವೇದಿಕೆಯು ಬಯಲಾಗಿಸಿತ್ತಷ್ಟೆ?

ಈ ಕುರಿತು ತಹಸೀಲ್ದಾರರ ಉತ್ತರವು ಬಳಕೆದಾರರ ವೇದಿಕೆಗೆ ಬಂದಿದೆ. ಮತ್ತು (ಕೆಲ ಲೋಪಗಳನ್ನು ಹೊಂದಿ) ಪತ್ರಿಕೆಗಳಲ್ಲೂ ಪ್ರಕಟವಾಗಿದೆ. ಆ ಉತ್ತರದಲ್ಲಿ ಶೆಣೈಯವರನ್ನು ಕಿಡಿಯರನ್ನಾಗಿ ಮಾಡಲಾಗಿದೆ. ಮತ್ತು ಹೇಳಿರುವುದಕ್ಕಿಂತ ಹೇಳಲು ಲೋಪ ಮಾಡಿರುವುದೇ ಹೆಚ್ಚು. ಸತ್ಯವನ್ನು ಮರೆಸುವುದು ತಾಲೂಕು ಕಚೇರಿಗೆ ಎಷ್ಟು ಸುಲಭವೆನ್ನುವುದನ್ನು ಇದರಿಂದ ಕಂಡುಕೊಳ್ಳಬಹುದಾಗಿದೆ.

ಶೆಣೈಯವರ 28–5–82ರ ಅರ್ಜಿಯನ್ನು 7–6–82ರಂದೇ (ಅಂದರೆ, ಹತ್ತೇ ದಿನಗಳೊಳಗೆ) ತಾಲೂಕು ಸರ್ವೇಯರ್‌ರಿಗೆ ಕಳುಹಿಸಲಾಗಿತ್ತಂತೆ; ಆ ಸರ್ವೇಯರ್‌ರ ವರದಿಯಂತೆ ಕ್ರಮ ಮುಗಿಸಲಾಗಿ, 9–9–1982ರಂದೇ (ಮೂರೇ ತಿಂಗಳಲ್ಲಿ) ಕಡತವನ್ನು ವಿಲೆವಾರಿ ಮಾಡಲಾಗಿತ್ತಂತೆ: ಸದ್ರಿ ಕಡತವನ್ನು ಈಗ ಕಾನೂನು ಪ್ರಕಾರ ನಾಶಮಾಡಲಾಗಿದೆಯಂತೆ.

ತಹಸೀಲ್ದಾರರು ಹೇಳಲು ಲೋಪ ಮಾಡಿರುವ ಅಂಶಗಳನ್ನು ಗಮನಿಸಿ:– ಸರ್ವೇಯರ್‌ರ ವರದಿಯು ಏನೆಂಬುದಾಗಿತ್ತಂತೆ? ಆ ವರದಿಯ ಮೇರೆಗೆ ಮುಗಿಸಲಾದ ಕ್ರಮವೇನಾಗಿತ್ತಂತೆ? 9–9–82ರಂದು ಕಡಿತವನ್ನು ಹೇಗೆ

ಜನದನಿ

ವಿಲೆವಾರಿ ಮಾಡಲಾಗಿತ್ತಂತೆ? ಭೂಮಾಪನವನ್ನು ಮಾಡಿಸುವ ಮೂಲಕವೆ? ಭೂಮಾಪನವನ್ನು ಮಾಡಲಿಕ್ಕಾಗುವುದಿಲ್ಲವೆಂದು ಶೆಣೈಯವರಿಗೆ ತಿಳಿಸುವ ಮೂಲಕವೆ? ಅಥವಾ ಇನ್ನಾವುದೇ ಬಗೆಯ ಉತ್ತರವನ್ನು ಶೆಣೈಯವರಿಗೆ ಬರೆಯುವ ಮೂಲಕವೆ? ಯಥಾರ್ಥವಾಗಿ ಕಳೆದ ನಾಲ್ಕೂವರೆ ವರ್ಷಗಳ ಉದ್ದಕ್ಕೂ ಅವರಿಗೆ ತಹಸೀಲ್ದಾರರು ಏನನ್ನೂ ಬರೆದುದಿಲ್ಲವಲ್ಲ? ಅವರ ಭೂಮಿಯ ಮಾಪನ ಆದುದೂ ಇಲ್ಲವಲ್ಲ? ಅಂದ ಮೇಲೆ ಕಡತದ ವಿಲೆಯೆಂದರೇನು?

ಪಟ್ಟಾ ಜಮೀನಿನ ಮಾಪನವು ಕುಂದಾಪುರದಲ್ಲಿರುವ ಭೂಮಾಪನಾ ಸಹಾಯಕ ನಿರ್ದೇಶಕರಿಗೆ ಸೇರಿದ್ದು ಎಂಬ ಮಾತೂ ತಹಸೀಲ್ದಾರರ ಉತ್ತರದಲ್ಲಿದೆ. ಆದರೆ ಶೆಣೈಯವರು 1982ರಲ್ಲಿ ತಾಲೂಕು ಕಚೇರಿಯಲ್ಲಿ ವಿಚಾರಿಸಿಯೇ ಭೂಮಾಪನಾ ಅರ್ಜಿಯನ್ನು ತಹಸೀಲ್ದಾರರಿಗೆ ಸಲ್ಲಿಸಿದ್ದಾಗಿತ್ತು. ಪಟ್ಟಾ ಭೂಮಿಯ ಮಾಪನವು ಕುಂದಾಪುರದಲ್ಲಿಯ ಅಧಿಕಾರಿಗೆ ಸೇರಿದ್ದೆಂಬುದನ್ನು ಆಗ ಶೆಣೈಯವರಿಗೆ ತಿಳಿಸಿರಲಿಲ್ಲವೇಕೆ? ಅನಂತರವೂ ವರ್ಷಗಟ್ಟಳೆ ಹಾಗೆ ತಿಳಿಸಿರಲಿಲ್ಲವಲ್ಲ?

ಪಟ್ಟಾ ಭೂಮಿಯ ಮಾಪನವು ಕುಂದಾಪುರದಲ್ಲಿಯ ಅಧಿಕಾರಿಗೆ ಸೇರಿದ್ದೆಂದು ಈಗ ವಾದಿಸುವ ತಾಲೂಕು ಕಚೇರಿಯು ಅರ್ಜಿಯನ್ನು 1982ರಲ್ಲಿ ಕುಂದಾಪುರಕ್ಕೆ ಕಳುಹಿಸದೆ, ತಾಲೂಕು ಸರ್ವೇಯರ್‌ಗೆ ಕಳುಹಿಸಿ, ಅವರ ವರದಿಯಂತೆ ಕ್ರಮ ಮುಗಿಸಿದ್ದೇಕೆ? ರೂ.35ರ ಚಲನ್ ಈಗ ಎಲ್ಲಿದೆ? 'ಕಾನೂನು ಪ್ರಕಾರ' ಕಡತದ ನಾಶವಾದಾಗ ಚಲನ್ನಿನ ನಾಶವೂ ಆಯಿತೆ?

ಭೂಮಾಪನದಲ್ಲಿ ಶೆಣೈಯರಿಗೆ ತಾಲೂಕು ಕಚೇರಿಯಿಂದ ಯಾವ ತೊಂದರೆಯೂ ಆಗಿಲ್ಲವೆಂಬ ಹೇಳಿಕೆಯೂ ತಹಸೀಲ್ದಾರರ ಉತ್ತರದಲ್ಲಿದೆ. ಭೂಮಾಪನವು ಕಳೆದ ನಾಲ್ಕೂವರೆ ವರ್ಷಗಳ ಉದ್ದಕ್ಕೂ ಆಗಿಯೇ ಇಲ್ಲವೆಂದ ಮೇಲೆ 'ಭೂಮಾಪನದಲ್ಲಿ ತೊಂದರೆ ಆಗಿಲ್ಲ'ವೆಂದರೇನು? ಆಗಿರದ ಮಾಪನದಲ್ಲಿ ತೊಂದರೆ ಆಗಿಲ್ಲವೆಂದು ಬೇರೆ ಹೇಳಬೇಕೆ?

ಶೆಣೈಯವರು 1982ರ ಅನಂತರ ತಾಲೂಕು ಕಚೇರಿಗೆ ಪುನಃ ಪುನಃ ಹೋಗಿದ್ದರೆನುವುದನ್ನು ನಿರಾಕರಿಸಲಾಗಿದೆ. ಅವರು ಹೋಗಿದ್ದರೆನ್ನುವುದರ ಬಗ್ಗೆ ರುಜುವಾತು ನೀಡುವಂತಿಲ್ಲವೆನ್ನುವುದನ್ನು ಮನಗಂಡು ತಾಲೂಕು ಕಚೇರಿಯು ಮಾಡಿರುವ ನಿರಾಕರಣೆಯಿದು. ಅಂತೆಯೇ ಶೆಣೈಯವರು ಪುನಃ ಪುನಃ ನೆನಪಿಸುವ ಪತ್ರಗಳನ್ನು ಬರೆದಿದ್ದರೆನ್ನುವುದನ್ನೂ ನಿರಾಕರಿಸಲಾಗಿದೆ. ಅವುಗಳನ್ನು 'ರಜಿಸ್ಟರ್ಡ್ ಪೋಸ್ಟ್ (ಎ. ಡಿ.)' ಮೂಲಕ ಕಳುಹಿಸಿರಲಿಲ್ಲ ಎನ್ನುವುದನ್ನು ಗಮನಿಸಿ ಮಾಡಿರುವ ನಿರಾಕರಣೆಯಿದು.

ಅಂತು ಪ್ರಜೆಯೊಬ್ಬರ ಕಹಿ ಅನುಭವದಿಂದ ಮೂಡಿಬಂದಿರುವ 'ಯಕ್ಷ ಪ್ರಶ್ನೆ'ಯೆಂದರೆ ಈ ಲೇಖನದ ಆರಂಭದಲ್ಲೇ ಸೂಚಿಸಿರುವುದು.

—ಕೆ. ನಾರಾಯಣ ರಾವ್
ಸಂಪಾದಕ
ಬಳಕೆದಾರರ ವೇದಿಕೆ

ಉಡುಪಿ

ಸಣ್ಣ ಉಳಿತಾಯ ಸಂಗ್ರಹಣೆ ಗುರಿಮೀರಿ ಪ್ರಗತಿ ಸಾಧನೆ

ಬೆಂಗಳೂರು, ಎ. 11— ರಾಜ್ಯವು 1985–86ರಲ್ಲಿ ಸಣ್ಣ ಉಳಿತಾಯ ಸಂಗ್ರಹಣೆಯಲ್ಲಿ ಗುರಿಮೀರಿ ಪ್ರಗತಿ ಸಾಧಿಸಿದೆ. ಎಂದು ಸಣ್ಣ ಉಳಿತಾಯ ಮತ್ತು ಬಂದೀಖಾನೆ ಸಹಾಯಕ ಸಚಿವ ವೀರಣ್ಣ ಅವರು ಹೇಳಿದ್ದಾರೆ. ಅವರು ಇತ್ತೀಚೆಗೆ ಹುಬ್ಬಳ್ಳಿಯ ಪತ್ರಕರ್ತರ ಸಭೆಯಲ್ಲಿ ಮಾತನಾಡುತ್ತಿದ್ದರು.

1985–86ರಲ್ಲಿ ರಾಜ್ಯದಲ್ಲಿ ಒಟ್ಟು 360 ಕೋಟಿ ಹಾಗೂ ನಿವ್ವಳ201ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಗುರಿಯನ್ನು ಗೊತ್ತುಪಡಿಸಲಾಗಿದ್ದು, ನಿವ್ವಳದಲ್ಲಿಯೂ ಸಹಿತ ಗುರಿಮೀರಿ ಸಾಧಿಸಲಾಗಿದೆ ಎಂದು ಅವರು ನುಡಿದರು.

ಕಳೆದ ವರ್ಷ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಸಣ್ಣ ಉಳಿತಾಯ ಸಂಗ್ರಹಣೆಗಾಗಿ 130ಕೋಟಿ ರೂ. ಸಾಲ ದೊರಕಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ 1985ರ ಎಪ್ರಿಲ್‌ನಿಂದ ಡಿಸೆಂಬರ್ ಅಂತ್ಯದ ಅವಧಿಯಲ್ಲಿ 166 ಕೋಟಿ ರೂಪಾಯಿ ಸಾಲ ದೊರಕಿದೆ ಎಂದು ಹೇಳಿದ ಸಚಿವರು ಪ್ರಸಕ್ತ ವರ್ಷ ಸಣ್ಣ ಉಳಿತಾಯ ಯೋಜನೆಯನ್ನು ಹೆಚ್ಚು ವ್ಯಾಪಕಗೊಳಿಸಲು ಗ್ರಾಮೀಣ ಭಾಗಗಳಲ್ಲಿ 40ರಿಂದ 50 ಲಕ್ಷ ಅಂಚೆ ಕಚೇರಿ ಉಳಿತಾಯ ಖಾತೆಗಳನ್ನು ಆರಂಭಿಸುವ ಗುರಿಹೊಂದಲಾಗಿದೆಎಂದರು.

ಇದನ್ನು ಆಕರ್ಷಣೀಯಗೊಳಿಸಲು ಈಗೀರುವ ಬಹುಮಾನಗಳ ಜೊತೆಗೆ ರಾಜ್ಯ ಸರ್ಕಾರವೇ ಪ್ರತೀ ಜಿಲ್ಲೆಯಲ್ಲಿ ಕನಿಷ್ಠ 200 ರೂಪಾಯಿ ಠೇವಣಿ ಹೊಂದಿರುವ ಖಾತೆಗಳಿಗೆ ಲಾಟರಿ ಏರ್ಪಡಿಸಿ ವಿಶೇಷ ಬಹುಮಾನಗಳನ್ನು ನೀಡಲಿದೆ ಎಂದು ಅವರು ತಿಳಿಸಿದರು.

ಧಾರವಾಡ ಜಿಲ್ಲೆಯು ಕಳೆದ ವರ್ಷ ಒಟ್ಟು ಸಂಗ್ರಹಣೆಯಲ್ಲಿ 18.04 ಕೋಟಿ ರೂಪಾಯಿ ಗುರಿಗೆ ಎದುರಾಗಿ 19.28 ಕೋಟಿ ರೂಪಾಯಿಗಳನ್ನು ಹಾಗೂ ನಿವ್ವಳ ಸಂಗ್ರಹಣದಲ್ಲಿ 9.04 ಕೋಟಿ ರೂಪಾಯಿ ಗುರಿಗೆ ಎದುರಾಗಿ 10. 23 ಕೋಟಿ ರೂಪಾಯಿಗಳನ್ನು ಸಂಗ್ರಹಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಲಾರಿ ಡಿಕ್ಕಿ: 1 ಸಾವು

(ಮುಂಗಾರು ವರದಿ)

ಚಿಕ್ಕಮಗಳೂರು ಎ. 11- ಲಾರಿಯೊಂದು ವೃದ್ಧನಿಗೆ ಡಿಕ್ಕಿ ಹೊಡೆದ ಪರಿಣಾಮವಾಗಿ ಆತ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ ಘಟನೆ ತರೀಕೆರಿಯಿಂದ ವರದಿಯಾಗಿದೆ.

ತರೀಕೆರೆಯ ಲಕ್ಷ್ಮಯ್ಯ (80) ಎಂಬುವರಿಗೆ ಪಾಳೆಗಾರರ ಕ್ಯಾಂಪಿನ ಬಳಿ ಇತ್ತೀಚೆಗೆ ಈ ಅಪಘಾತ ಸಂಭವಿಸಿದೆ. ಪೊಲೀಸರು ಲಾರಿ ಚಾಲಕ ಉಜ್ಜನಪ್ಪ ಎಂಬುವರನ್ನು ಬಂಧಿಸಿ ತನಿಖೆ ನಡೆಸುತ್ತಿದ್ದಾರೆ.

ಶವ ಪತ್ತೆ

ಯಗಟಿ ಸಮೀಪದ ವೇದಾವತಿ ನದಿಯಲ್ಲಿ 40 ವರ್ಷ ವಯಸ್ಸಿನ ಪುರುಷನ ಶವವೊಂದು ಇತ್ತೀಚೆಗೆ ಪತ್ತೆಯಾಗಿದೆ.

ಬಟ್ಟೆ ಒಗೆಯಲು ಹೋಗಿ ಕಾಲು ಜಾರಿ ಬಿದ್ದಿರಬಹುದೆಂದು ಶಂಕಿಸಲಾಗಿದೆ. ಮೃತ ವ್ಯಕ್ತಿ ಯಾರೆಂಬುದು ಗೊತ್ತಾಗಿಲ್ಲ. ಯಗಟಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಯುವತಿ ಸಾವು

ಬೀರೂರಿನಲ್ಲಿ ಇತ್ತೀಚೆಗೆ ಲಾರಿ ಮತ್ತು ಟ್ರಾಕ್ಟರ್ ಮಧ್ಯೆ ಸಂಭವಿಸಿದ ಅಪಘಾ

ಕರ್ಕಿ ಶಾಲೆಯ ಸ್ನೇಹ ಸಮ್ಮೇಳನ

ಭಟ್ಕಳ, ಎ. 11— ಹೊನ್ನಾವರ ತಾಲೂಕಿನ ಕರ್ಕಿ ಎಸ್. ಸಿ. ಕೆ. ಇಂಗ್ಲಿಷ್ ಶಾಲೆಯ ಪೂರ್ವ ವಿದ್ಯಾರ್ಥಿ ಸಂಘದ ವಾರ್ಷಿಕ ಸ್ನೇಹ ಸಮ್ಮೇಳನ ಸ್ಥಳೀಯ ಉದ್ಯಮಿ ಮಧುಕರ ಎನ್. ಶೇಟ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆಯಿತು.

ಸಮಾರಂಭದ ಮುಖ್ಯ ಅತಿಥಿಯಾಗಿ ಕುಮಟಾ ಬಾಳಿಗಾ ಕಾಲೇಜಿನ ಪ್ರೊ॥ ಎಲ್ ವಿ. ಪೈ. ಆಗಮಿಸಿದ್ದರು. ಸಂಘದ ಅಧ್ಯಕ್ಷ

ಟೆಂಪೊ ಅಪಘಾತ 7ಜನರಿಗೆ ಗಾಯ

ಹೊನ್ನಾವರ, ಎ. 11— ಹೊನ್ನಾವರದಿಂದ ಗೆರಸಪ್ಪಾ ಕಡೆಗೆ ಹೋಗುತ್ತಿದ್ದ ಪ್ರಯಾಣಿಕರ ಟೆಂಪೊ ಹಡಿನಬಾಳ ಹತ್ತಿರ ಇತ್ತೀಚೆಗೆ ಮಗುಚಿ ಬಿದ್ದು ಏಳು ಜನ ಗಾಯಗೊಂಡಿದ್ದಾರೆ. ಗಂಭೀರ ಸ್ವರೂಪದ ಗಾಯಕ್ಕೊಳಗಾದ ಮೂವರನ್ನು ಮಂಗಳೂರಿನ ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ತಿಳಿದು ಬಂದಿದೆ.

ಜನ ಮರುಳೋ! ಜಾತ್ರೆ ಮರುಳೋ!!

(ಮುಂಗಾರು ವರದಿ)

ಕಾರವಾರ, ಎ. 11- ಇಲ್ಲಿಗೆ ಸಮೀಪದ ಅಮದಳ್ಳಿಯ ಹಳ್ಳದಲ್ಲಿ ಮಣ್ಣು ಅಗೆಯುವಾಗ ಇತ್ತೀಚೆಗೆ ದೊರೆತ ಕಲ್ಲಿನ ಗಣಪತಿ ವಿಗ್ರಹವೊಂದು ಮತ್ತೆ ಭೂತಳ ಸೇರುವ ಸ್ಥಿತಿಗೆ ಬಂದಿದೆ.

ಸುಮಾರು 30 ವರ್ಷಗಳ ಹಿಂದೆ ಒಂದು ಗಣಪತಿಯನ್ನು ಇದೇ ಹಳ್ಳದಲ್ಲಿ ಎಸೆದ ಗಟ್ಟಿಯಾದ ನೆನಪು ಈ ಗಣಪತಿ ನಿರ್ಮಿಸಿದ ಮುಕುಂದ ಆಚಾರಿಯವರಿಗೆ ಇದೆ. ಈ ಗಣಪತಿ ಪೂಜಿಸಲು ಅಯೋಗ್ಯವೆಂದು ಹಳ್ಳಕ್ಕೆ ಎಸೆಯಲಾಗಿತ್ತು. ಯಾಕೆಂದರೆ ಗಣಪತಿ ನಿರ್ಮಾಣದಲ್ಲಿ ಎಡಬಿಡಂಗಿ

ರಾಜ್ಯ ಸರ

ಉತ್ತರಕ್ಕೆ ಕ

ಬೆಂಗಳೂರು, ಎ. 11– ಉತ್ತರ ಭಾರತದ ಪ್ರಮುಖ ನಗರಗಳಿಗೆ ಎಳನೀರು ಸಾಗಾಣಿಕೆ ಮಾಡುವ ಹಾಗೂ ಅಲ್ಲಿ ಎಳನೀರು ಮಾರಾಟ ಮಾಡುವ ಕೇಂದ್ರಗಳನ್ನು ತೆರೆಯುವ ಯೋಜನೆಯೊಂದನ್ನು ರಾಜ್ಯ ಸರ್ಕಾರ ಹಮ್ಮಿಕೊಳ್ಳಲಿದೆ.

ರೈಲ್ವೆ ಇಲಾಖೆಯೊಂದಿಗೆ ಚರ್ಚಿಸಿ ಉತ್ತರ ಭಾರತದ ನಗರಗಳಿಗೆ ಎಳ

12-16/04/9?

ನಮ್ಮ ಮುನ್ನಡೆಗೆ ವಿದ್ಯುತ್ ಬೇಡವೇ ?...!

ನಮ್ಮ 'ಮುಂಗಾರು' ಪತ್ರಿಕೆಯ ಮಾರ್ಚ್. 16ರ ಸಂಚಿಕೆಯಲ್ಲಿ 'ಕೈಬಿಟ್ಟ ಕೈಗಾ' ಕುರಿತು ನಾವು ಬರೆದ ಸಂಪಾದಕೀಯ ಉತ್ತರ ಕನ್ನಡ ಜಿಲ್ಲೆಯ ಅನೇಕ ಮಂದಿ ಅಭಿಮಾನಿ ಓದುಗರನ್ನು ಕೆರಳಿಸಿದೆ. ಕೆಲವರು ತಮ್ಮ ಕೋಪವನ್ನು ಕಟುವಾದ ಮಾತುಗಳಲ್ಲಿ ಬರೆದು ತಿಳಿಸಿದ್ದಾರೆ. ಮತ್ತೆ ಕೆಲವರು ಕೈಗಾ ಅಣು ವಿದ್ಯುತ್ ಕೇಂದ್ರದಿಂದ ಪರಿಸರದ ಮೇಲಾಗಬಹುದಾದ ಹಾನಿಕಾರಕ ಪರಿಣಾಮಗಳ ಬಗ್ಗೆ ತಮಗಿರುವ ಭಯವನ್ನು ತಿಳಿಸಿದ್ದಾರೆ. ಇಂತಹ ಒಂದು ಭಯಾನಕವಾದ ಅಣು ವಿದ್ಯುತ್ ಕೇಂದ್ರದ ಸ್ಥಾಪನೆ ವಿಚಾರವನ್ನು 'ಮುಂಗಾರು'ವಂತಹ ಪತ್ರಿಕೆ ಮನ್ನಿಸುವುದರ ಔಚಿತ್ಯವನ್ನು ಪ್ರಶ್ನಿಸಿದ್ದಾರೆ.

ಒಂದು ಜನ ಪರವಾದ ಪತ್ರಿಕಾ ಮಾಧ್ಯಮವನ್ನು ಕಟ್ಟಲು ಹೆಣಗುತ್ತಿರುವ ನಾವು ಓದುಗರು ಎತ್ತುವ ಆಕ್ಷೇಪಗಳು ಅಥವಾ ಪ್ರಶ್ನೆಗಳಿಗೆ ಸೂಕ್ತ ಉತ್ತರ ಕೊಡಬೇಕಾದ ನೈತಿಕ ಹೊಣೆಯನ್ನು ಅಂಗೀಕರಿಸಿದ್ದೇವೆ. 'ಕೈಗಾ...' ಕುರಿತು ನಮ್ಮ ಸಂಪಾದಕೀಯವನ್ನು ಆಕ್ಷೇಪಿಸಿ ಬಂದಿರುವ ಎಲ್ಲ ಪತ್ರಗಳಿಗೂ ವಿವರವಾದ ಉತ್ತರ ಕೊಡುವುದು ಸಾಧ್ಯವಾಗದ ವಿಚಾರ. ಆದಕ್ಕಾಗಿ ನಾವು ಅನೇಕ ಮಂದಿ ಓದುಗರ ಭಾವನೆಗಳ ಸಾರ ರೂಪವೆನ್ನಬಹುದಾದ ಎರಡು ಪತ್ರಗಳನ್ನು "ಸಂಪಾದಕರೊಡನೆ ಓದುಗ" ಅಂಕಣದಲ್ಲಿ ಪ್ರಕಟಣೆಗೆ ಆಯ್ಕೆ ಮಾಡಿದ್ದೇವೆ. ಇದರಲ್ಲಿ ಮೊದಲನೆಯದು ಹೊನ್ನಾವರದ ಬಳಿಯ ಕಾಸರಕೋಡಿನ ಸ್ನೇಹ ಕುಂಜದ ನಿವಾಸಿಯಾದ ಮಾನ್ಯ ಓದುಗ ಕೆ. ಪಿ. ಪುಟ್ಟು ಅವರದು. ಕೈಗಾ ಅಣು ವಿದ್ಯುದಾಗರದ ಕುರಿತು ನಮ್ಮ ನಿಲುವಿನಿಂದ ತಮಗಾದ ನೋವನ್ನು ಅವರು ಬಿಚ್ಚು ಮನಸ್ಸಿನಿಂದ ನಮಗೆ ತಿಳಿಸಿದ್ದಾರೆ. ಪುಟ್ಟು ಅವರ ಪತ್ರವನ್ನು ಮಾರ್ಚ್ 21ರ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ.

ಇನ್ನೊಂದು ಪತ್ರ ಅದೇ ಊರಿನ ಡಾ॥ ಕುಸುಮಾ ಅವರಿಂದ ಬಂದಿದೆ. ಕೈಗಾ ಯಾರಿಗೂ ಬೇಡವೆಂಬುದನ್ನು ಬಹಳ ಭಾವಪರವಶರಾಗಿಯೇ ಹೇಳಿದ್ದಾರೆ. ಅವರ ಪತ್ರವನ್ನು ಎಪ್ರಿಲ್ 5ರ ಸಂಚಿಕೆಯಲ್ಲಿ ಸಾರ್ವಜನಿಕ ಜಿಜ್ಞಾಸೆಗಾಗಿ ಪ್ರಕಟಿಸಿದ್ದೇವೆ.

ಇವರಿಬ್ಬರೂ ನಮ್ಮ ಅಭಿಮಾನಿ ಓದುಗರೆಂಬುದನ್ನು ನಾವು ಕೃತಜ್ಞತೆಯಿಂದ ಸ್ಮರಿಸುತ್ತೇವೆ. ಕೈಗಾ ಯಾಕೆ ಬೇಡ ಎಂಬುದನ್ನು ಹೇಳಿದರೀತಿಯನ್ನೂ ನಾವು ಗೌರವಿಸುತ್ತೇವೆ. ಕೈಗಾ ಯಾಕೆ ಬೇಕೆಂಬುದನ್ನು ತರ್ಕ ಬದ್ಧವಾಗಿ ಅವರ ಮುಂದಿಡುವ ಕರ್ತವ್ಯವನ್ನೂ ನಾವು ನಿರ್ವಹಿಸುತ್ತೇವೆ. ಮಾನ್ಯ ಕೆ. ಪಿ.ಪುಟ್ಟು ಅವರು ಸರಕಾರದ ಕಡೆ ವಾಲುವ ಸಮೂಹ ಮಾಧ್ಯಮಗಳ ಸಾಲಿಗೆ ಮುಂಗಾರುವನ್ನೂ ಸೇರಿಸುವ ಮಾತನಾಡಿದ್ದಾರೆ. ಡಾ॥ಕುಸುಮಾ ಅವರು ತಮ್ಮ ಇಂತಹ ಅನಿಸಿಕೆಯನ್ನು ಸ್ವಲ್ಪ ಕಟುವಾಗಿಯೇ ತಿಳಿಸಿ ನಾವು ಸರಕಾರದ ಹೊಗಳುಭಟರಾಗಬಾರದೆಂದಿದ್ದಾರೆ. 'ಮುಂಗಾರು' ಓದುಗರಾಗಿಯೂ ಅವರು ಇಂತಹ ಭಾವನೆ ವ್ಯಕ್ತಪಡಿಸಿದರೆಂಬುದು ನಮಗಾದ ಬೇಸರ.

ಸರಿಯಲ್ಲದ ಲೇಪ

ಒಂದು ದುರ್ಬಲ ಸಮಾಜವನ್ನಾಳುವ ಯಾವುದೇ ರಾಜಕೀಯ ಬಣದ ಸರಕಾರವಾದರೂ ಅದು ಜನ ವಿರೋಧಿಯಾಗುತ್ತದೆಂಬ ಮಾತನ್ನು ನಾವು ಪದೇ- ಪದೇ ಹೇಳುತ್ತ ಬಂದಿದ್ದೇವೆ. ನಾವು ತಪ್ಪನ್ನು ಮಾಡದೇ ಇರುವ ಅತಿಮಾನವ ಅವತಾರಿಗಳಲ್ಲ ಆದರೆ ಈ ದೇಶದಲ್ಲಿ ಜನರು ಎಂದಿನವರೆಗೆ ದುರ್ಬಲರಾಗಿರುವರೋ ಅಂದಿನವರೆಗೆ ಯಾವುದೇ ಸರಕಾರದ ಪರ ನಿಲುವು ನಮ್ಮಿಂದ ಸಾಧ್ಯವಾಗದ ಮಾತು ಅಂತಹ ತಪ್ಪನ್ನು ನಾವೆಂದೂ ಮಾಡಲಾರೆವು. ಕೈಗಾ ಅಣುವಿದ್ಯುದಾಗರ ಆಗಲೆಂಬ ನಮ್ಮ ಅಭಿಪ್ರಾಯಕ್ಕೆ ಮಾನ್ಯ ಓದುಗರು ಸರಕಾರದ ಭಟ್ಟಂಗಿತನದ ಲೇಪ ಹಚ್ಚುವುದು ಸರಿಯಲ್ಲ.

ಕೈಗಾ ಆಗಲೆಂಬ ನಮ್ಮ ಅಭಿಪ್ರಾಯಕ್ಕೆ ಕನ್ನಡ ನಾಡಿನ ಸಮಗ್ರ ಹಿತದ ಕಲ್ಪನೆಯ ಹಿನ್ನೆಲೆ ಇದೆ. ಈ ನಾಡಿನ ಜನ ಆರ್ಥಿಕ ಮುನ್ನಡೆಯ ಹಾದಿಯಲ್ಲಿ ಒಂದು ಹೆಜ್ಜೆ ಮುಂದಿಡಲಾಗದ ದುಃಸ್ಥಿತಿ ಇದೆಯೆಂಬುದರ ಅರಿವು ನಮ್ಮ ಮಾನ್ಯ ಓದುಗರಿಗಿದೆಯೆಂದು ನಂಬುತ್ತೇವೆ. ಇದಕ್ಕೆ ವಿದ್ಯುಚ್ಛಕ್ತಿಯ ತೀವ್ರ ಅಭಾವವೇ ಕಾರಣವೆಂಬುದರ ಸ್ಪಷ್ಟ ಚಿತ್ರ ಎಲ್ಲರ ಮುಂದಿದೆ.

ಕನ್ನಡನಾಡಿನ ಜನಜೀವನವನ್ನು ಬಹುಬಗೆಯಲ್ಲಿ ಬಾಧಿಸುತ್ತಿರುವ ವಿದ್ಯುತ್ ಅಭಾವದ ವಿಕಾರ ರೂಪದ ವಿಶ್ಲೇಷನೆಯನ್ನು ನಾವು "ಕವಿಯುತ್ತಿರುವ ಕತ್ತಲು" ಎನ್ನುವ ಶೀರ್ಷಿಕೆಯಲ್ಲಿ ಕಳೆದ ವರ್ಷ ಎಪ್ರಿಲ್ 13ರಿಂದ ನಾಲ್ಕು ಕಂತುಗಳಲ್ಲಿ ಪ್ರಕಟಿಸಿದ್ದೆವು. ನಮ್ಮ ಈ ವಿಶ್ಲೇಷಣೆ ಎಲ್ಲರಿಗೂ ಹಿಡಿಸದೆ ಇದ್ದಿರಬಹುದು.

ಓದುಗರೊಡನೆ ಸಂಪಾದಕ....

ಆದರೆ ಈ ಲೇಖನ ಮಾಲಿಕೆಯಲ್ಲಿ ನಾವು ಸಾರ್ವಜನಿಕರು, ತಂತ್ರಜ್ಞರು ಮತ್ತು ಸರಕಾರ ಜಿಜ್ಞಾಸೆ ನಡೆಸಬೇಕಾದ ಕೆಲವು ವಿಚಾರಗಳನ್ನು ಮುಂದಿಟ್ಟಿದ್ದೆವು. ಇವುಗಳನ್ನೆಲ್ಲಾ ಈಗ ಮತ್ತೊಮ್ಮೆ ಮೆಲುಕು ಹಾಕಲು ನಾವು ಇಚ್ಛಿಸುವುದಿಲ್ಲ. ಕೈಗಾ ಬಗ್ಗೆ ನಮ್ಮ ನಿಲುವಿನ ಸಮರ್ಥನೆಗಾಗಿ ಅವನ್ನೀಗ ಪ್ರಸ್ತಾಪಿಸಿದ್ದೇವೆ.

ದುರ್ಗತಿ ಯಾಕೆ?

ಕರ್ನಾಟಕದಷ್ಟು ತೀವ್ರಕರವಾದ ವಿದ್ಯುತ್ ಅಭಾವವನ್ನು ಎದುರಿಸುತ್ತಿರುವ ರಾಜ್ಯ ಈ ದೇಶದಲ್ಲಿ ಇನ್ನೊಂದಿಲ್ಲ. ಜಲ ವಿದ್ಯುತ್ ಮೂಲಗಳಲ್ಲಿ ಈ ದೇಶದಲ್ಲಿಯೇ ಅತ್ಯಂತ ಸಮೃದ್ಧವೆನಿಸಿರುವ ಕರ್ನಾಟಕ ಈಗ ಕನಿಷ್ಠ ವಿದ್ಯುತ್ ಆವಶ್ಯಕತೆಗಳಿಗಾಗಿ ಆಂಧ್ರದವರೊಡನೆ ಅಂಗಲಾಚುವ ಮಹಾರಾಷ್ಟ್ರದವರಿಗೆ ಮೊರೆ ಇಡುವ ಅಥವಾ ಕೇರಳದವರಿಗೆ ಕೈಯೊಡ್ಡುವ ದುರ್ಗತಿ ಯಾಕೆ ಬಂತೆಂಬುದು ಎಲ್ಲರೂ ಯೋಚಿಸಬೇಕಾದ ವಿಚಾರ.

ಇದರಲ್ಲಿ ನಮ್ಮನ್ನಾಳಿದ ಭಿನ್ನ ಸರಕಾರಗಳ ಕರ್ತವ್ಯಲೋಪ,ಸಾರ್ವಜನಿಕರ ಹೊಣೆಗೇಡಿತನ ಹಾಗೂ ಸಮೂಹ ಮಾಧ್ಯಮದ ವೈಫಲ್ಯದ ದೊಡ್ಡ ಕಥನವೇ ಇದೆ.

ನಮ್ಮ ಸರಕಾರಗಳು ಮುಗ್ಧ ಜನರ ಭಾವನೆಗಳನ್ನು ಕೆರಳಿಸಿ ಅದರ ಉರಿಯಲ್ಲಿ ತಮ್ಮ ಬೇಳೆ ಬೇಯಿಸಿಕೊಂಡು ಹೋಗಿವೆ. ಸಾರ್ವಜನಿಕರಾದ ನಾವು ಜಾತಿ-ಜಾತಿ ನಡುವಿನ ಜಗಳ, ದೇವರು, ಧರ್ಮ ಅಥವಾ ಭಾಷೆಗೆ ಕೊಟ್ಟಷ್ಟು ಮಹತ್ವವನ್ನು ಆರ್ಥಿಕ ಅಭಿವೃದ್ಧಿ ಕಾರ್ಯಗಳಿಗೆ ಕೊಟ್ಟವರಲ್ಲ. ಪತ್ರಿಕಾ ಮಾಧ್ಯಮಗಳು ಆಳರಸರ ಅಥವಾ ಪ್ರತಿಷ್ಠಿತರ ಪ್ರಚಾರ ಸಾಧನಗಳಾಗಿವೆಯೇ ಹೊರತು ಜನ ಸಮೂಹಕ್ಕೆ ವಿಜ್ಞಾನ ಯುಗದಲ್ಲಿ ಮುನ್ನಡೆಯ ಹಾದಿ ತೋರಿಸುವ ದೀವಿಗೆಗಳಾಗಿಲ್ಲ.

ವಿಷಯದ ಚರ್ಚೆಗೆ ಪೀಠಿಕೆಯಾಗಿ ನಾವು ಈ ಮಾತನ್ನು ಹೇಳಲೇ ಬೇಕಾಯಿತು.

ಇಂದಿನ ಆಧುನಿಕ ಯುಗದಲ್ಲಿ ಆರ್ಥಿಕ ಅಭಿವೃದ್ಧಿ ಮತ್ತು ಸುಖ ಜೀವನಕ್ಕೆ ಸಾಧಕವಾದ ಮೂಲ ಸಾಮಾಗ್ರಿ ವಿದ್ಯುಚ್ಛಕ್ತಿ ಎಂಬುದನ್ನು ಮಾನ್ಯ ಓದುಗರು ಒಪ್ಪುವರೆಂದು ನಾವು ತಿಳಿಯುತ್ತೇವೆ.

ಈ ಮೂಲ ಸಾಮಾಗ್ರಿಯ ಅವಶ್ಯಕತೆ ನಗರಗಳಲ್ಲಿರುವ ಬಂಡವಾಳಶಾಹಿಗಳು ಅಥವಾ ಅವರ ಕಾರ್ಖಾನೆಗಳಿಗಿರುವಷ್ಟೆ ಹಳ್ಳಿಗಳಲ್ಲಿರುವ ಕುಶಲ ಕರ್ಮಿಗಳ ಕಮ್ಮಟಗಳಿಗೂ ರೈತರ ಹೊಲಗದ್ದೆಗಳಿಗೂ ಇದೆ. ಎಲ್ಲ ಕ್ಷೇತ್ರಗಳಲ್ಲಿ ಜನರಿಗೆ ಕ್ರಿಯಾತ್ಮಕ ಕಸುಬು ಒದಗಿಸಲು ಆ ಮೂಲಕ ಉತ್ಪನ್ನ ಅಥವಾ ಸಂಪತ್ತನ್ನು ಹೆಚ್ಚಿಸಲು ವಿದ್ಯುತ್ ಒಂದು ಮೂಲವಸ್ತು. ಅಂದ ಮೇಲೆ ತೀವ್ರತರದ ವಿದ್ಯುತ್ ಅಭಾವ ಕನ್ನಡ ನಾಡಿನ ಸಾಂಪತ್ತಿಕ ಸ್ಥಿತಿಯ ಸುಧಾರಣೆಗೆ ಅಡ್ಡಬಂದಿದೆಯೆಂಬುದನ್ನು ತಾವೆಲ್ಲಾ ಒಪ್ಪಿಕೊಳ್ಳಲೇಬೇಕು.

ವಿದ್ಯುತ್ ಅಭಾವ ಉತ್ಪಾದನೆಗೆ ಎಷ್ಟರ ಮಟ್ಟಿಗೆ ಆತಂಕ ಒಡ್ಡಿದೆಯೆಂಬುದನ್ನು ಒಮ್ಮೆ ಅವಲೋಕಿಸೋಣ. ಪ್ರಕೃತ ಕನ್ನಡ ನಾಡಿನಲ್ಲಿ ನಿತ್ಯಬಳಕೆಗೆ ಲಭ್ಯವಿರುವ ವಿದ್ಯುತ್ತಿನ ಪ್ರವಾಹ ದಿನಕ್ಕೆ ದರ ಸುಮಾರು 1,200 ಮೆಗವಾಟ್. ಇದರಲ್ಲಿ 300 ಮೆಗವಾಟ್ ಬೀದಿ ದೀಪಗಳು ಮತ್ತು ಗೃಹಬಳಕೆಗೆ ಉಪಯೋಗವಾಗುತ್ತಿವೆ. ಉಳಿದ 900ಮೆಗವಾಟ್ ವಿದ್ಯುತ್ ನಗರಗಳ ಕಾರ್ಖಾನೆಗಳು, ಹಳ್ಳಿಗಳ ಸಣ್ಣ ಕೈಗಾರಿಕೆಗಳು, ಕುಶಲ ಕರ್ಮಿಗಳ ಕಮ್ಮಟಗಳು ಮತ್ತು ನೀರಾವರಿ ಪಂಪ್‌ಸೆಟ್‌ಗಳಿಗೆ ಬಳಕೆಯಾಗುತ್ತವೆ.

1985ರ ಅಂದಾಜು ಅಂಕೆ ಸಂಖ್ಯೆಗಳ ಮೇರೆಗೆ ಕನ್ನಡ ನಾಡಿನ ಕೃಷಿ ಹಾಗೂ ಕೈಗಾರಿಕಾ ಉತ್ಪನ್ನಗಳ ಒಟ್ಟು ಮೌಲ್ಯ ಸುಮಾರು ರೂ. 24,000ಕೋಟಿ. ಇದರಲ್ಲಿ ವಿದ್ಯುತ್‌ಮೂಲವಾದ ಉತ್ಪನ್ನ ಸಾಧನಗಳ ಕೊಡುಗೆ ಸುಮಾರು ರೂ. 8,000 ಕೋಟಿ.

ಕನ್ನಡ ನಾಡಿನಲ್ಲಿ ಈಗಿರುವ ದೊಡ್ಡ ಉದ್ಯಮಗಳು, ಸಣ್ಣ ಕೈಗಾರಿಕೆಗಳು, ಕುಶಲಕರ್ಮಿಗಳ ಕಮ್ಮಟಗಳು ಹಾಗೂ ರೈತರ ನೀರಾವರಿ ಪಂಪ್‌ಸೆಟ್‌ಗಳ ಕನಿಷ್ಠ ಅವಶ್ಯಕತೆ ದಿನವೂ ಸುಮಾರು 2,000 ಮೆಗವಾಟ್ ವಿದ್ಯುಚ್ಛಕ್ತಿಯೆಂಬುದು ಒಂದು ಅಂದಾಜು. ಅಂದರೆ ವಿದ್ಯುತ್‌ಚ್ಛಕ್ತಿಯ ಅಭಾವದಿಂದಾಗಿ ಕಳೆದ ಕೆಲವು ವರ್ಷಗಳಿಂದ ಕರ್ನಾಟಕ ರಾಜ್ಯ ವರ್ಷಕ್ಕೆ ಸರಾಸರಿ 7,000ದಿಂದ 8,000 ಕೋಟಿ ರೂಪಾಯಿಗಳ ಉತ್ಪಾದನಾ ನಷ್ಟವನ್ನನುಭವಿಸುತ್ತಿದೆಯೆಂಬ ತೀರ್ಮಾನಕ್ಕೆ ಬರಬಹುದು. ಇದರ ಅರ್ಥ ಕನ್ನಡ ನಾಡಿನ ಜನರ ವಾರ್ಷಿಕ ತಲಾ ಆದಾಯ ರೂ. 200 ದಿಂದ ರೂ.270ರಷ್ಟು ಕಡಿಮೆಯಾಗಿದೆ. ಡಾ॥ ಕುಸುಮಾ ಅವರು ಬಹಳ ಕಳಕಳಿಯಿಂದ ಹೇಳಿರುವ ಕೈಗಾದ 'ಕುಳುಂಬಿ' ಜನರ ಬದುಕಿನಲ್ಲಿ ರೂ. 300ರಷ್ಟು ವಾರ್ಷಿಕ ವರಮಾನದ ಏರಿಕೆಯ ಪರಿಣಾಮ ಏನಾಗಬಹುದಿತ್ತೆಂಬುದೇ ನಮ್ಮ ಚಿಂತನೆಗೆ ಒಳಪಡಬೇಕಾದ ವಿಚಾರ.

(ಮುಂದುವರಿಯುವುದು)

ಮಂಗಳೂರು
9-3-85

ಬೆಳಗ್ಗೆ 6.35 ವಂದನಾ-ವೆಂಕಟೇಶ್ವರ ಸುಪ್ರಭಾತ, ಪಿ. ಪಿ. ಅನಂತ ನಾರಾಯಣ ಮತ್ತು ಬಳಗ. 7.15 ಸಂಗೀತ ಸುಧಾ-ಮಾಲಿನಿ ರಾಜುರ್‌ಕರ್ ಗಾಯನ, 7.45 ಸಂಗೀತ ಪಾಠ, 8.21 ಚಿತ್ರಗೀತೆ, 8.30 ಸಿಕ್ಕಿಲ್ ಸಹೋದರಿಯರ ಕೊಳಲು ವಾದನ, ಮಧ್ಯಾಹ್ನ 12.30 ನೆಲ್ಲಾ ಟಿ. ವಿ. ಕೃಷ್ಣಮೂರ್ತಿ-ಗಾಯನ, 1.20 ಚಿತ್ರಗೀತೆ, 2.10 ಚಲಿಪಿಲಿ.

ಸಂಜೆ 5-30 ಕೆ. ಎಸ್. ನಾರಾಯಣ ಸ್ವಾಮಿ-ವೀಣೆ, 6-15 'ಪೂವನ್ನೀರ್' ಮಹಿಳೆಯರ ತುಳು ಕಾರ್ಯಕ್ರಮ-ಹಳೆಯಂಗಡಿ ಮಹಿಳಾ ಮಂಡಲದವರಿಂದ. 6-50 ಕೃಷಿರಂಗ – ಲಿಂಬೆ ಗಿಡಗಳ ರಕ್ಷಣೆ: ಮನಮೋಹನ್ ರಾವ್ ಜೊತೆ ಸಂದರ್ಶನ (2) ಚಿನ್ನ ಪಿಲ್ಲಿ ಕನ್ನಡ ಕೌಟುಂಬಿಕ ಮಾಲಿಕೆ. 7.20 ಚಿತ್ರಗೀತೆ, 7.45 ಯುವವಾಣಿ, 8.30 ಲಘು ಶಾಸ್ತ್ರೀಯ ಸಂಗೀತ, 9.16 ಕೊಂಕಣಿ ಮಾತುಕತೆ – "ದಕ್ಷಿಣ ಕನ್ನಡಾಚೆ ಶಿಲ್ಪ ಆನಿ ಶಾಸನ" – ಎಂ. ರಾಘವೇಂದ್ರ ಪ್ರಭು ಅವರಿಂದ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ – ಡಿ. ಕೆ. ದಾತಾರ್ – ಪಿಟೀಲು.

ಇಂದಿನ ಕಾರ್ಯಕ್ರಮ

ಸಂಜೆ 7ಗಂಟೆಗೆ ಮಂಗಳೂರು ಡಾನ್ ಬೊಸ್ಕೋ ಹಾಲ್‌ನಲ್ಲಿ 'ಆಯನ' ತಂಡದವರಿಂದ 'ಕುರಿ' ನಾಟಕ ಪ್ರದರ್ಶನ.

ದಿಲ್ಲಿ ದೂರದರ್ಶನ ಕಾರ್ಯಕ್ರಮ
9.3.85 (ಶನಿವಾರ)

ಬೆಳಗ್ಗೆ 9.30: ಕಾರ್ಟೂನ್ ಚಿತ್ರ, 9.45: ಮನ್ನಾಡೇ ಹಾಡಿದ ಚಿತ್ರಗೀತೆಗಳು, 10.15: 'ಓಲ್ಡ್ ಫಾಕ್ಸ್' ಇಂಗ್ಲಿಷ್ ಧಾರಾವಾಹಿ ಸಿನೇಮ, 11.05: ರಾಮ್ ಮಾಲಾ ಜೋಡ್– ಕೆ. ಆರ್. ಭಾಟ್ನಾಗರ್‌ರ ಕಿರುನಾಟಕ.

ಸಂಜೆ: 6.00: ಕಾರ್ಯಕ್ರಮ ಮುಖ್ಯಾಂಶಗಳು ಮತ್ತು ಸ್ಥಳೀಯ ಪ್ರಕಟಣೆಗಳು, 6.05: 'ಜಾನ್ ಹೈ ಜಹ್ಞಾ ಹೈ' ಆರೋಗ್ಯ ಸಮಸ್ಯೆ ಕುರಿತಾದ ವೀಕ್ಷಕರ ಪತ್ರಗಳಿಗೆ ಉತ್ತರ, 6.20: 'ಅಂಧೇರಿ ಕಿ ದಿವಾರ್' ಕರ್ತಾರ್ ಸಿಂಗ್‌ರ ನಾಟಕ. 8.00: 'ಸಾಪ್ತಾಹಿಕ', 8.30: 'ದಿ ಕಂಪ್ಯೂಟರ್ ಪ್ರೋಗ್ರಾಂ' ಇಂಗ್ಲಿಷ್ ಧಾರಾವಾಹಿ ಚಿತ್ರ. ರಾಷ್ಟ್ರೀಯ ಕಾರ್ಯಕ್ರಮ: 9.00 'ಸಮಾಚಾರ್' 9.20: 'ಹಮ್ ಲೋಗ್', 9.50: 'ದಿ ನ್ಯೂಸ್', 10.10: ಇಂಗ್ಲಿಷ್ ಚಿತ್ರ.

ಮನರಂಜನೆ
9-3-1985

ರೂಪವಾಣಿ: ರಾಜ್ ತಿಲಕ್ (ಹಿಂದಿ) ರಾಜ್‌ಕುಮಾರ್, ಕಮಲಹಾಸನ್

ನ್ಯೂಚಿತ್ರಾ: ಅಂದರ್ ಬಾಹರ್ (ಹಿಂದಿ) ಜಾಕಿ ಶ್ರೋಫ್, ಕಿಮ್, ಮೂನ್‌ಮೂನ್

ಜ್ಯೋತಿ: ಆಹುತಿ (ಕನ್ನಡ) ಅಂಬರೀಶ್, ಸುಮಲತ

ಅಮೃತ್: ಒರು ಖೈದಿಯನ್ ಡೈರಿ (ತಮಿಳು) ಕಮಲಹಾಸನ್, ರಾಧ

ರಾಮಕಾಂತಿ: ಮಯೂರ (ಕನ್ನಡ) ಡಾ। ರಾಜ್, ಮಂಜುಳಾ

ಪ್ರಭಾತ್: ಪ್ರಾಯಿಕನಸು (ಕನ್ನಡ) ಶಂಕರ್‌ನಾಗ್, ಸುಮಲತಾ

ಸುಚಿತ್ರ: ಬಿಡುಗಡೆಯ ಬೇಡಿ (ಕನ್ನಡ) ಅನಂತನಾಗ್, ಲಕ್ಷ್ಮಿ

ಪ್ಲಾಟಿನಂ: ಕೈಕೊಡುಕ್ಕುಂ ಕೈ (ತಮಿಳು) ರಜನಿಕಾಂತ್, ರೋಹಿಣಿ

ಸೆಂಟ್ರಲ್: ಮುಗಿಲ ಮಲ್ಲಿಗೆ (ಕನ್ನಡ) ಶ್ರೀನಾಥ್, ಸರಿತಾ, ಅಶೋಕ್

ಮೈದಾನದಲ್ಲಿ ನಡೆದ ಬೃಹತ್ ಸಾರ್ವ
ಜನಿಕ ಸಭೆಯನ್ನುದ್ದೇಶಿಸಿ ಅವರು ಮಾತ
ನಾಡುತ್ತಿದ್ದರು.

'ದ್ವೇಷ, ಸ್ವ... ಶಕ್ತಿ ಪ್ರದರ್ಶ...

ಮರವಂತೆ, ಮಾ. 8–ದ್ವೇಷ, ಪ್ರತಿಷ್ಠೆ, ಪುಂಡಾಟಿಕೆಗಾಗಿ ಇನ್ನೊಬ್ಬರ ಮೇಲೆ ಶಕ್ತಿ ಪ್ರದರ್ಶನ ನಡೆಸುವುದು ಧೈರ್ಯ ಪ್ರದರ್ಶನವೆನಿಸದು, ಅದು ಕೇವಲ ಭಂಡತನ ಎಂದು ಕುಂದಾಪುರ ಭಂಡಾರ್ಕರ್ಸ್ ಕಾಲೇಜಿನ ಸಂಖ್ಯಾಶಾಸ್ತ್ರ ಮುಖ್ಯಸ್ಥ ಎ. ಸಿ. ತುಂಗ್ ಅವರು ಹೇಳಿದ್ದಾರೆ.

ನಾವುಂದ ಸರಕಾರಿ ಕಿರಿಯ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಅವರು ಮುಂದುವರಿದು, ಸಂಕಷ್ಟದಲ್ಲಿ ಸಿಲುಕಿದವರ ರಕ್ಷಣೆಗೆ ಧಾವಿಸಿ ಪರಿಹಾರ ಒದಗಿಸುವುದೇ ಧೈರ್ಯವೆನಿಸುತ್ತದೆ, ಎಂದರು.

ನಮ್ಮ ಯುವಕರು ಈ ನಿಟ್ಟಿನಲ್ಲಿ ಸರಿಯಾದ ಅರಿವನ್ನು ಅರಿಯದೆ, ಭಂಡತನವನ್ನೇ ಧೈರ್ಯವೆಂದು ತಪ್ಪಾಗಿ ಭಾವಿಸಿದಂ

ಕುಡುಬಿಯ...

ಉಡುಪಿ, ಮಾ. 8 – ಮುಗ್ಧ ಜನರೆಂದು ಕರೆಸಿಕೊಳ್ಳುವ ಗೋವಾ ಕುಡುಬಿಯರ ರಂಗು ರಂಗಿನ ಹೋಳಿಹಬ್ಬದ ಕುಣಿತ ನೋಡುವ ಕಣ್ಣನ್ನು – ಸವಿಯುವ ಮನವನ್ನು ನಿರಾಶೆಗೊಳಿಸದ 'ದೃಶ್ಯ ಸಂಗಮ.'

ಬದುಕಿನ ಜಂಜಾಟದಲ್ಲಿ ಪ್ರತಿದಿನವೂ ಅಪಸ್ವರದ ರಾಗದಲ್ಲಿ ಬಳಲಿ ಬೆಂಡಾದ ಕುಡುಬಿಯರು ಹೋಳಿಹಬ್ಬವನ್ನು ಸಂಭ್ರಮದಿಂದ ಆಚರಿಸಿ, ಸಂತೋಷದ ಕಾರಂಜಿಯನ್ನು ಚಿಮ್ಮಿಸಿಕೊಳ್ಳುತ್ತಾರೆ.

ಸಾಂಪ್ರದಾಯಿಕವಾಗಿ ಸೀರೆಯನ್ನು ಸುತ್ತಿ ಗಟಿ ಹಾಕಿಕೊಳ್ಳುವ ಕುಡುಬಿ ಕನ್ಯೆಯರು, ಈ ಕಪ್ಪು ಸುಂದರಿಯರು ತೊಡುಗೆಗಳಲ್ಲಿ ಸಂಸ್ಕೃತಿಯ ಸೊಗಡು ಮೂಡಿಸುತ್ತಾರೆ.

ಹದಿನೇಳನೆಯ ಶತಮಾನದಲ್ಲಿ ಪೋರ್ಚುಗೀಸರಿಗೆ ಹೆದರಿ ಓಡಿ ಬಂದ ಒಂದು ಜನಾಂಗ ಬೇರೆಯಾಗಿ ಕಡಲ ತಡಿಯಲ್ಲಿ ನೆಲೆನಿಂತು ಖಾರ್ವಿಗಳಾದರೆ, ಅವರಲ್ಲಿ ಚಿಮ್ಮಿದ ಇನ್ನೊಂದು ಪಂಗಡ ಕಾಡಿನ ಮಡಿಲು ಸೇರಿ ಕುಡುಬಿಯರಾದರು ಎನ್ನಲಾಗಿದೆ.

ಸುಮಾರು ಮೂವತ್ತು ಸಾವಿರಕ್ಕೂ ಹೆಚ್ಚು ಜನಸಂಖ್ಯೆಯಿರುವ ಕುಡುಬಿಯರದ್ದು ವಿಶಿಷ್ಟ ಸಾಂಪ್ರದಾಯಿಕ ಬದುಕು. ಇಲ್ಲಿನ ಇತರ ಜನ ಈ ಕುಡುಬಿಯನ್ನು ಪ್ರತ್ಯೇಕ ದೃಷ್ಟಿಯಲ್ಲಿ ಕಾಣುತ್ತಾರೆ. ದಕ್ಷಿಣಕನ್ನಡದಲ್ಲೂ ಕುಡುಬಿಯರು ಇದ್ದು, ತೀರಾ ತಿರಸ್ಕೃತ ಜನಾಂಗದವರಾಗಿ ಬದುಕು ಸಾಗಿಸುತ್ತಿದ್ದಾರೆ.ತಮ್ಮದೇ ಆದ ಸಂಪ್ರದಾಯ, ರೀತಿ-ನೀತಿಗಳಲ್ಲಿ ಬಂಧಿಯಾದ ಕುಡುಬಿ ಜನ ಎಲ್ಲರಿಂದಲೂ ದೂರವಾಗಿ ಬೇರೆಯಾಗಿ ಬದುಕುತ್ತಿರುವುದು ಮಾನವೀಯ ಸಂಬಂಧಗಳು ಇನ್ನೂ ಅರಳದಿರುವುದಕ್ಕೆ ಪ್ರತ್ಯಕ್ಷ ಸಾಕ್ಷಿ.

ಕಾಡಿನ ನಡುವೆ, ಜಂಜಾಟವಿಲ್ಲದ ಜಾಗದಲ್ಲಿ ಇವರ ಬದುಕು ನೆಲೆನಿಂತಿದೆ, ಶ್ರೀಮಂತರ ಮನೆಯಲ್ಲಿ ಕೂಲಿ ಕೆಲಸದ ಪಾಲೂ ಇವರಿಗಿದೆ. ಶಾಲೆಯ ಮುಖನೋಡದ ಕುಡುಬಿ ಗಂಡಸರು ಮುಗ್ಧರು-ಕೂಲಿ ಕೆಲಸ ಮಾಡಿಯೇ ಹೊಟ್ಟೆಹೊರೆದುಕೊಳ್ಳುವುದು ಶತಮಾನದಿಂದ ನಡೆದು ಬಂದ ಪದ್ಧತಿ. ಈ ಪದ್ಧತಿ ಇನ್ನೂ ಬದಲಾಗದೇ ಉಳಿದಿದೆ.

ವಿಚಿತ್ರವಾದ 'ವಧು ದಕ್ಷಿಣೆ' ಎಂಬ ಪದ್ಧತಿಯೂ ಕುಡುಬಿಯರಲ್ಲಿದೆ. ಭೂಮಿ ಇಲ್ಲದ ಕುಡುಬಿಯರು ಸರಕಾರದ ಪುಸ್ತಕದಲ್ಲಿ ಹಿಂದುಳಿದ ಜನಾಂಗದವರಲ್ಲ.ಹೀಗಾಗಿ ಅವರಿಗೆ ಸಿಗಬೇಕಾದ ಸವಲತ್ತುಗಳು ಕೂಡಾ ಸಿಗದೇ ದೂರ ನಿಂತಿದೆ.

ಕುಡುಬಿಯರ ವಿಶಿಷ್ಟ ಸಂಪ್ರದಾಯದ ಹೋಳಿಹಬ್ಬ ಹೆಚ್ಚು ಕಡಿಮೆ 15 ದಿವಸಗಳ ತನಕ ನಡೆಯುತ್ತದೆ. ಹೂವಿನ ಕಿರೀಟ, ಅದಕ್ಕೆ ಹಕ್ಕಿಯ ಪುಕ್ಕ ಸಿಕ್ಕಿಸಿ ವೇಷ ಧರಿಸಿ 'ಡುಮಕಿ' ಹಿಡಿದು ಮನೆಮನೆಗೆ ಹೋಗಿ ಹಾಡುವ, ಹಾಡಿ ಕುಣಿಯುವ ಅವರಲ್ಲಿ ಕಲಾವಂತಿಕೆಯ ಸಿರಿ ಅಡಗಿದೆ.

ವೇಷ ಕಟ್ಟಿಕೊಂಡು ಜಾನಪದ ಹಾಡುಗಳನ್ನು ಹಾಡುತ್ತ, ತಾಳಬದ್ಧವಾಗಿ ಕುಣಿಯುತ್ತ ರಂಗು ಚೆಲ್ಲುವ ಕುಡುಬಿಯರ ಹೋಳಿಹಬ್ಬದಂತೆ, ಅವರ ಬದುಕಿಗೂ ರಂಗು ಬರಬೇಕಾಗಿದೆ.

— ಚಂದ್ರಶೇಖರ ಹೆಗ್ಡೆ

ಚಿತ್ರ: ಯು. ಎಸ್. ಶೆಣೈ

ಬಂದ ಮರಿಗಳನ್ನು ಈಗ ಪೋಷಿಸಲಾಗುತ್ತಿದೆ. ಅವು ಸ್ವಾವಲಂಬಿಯಾಗಿ ಬದುಕುವಷ್ಟು ಬೆಳೆದಾಗ ಬಿಡುಗಡೆ ಮಾಡಲಾಗುವುದು ಎಂದು ಎಂ. ಕೆ. ಅಪ್ಪಯ್ಯ ಅವರ ಪತ್ರಿಕಾ ಪ್ರಕಟನೆ ತಿಳಿಸಿದೆ.

ಈಗ ಕಡಲಾಮೆಗಳು ತೀರದಲ್ಲಿಟ್ಟ ಮೊಟ್ಟೆಗಳನ್ನು ನಾಯಿ, ಬೆಕ್ಕು, ಮನುಷ್ಯ ಇವರೆಲ್ಲ ಅಪಹರಿಸುತ್ತಾರೆ. ಆ ಹಂತ ಪಾರಾಗಿ ಮರಿ ಆದರೆ ಹಕ್ಕಿಗಳು ದಾಳಿ ಮಾಡುತ್ತವೆ. ಇದರಿಂದಾಗಿ ಕಡಲಾಮೆ ಸಂತತಿ ಅಪರೂಪವಾಗುತ್ತಿದೆ. ಸರ್ಕಾರವು ಅವುಗಳನ್ನು ಹಿಡಿಯುವುದನ್ನು ಮತ್ತು ಅವುಗಳ ವ್ಯಾಪಾರವನ್ನು ನಿಷೇಧಿಸಿದೆ ಎಂದು ತಿಳಿಸಲಾಗಿದೆ.

ವಿಶ್ವದ ಏಳು ಬಗೆಯ ಕಡಲಾಮೆಗಳಲ್ಲಿ ಆರು ಜಾತಿಯವು ಇಲ್ಲವಾಗುತ್ತಿವೆ. ಭಾರತದ ಎಲ್ಲ 5 ಸಂತತಿಗಳು ಅಪಾಯದಲ್ಲಿವೆ. ಈ ಹಿನ್ನೆಲೆಯಿಂದ ಪ್ರಸ್ತುತ ಯೋಜನೆ ಕೈಗೊಳ್ಳಲಾಗಿದ್ದು, 1983–84ರಲ್ಲಿ ಆ ಬಗ್ಗೆ ಕರ್ನಾಟಕದ 270 ಕಿ. ಮೀ. ಉದ್ದದ ಕರಾವಳಿಯಲ್ಲಿ ಸಮೀಕ್ಷೆ ನಡೆಸಲಾಯಿತು.

ಕಳೆದ ನವೆಂಬರ್, ಡಿಸೆಂಬರ್ ಹಾಗೂ ಜನವರಿಯಲ್ಲಿ ಸ್ಥಳೀಯರ ಸಹಕಾರದಿಂದ ಮೊಟ್ಟೆಗಳನ್ನು ಸಂಗ್ರಹಿಸಲಾಯಿತು. ಪ್ರತಿ ಹೆಣ್ಣು ಆಮೆ 100 ರಿಂದ 150 ರಷ್ಟು ಮೊಟ್ಟೆ ಇಡುತ್ತದೆ ಹಾಗೂ 55–60 ದಿನದಲ್ಲಿ ಮೊಟ್ಟೆ ಒಡೆದು ಮರಿಗಳು ಹೊರಬರುತ್ತವೆ. ಮರಿಗಳನ್ನು ಒಂದು ವರ್ಷ ಸಾಕಿ ಸಮುದ್ರಕ್ಕೆ ಬಿಡಲು ಉದ್ದೇಶಿಸಲಾಗಿದೆ ಎಂದು ಅಪ್ಪಯ್ಯ ತಮ್ಮ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಡಿಯಾರ ಸುಂಕ ಇಳಿಸಲು ಮನವಿ

ಮಂಗಳೂರು, ಮಾ. 8 – ವಾಚುಗಳ ಮೇಲಿನ ಕೇಂದ್ರ ಅಬಕಾರಿ ಸುಂಕವನ್ನು ಹತ್ತರಿಂದ ಶೇ. ಒಂದಕ್ಕೆ ಇಳಿಸಿದ ಬಗ್ಗೆ ಕೆನರಾ ವಾಣಿಜ್ಯೋದ್ಯಮ ಚೇಂಬರಿನ ಅಧ್ಯಕ್ಷ ಯು. ಸುರೇಶ್ ಮಲ್ಯ ಅವರು ಕೇಂದ್ರ ಹಣಕಾಸು ಸಚಿವ ವಿ. ಪಿ. ಸಿಂಗ್ ಅವರನ್ನು ಅಭಿನಂದಿಸಿದ್ದಾರೆ. ಈ ಸೌಲಭ್ಯವನ್ನು ಗೋಡೆ ಗಡಿಯಾರಗಳಿಗೆ ಕೂಡಾ ನೀಡಬೇಕೆಂದು ತಂತಿ ಸಂದೇಶವೊಂದರಲ್ಲಿ ಅವರು ಒತ್ತಾಯಿಸಿದ್ದಾರೆ.

...ತ್ತು ಸಹಕಾರಿ ಸಂಘ ಸಂಸ್ಥೆಗಳ ಪರ
...ಗಿ ಇತ್ತೀಚೆಗೆ ಹಾರ್ದಿಕ ಬೀಳ್ಕೊಡುಗೆ
...ರಂಭ ಏರ್ಪಡಿಸಲಾಯಿತು.

ಸಭೆಯಲ್ಲಿ ಸಹಕಾರ ಇಲಾಖೆಯಿಂದ ...ಯು. ರಮಾನಂದರಾವ್, ಪಾಲ್‌ಚಂದ್ರ, ಗೋಪಾಲನಾಯ್ಕ್ ಅವರು ಹೆಗ್ಡೆಯವರ ಕಾರ್ಯದಕ್ಷತೆ ಬಗ್ಗೆ ಮಾತನಾಡಿದರು. ಸಹಕಾರಿ ಸಂಘಗಳ ಪರವಾಗಿ ಕಂಬದಕೋಣೆ ರೈತಸೇವಾ ಸಂಘದ ಲಕ್ಷ್ಮೀನಾರಾಯಣ ಹೊಳ್ಳ, ಹಿರಿಯಡ್ಕ ರೈತ ಸೇವಾ ಸಂಘದ ನಿರ್ವಾಹಕ ನಿರ್ದೇಶಕ ಆಚಾರ್ ಅವರು ಮಾತನಾಡಿದರು.

ಸಭೆಯ ಅಧ್ಯಕ್ಷತೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕ ಬಿ. ಎ. ಮಹಾದೇವಪ್ಪ ಅವರು ವಹಿಸಿದ್ದರು.

ಪ್ರಾರಂಭದಲ್ಲಿ ಪಿ. ಸಿ. ಪಾಲಚಂದ್ರ ಸ್ವಾಗತಿಸಿದರು, ಕೊನೆಯಲ್ಲಿ ಸಿ. ಪಿ. ಉತ್ತಪ್ಪ ವಂದನಾರ್ಪಣೆ ಮಾಡಿದರು.

ಸಿದ ಎಲ್ಲಾ ಮತದಾರರಿಗೆ ಕೃತಜ್ಞತೆಗಳು.

ಚುನಾವಣೆಯನ್ನು ಸಂಘಟನೆ ಹಾಗೂ ಚಳವಳ ದೃಷ್ಟಿಕೋನದಿಂದ ವಿಮರ್ಶಿಸಿ ನಿಮ್ಮೆಲ್ಲರ ಮನೆಗಳಿಗೆ ಭೇಟಿಯಿತ್ತಾಗ ಹಲವು ಸಮಸ್ಯೆಗಳ ಬಗ್ಗೆ ಹೇಳಿರುವಿರಿ. ಆದುದರಿಂದ ನಮ್ಮ ಕಾರ್ಮಿಕ ಪ್ರಣಾಳಿಕೆ ಹಾಗೂ ಜನತಾ ಸರಕಾರದ ಸಾಧನೆಗಳನ್ನು ಜನತೆಗೆ ತಲುಪುವಂತೆ ನಮ್ಮ ಕ್ಷೇತ್ರದಲ್ಲಿ ಜನಸಂಪರ್ಕವನ್ನು ನಮ್ಮ ಎಚ್. ಎಂ. ಎಸ್. ಕಾರ್ಯಕರ್ತರು ಮಾಡಲಿರುವರು. ಹಾಗೂ ತಮ್ಮ ಸಮಸ್ಯೆಗಳ ಬಗ್ಗೆ ವಿಚಾರ ವಿನಿಮಯ ಮಾಡಿ ಸಂಘಟಿತರಾಗಿ ತಮ್ಮೆಲ್ಲರ ಸಮಸ್ಯೆಗಳನ್ನು ನೀಗಿಸಲು ಸಹಕರಿಸಿ ಅವಶ್ಯವಿದ್ದಲ್ಲಿ ನಮ್ಮ ಎಚ್. ಎಂ. ಎಸ್. ಆಫೀಸಿಗೆ ಭೇಟಿ ಕೊಡಿ.

ಮೈಕಲ್ ಸಿಲ್ವೆಸ್ಟರ್ ಡಿ'ಸೋಜ ಸಂಘಟನಾ ಕಾರ್ಯದರ್ಶಿ,

ಬಿ. ರತ್ನಾಕರ ಶೆಟ್ಟಿ ಕಾರ್ಯದರ್ಶಿ.

ಗಣೇಶ್ ಪ್ರಭು ಕೋಶಾಧಿಕಾರಿ

ಎಚ್. ಎಂ. ಎಸ್. ಆಫೀಸ್.
ಫೆಲಿಕ್ಸ್ ಪೈ ಬಜಾರ್.
ಮಂಗಳೂರು–575 001.

ಸೌತ್ ಕೆನರಾ ಜನರಲ್ ಲೇಬರ್ ಯೂನಿಯನ್

ಅರಣ್ಯರಕ್ಷಣೆ ಕಾನೂನುಗಳನ್ನು ಜಾರಿಗೆ ತರಲು ಸಹಕರಿಸಿ

ಮಾನ್ಯರೆ,

ಮುಂಗಾರು ಪತ್ರಿಕೆಯಲ್ಲಿ ಅರಣ್ಯ ಇಲಾಖೆಯ ಸುದ್ದಿಗಳು, ನಿರಂತರವಾಗಿ (ಹೆಚ್ಚೆಚ್ಚು) ಬರುತ್ತಿರುವುದು ಮೆಚ್ಚುಗೆಯ ಸಂಗತಿ. ಪ್ರಭುಗಳಾದ ಪ್ರಜೆಗಳೆಲ್ಲರ ಆಸ್ತಿಯಾದ ಅರಣ್ಯವನ್ನು, ಅರಣ್ಯ ಸಂಪತ್ತನ್ನು (ಪ್ರಾಣಿಗಳನ್ನೂ ಸೇರಿಸಿ) ಕೆಲವೇ ಕೆಲವು ದೇಶ ದ್ರೋಹಿಗಳು ದೋಚುತ್ತಿರುವುದು ಈಗಲೂ ನಡೆಯುತ್ತಲೇ ಇದೆ. ಇದು ಕಟು ಸತ್ಯ. ಇದಕ್ಕೆ ಪ್ರಾಮಾಣಿಕರಾದ ನೌಕರರೆಲ್ಲಾ, ಅದರಲ್ಲೂ ಬಡ ಅರಣ್ಯ ರಕ್ಷಕರು ಅನಿವಾರ್ಯವಾಗಿ ವಿಷಾದ ಪಡಬೇಕಾದ ಸಂದರ್ಭ ಬಂದೊದಗಿದೆ.

ಅಪ್ಪಿಕೋ ಚಳುವಳಿ ಮತ್ತು ಅರಣ್ಯ ಪ್ರೇಮಿಗಳ ಸಂಘ ಇತ್ಯಾದಿ, ಇತ್ಯಾದಿಗಳು ಇಲ್ಲಿ ಅಳಿಲ ಸೇವೆ ಸಲ್ಲಿಸಿಯಾದರೂ ಅರಣ್ಯ ರಕ್ಷಣೆಗೆ ತೊಡಗಿರುವುದು ಸಂತಸದ ವಿಚಾರ, ಆದರೂ ಸತತವಾಗಿ ಲೂಟಿಯಾಗುತ್ತಿದ್ದು ನಶಿಸುತ್ತಿರುವ ನಮ್ಮ ಅರಣ್ಯ ಸಂಪತ್ತು, ಕೊನೆಗೊಮ್ಮೆ ನಾವೆಲ್ಲರೂ ಪಶ್ಚಾತ್ತಾಪ ಪಡುವಂತೆ ಮಾಡುವಲ್ಲಿ ಯಶಸ್ವಿಯಾಗಬಹುದೋ ?

ಈ ನಿಟ್ಟಿನಲ್ಲಿ ಇಲಾಖೇತರರು, ಇಲಾಖೆಯ ನೌಕರರಿಗೆ ಮೊಕದ್ದಮೆ ಹೂಡಲು ಸಹಕಾರ ಮತ್ತು ಪ್ರೋತ್ಸಾಹ ಕೊಟ್ಟರೆ ಹೆಚ್ಚು ಸೂಕ್ತ ಕ್ರಮಗಳು ಜರುಗಬಹುದು. ಶೇಕಡ 90 ಭಾಗ ನಾಶವು ಮಾನವರಿಂದಲೇ ಆಗುತ್ತಿದೆ. ಕಡಿಯುವುದೇ ಅಲ್ಲದೆ ಕಾಡಿಗೆ ಬೆಂಕಿ ಇಡುವುದು, ಸರ್ವನಾಶದ ದಾರಿಗೆ ತಳ್ಳಿದಂತೆಯೇ ಸರಿ. ಅರಣ್ಯ ನಾಶವನ್ನು ತಡೆಗಟ್ಟಲು ಆನೆಗಳನ್ನು ಬಳಸಲಾಗುವುದೆಂದು ಪ್ರಕಟಿಸಿದ್ದೀರಿ. ಇದು ಯಶಸ್ವಿಯಾಗಬಹುದೇ? ಶ್ವಾನಗಳನ್ನು ಬಳಸಿ ಪತ್ತೆ ಕಾರ್ಯವನ್ನು ಚುರುಕುಗೊಳಿಸಬಹುದಲ್ಲಾ ಅಂತಹ ಪ್ರಯತ್ನವೂ ನಡೆದರೆ ಒಳ್ಳೆಯದು.

ಅರಣ್ಯ ರಕ್ಷಣೆಗೆ ಕಾನೂನಿನ ಕೊರತೆಯೇನೂ ಇಲ್ಲ. ಆದರೆ ಅವುಗಳು ಪುಸ್ತಕದಿಂದ ಕಾರ್ಯರೂಪಕ್ಕೆ ಇಳಿಯಬೇಕಾಗಿದೆ. ಈ ನಿಟ್ಟಿನಲ್ಲಿ ಹಿಂದಿನಿಂದಲೂ ದಿಗಿ ಇದ್ದದ್ದರ ಚೆನ್ನಾಗಿತ್ತು. ಈಗ ರೈಲು ಹೋದ ನಂತರ ಟಿಕೇಟ್ ಪಡೆಯಲು ಪ್ರಯತ್ನ ಮಾಡುತ್ತಿದ್ದೇವೆ. ಈಗೀಗ ಬುದ್ಧಿವಂತರೂ, ಪ್ರಾಮಾಣಿಕರೂ ಆದ ಹಿರಿಯ ಅಧಿಕಾರಿಗಳು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಇಲಾಖೆಯಲ್ಲಿದ್ದಾರೆ. ಕೆಲವು ಕೆಟ್ಟ ರಾಜಕಾರಣಿಗಳು ಮತ್ತು ಅವರ ಬಾಲ ಬಡುಕರು ಅವರ ಸ್ವಹಿತಕ್ಕಾಗಿ ಅರಣ್ಯ ಇಲಾಖೆಯ ಪ್ರಾಮಾಣಿಕರಿಗೆ ಕಿರುಕುಳ ಕೊಡುವುದೂ, ಹೆದರಿಸುವುದೂ. ಕಾನೂನನ್ನು ಚಲಾಯಿಸದಂತೆ ಅಡ್ಡಿ ಪಡಿಸುವುದೂ ಅಲ್ಲದೆ ಜನರನ್ನು ಸಿಬ್ಬಂದಿಯ ಮೇಲೆ ಛೂ ಬಿಡುವುದೂ ನಡೆಯುತ್ತಿದೆ. ಅಲ್ಲದೆ ಗಡಿಪಾರು (ಟ್ರಾನ್ಸ್‌ಫರ್) ಮಾಡಿಸುವುದೂ ಇದೆ. ಇದರಿಂದ ಇಲಾಖೆಯ ನೌಕರರೆಲ್ಲರಿಗೂ ಉದಾಸೀನವೂ ಬರಬಹುದು. ಆದರೂ ಸಹನೊಂದ ನೌಕರರೆಲ್ಲಾ ಹೆಚ್ಚು ಶ್ರಮ ಪಟ್ಟು ಇಲಾಖೆಗೂ ಸಾರ್ವಜನಿಕ ಆಸ್ತಿಗೂ ರಕ್ಷಣೆ ಕೊಟ್ಟು ಹಗಲಿರುಳೂ ಶ್ರಮಿಸುತ್ತಿದ್ದಾರೆ. ಹಿಂದೊಂದು ದಿನ ನೀವು ಗಂಧದ ಕಾರನ್ನು ಸೈಕಲ್‌ನಲ್ಲಿ ಹಿಂಬಾಲಿಸಿ ಹಿಡಿಯಲು ಸಾಧ್ಯವೆ ಎಂದು ಕೇಳಿದ್ದೀರಿ. ಮನಸ್ಸಿದ್ದರೆ ಮಾರ್ಗ. ವಲಯ ಅರಣ್ಯ ಅಧಿಕಾರಿಗಳಾದ ಶ್ರೀ M L. ಶಿವಪ್ಪ ಗೌಡ, ಮತ್ತು ಸಬ್ ಇನ್ಸ್‌ಪೆಕ್ಟರ್ ಶ್ರೀ B. V. ಗುರುರಾಜ್ ಇಂತಹವರು, ಇಲಾಖೆಯಲ್ಲಿದ್ದಾರೆ. ಅರಣ್ಯ ರಕ್ಷಣೆ ಮತ್ತು ಬಂದೋಬಸ್ತ್ ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ. ಸಿಬ್ಬಂದಿಗೆ, ಸೂಕ್ತ ರಕ್ಷಣೆ, ಮತ್ತು ಸಲಹೆ ಹಾಗೂ ಪ್ರೋತ್ಸಾಹ ಕೊಡುವ ಇಂತಹ ವಲಯ ಅರಣ್ಯ ಅಧಿಕಾರಿಗಳು ಎಲ್ಲೆಲ್ಲೂ ಹೆಚ್ಚು ಸಂಖ್ಯೆಯಲ್ಲಿ ಪ್ರಯತ್ನ ಪಡುವಂತಾದರೆ ಅರಣ್ಯ ನಾಶದ ವೇಗ ಕುಂಠಿತಗೊಳ್ಳುತ್ತದಲ್ಲದೆ. ಇಲಾಖೆಗೆ ಕೀರ್ತಿ ಸಿಕ್ಕುತ್ತದೆ.

ಆನಂದಪುರ. ಎಂ. ಬಿ. ಪೂವಪ್ಪ

ಪ್ರೇಮ ವಿವಾಹ ಮದ್ದಲ್ಲ

ಪ್ರಿಯರೇ,

2.3.85ರ ಮುಂಗಾರು ಪತ್ರಿಕೆಯ 'ಸಂವಾದ' ವಿಭಾಗದಲ್ಲಿ ಪ್ರಕಟಗೊಂಡ 'ವರದಕ್ಷಿಣೆಯೆಂಬ ಎಂಜಲು' ಪತ್ರವು 'ಗಂಡು ಕೊಳ್ಳುವವರ ಮತ್ತು ಮಾರಿಕೊಳ್ಳುವವರ' ಕಣ್ಣುಗಳನ್ನು ತೆರೆಯಿಸುವಂತಿದೆ; ಲೇಖಕರಿಗೆ ಅಭಿನಂದನೆಗಳು.

ಸಂವಾದ

ಇಂದು ವಿದ್ಯಾವಂತ ಯುವಕರು ಬೇರೆಯವರಿಗೆ ತಮ್ಮನ್ನು ಹಣಕ್ಕಾಗಿ ಮಾರಿಕೊಳ್ಳುವಷ್ಟರ ಮಟ್ಟಿಗೆ ತಮ್ಮ ವ್ಯಕ್ತಿತ್ವ, ಮಾನವೀಯತೆ ಮತ್ತು ಸಾಮಾಜಿಕ ಪ್ರಜ್ಞೆಯನ್ನು ಕಳೆದುಕೊಂಡಿರುವುದು ಸಮಾಜದ ಒಂದು ದುರಂತ. ವರದಕ್ಷಿಣೆ ಪಡೆಯುವ ಮಂದಿಗೆ ಈ ಪದ್ಧತಿಯನ್ನು ಸಾಮಾಜಿಕವಾಗಿಯಾಗಲೀ, ಧಾರ್ಮಿಕವಾಗಿಯಾಗಲೀ, ನೈತಿಕವಾಗಿಯಾಗಲೀ ಸಮರ್ಥಿಸಿಕೊಳ್ಳಲು ಸಾಧ್ಯವಿದೆಯೇ?

'ನಮಗೆ ಹೆಣ್ಣು ಬೇಕು, ಹಣವೂ ಬೇಕು' ಎಂದು ಬಯಸುವ, ಆತ್ಮಾಭಿಮಾನವನ್ನು ಅಡವಿಟ್ಟ ಗಂಡುಗಳಿಗೆ–ಒಂದು ಹೆಣ್ಣಿಗೆ ಮಾತ್ರ ಗಂಡಿನ ಅವಶ್ಯಕತೆ ಇರುವುದಲ್ಲ; ಹೆಣ್ಣಿಗೆ ಗಂಡಿನ ಅವಶ್ಯಕತೆ ಅನಿವಾರ್ಯತೆ ಇದ್ದರೆ ಗಂಡಿಗೂ ಹೆಣ್ಣಿನ ಅವಶ್ಯಕತೆ, ಅನಿವಾರ್ಯತೆ ಇರುತ್ತದೆ ಎಂಬ ಸರಳ ಸಾಮಾಜಿಕ ಸತ್ಯದ ಅರಿವು ಯಾಕಿಲ್ಲ?

ಗಣೇಶ್ ಅಮೀನರ ಪತ್ರದಲ್ಲಿ 'ಪ್ರೇಮ ವಿವಾಹವೇ ರೋಗಕ್ಕೆ ಮದ್ದು' ಎಂದು ತಿಳಿಸಿದ್ದಾರೆ. ಆದರೆ ಈ ವರೆಗೆ ನಡೆದ ಅಂತರ್ಜಾತಿಯ ಪ್ರೇಮವಿವಾಹಗಳು ಸಮಾಜ ಸುಧಾರಣೆಗೆ ಎಷ್ಟರ ಮಟ್ಟಿಗೆ ಪ್ರೇರಕಗಳಾಗಿವೆ ಮತ್ತು ಯಶಸ್ವಿಯಾಗಿವೆ ಎಂದು ಚಿಂತಿಸಬೇಕಲ್ಲವೆ? ಸಂಪ್ರದಾಯಗಳ ಬಿಗಿ ಬಂಧಿಗಳಾದ ಹೆಣ್ಣುಗಳಿಗೆ 'ಪ್ರೇಮ' ಬರೇ ಕನಸು ಎಂಬ ಸತ್ಯಾಂಶವನ್ನು ಮರೆಯುವುದು ಸಾಧ್ಯವೆ? ಪ್ರೇಮಿಸುವ ಸಾಮರ್ಥ್ಯ–ಚಾತುರ್ಯ ಎಲ್ಲರಿಗೂ ಇದೆಯೆಂದು ಭಾವಿಸಬಹುದೆ? ಇಂತಹ ಅನೇಕ ಕುಂದುಗಳಿಂದ ಕೂಡಿದ ಪ್ರೇಮ ವಿವಾಹ ವರದಕ್ಷಿಣೆಯಂತಹ ಕ್ಯಾನ್ಸರಿಗೆ ಸರಿಯಾದ ಮದ್ದಲ್ಲ. ಈ ರೋಗಕ್ಕೆ ಗಂಡು, ಹೆಣ್ಣು ಮತ್ತು ಅವರ ಹೆತ್ತವರು ಆತ್ಮಾಭಿಮಾನ, ಮಾನವೀಯತೆ, ಸಾಮಾಜಿಕ ತಿಳುವಳಿಕೆಗಳೆಂಬ ದಿವ್ಯ ಪಥವನ್ನು ತುಳಿಯಬೇಕು. ಒಲ್ಲದವರಿಗೆ ಸಮಾಜ ಮತ್ತು ಕಾನೂನು ಬಲತ್ಕಾರದಿಂದ ವಿವೇಕ ಮೂಡಿಸುವಂತಾಗಬೇಕು. ಆಗ ಮಾತ್ರ ಈ ವ್ಯಾಧಿ ಗುಣವಾದೀತು.

ಬದಿಯಡ್ಕ, ರಾಣಿ ರೈ

ಜನದನಿ

ಸಂಘಕ್ಕೆ ದೂರು ಕೊಡಲಿ

ಪ್ರಿಯರೇ,

ತಾರೀಕು 6–3–85ರ ಮುಂಗಾರು ಪತ್ರಿಕೆಯ "ಜನದನಿ" ವಿಭಾಗದಲ್ಲಿ ಎಸ್. ಎಸ್. ದಿವಾಕರರು ಬರೆದಿರುವ ಲೇಖನ ಸತ್ಯಕ್ಕೆ ದೂರವಾಗಿದ್ದು ಸಂಘಕ್ಕೆ ಕೆಟ್ಟ ಹೆಸರು ತರುವ ಏಕೈಕ ಉದ್ದೇಶದಿಂದ ಬರೆದಿರುವುದೆಂದು ನಾವು ಭಾವಿಸುವುದರಿಂದ ಸಂಘದ ಪರವಾಗಿ ಈ ಕೆಳಗಿನ ಸ್ಪಷ್ಟೀಕರಣವನ್ನೀಯುತ್ತೇವೆ.

ನಮ್ಮ ಮಲ್ಪೆ ಮೀನುಗಾರರ ಸಂಘವು ಕಾನೂನು ಬದ್ಧವಾಗಿ ನೊಂದಾವಣೆಯಾದ ಸಂಸ್ಥೆಯಾಗಿದ್ದು ಇದು ಅಸ್ತಿತ್ವಕ್ಕೆ ಬಂದ ಮೇಲೆ ಮಲ್ಪೆ ಬಂದರಿನಲ್ಲಿ ಶಿಸ್ತು ಬದ್ಧವಾದ ಮೀನುಗಾರಿಕೆ, ಮೀನುಹರಾಜು. ತಂಗುದಾಣದ ಶುಚಿತ್ವ ಧಾರ್ಮಿಕ ಕೆಲಸಗಳಿಗೆ ಪ್ರೇರಣೆ ಹಾಗೂ ಸಹಾಯ ಮುಂತಾದ ಸಾಮಾಜಿಕ ಕೆಲಸಗಳನ್ನು ತೃಪ್ತಿಕರವಾಗಿ ನಡೆಯುತಿದ್ದು ಸರಕಾರದ ಹಿರಿಯ ಕಾನೂನು ಪಾಲಕ ಅಧಿಕಾರಿಗಳಿಂದ, ಧಾರ್ಮಿಕ ಮುಖಂಡರಿಂದ ಹಾಗೂ ಎಲ್ಲಾ ಸಮಾಜದ ಹಿರಿಯ ವ್ಯಕ್ತಿಗಳಿಂದ ಸಂಘ ಸಂಸ್ಥೆಗಳಿಂದ ಪ್ರಶಂಶಿಸಲ್ಪಟ್ಟಿದೆ.

ಮಲ್ಪೆಯಲ್ಲಿ ಇತ್ತೀಚೆಗೆ ನಡೆದ ಎಲ್ಲಾ ದುರ್ಘಟನೆಗಳ ಮೂಲವನ್ನು ಕಂಡು ಹಿಡಿದ ಎಲ್ಲಾ ಸಮಾಜದ ಹಿರಿಯ ಮುಖಂಡರು ಈ ಮೇಲಿನ ಎಲ್ಲಾ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡು ಹಿಡಿಯಲು ಒಂದು ಶಾಂತಿ ಸಮಿತಿಯನ್ನು ತಾರೀಕು 26.1.85 ರಂದು ಸ್ಥಾಪನೆ ಮಾಡಿ ಇನ್ನು ಮುಂದೆ ಮಲ್ಪೆಯಲ್ಲಿನ ಪರಿಸರದಲ್ಲಿ ಯಾವುದೇ ತರದ ಘರ್ಷಣೆ ಆಗದಂತೆ ಹಾಗೂ ಸಮಸ್ಯೆಗಳು ಬಂದೊದಗಿದಲ್ಲಿ ಈ ಶಾಂತಿ ಸಮಿತಿಯ ಮುಖಾಂತರವೇ ತೀರ್ಮಾನಿಸುವುದೆಂದು ಒಮ್ಮತದಿಂದ ನಿರ್ಣಯಿಸಲಾಗಿದೆ.

ನಮ್ಮ ಸಂಘವು ಸಾರ್ವಜನಿಕ ಬಡ ಮೀನುಗಾರರ ಸಂಘವಾಗಿರುವುದರಿಂದ ಇಲ್ಲಿ ಸದಸ್ಯತನ ಹೊಂದಿದ ಎಲ್ಲಾ ವ್ಯಕ್ತಿಗಳಿಗೂ ಸಮಾನ ಅವಕಾಶವಿದ್ದು ಎಸ್. ಎಸ್. ದಿವಾಕರ ಅವರು ಸಂಘದ ಸದಸ್ಯರಾಗಿದ್ದರೆ ಸಂಘದಲ್ಲಿನ ನ್ಯೂನತೆ ಲೋಪ ದೋಷಗಳನ್ನು ಎತ್ತಿ ಹಿಡಿಯುವುದು ಅವರ ನೈತಿಕ ಹಕ್ಕಾಗಿದ್ದು ಅವರಿಗೆ ಯಾ ಅವರ ಸಂಬಂಧಪಟ್ಟವರಿಗೆ ಮೀನುಗಾರಿಕೆಯ ವಿಷಯದಲ್ಲಿ ಸಂಘದಿಂದ ಏನಾದರೂ ತೊಂದರೆ ಯಾ ಸಮಸ್ಯೆ ಬಂದೊದಗಿದ್ದಲ್ಲಿ ಸಂಘಕ್ಕೆ ಲಿಖಿತ ಮೂಲಕ ದೂರು ಸಲ್ಲಿಸಿದಲ್ಲಿ ಅವರ ಸಮಸ್ಯೆ ಯಾ ಸಂಶಯವನ್ನು ಸೂಕ್ತ ರೀತಿಯಲ್ಲಿ ಬಗೆ ಹರಿಸಲಾಗುವುದು ತಾರೀಕು 10-3-85ರಂದು ನಡೆಯುವ ಆಡಳಿತ ಮಂಡಳಿಯ ಸಭೆಗೆ ಅವರು ಆಗಮಿಸುವಂತೆ ಬಹಿರಂಗವಾಗಿ ಆಹ್ವಾನಿಸುತ್ತೇವೆ.

ಬದಲಾಗಿ ಇತರ ವಿಧಾನಗಳ ಮೂಲಕ ಅವರು ಸಂಘಕ್ಕೆ ಕಳಂಕ ಹಚ್ಚುವ ಕೆಲಸ ಮಾಡಿದರೆ ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಕೊಳ್ಳುವುದಾಗಿ ಸಂಘದ ಪರವಾಗಿ ಎಚ್ಚರಿಸುತ್ತೇವೆ.

-ಕಾರ್ಯದರ್ಶಿ
ಮಲ್ಪೆಯ ಮೀನುಗಾರರ ಸಂಘ

ಸ್ಪಷ್ಟೀಕರಣ

ಪ್ರಿಯರೇ,

ದಿನಾಂಕ 6– 3– 85ರ 'ಮುಂಗಾರು'ವಿನಲ್ಲಿ ಪ್ರಕಟಗೊಂಡ 'ಬೀದಿ ಕಾಮಣ್ಣರ ಕಾಟ' ಎಂಬ ವಿಷಯ ಸತ್ಯಕ್ಕೆ ದೂರವಾಗಿದೆ. ನಮ್ಮ ಮಂದಿರದ ಮೇಲೆ ಕೆಟ್ಟ ಹೆಸರು ತರಲು ಈ ಸುದ್ದಿಯನ್ನು ಯಾರೋ ಕೊಟ್ಟಿದ್ದಾರೆ.

ಈ ಹಿಂದೆ 3-11-84ರ ಓರೆ–ಕೋರೆ ವಿಭಾಗದಲ್ಲಿ ಈ ಮಂದಿರ ಪಕ್ಕದ ಮನೆಯಿಂದ ವಿದ್ಯುತ್ ಕಳ್ಳಸಾಗಣೆ ಮಾಡುತ್ತಿದೆ ಎಂದು ದೂರಿರುವುದು ವಿಷಾದನೀಯ. ದಯವಿಟ್ಟು ಈ ಸ್ಪಷ್ಟನೆಯನ್ನು ಪ್ರಕಟಿಸಿರಿ.

—ಕಾರ್ಯದರ್ಶಿ
ವಿದ್ಯಾದಾಯಿನಿ ಕೀರ್ತನಾ ಮಂದಿರ ಮಲಿ

ಕ್ರಮ ಕೈಗೊಳ್ಳಿರಿ

ಪ್ರಿಯರೇ,

ಮುಂಗಾರುವಿನಲ್ಲಿ ತಾ. 4–3–85 ರಂದು ಪ್ರಕಟವಾದ, ಶಿವಮೊಗ್ಗ ಜಿಲ್ಲೆಯ ಸಮೀಪವಿರುವ ಚಂದ್ರಗುತ್ತಿ ಎಂಬಲ್ಲಿ ಮುಗ್ಧ ಹಳ್ಳಿಯ ಹದಿಹರೆಯದ ಯುವತಿಯರ "ಬೆತ್ತಲೆ ಸೇವೆ" ಎಂಬ ಅಮಾನುಷ ಪದ್ಧತಿಯ ಲೇಖನವನ್ನು ಓದಿ, ಛಾಯಾ ಚಿತ್ರಗಳನ್ನು ನೋಡಿ ಆಶ್ಚರ್ಯ ಹಾಗೂ ವಿಷಾದ ಉಂಟಾಯಿತು.

ಈ ದುಷ್ಟ ಪದ್ಧತಿಯು ಹಿಂದಿನಿಂದಲೂ ನಿರಂತರವಾಗಿ ನಡೆಯುತ್ತಿದ್ದರೂ, ಈ "ಬೆತ್ತಲೆ ಸೇವೆ"ಯ ಬಗ್ಗೆ ಬೇರೆ ಯಾವ ಪತ್ರಿಕೆಯೂ ವಿವರವಾಗಿ, ಬಹಿರಂಗವಾಗಿ ವಿಷಯಗಳನ್ನು ಪ್ರಕಟಿಸಿರಲಿಲ್ಲ. ಆದರೆ ಮುಂಗಾರು ಕನ್ನಡ ದೈನಿಕವು ನಿರ್ಭೀತಿಯಿಂದ, ಬೆತ್ತಲೆ ಸೇವೆಯ ಬಗ್ಗೆ ವಿವರವಾಗಿ ಪ್ರಕಟಿಸಿ, ಮಾನಸಿಕ ಕ್ಷೋಭೆ ಉಂಟು ಇನ್ನಾದರೂ ಇಂತಹ ಕ್ರೂರ ಪದ್ಧತಿಯ ನಿರ್ಮೂಲನದತ್ತ, ಸೂಕ್ತ ಕಾನೂನು ಕ್ರಮ ಜಾರಿ ಗೊಳಿಸಬಹುದಲ್ಲವೇ?

—ಅಶೋಕ್ ಬಾಳಿಗಾ
ಉಡುಪಿ

ಶ್ರೇಷ್ಠ ಸಮಾಜ ಸೇವಕ ಬುನಕರ್ ರಾಯ್

(ನಿನ್ನೆಯ ಸಂಚಿಕೆಯಿಂದ)

ಈ ಸಂಘಟನೆಯ ಆರೋಗ್ಯ ಘಟಕ ಚಟುವಟಿಕೆಗಳು ಇಂತಿವೆ. ಒಂದು ಪ್ರಧಾನ ಆಸ್ಪತ್ರೆಯ ಸಹಾಯದಿಂದ ಸುತ್ತುಮುತ್ತಲಿನ 40 ಹಳ್ಳಿಗಳ ಸುಮಾರು 50,000 ಜನರಿಗೆ ಆರೋಗ್ಯ ಚಿಕಿತ್ಸೆಯನ್ನು ಒದಗಿಸಲಾಗಿದೆ. ಕುಟುಂಬ ಕಲ್ಯಾಣ ಗರ್ಭಿಣಿಯರ, ಮಕ್ಕಳ ಆರೋಗ್ಯ ರಕ್ಷಣೆ, ಕ್ಷಯರೋಗ ನಿವಾರಣೆ ಮುಂತಾದ ಕಾರ್ಯಕ್ರಮಗಳನ್ನು ಈ ಘಟಕ ನಿರ್ವಹಿಸುತ್ತಿದೆ. 1973ರಲ್ಲಿ ತಿಲೋನಿಯಾದಲ್ಲಿ ಒಂದು ಆಸ್ಪತ್ರೆಯನ್ನು ಈ ಸಂಘ ತೆರೆಯಿತು. ಇನ್ನೊಂದನ್ನು 1975ರಲ್ಲಿ ಫೋಟಾನರೆನದಲ್ಲಿ ತೆರೆಯಿತು. ಇದನ್ನು ಕಂಡ ಇತರ ಗ್ರಾಮಸ್ಥರು ತಮ್ಮ ತಮ್ಮ ಗ್ರಾಮದಲ್ಲಿ ಚಿಕ್ಕ ಆಸ್ಪತ್ರೆ ಆರಂಭಿಸಲು ಒತ್ತಾಯಿಸಿದ್ದಾರೆ. ಅವರೆ ಈ ಸಂಘಟನೆ ಆ ಎಲ್ಲಾ ಗ್ರಾಮಗಳಲ್ಲಿಯೂ ಆರೋಗ್ಯ ಕಾರ್ಯಕರ್ತರನ್ನು ತರಬೇತಿಗೊಳಿಸಿ ಕಳಿಸುವುದಾಗಿ ಹೇಳಿದೆ. ಈಗ ತಿಲೋನಿಯಾದಲ್ಲಿ ಆರೋಗ್ಯ ಕಾರ್ಯಕರ್ತರನ್ನು 15 ದಿನಗಳ ತರಬೇತಿ ಕೇಂದ್ರದಲ್ಲಿ, ಮುನ್ಸೂಚನೆಯ ಮೇರೆಗೆ ರೋಗಗಳನ್ನು ಕಂಡುಹಿಡಿಯುವ, ಸ್ವಚ್ಛತೆಯ ಮಹತ್ವ, ಕುಟುಂಬಕಲ್ಯಾಣ, ಮುಂತಾದವುಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಈ ಕಾರ್ಯಕರ್ತರು ಚಿಕ್ಕಪುಟ್ಟ ಕಾರ್ಯಗಳನ್ನು ಗುಣಪಡಿಸುತ್ತಾರೆ ಅಲ್ಲದೆ ದೊಡ್ಡ ಕಾಯಿಲೆಯ ಲಕ್ಷಣ ಕಂಡುಬಂದರೆ ಮುಖ್ಯ ಆಸ್ಪತ್ರೆ. ಆ ರೋಗಿಗಳನ್ನು ಚಿಕಿತ್ಸೆಗಾಗಿ ಕಳುಹಿಸಿಕೊಡುವ ವ್ಯವಸ್ಥೆ ಮಾಡುತ್ತಾರೆ. ಅಲ್ಲದೆ ಅವರು ಗ್ರಾಮದಲ್ಲಿಯ ಜನನ ಮರಣ ವಿವರಗಳನ್ನು ಮನೆಯಿಂದ ಮನೆಗೆ ಹೋಗಿ ದಾಖಲೆ ಮಾಡಿಕೊಳ್ಳುತ್ತಾರೆ. ರೋಗಿಗಳ ಆರೈಕೆಯ ಬಗ್ಗೆ ಗಮನ ಕೊಡುತ್ತಾರೆ.

ಈ ಕಾರ್ಯಕರ್ತರು ಕೇವಲ ಆರೋಗ್ಯದ ಕಾರ್ಯಕರ್ತರಾಗಿರದೆ, ಬೇಸಾಯದಲ್ಲಿ ಕಾರ್ಯಬಲ್ಲಿಯೂ ಒಕ್ಕಲಿಗರಿಗೆ ಗೊಬ್ಬರ ಬೀಜಗಳು ಮುಂತಾದವುಗಳ ವಿತರಣೆಯಲ್ಲಿಯೂ ಸಹಾಯ ಮಾಡುತ್ತಾರೆ. ಇವರೇ ಸಾಯಂಕಾಲ ವಯಸ್ಕರ ಶಿಕ್ಷಣದ ಶಾಲೆಗಳನ್ನು ನಡೆಸುತ್ತಾರೆ. ದಿನದ ಶಾಲೆಗೆ ಹೋಗದ ಬಡ ಬಾಲಕರಿಗಾಗಿ ರಾತ್ರಿ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಗಿದೆ. ಪ್ರತಿ ಹಳ್ಳಿಗಳಲ್ಲಿ ಸುಮಾರು 50 ಮಕ್ಕಳು ರಾತ್ರಿಯ ಪ್ರಾಥಮಿಕ ಶಾಲೆಗೆ ಬರುತ್ತಾರೆ.

ಸ್ವಾವಲಂಬನೆಗೆ ಹೆಚ್ಚಿನ ಒತ್ತು

ಈ ಸಂಘಟನೆಯು ಸರಕಾರದ ಸಹಾಯದಿಂದ ಗ್ರಾಮಸ್ಥರಿಗೆ ವೃತ್ತಿ ತರಬೇತಿ ಶಿಕ್ಷಣವನ್ನು ಕೊಡಲಾಗುವುದು. ಗ್ರಾಮಸ್ಥ ಮಹಿಳೆಯರಿಗೆ ನೂಲುವ, ನೇಯುವ, ಚಪ್ಪಲಿ ತಯಾರಿ ಮಾಡುವ ಮುಂತಾದ ಗುಡಿ ಕೈಗಾರಿಕೆಗಳನ್ನು ಕಲಿಸುತ್ತಾರೆ. ಬ್ಯಾಂಕುಗಳಲ್ಲಿ ಗ್ರಾಮಸ್ಥರ ಖಾತೆಗಳನ್ನು ತೆರೆದು ಅವರು ಸಂಪಾದಿಸಿದ ಹಣವನ್ನು ಇಡುತ್ತಾರೆ. ಹೀಗಾಗಿ ಗ್ರಾಮಸ್ಥರು ಹಿಡಿತದಿಂದ ಹಣ ಖರ್ಚು ಮಾಡಲು ಅನುಕೂಲವಾಗುತ್ತದೆ. ಗ್ರಾಮದ ಕರಕುಶಲ ವಸ್ತುಗಳಿಗೆ ಸರಿಯಾದ ಪೇಟೆ ದೊರೆಯದೇ ಅನೇಕರು ಬೇರೆ ಉದ್ಯೋಗಗಳಲ್ಲಿ ತೊಡಗಲು ಪ್ರಯತ್ನಿಸುತ್ತಿದ್ದಾರೆ. ಅಂಥ ಕರ ಕುಶಲ ವಸ್ತುಗಳಿಗೆ ಯೋಗ್ಯ ಪೇಟೆಯನ್ನು ದೊರಕಿಸಿ ಕೊಡಲು ಪ್ರಯತ್ನಿಸಲಾಗುತ್ತಿದೆ. ಸ್ವಂತ ಉದ್ಯೋಗದ ಮೇಲೆ ಅವಲಂಬನೆ – ಗೊಳ್ಳುವಂತೆ ಹಾಗೂ ಗ್ರಾಮಸ್ಥರನ್ನು ಶಿಕ್ಷಿತರನ್ನಾಗಿ ಮಾಡುವ ಮೇಲೆ ಈ ಸಂಘಟನೆ ಹೆಚ್ಚಾಗಿ ಗಮನ ಕೊಡುತ್ತದೆಂದು ರಾಯ್ ತಿಳಿಸುತ್ತಾರೆ.

ಕರ ಕುಶಲ ವಸ್ತುಗಳನ್ನು ತಯಾರಿಸುವವರ ಸಹಕಾರಿ ಸಂಘಗಳನ್ನು ಸ್ಥಾಪಿಸಿ ಅವುಗಳನ್ನು ಅವರೇ ಮಾರುವಂತೆ ಈ ಸಂಘಟನೆ ಪ್ರಯತ್ನಿಸುತ್ತಿದೆ. ಈ ಯೋಜನೆಯಿಂದಾಗಿ ಹೆಚ್ಚಾಗಿ ಚರ್ಮದ ಕೆಲಸ ಮಾಡುವ ಚಮ್ಮಾರರು ತಮ್ಮ ಉದ್ಯೋಗವು ಒಂದು ರೀತಿಯ ಘನತೆಯದ್ದೆಂದು ಭಾವಿಸಲಾರಂಭಿಸಿದ್ದಾರೆ. ಮಹಿಳೆಯರಿಗೆ ಕರಕುಶಲ ವಸ್ತುಗಳನ್ನು ತಯಾರಿಸಲು ತರಬೇತಿ ಕೊಡುವಾಗಲೇ, ಆರೋಗ್ಯದ ಬಗ್ಗೆ, ಹೆರಿಗೆ, ಮಗುವಿನ ಆರೈಕೆ, ಆಹಾರ ಕುಟುಂಬ ಕಲ್ಯಾಣ, ಪ್ರಾಥಮಿಕ ಶಿಕ್ಷಣ ಸಂಖ್ಯಾಜ್ಞಾನ ಮುಂತಾದ ವಿಷಯಗಳನ್ನು ಬೋಧಿಸಲಾಗುವುದು.

ಕೆ. ಚ. ಪಾಟೀಲ

ತಿಲೋನಿಯಾ ಗ್ರಾಮದ ಈ ಸಂಘಟನೆಯಿಂದ ಅನೇಕ ಹೊಸ ಯೋಜನೆಗಳು ಆರಂಭವಾಗಿವೆ. 1974 ರಲ್ಲಿ ಹರಿಯಾಣದಲ್ಲಿ 1975 ರಲ್ಲಿ ಪಂಜಾಬದಲ್ಲಿ ಮತ್ತು 1971 ರಲ್ಲಿ ಹಿಮಾಚಲದಲ್ಲಿ ಒಂದೊಂದು ಕೇಂದ್ರವನ್ನು ಆರಂಭಿಸಲಾಗಿದೆ. ಇದಲ್ಲದೆ 3 ಬೇರೆ ಕೇಂದ್ರಗಳಿವೆ. ಬುನ್‌ಕರ್ ರಾಯ್ ಅವರ ಗ್ರಾಮಾಭಿವೃದ್ಧಿ ಸೇವಾಕಾರ್ಯದ ಮಹತ್ವವನ್ನು ಅರಿತ ಅವರ ಪತ್ನಿ ಅರುಣಾರಾಯ್ ಅವರು ತಮ್ಮ ಐಯ್. ಎ. ಎಸ್. ಉದ್ಯೋಗವನ್ನು ಬಿಟ್ಟು ಇವರೊಂದಿಗೆ ತಿಲೋನಿಯಾದಲ್ಲಿ ದುಡಿಯುತ್ತಿದ್ದಾರೆ. ನಿಧಾನವಾಗಿ ಆಯಾ ಗ್ರಾಮಸ್ಥರು ತಮಗೆ ತಾವೇ ಸಹಾಯ ಮಾಡಿಕೊಳ್ಳುವ ವ್ಯವಸ್ಥೆಗೆ ತಲುಪಬೇಕೆಂದು ಈ ಸಂಘಟನೆಯ ಇಚ್ಛೆ. ಈ ಯೋಜನೆಯ ಫಲವಾಗಿ ಆಯಾ ಹಳ್ಳಿಗಳ ಹರಿಜನರು ಹಾಗೂ ಬಡ ಜನರು ತಮ್ಮ ಹಕ್ಕುಗಳ ಬಗ್ಗೆ ಜಾಗೃತರಾಗಿದ್ದಾರೆ. ತಮಗಾಗಿ ಇರುವ ಸರಕಾರಿ ಹಾಗೂ ಇತರ ಯೋಜನೆಗಳ ಅರಿವು ಪಡೆದು ಕೊಂಡಿದ್ದಾರೆ. ಇದು ಅವರಿಗೆ ಆತ್ಮ ಸ್ಥೈರ್ಯವನ್ನು ತಂದು ಕೊಟ್ಟಿದೆ. ಶ್ರೀಮಂತರಿಗೆ ಈ ಯೋಜನೆಯಿಂದ ಅಷ್ಟೇನೂ ಪ್ರಯೋಜನವಾಗಿಲ್ಲ. ಹಿಂದುಳಿದವರು ಈಗ ಮೊದಲಿನ ರೀತಿ ಮೋಸ ಹೋಗುತ್ತಿಲ್ಲ. ಈ ರೀತಿಯ ಬದಲಾವಣೆ ತೋರಿಕೆಗೆ ಪೆಟ್ಟೆಂದು ತೋರಿ ಬರದಿದ್ದರೂ, ಸಹಸ್ರಾರು ವರ್ಷಗಳಿಂದ ಹಿಂದುಳಿದವರಲ್ಲಿ ಈ ರೀತಿಯ ಬದಲಾವಣೆಯು ನಿಜವಾಗಿಯೂ ಮೂಲಭೂತವಾದ ಬದಲಾವಣೆಯಾಗಿದೆ ಎಂದು ಭಾವಿಸಬಹುದಾಗಿದೆ.

ಚಿಂತನೆ

"ಒಡಲ ಸಡುವೆ ಜೀವವು ಕುಣಿಯುತಿರೆ ಅದರಳವನ್ನು ನೋಡುವರುಂಟೇ?"
ಸತ್ತ ಮೇಲೆ ಭೂತವ ಕಾಂಬೆವು ನಮ್ಮ ತರದ ಗಟ್ಟಿಗರುಂಟೇ!"

—ಕ ದೆಂಗೋಡ್ಲು